ಸಂಪುಟ ೧೦

ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

೧೯೭೮

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦ ಸಂಚಿಕೆ : ೨

ಪ್ರಧಾನ ಸಂಪಾದಕರು
ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೦ ಸಂಚಿಕೆ : ೩

ಫೆಬ್ರುವರಿ ೧೯೭೮

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ

ನಿರ್ದೇಶಕರು, ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮುದ್ರಕರು :

ಜಿ. ಬಿ. ಮನ್ನಾಚಾರ್,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ.

ಪರಿವಿಡಿ

ಸಂದಿಗ್ಧ

● ಬಸವರಾಜ ಸಬರದ

ನಿನ್ನೆದೆಯ
ಅಂತರಾಳಕ್ಕಿಳಿದು
ಪ್ರತಿಪುಟಗಳನು
ತಿರುವಿ ಹಾಕಿ
ನನ್ನ
ಬಣ್ಣದ ಕುಂಚ
ಲೇಪಿಸಿ
ಹೊಸಬೆಳಕು
ಬೀರುವ
ಕಾತರ.
ನಿನ್ನ
ಆಳ–ಅಗಲಗಳ
ತಳಕ್ಕಿಳಿದು
ಹುಡುಕಿತೆಗೆದು
ನನ್ನ
ಉಸಿರಿನೊಂದಿಗೆ
ಜೀವಂತವಾಗಿಸುವ
ಆತುರ.
ಆದರೇನು ಮಾಡಲಿ !
ನಿನ್ನ
ಅಸ್ತಿತ್ವವನ್ನೇ ಹೊತ್ತು
ಬದುಕಬೇಕೆಂದಿದ್ದ
ನನಗೆ
ಅದೇ ಅರಿವು
ಮರವಿನ ತಿರುವು
ತೆಗೆದುಕೊಂಡದ್ದಕ್ಕಾಗಿ
ಹಗಲಿರುಳೂ
ತೊಳಲಾಡುತ್ತಿದ್ದೇನೆ.

● ●

ತಾಳಗುಂದ : ಒಂದು ಪ್ರಾದೇಶಿಕ ಅಧ್ಯಯನ

● ಎಚ್. ಆರ್. ರಘುನಾಥ ಭಟ್

ಬಳ್ಳಿಗಾವೆಯ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಅದರ ಸುತ್ತ ಮುತ್ತಲಿನ ಕೆಲವು ಪ್ರದೇಶಗಳು ನಮ್ಮ ಗಮನ ಸೆಳೆಯುವಂಥವು. ಬಳ್ಳಿಗಾವೆ ಯಂಥ ಒಂದು ಮಹಾನಗರದ ವೈಭವವನ್ನೂ ಗುರುತಿಸುವಾಗ ಅದರ ಸುತ್ತಮುತ್ತ ನಮ್ಮ ದೃಷ್ಟಿಹಾಯಿಸದೆ ಪೃಥಕ್ಕಾಗಿ ನೋಡುವುದೂ ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ. ಅಲ್ಲದೆ ಬಳ್ಳಿಗಾವೆಗಿಂತಲೂ ಪ್ರಾಚೀನವಾದ ಅಥವಾ ಸಮಕಾಲೀನ ವಾದ ಐತಿಹಾಸಿಕ ಸ್ಥಳಗಳು ಆ ನಗರದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದ ವೆಂಬ ಕಾರಣದಿಂದಾಗಿ ಅವುಗಳ ಅಧ್ಯಯನ ಅನಿವಾರ್ಯವಷ್ಟೇ ಅಲ್ಲ ಅಗತ್ಯವಾದದ್ದೂ ಹೌದು. ಈ ಹಿನ್ನೆಲೆಯಲ್ಲಿ ಬಳ್ಳಿಗಾವೆಯ ಈಶಾನ್ಯಕ್ಕೆ ಸುಮಾರು ೨ ಕಿ. ಮೀ. ಅಂತರದಲ್ಲಿರುವ ತಾಳಗುಂದದ ಒಂದು ಪ್ರಾದೇಶಿಕ ಅಧ್ಯಯನ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ.

> ಸ್ಥಾಣುಗೂಡನಾಮಗ್ರಾಮವದು ಸಕಳಧರ್ಮಕರಣ ।
> ಯೋಗ್ಯ ಸ್ಥಾನವಲ್ಲಿ ಮಾಡಿದ ಸುಕೃತವಕ್ಷಯ ಫಳನೀಗು ॥[೧]

ಎಂದು ಮುಂತಾಗಿ ಬಣ್ಣಿಸಲ್ಪಟ್ಟ ತಾಳಗುಂದ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನಲ್ಲಿದೆ. ಜನಸಂಖ್ಯೆ ೧೩೩೪ (೧೯೭೧)[೨] ಬನವಾಸಿ ಕದಂಬರ ಮೂಲ ಸ್ಥಾನವಾಗಿ, ಪ್ರಾಚೀನ ಮಹಾ ಅಗ್ರಹಾರವಾಗಿ, ವಿದ್ಯಾಕೇಂದ್ರವಾಗಿ ಸುದೀರ್ಘ ಇತಿಹಾಸ ಪಡೆದ ಭಾಗ್ಯ ಅದರದು[೩]. ಶಾಸನಗಳಲ್ಲಿ ಅದನ್ನು ಸ್ಥಾನಕಜ್ಜಪುರ[೪], ಸ್ಥಾನಕುನ್ದೂರ[೫], ತಾಣಗುನ್ದೂರ=ಶ್ರೀ ಮನ್ಮಹಾವಡ್ಡಗ್ರಾಮ[೬], ಸ್ಥಾನಗೂಢಪುರ ಮಹಾಗ್ರಹಾರಂ[೭], ತಾಳುಗುಂದ[೮], ಶ್ರೀಮದನಾದಿ ಅಗ್ರಹಾರ ಸ್ಥಾನಕುನ್ದೂರು ಮೂವತ್ತಿಚ್ಛಾರ್ಸಿರ್[೯] ಎಂದು ಮುಂತಾಗಿ ಬಣ್ಣಿಸಲಾಗಿದೆ. ಪ್ರಾಚೀನಕರ್ನಾಟಕದಲ್ಲಿ ಹಲವಾರು ಅಗ್ರಹಾರಗಳೂ ವಿದ್ಯಾಕೇಂದ್ರಗಳೂ ಇದ್ದಿರಬಹುದಾದರೂ ತಾಳಗುಂದದಷ್ಟು ಪ್ರಾಚೀನಪ್ರಸಿದ್ಧ ಅನಾದಿ ಅಗ್ರಹಾರ ಅಪೂರ್ವವೆಂದೇ ಹೇಳಬಹುದು. ಇದುವರೆಗೆ ನಮಗೆ ತಿಳಿದುಬರುವಂತೆ ಅದರ ಪ್ರಾಚೀನ ಇತಿಹಾಸ ಶಾತವಾಹನ ಕಾಲದಿಂದ ಆರಂಭವಾಗುತ್ತದೆ. ಆ ಊರಿನ ಮುಖ್ಯ ಆಕರ್ಷಣೆಯಾದ ಪ್ರಣವೇಶ್ವರದೇಗುಲದ ಹಿಂಭಾಗದಲ್ಲಿ, ಕೆರೆಯ ಮೂಲೆ

ಯಲ್ಲಿ ಇಟ್ಟಿಗೆ ಚೂರುಗಳೂ ಕೆಂಪುಬಣ್ಣದ ಮಡಕೆ ಚೂರುಗಳೂ ಕಂಡುಬರುತ್ತವೆ. ಬಳಿಯಲ್ಲಿರುವ 'ದೊಣನಗುಡ್ಡ'ದ ಮೇಲೆ ಶಾತವಾಹನರ ಕಾಲಕ್ಕೆ ಸರಿಹೊಂದ ಬಹುದಾದ ಭಗ್ನ (ಯಕ್ಷನ?) ಮೂರ್ತಿಯೊಂದು ಬಿದ್ದಿದೆ. ಅಲ್ಲದೆ ದೊಡ್ಡಸೈಜಿನ ಇಟ್ಟಿಗೆಗಳು ನಮಗೆ ಕಾಣಸಿಗುತ್ತವೆ. ಊರೊಳಗಿನ ಗಂಗಾಧರೇಶ್ವರ ಗುಡಿಯೆದುರು ರಸ್ತೆಯಂಚಿನಲ್ಲಿ ಕೆಲವು ಭಗ್ನಮೂರ್ತಿಗಳನ್ನಿಡಲಾಗಿದ್ದು ಅವುಗಳಲ್ಲಿ ಕೆಲವು ಕದಂಬ ಪೂರ್ವದವೆಂದು ಹೇಳಬಹುದು. ತಾಳಗುಂದದ ಬಳಿ ತೊಗರ್ಸಿಯಲ್ಲಿ ಸಿಕ್ಕಿರುವ ಬೌದ್ಧದೀಪಸ್ತಂಭ ಮತ್ತು ಬಳ್ಳಿಗಾವೆಯಲ್ಲಿ ದೊರೆತ ಶಾತವಾಹನಕಾಲೀನ ಇಟ್ಟಿಗೆ, ಮಡಕೆ-ಕುಡಿಕೆ ಚೂರುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ[೧೦]. ಇವೆಲ್ಲವುಗಳನ್ನಾಧರಿಸಿ ಹೇಳುವುದಾದರೆ ಈ ಪ್ರದೇಶದಲ್ಲಿ ಕನಿಷ್ಠ ಕ್ರಿ. ಶ. ೨-೩ನೆಯ ಶತಮಾನದಲ್ಲಿ ಚುಟು-ಶಾತವಾಹನ-ಶಾತಕರ್ಣಿಗಳ ಚಟುವಟಿಕೆಗಳಿದ್ದಿರಬೇಕು. ತಾಳಗುಂದ ಶಾಸನದಲ್ಲಿ ಬರುವ ಶಾತಕರ್ಣಿರಾಜ[೧೧], ಮಳವಳ್ಳಿಶಾಸನದಲ್ಲಿ ಉಲ್ಲೇಖಿಸಿರುವ ಶಾತಕರ್ಣಿರಾಜರು[೧೨] ಈ ಭಾಗವನ್ನು ಒಳಗೊಂಡಂತೆ ಕುಂತಳನಾಡನ್ನು ಆಳುತ್ತಿದ್ದು, ಬನವಾಸಿಯನ್ನು ಬಹುಶ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದಿರಬೇಕು. ಈ ದಿಶೆಯಲ್ಲಿ ಕೈಕೊಳ್ಳಬೇಕಾದ ಹೆಚ್ಚಿನ ಸಂಶೋಧನೆಗಳೂ ಉತ್ಖನನಗಳೂ ಹೊಸಬೆಳಕನ್ನು ಚೆಲ್ಲಬಹುದು.

ತಾಳಗುಂದದ ವೈಭವ ಬನವಾಸಿ ಕದಂಬರ ಕಾಲಕ್ಕೆ ಇಮ್ಮಡಿಯಾದಂತೆ ತೋರುತ್ತದೆ. ಇದುವರೆಗೆ ಕದಂಬರ ಸುಮಾರು ನಾಲ್ಕು ಶಾಸನಗಳು ಅಲ್ಲಿ ಲಭ್ಯವಾಗಿದ್ದು ಅವುಗಳಲ್ಲೆಲ್ಲ ತಾಳಗುಂದದ ಬಣ್ಣನೆ ಬರುತ್ತದೆ. ಮಾನವ್ಯಗೋತ್ರದ ಹಾರಿತೀಪುತ್ರರಾದ ಕದಂಬಕುಲದ ಮೂಲಮನೆ ಬಹುಶಃ ಇಲ್ಲಿತ್ತು. ಅವರ ಮನೆಯು ಓಂಕಾರ ಪುರಸ್ಸರವಾಗಿ ಪಠಿಸುತ್ತಿದ್ದ ಪವಿತ್ರಗ್ರಂಥಗಳ ಅಧ್ಯಯನದಿಂದ ಪ್ರತಿಧ್ವನಿತವಾಗಿತ್ತು. ಚಾತುರ್ಮಾಸ, ಹೋಮ, ಇಷ್ಟಿ, ಪರ್ವಗಳ ಆಚರಣೆಗಳಿಂದ ಅತಿ ನಿಬಿಡವಾಗಿತ್ತು; ಅತಿಥಿಗಳಿಗೆ ಆಶ್ರಯಸ್ಥಾನವಾಗಿತ್ತು.[೧೩] ಇಂಥ ವಿದ್ವನ್ಮಣಿ ವಿಪ್ರರನೇಕರು ತಾಳಗುಂದದಲ್ಲಿ ನೆಲಸಿದ್ದರು; ಅದು ಅವರದೇ ಆದ ಒಂದು ದೊಡ್ಡ ಅಗ್ರಹಾರವಾಗಿದ್ದಿರಬೇಕು. ಈ ಶ್ರೇಷ್ಠ ಸ್ಥಳದಲ್ಲಿ (ಅಗ್ರ+ಹಾರ) ವಿದ್ಯಾರ್ಜನೆಗಾಗಿ ಬಂದ ಸ್ನಾತಕರು ವಿದ್ಯಾರ್ಥಿಗಳೂ ನೆಲೆಸಿದ್ದಿರಬೇಕು (ಆದರೆ ಈ ಅಗ್ರಹಾರದ ಯುವಕ ಮಯೂರಶರ್ಮನೇ ಸಿದ್ಧವಿದ್ಯನಾಗಲು ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಆ ಕಾಲದ ಮತ್ತೊಂದು ಪ್ರಸಿದ್ಧ ಘಟಿಕಾಸ್ಥಾನವಾಗಿದ್ದ ಕಂಚಿನಗರಕ್ಕೆ ಹೋದನೆಂಬುದು ಇಲ್ಲಿ ಗಮನಾರ್ಹ).

ಅಹಿಚ್ಛತ್ರದಿಂದ ಕದಂಬರು ಕರೆತಂದರೆಂದು ಹೇಳಲಾದ ೩೨,೦೦೦ ಬ್ರಾಹ್ಮಣರು, ೧೨,೦೦೦ ಅಗ್ನಿಹೋತ್ರಿಗಳೂ ಪಂಚಲಿಂಗತೀರ್ಥದಲ್ಲಿ ಸ್ನಾನಮಾಡಿ

ಪವಿತ್ರೀಕೃತರಾಗಿ ಯಜ್ಞಯಾಗಾದಿಗಳನ್ನೂ ಮಾಡುತ್ತಿದ್ದರಂತೆ; ಅನ್ಯೂತಸ್ನಾನದಿಂದ ಅವರ ಕೂದಲು ಆರ್ದ್ರವಾಗಿರುತ್ತಿತ್ತಂತೆ. ಇವರು ಮಯೂರವರ್ಮನಿಗಾಗಿ ಹದಿನೆಂಟು ಅಶ್ವಮೇಧಯಾಗಗಳನ್ನು ಮಾಡಿ ೧೪೪ ಗ್ರಾಮಗಳನ್ನು ದತ್ತಿಯಾಗಿ ಪಡೆದರಂತೆ. ಅವರು ಧರ್ಮಜಿಜ್ಞಾಸೆಗಳಲ್ಲಿ ತೀರ್ಮಾನ ನೀಡುವಂಥವರು, ಅಧಿಕಾರ ವಾಣಿಯಿಂದ ಮಾತಾಡಬಲ್ಲವರು. ಅಂತೆಯೇ ವಿದ್ವತ್ ಸಭೆ ಸಮಾರಂಭಗಳಲ್ಲಿ ವಿಶೇಷವಾಗಿ ಗೌರವಾರ್ಹರು. ವೇದ, ವೇದಾಂಗ, ಮೀಮಾಂಸೆ, ಷಟ್ತರ್ಕ, ಸ್ಮೃತಿ, ಪುರಾಣ, ಕಾವ್ಯ, ನಾಟಕಗಳಲ್ಲಿ ಪರಿಣತರು. ಈ ವಿದ್ವತ್‌ರತ್ನರು ಸರಳತೆ ದಯಾಪರತೆ ಸತ್ಯಸಂಧತೆಗೆ ಖ್ಯಾತರಾಗಿದ್ದರು. ವೈರಿಗಳಿಗೆಲ್ಲ ಹೆದರುವವರಲ್ಲ, ಕೃತಘ್ನರಿಗೆ ತಕ್ಕ ಪ್ರತೀಕಾರ ಮಾಡುವಂಥವರು.[೧೪] ಇಂಥ ವಿದ್ವನ್ಮಣಿಗಳಿಗೆ, ಅವರ ಅಗ್ರಹಾರಕ್ಕೆ ದಾನದತ್ತಿಗಳನ್ನೂ ನೀಡಿ ಗೌರವಿಸಿದವರು ಹಲವರು—ಎಂಬುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.

ಪ್ರಣವೇಶ್ವರ ಗುಡಿಯ ಉತ್ತರಭಾಗದಲ್ಲಿರುವ ೮೬ ಸಾಲುಗಳ ದೀರ್ಘವಾದ ಶಾಸನದಿಂದ ತಿಳಿದುಬರುವಂತೆ[೧೫] ಕ್ರಿ. ಶ. ೧೧೫೮ರಲ್ಲಿ ಭುಜಬಳ ಚಕ್ರವರ್ತಿ ಬಿಜ್ಜಳ ದೇವರಸನ ದಂಡನಾಯಕನಾಗಿದ್ದ ಕೇಶಿಮಯ್ಯ(ಕೇಶಿರಾಜ)ನು ತಾಳಗುಂದ ಅಗ್ರಹಾರಸಮಾಜದ ಆಭರಣಗಳಂತೆ ಶೋಭಿಸುತ್ತಿದ್ದ ಅನೇಕ ವಿದ್ವಾಂಸ ಉಪಾಧ್ಯಾಯರಿಗೆ ದಾನದತ್ತಿಗಳನ್ನು ನೀಡಿದ್ದನು; ವಿವರಪೂರ್ಣವಾಗಿ ದಾಖಲು ಪಡಿಸಿದ ದಾನದತ್ತಿಗಳಲ್ಲಿ **"ಕಂನಡಕ್ಷರ ಸಿಕ್ಷೆ ಘಳಿಯಾರ"** ರಿಗೆ **"ಕಂನಡದು ಪಾಥ್ಯಂಗೆ"** ನೀಡಿದ ದಾನಗಳು (ಕ್ರಮವಾಗಿ ಆರು ಖಂಡುಗ ಬತ್ತ ?, ಮತ್ತು ೫ ಗದ್ಯಾಣ) ನಮ್ಮ ಗಮನವನ್ನು ಸೆಳೆಯುವಂಥವು. ಅಗ್ರಹಾರದಲ್ಲಿ ವೈದಿಕ ವಿದ್ಯಾಭ್ಯಾಸದ ವಿವಿಧ ಭಾಗಗಳಿಗೆ ನೀಡಿದಂತೆ, ಕನ್ನಡ ವ್ಯಾಸಂಗಕ್ಕಾಗಿಯೂ (ಕ್ರಿ. ಶ. ೧೨ ನೆಯ ಶತಮಾನದಲ್ಲಿ) ಪ್ರತ್ಯೇಕ ಮನ್ನಣೆ ನೀಡಲಾಗಿತ್ತೆಂಬುದು ನಿಜಕ್ಕೂ ಕುತೂಹಲಕಾರಿಯಾಗಿದೆ.

ಮಹಾ ಅಗ್ರಹಾರಸ್ಥಾನವಾದ ತಾಳಗುಂದದ ವೈಭವವು ಹೊಯ್ಸಳರ ಕಾಲಕ್ಕೂ ಮುಂದುವರೆದಂತೆ ತೋರುತ್ತದೆ. ವೀರಬಲ್ಲಾಳನ ಕಾಲದ (ಕ್ರಿ. ಶ. ೧೨೦೦) ಒಂದು ಶಿಲಾಶಾಸನದಲ್ಲಿ ಸ್ಥಾಣುಗೂಢಪುರವನ್ನು ಹೀಗೆ ಬಣ್ಣಿಸಲಾಗಿದೆ:[೧೬]

> ...ಚತುರ್ಯುಗ ಪ್ರಸಿದ್ಧ ವಿಶುದ್ಧ ಚತುರಾಭಿದಾನ ಚತುರ್ಮುಖ
> ಪ್ರತಿಷ್ಠಿತ ಪ್ರಣವೇಶ್ವರ ಪ್ರಮುಖಸುರ ಪ್ರತಿಷ್ಠಿತ ಪಂಚಲಿಂಗಾಲಿಂಗಿತ
> ತೀರ್ಥಕ್ಷೇತ್ರದೊಳು ನೋಡಿ ಮಾಡಿದ ಮಹಾ
> ಗ್ರಹಾರಂ ಸ್ಥಾಣುಗೂಢಪುರಂ

ಇಂಥ ಮಹಾಗ್ರಹಾರದ ನಾಕಿಮಯ್ಯ ದ್ವಿಜೇಂದ್ರನು ಊರಿನ ಹೊರವಲಯವನ್ನು ದತ್ತಿಯಾಗಿ ಬಿಟ್ಟದ್ದು ಅದರ ದೀರ್ಘವಾದ ಬಣ್ಣನೆ ಸೊಗಸಾಗಿದೆ.

ಆರವೆಯಿಂ ಪೊದಳ್ದ ಗಿಳಿವಿಂಡುಗಳಿಂ ಕಳವೂಲೆಯುಂಗಳಿಂ ವಾ
ರಿಜಷಂಡದಿಂ ಬಹುತಟಾಕದಿನುದ್ಘಲತಾಗ್ರಿಹಂಗಳಿಂ ಚಾರುವನಂಗಳಿಂ ಬೆಳದ
ಕೆಯ್ವೊಲದಿಂ ಸೊಗಯಿಪ್ಪ ತಾಣ...
ದೂರತಿಸೋಭಿಕುಂ ಸಿರಿಯು ಕಂಬೊಲದಂತೆ ಧರಾತಳಾಗ್ರದೊಳು ॥ ಕತ್ತಲಿಸು
ವೆಳೆಯಕೌಂಗಿಂ ಸುತ್ತಿಱಿದೆಳೆವಳ್ಳಿ...
ಯತ್ತಿಚೆಂದೆಂಗು ಪಲಂ ಬೊತೊಱಿಳ್ಕಿದನಾರಂಗಂ ಬಿತ್ತರಿಸಲ್ಕರಿದು
ತಾಣಗುಂದೂರವನಂ।

ಅಂಗಭವಂ ಸಂಗಡಿಗಂ ತಿಂಗಳೆಪೊಂ......
ಡನಪಾರಸುಧೆನೀರೂಟಂ ಪಿಂಗದ ಮಧುಮಧುವನಪಾಳಂ ಸಂ...ಸಲು ಬೆಳದು
ದೆಂಬುದೇನಚ್ಚರಿಯೇ । ವಚನ ॥ ಅದೆನ್ತೆನೆ ಬೆಳೆದ
ಮಳೆಯ ಜಪಳುಕಿನಮುರ। ನೆಳೆಕಾಳಾಗರು । ನಾಳಿಕೇರ ।
ಲವಂಗ । ಮಾತುಳಂಗ ।

ಚೂತ ಚಂಪಕ । ಬಕಬಕುಳ । ಅಶೋಕ ।
ಪೂಗನಾಗ । ನಾಗಲತಾ ವಿತಾನದೊಳು । ವೋದಿನ । ಬಾದಿನ ।
ತರ್ಕ್ಕದ ತರ್ಕ್ಕಿಸುವ ।

ತಂತ್ರದ ಮಂತ್ರವಾದದ । ಕವಿಪಠನಕದನದ ।
ಯಾಗ್ನೀಕರ ಸೈಜ್ಞಿಗಳಂ ಕಲ್ತು ಪಲುಂಬುವ ಪಲಂ ತೆಱದ ವಿಹಂಗತತಿಯಿಂದತಿ
ಸಯಿಸಿತು । ನಂದನವುನಿಂದುತ್ಪುರಪರಿ
ಸರೋದ್ಯಾನ ॥

ಇಂತಹ ಪವಿತ್ರತಾಣದಲ್ಲಿದ್ದ ಪ್ರಣವೇಶ್ವರ ದೇವಾಲಯವು ನಿಜಕ್ಕೂ ಆಗ ಹಾರದ ಒಂದು ಪ್ರಮುಖ ಧಾರ್ಮಿಕ-ಸಾಂಸ್ಕೃತಿಕ ಕೇಂದ್ರವಾಗಿತ್ತು (ಇದಕ್ಕೆ ಸಂಬಂಧಿಸಿದಂತೆ ಹತ್ತಾರು ಶಾಸನಗಳು ಈ ಮಾತನ್ನು ಪುಷ್ಟೀಕರಿಸುತ್ತವೆ). ಈ ದೇವಾಲಯ ನಿಜವಾದ ಅರ್ಥದಲ್ಲಿ ಊರಿನ ಕಣ್ಣಾಗಿತ್ತೇ ? ವಾಸ್ತುರತ್ನವಾಗಿ ಶೋಭಿಸುತ್ತಿತ್ತೇ ? ಎಂಬುದನ್ನು ಈಗ ಪರಿಶೀಲಿಸೋಣ: ಇದುವರೆಗೆ ನಮಗೆ ತಿಳಿದು ಬರುವಂತೆ ಕರ್ನಾಟಕದಲ್ಲಿ ಉಳಿದು ಬಂದಿರುವ ದೇಗುಲಗಳಲ್ಲೆಲ್ಲ ಪ್ರಣವೇಶ್ವರ ದೇವಾಲಯವು ಪ್ರಾಚೀನತಮವಾದದ್ದು.[೧೭] ಶಾಸನೀಯವಾಗಿ ತಿಳಿದುಬರುವಂತೆ ಶಾತಕರ್ಣಿಗಳೇ ಮುಂತಾದ ಪುರಾತನರು ಆರಾಧಿಸಿದ್ದರೆಂದು ಹೇಳಿದ್ದರಿಂದ ಇದು ಕ್ರಿ. ಶ. ೨-೩ ನೆಯ ಶತಮಾನದಿಂದಲೂ ಖ್ಯಾತವಾಗಿತ್ತೆಂದು ಹೇಳಬಹುದು (ಮಳವಳ್ಳಿಯಲ್ಲಿರುವ ಶಾತಕರ್ಣಿ ಸ್ತಂಭಶಾಸನವು ಉಲ್ಲೇಖಿಸುವ 'ಲೋಕನಾಥ ಶಿವನೇ' ಇಲ್ಲಿಯ ಪ್ರಣವೇಶ್ವರನಿರಬಹುದೆ ?). ದೇವಾಲಯದ ಗರ್ಭಾಂಕಣದಲ್ಲಿರುವ ಪ್ರಣವಲಿಂಗದ ಶೈಲಿಯನ್ನು, ಸೋಮಸೂತ್ರ ಮೊದಲಿಯನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಅದರ ಪ್ರಾಚೀನತೆಯು ತಕ್ಕಮಟ್ಟಿಗೆ ತಿಳಿಯುವುದು. ಸುಮಾರು ೧ ಮೀ. ಎತ್ತರ ಹಾಗೂ ಸುಮಾರು ೪೫ ಸೆಂ. ಮೀ. ವ್ಯಾಸವುಳ್ಳ ಈ ದೊಡ್ಡ ಲಿಂಗವು

ಶಿರೋಭಾಗದಲ್ಲಿ ಅಂಡಾಕಾರವಾಗಿಯೂ ಮಧ್ಯದಲ್ಲಿ ಅಷ್ಟಕೋನಾಕಾರವಾಗಿಯೂ ಇದ್ದು ಬುಡಭಾಗವು ಚತುರಸ್ರಾಕಾರದಲ್ಲಿದೆ. ಇದರ ಪ್ರಮಾಣಕ್ಕೆ ತಕ್ಕ ದೊಡ್ಡ ಪಾಣಿಪೀಠವೂ ಚೌಕಾಕಾರವಾಗಿದೆ (ಇದು ಈಗ ಸೀಳುಬಿಟ್ಟಿರುವುದು). ಸ್ಥಳೀಯ ಜನರು ತಿಳಿಸುವ ಪ್ರಕಾರ ಈ ಪ್ರಣವಲಿಂಗವನ್ನು ಎರಡುಬಾರಿ ಧ್ವಂಸಮಾಡಲು ಪ್ರಯತ್ನಿಸಿದ್ದುಂಟು (೧೯೩೩, ೧೯೬೬ ರಲ್ಲಿ). ಪುರಾತತ್ವ ಇಲಾಖೆಯವರು ಈಗ ಇಡೀ ದೇವಾಲಯವನ್ನು ಪುನಾರಚಿಸಿ ಸಂರಕ್ಷಿಸುವ ಏರ್ಪಾಡು ಮಾಡಿದ್ದು ಅಭಿನಂದನೀಯ. ಪರಿಣಾಮವಾಗಿ ಪ್ರಾಚೀನತಮ ದೇವಾಲಯವೊಂದರ ವಾಸ್ತುವಿಶೇಷವನ್ನು ತಕ್ಕಮಟ್ಟಿಗೆ ಊಹಿಸಲು ಸಾಧ್ಯವಾಗಿದೆ.

ಮೂಲತಃ ಗರ್ಭಾಂಕಣವು ಮಾತ್ರವಿದ್ದು ಕಾಲಕ್ರಮದಲ್ಲಿ ಮುಖಭದ್ರವನ್ನು ಜೋಡಿಸಿದಂತೆ ತೋರುವ ಈ ಪುರಾತನ ದೇವಸ್ಥಾನವು ಒಂದು ಸರಳವಾದ ವಾಸ್ತುಕೃತಿಯಾಗಿದೆ. ಚತುರಸ್ರಾಕಾರದ ಗರ್ಭಗುಡಿಯು ಚಿಕ್ಕದಾಗಿದ್ದು (೪-೫ಮೀ. ಚೌರಸ ಲಿಂಗದ ಪ್ರಮಾಣಕ್ಕೆ ಹೋಲಿಸಿ ನೋಡಿದರೆ) ಹೊರ ಮತ್ತು ಒಳ ಭಿತ್ತಿಭಾಗಗಳೆಲ್ಲ ಅತ್ಯಂತ ಸರಳವಾಗಿವೆ. ಆಯತಾಕಾರದ ದೊಡ್ಡ ದೊಡ್ಡ ಸೈಜು ಕಲ್ಲುಗಳನ್ನು ಪೇರಿಸಿ ರಚಿಸಿದ ಮೂಲ ಕಟ್ಟಡಕ್ಕೆ ಸಿಮೆಂಟಿನಂತಹ ಯಾವ ಬಂಧಕ ವಸ್ತುವನ್ನು ಬಳಸಿದಂತಿಲ್ಲ. ಗರ್ಭಾಂಕಣದ ನಾಲ್ಕು ಮೂಲೆಗಳಲ್ಲಿ ನಾಲ್ಕು ಪ್ರತ್ಯೇಕ ಸ್ತಂಭಗಳಿದ್ದು ಅವುಗಳಲ್ಲಿ ಎರಡು ಮಾತ್ರ ಬಾಗಿಲುವಾಡದ ಹತ್ತಿರ ಕಂಡು ಬರುತ್ತವೆ.[೧೮] ಪ್ರಾಚೀನ ದೇವಾಲಯಗಳಲ್ಲಿ ಇಂಥ ಸ್ತಂಭಗಳು ಪ್ರತ್ಯೇಕವಾಗಿರುವುದು ಒಂದು ಪ್ರಧಾನ ಲಕ್ಷಣವೆಂದು ಹೇಳಬಹುದು.[೧೯] ಆದರೆ ಪುನರ್ನಿರ್ಮಾಣದ ಕಾಲದಲ್ಲಿ ಅಲ್ಪ ಸ್ವಲ್ಪ ಮಾರ್ಪಾಡುಗಳಾದಂತೆ ತೋರುತ್ತದೆ ಗರ್ಭಗೃಹದ ಮೇಲ್ಛಾವಣಿಯನ್ನು (೨ ಚೌರಸಗಳನ್ನು ಒಂದರ ಮೇಲೊಂದಿಟ್ಟು) ನಿರ್ಮಿಸಿ ಅದರ ಮೇಲೆ ಪದ್ಮವಿನ್ಯಾಸವುಳ್ಳ ದೊಡ್ಡ ಶಿಲಾಫಲಕವನ್ನು ಕವುಚಿ ಹಾಕಿದಂತೆ ತೋರುತ್ತದೆ.

ಗರ್ಭಗೃಹ ದ್ವಾರವನ್ನು ಅನಂತರ ಪುನರ್‌ರಚಿಸಿದಂತೆ ಕಾಣುತ್ತದೆ.[೨೦] ಇದರ ಬಾಗಿಲುವಾಡಕ್ಕೆ ಬಳಸಿದ (ಆಚೀಚೆಗಿರುವ) ಶಿಲೆಗಳು ಮೂಲತಃ ಬನವಾಸಿ ಕದಂಬರ ಕಾಲದ ಅಪೂರ್ವ ಶಾಸನಗಳಾಗಿದ್ದವು. ಬಲಗಡೆಗಿರುವ ಬಾಗಿಲುವಾಡದ ಬುಡದಲ್ಲಿರುವ ಶಾಸನದಲ್ಲಿ ಶಂಭುವಿನ ಸ್ತುತಿಯಿದ್ದು ಕದಂಬ ಕಕುಸ್ಥವರ್ಮನನ್ನು ಉಲ್ಲೇಖಿಸುತ್ತದೆ. ಇದರಿಂದ ತಿಳಿದುಬರುವಂತೆ ಈತ ಸ್ಥಾನಕಞ್ಜಪುರದ ಪ್ರಣವೇಶ್ವರ ಗುಡಿಗೆ ಮಹಾದ್ವಾರವೊಂದನ್ನು ನಿರ್ಮಿಸಿದ.[೨೧] ಆ ಮಹಾದ್ವಾರ ಈಗ ಉಳಿದಿಲ್ಲ. ಆದರೆ ಅದನ್ನು ದಾಖಲುಮಾಡಿರುವ ಸುಂದರವಾದ ಶಾಸನಶಿಲೆಯು ಗರ್ಭಗೃಹದ್ವಾರದ ಫಲಕಗಳಾಗಿ ಸೇರಿಹೋಗಿರುವುದೊಂದು ವಿಪರ್ಯಾಸವಾಗಿ

ತೋರುತ್ತದೆ. ದ್ವಾರದ ಬಲಗಡೆ ಬುಡಭಾಗದಲ್ಲಿ ಕೈಕೆಯಕುಲದ ರಾಣಿ ಪ್ರಭಾವತಿಯ ಉಲ್ಲೇಖವಿದೆ.[೨೨] ಈಕೆ ಮೃಗೇಶವರ್ಮನ ಪ್ರಿಯಭಾರ್ಯೆ, ರವಿವರ್ಮನ ತಾಯಿಯೆಂದೂ ತಿಳಿದುಬರುತ್ತದೆ. ಈ ಎರಡು ಬಾಗಿಲುವಾಡಗಳ ಮೇಲೆ ಈಗ ಪುಷ್ಪಶಾಖೆಗಳನ್ನು ಕೆತ್ತಲಾಗಿದೆ. ಲಲಾಟಬಿಂಬದ ಮೇಲೂ ಗಣೇಶನ ಉಬ್ಬು ಶಿಲ್ಪವನ್ನು ಕೆತ್ತಲಾಗಿರುವುದು ಗಮನಾರ್ಹ. ಇವುಗಳಿಂದ ಮೂಲ ದ್ವಾರ ಬಂಧಗಳು ಹೇಗಿದ್ದವು ಎಂಬುದು ಈಗ ಊಹೆಗೆ ನಿಲುಕದ್ದಾಗಿದೆ. ಅದೇನಿದ್ದರೂ ಮೂಲ ಗರ್ಭಗೃಹಕ್ಕೆ ಕಾಲಾಂತರದಲ್ಲಿ, ಬಹುಶ ಕದಂಬರ ಕಾಲದಲ್ಲಿ, ಮುಖಭದ್ರ ವನ್ನು (೩.೬೦ ಚೌರಸ ಮೀಟರ್) ಸೇರಿಸಿದ್ದಿರಬೇಕು. ದೇಗುಲದ ಮಹತ್ವವು ಕಾಲಕ್ರಮದಲ್ಲಿ ಹೆಚ್ಚಿದ್ದರಿಂದ ಹೀಗೆ ವಿಸ್ತರಣೆ ಮಾಡುವುದು ಅನಿವಾರ್ಯವಾದಂತೆ ತೋರುತ್ತದೆ (ಹೋಮದೀಕ್ಷಾಪರರಾದ ವೈದಿಕರ ವೇದಘೋಷಗಳಿಂದ, ಹೋಮ ಧೂಮಗಳಿಂದ ದೇವಾಲಯವು ಮೊಳಗುತ್ತಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಆದರೆ ಮುಖಭದ್ರದ ಮೂಲಸ್ವರೂಪ ಹೇಗಿತ್ತು, ಎಷ್ಟು ದೊಡ್ಡದಾಗಿತ್ತು ಎಂಬುದು ಖಚಿತವಾಗಿ ತಿಳಿಯುವುದಿಲ್ಲ. ಈಗಿರುವ ಭಾಗ ಸುಮಾರು ೧೨ ನೆಯ ಶತಮಾನದ ನಂತರ ಜೀರ್ಣೋದ್ಧಾರ ಮಾಡಿದ್ದಿರಬೇಕು. ಈ ಭಾಗದ ಭಿತ್ತಿಯ ಮೇಲೆ ಹಾಗೂ ಮೇಲ್ಛಾವಣಿಯಡಿಯಲ್ಲಿ ೧೧-೧೨ ನೆಯ ಶತಮಾನಗಳ ಶಾಸನ ಗಳಿರುವುದು ಗಮನಾರ್ಹ. ಪ್ರಣವೇಶ್ವರದೇವರಿಗೆ ಬಿಟ್ಟ ದಾನದತ್ತಿಗಳನ್ನು ವಿವರಿಸುವ ಈ ಶಾಸನಶಿಲೆಗಳ ಮಹತ್ವವನ್ನರಿಯದ ಸ್ಥಪತಿಗಳು ಇದಕ್ಕಾಗಿ ಬಳಸಿ ಬಿಟ್ಟಂತೆ ಕಾಣುತ್ತದೆ. ಈ ಭಾಗದ ಮುಚ್ಚಿಗೆಯ ರೀತಿ ಕೂಡ ಕಲ್ಯಾಣ ಚಾಲುಕ್ಯ-ಕಲಚುರಿ ಕಾಲದ ವಾಸ್ತುಶೈಲಿಗನುಗುಣವಾಗಿದೆಯೆನ್ನಬಹುದು. ಮುಚ್ಚಿಗೆ ಕಲ್ಲಿನ ಮಧ್ಯದಲ್ಲಿ ಪದ್ಮವಿನ್ಯಾಸವಿದ್ದುದನ್ನು ಇಲ್ಲಿ ಗಮನಿಸಬೇಕು. ಈ ಮುಖಮಂಟಪದ ದ್ವಾರದ ಪಟ್ಟಿಕೆಗಳಲ್ಲಿ ಕೆಲವು ಪ್ರಾಚೀನವಾದವೆಂಬುದು ಪೂರ್ಣಕುಂಭದ ಶೈಲಿ ಹಾಗೂ ಕೆಲವು ಸಿಂಹ ಹಾಗೂ ಗಜಲಕ್ಷ್ಮೀ ಉಬ್ಬು ಶಿಲ್ಪಶೈಲಿಗಳನ್ನು ಗಮನಿಸಿದರೆ ತಿಳಿದೀತು. ಒಟ್ಟಿನಲ್ಲಿ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ಎಷ್ಟು ವ್ಯಾಪಕ ವಾಗಿ ಆಗಿಹೋಗಿದೆಯೆಂದರೆ ಅದರ ಮೂಲಸ್ವರೂಪದ ನಿಜಚಿತ್ರಣವನ್ನು ಈಗ ಪುನಾರಚಿಸುವುದು ತುಸು ಕಷ್ಟವಾಗಿದೆ. ಬಹುಶಃ ಶಾತವಾಹನರ ಕಾಲದಲ್ಲಿ ಇದೊಂದು ಇಟ್ಟಿಗೆಕಟ್ಟಡವಾಗಿದ್ದು, ಕದಂಬರ ಕಾಲದ ಹೊತ್ತಿಗೆ ಶಿಲಾಗೃಹ ವಾಗಿರಬೇಕು.

ಪ್ರಣವೇಶ್ವರ ಗುಡಿಯ ಸುತ್ತಲೂ ಪ್ರಾಕಾರ ಗೋಡೆಯಿದ್ದು ಪ್ರಾಂಗಣದಲ್ಲಿ (ದೇಗುಲದ ಎದುರಿಗೆ)ಪುಟ್ಟ ನಂದಿ ವಿಗ್ರಹಗಳು (ಇದರಲ್ಲಿ ಒಂದು ಕದಂಬರ ಕಾಲದ್ದಿರ ಬೇಕು), ಶಾಸನಶಿಲೆಗಳೂ ಕಂಡುಬರುತ್ತಿವೆ. ಇವುಗಳೆಲ್ಲೆಲ್ಲ ಇತಿಹಾಸ ಪ್ರಸಿದ್ಧ ಸ್ತಂಭಶಾಸನವು ನಮ್ಮನ್ನು ತಕ್ಷಣ ಆಕರ್ಷಿಸುವಂತಹದು.[೨೩] ಪ್ರತ್ಯೇಕವಾದ

ಕಬ್ಬಿಣದ ಬೇಲಿಯೊಳಗೆ ಪೀಠದ ಮೇಲೆ ನಿಂತಿರುವ ಈ ಸ್ತಂಭದ ಬುಡಭಾಗವು ಚತುರಸ್ರವಾಗಿಯೂ, ತುದಿಭಾಗವು ಅಷ್ಟಕೋನಾಕಾರವಾಗಿಯೂ ಇದ್ದು, ತುತ್ತ ತುದಿಯಲ್ಲಿ ಕಮಲದ ಮೊಗ್ಗಿನಂತಹ ವಿನ್ಯಾಸವನ್ನು ರಚಿಸಿದಂತೆ ತೋರುತ್ತದೆ ಇಲ್ಲಿ ಈಗ ಕಲ್ಲಿನ ಚಕ್ಕೆಗಳೆದ್ದು ತುಸು ಅಂದಗೆಟ್ಟಿದೆ). ಸುಮಾರು ೨ ಮೀ. ಎತ್ತರ ವಿರುವ ಈ ಸ್ತಂಭದ ಎಂಟೂ ಮುಖಗಳ ಪೈಕಿ ಏಳು ಮುಖಗಳಲ್ಲಿ ತಲಾ ಎರಡು ಸಾಲುಗಳಂತೆಯೂ ಎಂಟನೆಯ ಮೈಯಲ್ಲಿ ಪುಟ್ಟ ಸಾಲೊಂದನ್ನು ಹೀಗೆ ಒಟ್ಟು ೧೫ ಸಾಲುಗಳಲ್ಲಿ ಸುಂದರವಾದ ಶಾಸನವನ್ನು ಕೊರೆಯಲಾಗಿದೆ. ಅಂದವಾದ ಪೇಟಿಕಾಶಿರವುಳ್ಳ ಬ್ರಾಹ್ಮೀಲಿಪಿಯಲ್ಲಿ ಹಾಗೂ ಪ್ರೌಢಸಂಸ್ಕೃತಭಾಷೆಯಲ್ಲಿ ಬರೆಯಲಾಗಿದೆ. ಇದನ್ನು ಬರೆಸಿದವರು ಕದಂಬಕುಲದ ಯಾವ ರಾಜರೆಂಬುದರಲ್ಲಿ ಏಕಾಭಿಪ್ರಾಯವಿಲ್ಲ. ಕೀಲ್‌ಹಾರ್ನ್, ಸಿವೆಲ್, ರ್‍ಯಾಪ್ಸನ್, ಎನ್. ಲಕ್ಷ್ಮೀನಾರಾಯಣ ರಾವ್, ಆರ್. ಎಸ್. ಪಂಚಮುಖಿ ಮುಂತಾದವರ ಪ್ರಕಾರ ಕದಂಬ ಕಾಕುಸ್ಥ ವರ್ಮನಾದರೆ; ಬ್ಯೂಲರ್, ರೈಸ್, ಫ್ಲೀಟ್, ಎಂ. ಎಚ್. ಕೃಷ್ಣ, ಕೆ. ಎ. ನೀಲಕಂಠ ಶಾಸ್ತ್ರಿ, ಡಿ. ಸಿ. ಸರ್ಕಾರ ಮುಂತಾದವರು ಶಾಂತಿವರ್ಮನೆಂದು ಹೇಳುತ್ತಾರೆ. ಜಿ. ಎಸ್. ಗಾಯಿಯವರು ಕದಂಬ ಕಾಕುಸ್ಥ–ಶಾಂತಿವರ್ಮನದೆಂದೂ ತಿಳಿಸಿದ್ದಾರೆ.[೨೫] ಅದೇನಿದ್ದರೂ ಇದನ್ನು ಕ್ರಿ. ಶ. ಸುಮಾರು ೪೫೦ರಲ್ಲಿ ಬರೆಸಿದ್ದೆಂಬುದು ಸ್ಪಷ್ಟ. ಇದನ್ನು ರಚಿಸಿದವನು ಶ್ರೇಷ್ಠ ಸಂಸ್ಕೃತಕವಿ ಕುಬ್ಜ. ಈತ ಕದಂಬರ ಆಸ್ಥಾನದಲ್ಲಿ ಶೋಭಿಸುತ್ತಿದ್ದ ಆಸ್ಥಾನಕವಿಯಾಗಿದ್ದು ತನ್ನ ಸುಂದರವಾದ ಪ್ರಶಸ್ತಿಕಾವ್ಯದಲ್ಲಿ ಮಾತ್ರಸಮಕ ಅಥವಾ ಮಿಶ್ರಗಣ ಗೀತಿಕೆಯೆಂಬ ಅಪೂರ್ವ ಛಂದಸ್ಸನ್ನು ಬಳಸಿದ್ದು ಕಂಡುಬರುತ್ತದೆ. ಕರ್ನಾಟಕದ ಸಂಸ್ಕೃತ ಕಾವ್ಯಸಾಹಿತ್ಯದ ಅಭ್ಯಾಸಿಗಳಿಗೆ ಇದೊಂದು ಅಪೂರ್ವವಾದ ಶಾಸನವಾಗಿದೆ. ಅಲ್ಲದೆ ಇತಿಹಾಸಕಾರರಿಗೆ ಇದೊಂದು ಖಚಿತವಾದ ಶಾಸನಾಧಾರವಾಗಿದ್ದು[೨೫] ಕದಂಬಕುಲದ ಮೂಲ, ವಂಶಾವಳಿ, ಗುಪ್ತರೊಡನೆ ಕದಂಬರ ಸಂಬಂಧ, ಕದಂಬಕಾಲದ ವಿದ್ಯಾಭ್ಯಾಸ ಪದ್ಧತಿ, ಮತಧರ್ಮ ಮುಂತಾದ ವುಗಳನ್ನು ಇದರಿಂದ ತಿಳಿಯಬಹುದು. ಸ್ಥಾನಕುಂದೂರ ಗ್ರಾಮವು ಕದಂಬರ ಹುಟ್ಟೂರಾಗಿರಬಹುದೆಂದು ಹೇಳಲು ಈ ಶಾಸನವಲ್ಲದೆ, ಆ ಕಾಲದ ಇತರ ಮೂರು ನಾಲ್ಕು ಶಾಸನಗಳು ಸಹಾಯಕವಾಗಿವೆ. ಇದು ಕರ್ನಾಟಕದ ಪ್ರಪ್ರಥಮ ರಾಜ ವಂಶದ ಹೆಸರಿನ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವುದು: ತಮ್ಮ ಮನೆಯ ಮುಂದೆ ಹುಟ್ಟಿದ್ದ ಕದಂಬ ಮರವನ್ನು ಬೆಳೆಸಿ ಆರೈಕೆಮಾಡಿ ಅವನ್ನೇ ತಮ್ಮ ಮನೆತನದ ಲಾಂಛನವನ್ನು ಮಾಡಿಕೊಂಡರೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೨೬] ಇವೆಲ್ಲಕ್ಕಿಂತ ಮುಖ್ಯವಾಗಿ ಪ್ರಸ್ತುತ ಶಾಸನವಲ್ಲಿ ಪ್ರಣವೇಶ್ವರದೇಗುಲವ ಸುಂದರ ವರ್ಣನೆ ಹಾಗೂ ಅದರ ಪೂಜಾವಿನಿಯೋಗಕ್ಕಾಗಿ ಪವಿತ್ರವಾದ ಒಂದು ಕೆರೆಯನ್ನು (ತಟಾಕ)ಕಕುಸ್ಥ ವರ್ಮನು ತೋಡಿಸಿದ್ದನ್ನು ದಾಖಲುಪಡಿಸುತ್ತವೆ. ತಾಳಗುಂದಸ್ತಂಭ ಶಾಸನದಲ್ಲಿ ಪ್ರಣವೇಶ್ವರ ಸಿದ್ಧಾಲಯವನ್ನು ಹೀಗೆ ಬಣ್ಣಿಸಲಾಗಿದೆ:[೨೭]

ಸಯಂಹ ಭಗವತೋ ಭವಸ್ಯಾದಿದೇವಸ್ಯ ಸಿದ್ಧಾಲಯೋ ಸಿದ್ಧಗಾನ್ಧರ್ವರ
ಕ್ಷೋ ಗಣೈಸ್ಸೇವಿತೇ
ವಿವಿಧ ನಿಯಮ ಹೋಮ ದೀಕ್ಷಾಪರೈರ್ಬ್ರಾ [ಹ್ಮ] ಣೈಃ ಸ್ನಾತಕೈ
ಸ್ತೂಯಮಾನೇಸದಾ ಮನ್ತ್ರವಾದೈಶುಭೈಃ
ಸುಕೃತಿಭಿರವನೀಶ್ವರೈರಾತ್ಮ ನಿಶ್ಶ್ರೇಯಸಂ ಪ್ರೇಪ್ಸುಭಿಸ್ಸಾತಕರ್ಣ್ಯಾದಿ
ಭಿಶ್ಶ್ರದ್ಧಯಾಭ್ಯರ್ಚ್ಚಿತೇ......

(ಆದಿದೇವನಾದ ಶಿವನ ಈ ಸಿದ್ಧಾಲಯವು ಸಿದ್ಧಗಂಧರ್ವ ರಾಕ್ಷಸಗಣಗಳಿಂದ ಸೇವಿತ, ವಿವಿಧ ನಿಯಮ ಹೋಮ ದೀಕ್ಷಾಪರರಾದ ಬ್ರಾಹ್ಮಣ, ಸ್ನಾತಕ, ಮಂತ್ರಪಾಠಕರಿಂದ ಸದಾ ಸ್ತುತಿಸಲ್ಪಡುತ್ತಿತ್ತು. ಸಾತಕರ್ಣಿ ಮುಂತಾದ ಪುಣ್ಯವಂತ ರಾಜರಿಂದ ಶ್ರದ್ಧಾಪೂರ್ವಕವಾಗಿ ಆರಾಧಿಸಲ್ಪಡುತ್ತಿತ್ತು.)

ಕೆಲವು ಮಧ್ಯಕಾಲೀನ ಶಾಸನಗಳಲ್ಲಿ ಪ್ರಣವೇಶ್ವರದೇಗುಲವನ್ನು ಬ್ರಹ್ಮ ಪ್ರತಿಷ್ಠಾಪಿತವೆಂದೂ ಬಣ್ಣಿಸಿದ್ದುಂಟು. ಈ ದೇವಾಲಯದ ಮುಂದಿರುವ ಒಂದು ಶಾಸನದಲ್ಲಿ (ಕಲ್ಯಾಣ ಚಾಲುಕ್ಯ ಜಯಸಿಂಹನ ಕಾಲದ್ದು) ಈ ಗುಡಿಯನ್ನು 'ಹಿರಣ್ಯ ಗರ್ಭಬ್ರಹ್ಮಸಂಸ್ಥಾಪಿತ ಶ್ರೀಮತ್ತ್ರೈಲೋಕ್ಯನಾಥ ಪ್ರಣವೇಶ್ವರ' ಎಂದು ಉಲ್ಲೇಖಿಸಲಾಗಿದೆ.[೨೮] ಈ ಬಣ್ಣನೆಯು ಪ್ರಣವೇಶ್ವರ ಗುಡಿಯು ಅತಿ ಪ್ರಾಚೀನವಾದದ್ದೆಂಬ ಧ್ವನಿಕೊಡುವಂತಿದೆ. ಇಲ್ಲಿರುವ ಶಿವಲಿಂಗದ ಹೆಸರೂ ಗಮನ ಸೆಳೆಯುವಂಥದ್ದೇ. ಪ್ರಣವಾಕ್ಷರವು (ಓಂಕಾರ) ಒಂದು ಆದಿಯ ಬೀಜಾಕ್ಷರವಾಗಿದ್ದು ಅದರ ವ್ಯಾಪ್ತಿ ಅರ್ಥವೈಶಾಲ್ಯ ತೀರ ಗಹನವೆಂಬುದು ಸರ್ವವೇದ್ಯ.[೨೯] ಇದನ್ನು **'ಸಿದ್ಧಾಲಯ'** ವೆಂದು ಕರೆದಿರುವುದರಲ್ಲೂ ಔಚಿತ್ಯವಿಲ್ಲದಿಲ್ಲ. ಇಂಥ ಮಹತ್ಪೂರ್ಣ ದೇಗುಲಕ್ಕೆ ಸಂಬಂಧಿಸಿದಂತೆ ಅನೇಕ ದಾನದತ್ತಿಗಳನ್ನೂ ಹಲವರು ನೀಡಿದ್ದುಂಟು. ಕದಂಬ ಕಾಕುಸ್ಥವರ್ಮ ಮಹಾರಾಜನು ಪೂಜಾವಿನಿಯೋಗಕ್ಕಾಗಿ ಪವಿತ್ರವಾದ ತಟಾಕ (ಕೆರೆ)ವೊಂದನ್ನು ತೋಡಿಸಿದ್ದನಲ್ಲದೆ ದೇಗುಲಕ್ಕೆ ಮಹಾದ್ವಾರವನ್ನೂ ಮಾಡಿಸಿದ್ದನೆಂದು ಈಗಾಗಲೇ ಹೇಳಲಾಗಿದೆಯಷ್ಟೆ. ಅನಂತರ ರಾಷ್ಟ್ರಕೂಟರ ಕಾಲದಲ್ಲಿ **'ತಾಣಗುಸ್ತೂರಕ್ಕೆರೆ'** ಯನ್ನು ಸಾಂತಳಿಗೆ ಸಾವಿರದ ಪುಲಿಯಮ್ಮ ಪೆರ್ಗಡೆಯು ಪುನಃ ಮಾಡಿಸಿ ಅದರ ಕಾವಲಿಗೆ ಹಾಗೂ ಅಲ್ಲಿಯ ಅಗ್ರಹಾರದಲ್ಲಿ ಗ್ರಂಥ ಓದಲಿಕ್ಕೆ ದಾನದತ್ತಿ ಬಿಟ್ಟಂತೆ ತಿಳಿದುಬರುತ್ತದೆ.[೩೦]

ಸಪ್ತದಿವ್ಯಗಳು ಸದಾ ನಡೆಯುತ್ತಿದ್ದ ಪ್ರಣವೇಶ್ವರದೇವಾಲಯಕ್ಕೆ ಹೊಂದಿಕೊಂಡಂತೆ ಅರವಟ್ಟಿಗೆಯೊಂದಿತ್ತೆಂಬುದೂ ಶಾಸನೀಯವಾಗಿ ತಿಳಿದು ಬರುತ್ತದೆ. ಇದನ್ನು ಮಾಧವಭಟ್ಟನು ಸ್ಥಾಪಿಸಿದ್ದನೆಂಬುದು ದೇಗುಲದ ಈಶಾನ್ಯದಲ್ಲಿರುವ ಶಾಸನ ತಿಳಿಸುತ್ತದೆ.[೩೧] ಕ್ರಿ. ಶ. ೧೧೫೮ ರ ಇನ್ನೊಂದು ಶಾಸನವು ಭುಜಬಳ

ಚಕ್ರವರ್ತಿ ಬಿಜ್ಜಳದೇವನ ದಂಡನಾಯಕನಾದ ಕೇಶಿಮಯ್ಯ ದೇವರ ಪೂಜಾ-ವಿನಿಯೋಗಗಳಿಗಾಗಿ, ನಂದಾದೀಪಕ್ಕೆ, ಅಂಗಭೋಗ-ರಂಗಭೋಗಕ್ಕೆ ಅನೇಕ ರೀತಿಯ ದಾನ ದತ್ತಿಗಳನ್ನು ಬಿಟ್ಟದ್ದನ್ನು ಸವಿಸ್ತಾರವಾಗಿ ಬಣ್ಣಿಸುತ್ತದೆ.[೨೨] ಕ್ರಿ. ಶ. ೧೨೦೦ ರ ವೀರಬಲ್ಲಾಳನ ಮತ್ತೊಂದು ಶಾಸನದಲ್ಲೂ ಇಂಥ ದಾನಗಳ ವಿವರಗಳಿವೆ.[೨೩] ಈ ದೇಗುಲಕ್ಕೆ ಸಂಬಂಧಪಟ್ಟಂತೆ ಅಡಕೆ ತೋಟ, ವೀಳ್ಯದೆಲೆ ತೋಟ, ಗದ್ದೆಗಳು ಸಾಕಷ್ಟಿದ್ದವೆಂದೂ ತಿಳಿದುಬರುತ್ತದೆ ಇವೆಲ್ಲವುಗಳನ್ನು ಗಮನಿಸಿದಾಗ ತಾಳಗುಂದದ ಪ್ರಣವೇಶ್ವರಾಲಯ ಶಾತಕರ್ಣಿಗಳ ಕಾಲದಿಂದ ಹೊಯ್ಸಳರ ಕಾಲದವರೆಗೆ ಮತ್ತು ಅನಂತರದಲ್ಲಿ ಬಹಳ ಖ್ಯಾತವಾಗಿತ್ತೆಂದೂ, ಅದರ ಆಸ್ತಿಪಾಸ್ತಿ ಹೇರಳವಾಗಿತ್ತೆಂದೂ ಅದೊಂದು ಸಿದ್ಧಾಲಯವಾಗಿ ಪುಣ್ಯಕ್ಷೇತ್ರವಾಗಿತ್ತೆಂದೂ ವಿದ್ಯಾಕೇಂದ್ರವಾಗಿತ್ತೆಂದೂ ತಿಳಿದುಬರುತ್ತದೆ.

ಕುಂತಳನಾಡಿನ ಜನ 'ನಮೋ ಭಗವತೇ ಸ್ಥಾನಕುಂದೂರವಾಸಿನೇ ಮಹಾದೇವಾಯ' ಎಂದು ಗೌರವದಿಂದ ಆರಾಧಿಸುತ್ತಿದ್ದರಲ್ಲದೆ **"ನನ್ದತೋ ಸರ್ವ್ವ ಸಮನ್ತಾಗತೋಽಯಮಧಿವಾಸಃ"** ("ಈ ದೇವಾಲಯಕ್ಕೆ ಬರುವ ಎಲ್ಲ ಜನರು ಸಂತೋಷಿಸಲಿ") ಎಂದು ಹಾರೈಸುತ್ತಿದ್ದಂತೆ ತೋರುತ್ತದೆ. ಆದರೆ ಇಂದು ಆ ದೇವಾಲಯಕ್ಕೆ ಹೋಗುವ ಹೆಚ್ಚಿನ ಜನರಿಗೆ ಅದರ ಸ್ಥಿತಿಯನ್ನು ಕಂಡು ದುಃಖವುಂಟಾಗಬಹುದು (ಮೂಗೂರು ಮಲ್ಲಪ್ಪನವರು ಹೇಳಿದಂತೆ "ಶಿವ ಶಿವಾ ನೋಡು ಈ ಗೋಳ" ಎಂದು ಹೇಳಬೇಕಾದ ಸ್ಥಿತಿ ಈಗಿಲ್ಲವಾದರೂ ಸಾಕಷ್ಟು ವ್ಯವಸ್ಥೆ, ಸ್ವಚ್ಛತೆಯಿದ್ದಂತಿಲ್ಲ). ನಮ್ಮ ನಾಡಿನ ಸಂಸ್ಕೃತಿಯ ಮೂಲಕೇಂದ್ರಗಳಲ್ಲಿ ಒಂದಾದ ಹಾಗೂ ಕರ್ನಾಟಕದ ಪ್ರಪ್ರಥಮ ರಾಜಮನೆತನದ ಮೂಲಗ್ರಾಮವಾದ ಈ ತಾಳಗುಂದವು ವಿದ್ವಾಂಸರು ಹಾಗೂ ಪ್ರವಾಸಿಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವಂತಾಗಬೇಕಾಗಿದೆ; ಈ ಪ್ರದೇಶದಲ್ಲಿರುವ ಶಿಲಾಶಾಸನ, ಮೂರ್ತಿಶಿಲ್ಪ, ವೀರಭದ್ರ, ಗಂಗಾಧರೇಶ್ವರಗುಡಿಗಳೇ ಮುಂದಾದವುಗಳನ್ನು ಇನ್ನೂ ವ್ಯವಸ್ಥಿತವಾಗಿಟ್ಟು ಸಂರಕ್ಷಿಸಬೇಕಾಗಿದೆ.[೨೪]

ಪ್ರಣವೇಶ್ವರದೇಗುಲದ ಎಡಬದಿಗಿರುವ ಕೆರೆಗೆ ಬಹು ದೀರ್ಘವಾದ ಇತಿಹಾಸವಿದ್ದು, ಅದನ್ನು ಆದಷ್ಟು ಬೇಗ ಸ್ವಚ್ಛಗೊಳಿಸಿ ಪಾವಟಿಗೆಗಳನ್ನು ಕಟ್ಟಿಸಿದಲ್ಲಿ ಆ ಊರಿನ ನೀರಿನ ಸಮಸ್ಯೆಯು ಆದಷ್ಟೂ ಬಗೆಹರಿಸಿದಂತಾದೀತು. ಬೇಸಿಗೆಯಲ್ಲಿ ದೂರದ ಕೆರೆ-ಕುಂಡಗಳಿಂದ ನೀರು ಹೊರುವ ಈ ಊರಿನ ಜನರಿಗೆ ಕೆರೆಯಿಂದ್ದೂ ಪೂರ್ಣ ಪ್ರಯೋಜನ ಪಡೆಯಲು ಬಹುಶಃ ಸಾಧ್ಯವಾಗುತ್ತಿಲ್ಲ. ಬನವಾಸಿ ಕದಂಬ ಶ್ರೇಷ್ಠ ಕಾಕುಸ್ಥವರ್ಮ ಪೂಜಾವಿನಿಯೋಗಕ್ಕಾಗಿ ಹಾಗೂ ನೀರಾವರಿಗಾಗಿ ಇಂಥ ಒಂದು ಕೆರೆ ಕಟ್ಟಿಸಿದ್ದರೂ ಅದರ ಉಪಯೋಗ ಪಡೆಯುವಂತಾಗಿರುವುದು ಮರ್ಮೆಯವ ಸಂಗತಿ.

ಒಟ್ಟಿನಲ್ಲಿ ಕ್ರಿ. ಶ. ಸುಮಾರು ೨-೩ ನೆಯ ಶತಮಾನದಿಂದ ೧೩-೧೪ ನೆಯ ಶತಮಾನದವರೆಗೆ ಪ್ರಸಿದ್ಧವಾಗಿದ್ದ ಭವ್ಯ ತಾಳಗುಂದ- ಅನಾದಿ ಅಗ್ರಹಾರದ ಪ್ರಾದೇಶಿಕ ಅಧ್ಯಯನ ನಾಡಿನ ಸಾಂಸ್ಕೃತಿಕ ಇತಿಹಾಸದ ಮೇಲೆ ಮಹತ್ವದ ಬೆಳಕನ್ನು ಚೆಲ್ಲೀತು. ಇಂದು ಅದು ತೀರಾ ಸಾಮಾನ್ಯವಾದ ಹಳ್ಳಿಯಾಗಿದ್ದರೂ ಆ ಊರಿನಾದ್ಯಂತ ತಿರುಗಾಡಿದರೆ ಅದರ ಗತವೈಭವವನ್ನು ಸಾರುವಂತಹ ಅನೇಕ ಶಿಲೆಗಳೂ ಶಿಲ್ಪಗಳೂ, ಶಾಸನಗಳೂ ನಮ್ಮ ದೃಷ್ಟಿಗೆ ಬರುವವು; ಅವುಗಳ ಹಿನ್ನೆಲೆಯಲ್ಲಿರುವ ಕಥೆಯನ್ನು ಸಾರುವವು.

ಅಡಿಟಿಪ್ಪಣಿಗಳು

೧. EC. VII ಶಿಕಾರಿಪುರ ೧೮೫ (ಕಿ. ಶ. ೧೧೫೮),

೨. ಇತ್ತೀಚೆಗೆ ಪ್ರಾದೇಶಿಕ ಅಧ್ಯಯನಕ್ಕಾಗಿ ತಾಳಗುಂದಕ್ಕೆ ನಾನು ಹೋದಾಗ ಕದಂಬಪೂರ್ವದ್ದೆಂದು ಹೇಳಬಹುದಾದ ಪ್ರಾಚೀನ ಅವಶೇಷಗಳನ್ನು ಪರಿಶೀಲಿಸಿದೆ. ಇಡೀ ಗ್ರಾಮವನ್ನು ಸುತ್ತಾಡಿ ಅದರ ಗತವೈಭವವನ್ನು ಸೂಚಿಸುವ ಶಾಸನಗಳನ್ನು ಮತ್ತಿತರ ಅವಶೇಷಗಳನ್ನು ಗುರುತು ಹಾಕಿಕೊಂಡೆ. ಈ ದಿಶೆಯಲ್ಲಿ ಇನ್ನೂ ಆಳವಾದ ಅಧ್ಯಯನವಾಗಬೇಕಾಗಿದೆಯೆನ್ನಿಸುತ್ತದೆ.

೩. ಶಿಕಾರಿಪುರದಿಂದ ಈಶಾನ್ಯಕ್ಕೆ ಸುಮಾರು ೨೫ ಕಿ. ಮೀ. ದೂರದಲ್ಲಿರುವ ಈ ಗ್ರಾಮಕ್ಕೆ ಬಸ್ಸಿನ ಸೌಕರ್ಯವಿದ್ದರೂ ಪ್ರವಾಸಿಗಳಿಗೆ ಬೇಕಾದ ವ್ಯವಸ್ಥೆಗಳಿದ್ದಂತಿಲ್ಲ.

೪. EC. VII,VIII (Suppl.) ಶಿಕಾರಿಪುರ ೩೨೫ (ಕ್ರಿ. ಶ. ಸು. ೪೦೦).

೫. EC. VII, ಶಿಕಾರಿಪುರ ೧೭೬ (ಕ್ರಿ. ಶ. ಸು. ೪೫೦).

೬. ಅದೇ. ಶಿಕಾರಿಪುರ ೧೯೨ (ಕ್ರಿ. ಶ. ೧೧೦೭).

೭. ಅದೇ. ಶಿಕಾರಿಪುರ ೧೮೫ (ಕ್ರಿ. ಶ. ೧೧೫೮).

೮. ಅದೇ. ಶಿಕಾರಿಪುರ ೩೩.

೯. ಅದೇ. ಶಿಕಾರಿಪುರ ೧೭೭ (ಕ್ರಿ.ಶ. ೧೦೨೯) ಇದನ್ನು ತಾಣಗುಂದೂರ-ಮೂವತ್ತಿಚ್ಛಾಸಿರ ಎಂದೂ ಹೇಳಲಾಗಿದೆ. ನೋಡಿ: ಅದೇ. Sk ೩೩೧.

೧೦. ಕರ್ನಾಟಕ ಭಾರತಿ VIII-೨ (೧೯೭೫) ಪು. ೧೩-೧೪.

೧೧. EC. VII ಶಿಕಾರಿಪುರ. ೧೭೬.

೧೨. ಅದೇ. ಶಿಕಾರಿಪುರ ೨೬೩.

೧೩. ಅದೇ. ಶಿಕಾರಿಪುರ ೧೭೬ (ಸಾಲುಗಳು ೫-೭).

೧೪. ಅದೇ. ಶಿಕಾರಿಪುರ ೧೭೮ (ಸಾಲುಗಳು ೪-೨೦).

೧೫. ಅದೇ. ಶಿಕಾರಿಪುರ ೧೮೫.

೧೬. ಅದೇ. ಶಿಕಾರಿಪುರ ೧೭೯.

೧೭. ಡಾ. ಸುಂದರರವರು ಗುರುತಿಸಿರುವಂತೆ ಉತ್ತರಕನ್ನಡಜಿಲ್ಲೆಯ ಅಂಕೋಲದಲ್ಲಿ ಪ್ರಾಚೀನ ಶಿವಾಲಯದ ಅವಶೇಷಗಳಿವೆ. ೪೦ × ೨೦ × ೮ ಸೆಂ. ಮೀ. ಪ್ರಮಾಣದ ದೊಡ್ಡ ಇಟ್ಟಿಗೆ, ಕಪ್ಪು, ಕೆಂಪು ಮಡಿಕೆ ಕುಡಿಕೆ ಚೂರುಗಳೂ, ಸುಟ್ಟಮಣ್ಣಿನ ಮೂರ್ತಿಗಳೂ ಸಿಕ್ಕಿದ್ದು ಇವುಗಳ ಮಧ್ಯದಲ್ಲಿ ಪ್ರಾಚೀನವಾದ ಶಿವಲಿಂಗವಿದ್ದುದು ಕಂಡು ಬಂದಿತು. ಇದಲ್ಲದೆ ಇದೇ ಜಿಲ್ಲೆಯ ಶಿವಪುರ (ಕುಮಟ), ಹೈಗುಂದ (ಹೊನ್ನಾವರ) ದಕ್ಷಿಣಕನ್ನಡಜಿಲ್ಲೆಯ ಹಟ್ಟಿಯಂಗಡಿ (ಕುಂದಾಪುರ), ಸೊರಬ ತಾಲೂಕಿನ ಹರೀಶಿ ಮುಂತಾದೆಡೆಗಳಲ್ಲೂ ಪ್ರಾಚೀನ ಶಿವಾಲಯಗಳ ಕುರುಹುಗಳಿವೆ. ಹರೀಶಿಯ ಊರ ಹೊರವಲಯದಲ್ಲಿರುವ ಶಿವಾಲಯವಿದ್ದ ಆವರಣದಲ್ಲಿ ಕೆಂಪುಬಣ್ಣದ ಮಡಕೆ ಚೂರುಗಳೂ ನನಗೆ ಸಿಕ್ಕಿದ್ದು ಅಲ್ಲಿ ಹೆಚ್ಚಿನ ಅಧ್ಯಯನವನ್ನು ಮಾಡಲಾಗಿದೆ. ಬುಡದಲ್ಲಿ, ಚತುರಸ್ರ, ಮಧ್ಯದಲ್ಲಿ ಅಷ್ಟಕೋನ ಹಾಗೂ ತುದಿಯಲ್ಲಿ ದುಂಡನೆಯ ಆಕಾರವುಳ್ಳ (ನುಣುಪಾದ) ಶಿವಲಿಂಗ ಸಿಕ್ಕಿದೆ. ಇದರ ಸುತ್ತ ಶಿವಾಲಯದ ತಳಪಾಯವಿದ್ದು ಒಂದು ಭಾಗವನ್ನು ಮಾತ್ರ ಈಗ ಗುರುತಿಸಲಾಗಿದೆ. ಲಿಂಗದ ಶೈಲಿಯನ್ನೂ ಸೋಮಸೂತ್ರ ರೇಖೆಯ ನಮೂನೆಯನ್ನೂ ಗಮನಿಸಿದರೆ ಇದೊಂದು ಕ್ರಿ. ಶ. ೨-೩ ನೆಯ ಶತಮಾನದ ದೇವಾಲಯವಿದ್ದ ಜಾಗವೆಂಬುದು ವೇದ್ಯವಾದೀತು. ಇಂಥ ಶಿವಲಿಂಗಗಳು ಬನವಾಸಿಯ ಮಧುಕೇಶ್ವರ ದೇಗುಲದ ಆವರಣದಲ್ಲಿ (ಹಾವಳಿ ಮಧುಕೇಶ್ವರ), ಆನವಟ್ಟಿಯ ಕೈಟಭೇಶ್ವರ ದೇಗುಲದ ಗರ್ಭಾಂಕಣದಲ್ಲಿರುವುದನ್ನು ಗಮನಿಸಬೇಕು. ಕೇವಲ ಲಿಂಗಶೈಲಿಯಿಂದ ಮಾತ್ರ ಕಾಲಗಣನೆಮಾಡುವುದು ಸೂಕ್ತವಾದದ್ದಲ್ಲವಾದರೂ ಹರೀಶಿ, ಅಂಕೋಲೆ ಕೆಲವಡೆಗಳಲ್ಲಿರುವ ಇತರ ಸಾಂದರ್ಭಿಕ ಆಧಾರಗಳನ್ನು ಗಮನಿಸಿದರೆ ಇವೆಲ್ಲ ಕದಂಬಪೂರ್ವಕಾಲದ ಶಿವಸ್ಥಾನಗಳೆಂದು ಹೇಳಬಹುದು.

೧೮ ಇವು ಮೂಲತಃ ಗರ್ಭಗುಡಿಯಲ್ಲಿದ್ದವೇ ? ಅಥವಾ ಬೇರೆಡೆಯಿಂದ ತಂದು ನಿಲ್ಲಿಸಿದವೇ ? ಖಚಿತವಾಗಿ ತಿಳಿಯದು. ಒಂದು ಕಂಬ ಅಷ್ಟಕೋನಾಕಾರವಾಗಿಯೂ ಇನ್ನೊಂದು ೧೬ ಕೋನಾಕಾರದಲ್ಲೂ ಇದೆ. ಮೇಲ್ಭಾಗದಲ್ಲಿ ಪೂರ್ಣಕುಂಭವಿನ್ಯಾಸವಿದೆ.

೧೯. ಬನವಾಸಿ ಮಧುಕೇಶ್ವರ ದೇವಾಲಯದ ಗರ್ಭಾಂಕಣದಲ್ಲೂ ಇಂಥ ವಾಸ್ತುಲಕ್ಷಣವನ್ನು ಗಮನಿಸಬೇಕು. ಆ ಕಂಬಗಳ ಮೇಲೆ ಅರ್ಧವೃತ್ತಾಕಾರದ ಸರಳವಿನ್ಯಾಸವನ್ನು ಕೆತ್ತಲಾಗಿದೆ.

೨೦. ಡಾ. ಸುಂದರ ಅವರ ಪ್ರಕಾರ ಗರ್ಭಗೃಹದ್ವಾರ ಕೂಡ ಮೂಲಕದಂಬರ ಕಾಲದ್ದೆಂದು ಹೇಳಲಾಗಿದೆ. ಆದರೆ ಶಾಸನ ಶಿಲೆಯನ್ನು ಅನಂತರ ಬಳಸಿದ್ದಿರಬೇಕೆಂದು ನನಗೆ ಅನ್ನಿಸುತ್ತಿದೆ.

೨೧. **EC.** VII, VIII (Suppl) ಶಿಕಾರಿಪುರ ೩೨೫, ೩೨೬.

೨೨. ಅದೇ. ಶಿಕಾರಿಪುರ. ೩೨೬.

೨೩. ನೋಡಿ: **EC.** VII. ಶಿಕಾರಿಪುರ ೧೭೬; **EI.** VIII pp. ೨೪-೩೬; **IA.** XXV pp.೨೭-೨೮; D.C. Sircar. **Select Inscription** Vol. I pp.೪೭೯-೯.

೨೪. **ಪ್ರಬುದ್ಧ ಕರ್ನಾಟಕ** XXX-೪, ಪು. ೯೭-೧೦೦; **ಜಯಕರ್ನಾಟಕ** XI-೧, ಪು. ೧೦೪-೧೪.

೨೫. ಇಂತಹ ಇನ್ನೆರಡು ಶಾಸನಗಳು ಬನವಾಸಿ ಮತ್ತು ಗುಡ್ನಾಪುರಗಳಲ್ಲಿ ಸಿಕ್ಕಿವೆ.

೩೬. ಪ್ರಾಚೀನಕಾಲದಲ್ಲಿ ಕೆಲವು ಮರಗಳೂ ಹೂವುಗಳೂ (ಪ್ರಾಣಿಗಳೂ) ರಾಜಮನೆತನಗಳ ಲಾಂಛನವಾಗಿದ್ದವೆಂದು ತಿಳಿದುಬರುತ್ತದೆ. **ಕದಂಬವೃಕ್ಷದಿಂದಾಗಿ ಕದಂಬರೆಂಬ** ಹೆಸರು ಬಂದ ಬಗೆಯನ್ನೂ ಈ ಹಿನ್ನೆಲೆಯಲ್ಲಿ ವಿವರಿಸಬಹುದು. ಕಡವಾಲ,ದಾರುಕದಂಬ ಎಂಬುದು ಇದರ ಇತರ ಕೆಲವು ಹೆಸರುಗಳು ಚೆಂಡಿನಾಕಾರದ ಪರಿಮಳದ ಹೂಗಳು ಬಿಡುವ ಈ ದೊಡ್ಡ ವೃಕ್ಷಗಳನ್ನು ಮಲೆನಾಡಿನಲ್ಲಿ (ತಾಳಗುಂದ-ಬನವಾಸಿ ಪ್ರದೇಶಗಳಲ್ಲಿ) ಇಂದಿಗೂ ನೋಡಬಹುದಾಗಿದೆ. ನೋಡಿ: ಎಸ್. ಎಫ್. ಉಪ್ಪಿನ, **ಕರ್ನಾಟಕದ ಸಸ್ಯಸಂಪದ,** ಧಾರವಾಡ, ೧೯೭೪ ಪು. ೧೬೯. ಬಿ. ಜಿ. ಎಲ್. ಸ್ವಾಮಿ, **ಶಾಸನಗಳಲ್ಲಿ ಗಿಡಮರಗಳು,** ಬೆಂಗಳೂರು, ೧೯೭೧, ಪು. ೬೪.

೩೭, EC. VII ಶಿಕಾರಿಪುರ ೧೭೬, ಸಾಲು: ೧೪-೧೫.

೩೮. ಅದೇ ಶಿಕಾರಿಪುರ ೧೭೮ (ಕ್ರಿ. ಶ. ೧೦೯೩).

೩೯. ನೋಡಿ: ಅಮರಕೋಶ, ಮೈಸೂರು, ೧೯೭೦, ಪು. ೨೪, ಶ್ಲೋಕ ೧೭೬.

೪೦. EC. VII ಶಿಕಾರಿಪುರ ೧೯೫ (ಕ್ರಿ. ಶ. ೯೩೬).

೪೧. ಅದೇ ಶಿಕಾರಿಪುರ ೧೯೩ ಕ್ರಿ. ಶ. (ಕ್ರಿ. ಶ. ೧೧೦೭).

೪೨. ಅದೇ ಶಿಕಾರಿಪುರ ೧೮೫ (ಕ್ರಿ. ಶ. ೧೧೫೮).

೪೩. ಅದೇ ಶಿಕಾರಿಪುರ ೧೮೬ (ಕ್ರಿ. ಶ. ೧೨೦೦).

೪೪. ತಾಳಗುಂದದ ಸುತ್ತಮುತ್ತ ಪ್ರಾಚ್ಯಾವಶೇಷಗಳಿದ್ದು ಅವೆಲ್ಲವುಗಳನ್ನೊಳಗೊಂಡಂತೆ ಆಳವಾದ ಪ್ರಾದೇಶಿಕ ಅಧ್ಯಯನವನ್ನು ಮಾಡತೊಡಗಿದ್ದೇನೆ.

ಕನ್ನಡದಲ್ಲಿ ಸಂಬೋಧನೆ

● ಪಿ. ಶ್ರೀಕೃಷ್ಣ ಭಟ್

ವ್ಯಾಕರಣ, ಛಂದಸ್ಸು, ಅಲಂಕಾರ ಮುಂತಾದ ಶಾಸ್ತ್ರಗಳ ಕುರಿತು ಬರೆಯುಲಾದ ಕನ್ನಡದ ಪ್ರಾಚೀನಗ್ರಂಥಗಳ ಮೇಲೆ ಸಂಸ್ಕೃತ ಭಾಷೆಯಲ್ಲಿ ಬರೆದ ಆಯಾ ಶಾಸ್ತ್ರಗ್ರಂಥಗಳ ಪ್ರಭಾವ ಸಾಕಷ್ಟಾಗಿದೆ. ಹಳಗನ್ನಡದ ವ್ಯಾಕರಣಗ್ರಂಥಗಳೆಲ್ಲ ಅಷ್ಟಾಧ್ಯಾಯಿ, ಕಾತಂತ್ರ, ಜೈನೇಂದ್ರ ಮೊದಲಾದ ಸಂಸ್ಕೃತವ್ಯಾಕರಣಗಳ ಆರೈಕೆಯಲ್ಲೇ ಹುಟ್ಟಿ ಬೆಳೆದಿವೆ. ನಮ್ಮ ಪ್ರಾಚೀನ ಶಬ್ದಶಾಸ್ತ್ರಜ್ಞರು ಕನ್ನಡದ ವ್ಯಾಕರಣಪ್ರಕ್ರಿಯೆಗಳನ್ನು ಸಂಸ್ಕೃತವ್ಯಾಕರಣದ ಚೌಕಟ್ಟಿಗೆ ಅಳವಡಿಸಿಕೊಂಡಿದ್ದಾರೆ; ಅಲ್ಲಿನ ಪಾರಿಭಾಷಿಕಪದಗಳನ್ನೇ ಯಥಾವತ್ತಾಗಿ ಬಳಸಿಕೊಂಡಿದ್ದಾರೆ (ಇದರಿಂದ ಅವರು ಕನ್ನಡದ ಜಾಯಮಾನವನ್ನು ಪೂರ್ಣವಾಗಿ ಮರೆತರು ಎಂದರ್ಥವಲ್ಲ, ಅದಕ್ಕೆ ಎಷ್ಟರ ಮಟ್ಟಿನ ಆದ್ಯತೆ ಸಿಗಬೇಕಾಗಿತ್ತೋ ಅದು ಸಿಕ್ಕಿಲ್ಲ ಎಂದು ಮಾತ್ರ ಅಭಿಪ್ರಾಯ). ಆದ್ದರಿಂದಲೇ ಕನ್ನಡ ವ್ಯಾಕರಣಗ್ರಂಥಗಳಲ್ಲಿ ಸಂಧಿ, ವಿಭಕ್ತಿ, ಲಿಂಗ, ಸಮಾಸ ಮುಂತಾದ ಕೆಲವು ಪಾರಿಭಾಷಿಕ ಪದಗಳನ್ನು ಬಿಟ್ಟರೆ ಉಳಿದವುಗಳ(ತದ್ಧಿತ, ವಚನ, ಪ್ರತ್ಯಯ ಇತ್ಯಾದಿ) ನಿರ್ವಚನ (Definition) ಸಿಕ್ಕುವುದಿಲ್ಲ. ಬಹುಶಃ ಕನ್ನಡಿಗರು ಆ ಕಾಲದಲ್ಲಿ ಸಂಸ್ಕೃತವ್ಯಾಕರಣವನ್ನು ಆಳವಾಗಿ ಅಭ್ಯಾಸ ಮಾಡಿದ ಬಳಿಕವೇ ಕನ್ನಡವ್ಯಾಕರಣವನ್ನು ಅಭ್ಯಸಿಸುತ್ತಿದ್ದಿರಬೇಕು. ಅಂತಹ ಪರಿಸ್ಥಿತಿಯಲ್ಲಿ ಆ ಪಾರಿಭಾಷಿಕಪದಗಳ ವಿವರಣೆ ಕನ್ನಡದಲ್ಲಿ ಅನವಶ್ಯಕವಷ್ಟೇ.

ಅಂಟುಭಾಷೆಯಾದ (Agglutinative Language) ಕನ್ನಡ, ಪ್ರಾತ್ಯಯಿಕ ಭಾಷೆಯಾದ(Inflectional Language) ಸಂಸ್ಕೃತಕ್ಕಿಂತ ರಚನೆಯಲ್ಲಿ ಭಿನ್ನವಾದುದು. ಅಂದರೆ ಮೊದಲನೆಯದರ ವ್ಯಾಕರಣಪ್ರಕ್ರಿಯೆ ಎರಡನೆಯದಕ್ಕಿಂತ ತೀರ ಬೇರೆಯಾದುದು ಎಂದಾಯಿತು. ಹೀಗಿರಲು ಸಂಸ್ಕೃತವ್ಯಾಕರಣದ ನಿಯಮಗಳಿಗನುಗುಣವಾಗಿ ಕನ್ನಡನುಡಿಯನ್ನು ವಿವೇಚಿಸಿದಾಗ ಅಸಾಂಗತ್ಯಗಳು ತಲೆಯೆತ್ತುವುದು ಅನಿವಾರ್ಯವಾಗುವುದು. ಭಾಷೆ-ಭಾಷೆಗಳೊಳಗೆ ಮೇಲ್ಪದರದಲ್ಲಿ ಭಿನ್ನತೆಯಿದ್ದರೂ ಅಂತಃಸ್ತರದಲ್ಲಿ ಸಾರ್ವತ್ರಿಕ ಸಾಮರಸ್ಯ (Universality) ಇದೆಯೆಂಬುದು ಆಧುನಿಕ ಭಾಷಾವಿಜ್ಞಾನಿಗಳ ಅಭಿಮತ. ಈ ದೃಷ್ಟಿಯಿಂದ ಕನ್ನಡ ಸಂಸ್ಕೃತಗಳೊಳಗೆ ಸಮಾನವಾದ ಅಂಶಗಳೂ ಕೆಲವಿವೆ. ಆಯೆಡೆಗಳಲ್ಲಿ ಸಂಸ್ಕೃತ

ವ್ಯಾಕರಣದ ನಿಯಮಗಳನ್ನು ಕನ್ನಡಭಾಷೆಗೆ ಹೊಂದಿಸಿದ್ದರಿಂದ ತೊಡಕುಂಟಾಗಿಲ್ಲವೆಂಬುದೂ ನಿಜ. ಕನ್ನಡ ವ್ಯಾಕರಣಗ್ರಂಥಗಳಲ್ಲಿನ ಕಾರಕಗಳನ್ನು ವಿವೇಚಿಸುವ ಭಾಗ ಈ ಎರಡು ವಿಚಾರಗಳಿಗೂ ನಿದರ್ಶನಗಳನ್ನೊದಗಿಸಬಲ್ಲುದು. ಅದರಲ್ಲೂ ಸಂಬೋಧನೆಯನ್ನು ವಿವೇಚಿಸುವ ಭಾಗ ಮೊದಲನೆಯದಕ್ಕೆ ಉಚಿತ ಉದಾಹರಣೆಯಾಗಿದ್ದು ತುಂಬ ಸ್ವಾರಸ್ಯಕರವಾಗಿದೆ. ಅದನ್ನು ಪರಿಶೀಲಿಸುವ ಯಥಾಮತಿ ಪ್ರಯತ್ನವನ್ನಿಲ್ಲಿ ಕೈಗೊಳ್ಳಲಾಗಿದೆ

ಸಂಬೋಧನೆಯೆಂದರೆ ಅಭಿಮುಖೀಕರಣ[೧]. ಕಾರ್ಯಾಂತರದಲ್ಲಿ ಆಸಕ್ತನಾಗಿರುವವನ ಗಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದು ಇದರ ಕಾರ್ಯ. ಅಂತಹ ಸಂಬೋಧನೆಯಲ್ಲಿ ಪ್ರಥಮಾ ವಿಭಕ್ತಿ ಬರುತ್ತದೆನ್ನುವುದು ಸಂಸ್ಕೃತ ವೈಯಾಕರಣರ ಅಭಿಮತ.[೨] ಅಷ್ಟಾಧ್ಯಾಯಿಯ (೨-೩-೪೭) 'ಸಂಬೋಧನೇ ಚ' ಎಂಬ ಸೂತ್ರ ಇದನ್ನೇ ಸಾರುತ್ತದೆ. ಸಂಸ್ಕೃತದಲ್ಲಿ ಸಂಬೋಧನೆಯು ಏಕವಚನದಲ್ಲಿ ಕೆಲವೊಮ್ಮೆ ಪ್ರಥಮಾ ವಿಭಕ್ತಿ ಕಾಣಬರದಿದ್ದರೂ ದ್ವಿವಚನ ಬಹುವಚನಗಳಲ್ಲಿ ನಿಯತವಾಗಿ ಪ್ರಥಮಾ ವಿಭಕ್ತಿ ಬರುತ್ತದೆ. ಸಂಬೋಧನೆಯು ಸ್ಪಷ್ಟತೆಗಾಗಿ ಮಾತ್ರ 'ಹೇ' ಎನ್ನುವುದು ಪ್ರಾತಿಪದಿಕದ ಹಿಂದಿನಿಂದ ಸೇರುತ್ತದೆ. ಉದಾ :

ವಿಭಕ್ತಿ	ವಚನ		
	ಏಕ	ದ್ವಿ	ಬಹು
ಪ್ರಥಮಾ	ರಾಮಃ	ರಾಮೌ	ರಾಮಾಃ
,,	ಹರಿಃ	ಹರೀ	ಹರಯಃ
,,	ದೇವೀ	ದೇವ್ಯೌ	ದೇವ್ಯಃ
ಸಂಬೋಧನೆ	ಹೇ ರಾಮ	ಹೇ ರಾಮೌ	ಹೇ ರಾಮಾಃ
,,	ಹೇ ಹರೇ	ಹೇ ಹರೀ	ಹೇ ಹರಯಃ
,,	ಹೇ ದೇವಿ	ಹೇ ದೇವ್ಯೌ	ಹೇ ದೇವ್ಯಃ

ಸಂಸ್ಕೃತ ವ್ಯಾಕರಣವನ್ನನುಸರಿಸಿ ಕನ್ನಡ ವೈಯಾಕರಣರೂ ಸಂಬೋಧನೆಯಲ್ಲಿ ಪ್ರಥಮಾ ವಿಭಕ್ತಿಯನ್ನು ವಿಧಿಸಿದ್ದಾರೆ. ಪರಿಶೀಲನೆಗಾಗಿ ಸಂಬೋಧನೆಯ

---

೧. 'ಸಂಬೋಧನಮಭಿಮುಖೀಕರಣಂ'- ಕರ್ನಾಟಕ ಭಾಷಾಭೂಷಣ: ಸೂತ್ರ ೭೫ ರ ವೃತ್ತಿ.

೨. "The affix of vocative is the same as that of the nominative" The Astadhyayi of Panini by S. C. Vasu, page: 1071.

ಕುರಿತು ವಿಸ್ತಾರವಾಗಿ ಚರ್ಚಿಸುವ ಶಬ್ದಮಣಿದರ್ಪಣದಿಂದ ಉದಾಹರಣೆಗಳನ್ನೆತ್ತಿಕೊಳ್ಳಬಹುದು[೩].

೧. ಎಲೆ ದೇವ ರಕ್ಷಿಸು.
೨. ....ಭಾನುತನೂಜಾ.
೩. ....ನಲ್ಲಳೆ ನಿನ್ನ ಕಾಲ್ವಿಡಿದಪೆಂ....ಇತ್ಯಾದಿ.

ಈ ಪ್ರಯೋಗಗಳಲ್ಲಿ ಪ್ರಥಮಾವಿಭಕ್ತಿ ಎಲ್ಲಿದೆ? ಮೊದಲ ಉದಾಹರಣೆಯಲ್ಲಿ ಪ್ರಥಮಾ ವಿಭಕ್ತಿ ಲೋಪವಾಗಿದೆ ಎಂದರೆ ಒಪ್ಪಿಕೊಳ್ಳೋಣ. ಎರಡನೆಯದರಲ್ಲಿ ಪ್ರಕೃತಿಯ ಕೊನೆಯ ಸ್ವರ ದೀರ್ಘವಾಗಿದೆ, ಮೂರನೆಯದರಲ್ಲಿ ಪ್ರಕೃತಿಯ ಮುಂದೆ 'ಎ' ಕಾರ ಬಂದಿದೆ. ಈ ದೀರ್ಘ ಮತ್ತು ಎ ಕಾರಗಳು ಪ್ರಥಮಾವಿಭಕ್ತಿಗಳೇ ? ಅದರ ಕುರಿತು ಚರ್ಚಿಸುವುದರ ಮೊದಲು ಸಂಬೋಧನೆಯ ಕುರಿತಿರುವ ಕನ್ನಡ ವೈಯಾಕರಣರ ನಿರೂಪಣೆಯನ್ನು ಪರಿಶೀಲಿಸುವುದು ಒಳಿತು. ಶಬ್ದಮಣಿದರ್ಪಣದಲ್ಲಿ ಸಂಬೋಧನೆಯ ವಿವರಣೆ ಕೆಳಗಿನಂತಿದೆ (ಸೂತ್ರ ೧೩೪, ೧೩೫ ಮತ್ತು ೧೩೬):

I ಏಕವಚನ :

೧. ಪ್ರಥಮೈಕ ವಚನಕ್ಕೆ ಲೋಪ–ಉದಾ: ದೇವಬಿನ್ನಪಂ, ಕೇಳ ಮಾಧವ.
೨. ಹ್ರಸ್ವದೀರ್ಘಕಾಕುಗಳ ಪ್ರಯೋಗ–ಉದಾ: ಎಲೆ ಗಣಪ, ಪರಮ ಜಿನೇಂದ್ರಾ, ಕುರುಪತೀ.
೩. ಲಿಂಗಾಂತ್ಯಕ್ಕೆ ಎವರ್ಣ–ಉದಾ: ಅಳಿಕುಳನೀಳಕುಂತಳೆಯೆ, ಕೋಕಿಳ ನಾದೆಯೆ.
೪. ಕೆಲವೊಮ್ಮೆ ಎತ್ವಕ್ಕೆ ವಿಕಲ್ಪ–ಉದಾ: ಎಲೆ ತುಂಬಿ, ಎಲೆ ತುಂಬಿಯೆ.
೫. ಅ ಕಾರಾಂತದ ಮುಂದೆ ಎ ವರ್ಣ ಮತ್ತು ಎ ವರ್ಣದ ಹಿಂದೆ ಬಿಂದು } ಉದಾ: ಚಂದ್ರನೇ,ನಂದನನೇ.

II. ಬಹುವಚನ :

೧. ಬಹುವಚನ ಪ್ರತ್ಯಯದ ಮುಂದೆ ಎವರ್ಣ–ಉದಾ: ಭಟ್ಟರೆ, ದೇವರೇ.
೨. 'ಅರ್', 'ಗಳ್', 'ಕಳ್' ಗಳ ಮುಂದೆ 'ಇರ' ಆಗಮ–ಉದಾ: ನಂಟರಿರ, ದೆಸೆಗಳಿರ, ಬುಧರ್ಕಳಿರ.

---

೩. ಶಬ್ದಮಣಿದರ್ಪಣ–ಸೂತ್ರ ೧೩೬ ರ ಪ್ರಯೋಗ.

I	ಏಕವಚ
೧.	ಪ್ರಥವೆ
೨.	ಹ್ರಸ್ವದ
೩.	ಅಕಾರ ಹಿಂದೆ
೪.	ಸ್ವರಾಂ ಏವರ್ಣ
೫.	ಕೆಲವೊ
II	ಬಹುವ
೧.	ಬಹುವ
೨.	ಅರ್, 'ಇರ'
೩.	ಕೆಲವೊ

೧. ಭಾಷಾಭ
(ಸೂತ್ರ

೨. ಶಬ್ದಾನು

೩. ಶಬ್ದಸ್ಮೃ

೪. ಶಬ್ದಾನು

೫. ಶಬ್ದಾನು
ಆಗುವುದ

೩. ಕೆಲವೊಮ್ಮೆ ಯಾವುದೇ ಬದಲಾವಣೆಯಿಲ್ಲ-ಉದಾ: ......ಪೋಗಿ ಮುಗ್ಧಾರಿಗಳ್.

(ಸಂಬೋಧನೆಯ ಕುರಿತಾದ ಕನ್ನಡ ವೈಯಾಕರಣರ ನಿರೂಪಣೆಯನ್ನು ಸಂಕ್ಷೇಪಿಸಿ ಅನುಬಂಧದಲ್ಲಿ ಕೊಡಲಾಗಿದೆ.)

ವ್ಯಾಕರಣಮಾರ್ಗಕ್ಕನುಸರಿಸಿ ಈ ನಿರೂಪಣೆ ಸಮರ್ಪಕವೆನಿಸಿದರೂ ಇಲ್ಲಿರುವ ಕೆಲವು ತೊಡಕುಗಳನ್ನು ಅವಗಣಿಸುವಂತಿಲ್ಲ. ಇತರ ದ್ರಾವಿಡ ಭಾಷೆಗಳಂತೆ ಕನ್ನಡದಲ್ಲೂ ಪ್ರಥಮಾ ವಿಭಕ್ತಿಪ್ರತ್ಯಯವಿಲ್ಲವೆಂಬುದು ದ್ರಾವಿಡ ಭಾಷಾವಿಜ್ಞಾನಿಗಳ ಹೇಳಿಕೆ. ಅಂತಿರಲು ಇಲ್ಲದ ಪ್ರತ್ಯಯಕ್ಕೆ ಲೋಪವೆಲ್ಲಿ? "ಅವಿಶೇಷದೆ ಲಿಂಗಾತ್ಯಕ್ಕೆ ಎವರ್ಣಂ ಒದವುವುದು"[೪] ಎಂಬಲ್ಲಿ ಲಿಂಗವೆಂದರೆ ಪ್ರಕೃತಿಯೆಂದರ್ಥವಷ್ಟೆ. ಇನ್ನು ಕೊಟ್ಟಿರುವ ಪ್ರಯೋಗಗಳನ್ನು ಪರಾಂಬರಿಸಿದಾಗ ವ್ಯಕ್ತವಾಗುವುದೇ ಬೇರೆ. ಮೇಲೆ I.೫ ಕ್ಕೆ ಕೊಟ್ಟ ಉದಾಹರಣೆಗಳಲ್ಲಿ; ಮೇಲುನೋಟಕ್ಕೆ ಪ್ರಥಮಾ ವಿಭಕ್ತಿಪ್ರತ್ಯಯದ (ಬಿಂದುವಿನ) ಮುಂದೆ ಎವರ್ಣ ಬಂದಂತೆ ತೋರುವುದು ನಿಜ (ಹಾಗೆಂದು ಕೇಶಿರಾಜ ಎವರ್ಣದ ಹಿಂದಿನ ಬಿಂದುವನ್ನು ಪ್ರಥಮಾ ವಿಭಕ್ತಿ ಪ್ರತ್ಯಯವೆಂದು ತಿಳಿದಿಲ್ಲ). ಆದರೆ ನಿಜಸ್ಥಿತಿ ಅದಲ್ಲ. ಅಕಾರಾಂತ ಪ್ರಕೃತಿಗಳು ಕೊನೆಯಲ್ಲಿ 'ನ್' ಇಲ್ಲವೆ 'ಮ್' ಕಾರವನ್ನು (ಅನುನಾಸಿಕೋಚ್ಚಾರ) ಹೊಂದಿರುವುದು ಹಳಗನ್ನಡದ ವೈಶಿಷ್ಟ್ಯಗಳಲ್ಲೊಂದು[೫]. ಉದಾ : ಅಣ್ಣನ್, ದೇವನ್, ಮರಮ್, ಚಂದ್ರನ್, ನಂದನಮ್ ಇತ್ಯಾದಿ. ಅಂತಹ ಶಬ್ದಗಳ ಮುಂದೆ ಎವರ್ಣ ಬಂದಾಗ ಚಂದ್ರನೇ, ನಂದನಮೇ ಮುಂತಾದ ರೂಪಗಳು ಸಿದ್ಧಿಸುತ್ತವೆ. ಸಂಬೋಧನೆಯಲ್ಲಿ ಇಂತಹ ಅಕಾರಾಂತ ಪದಗಳು ಕೊನೆಯ ಅನುನಾಸಿಕೋಚ್ಚಾರವನ್ನು ಕಳೆದುಕೊಳ್ಳುವುದೂ ಇದೆ. I.೧ ಕ್ಕೆ ಬಂದ ಉದಾಹರಣೆಯಲ್ಲಿ ಪ್ರಥಮಾವಿಭಕ್ತಿ ಲೋಪವೆಂದು ಇವನ್ನೇ ತಪ್ಪಾಗಿ ಹೇಳಲಾಗಿದೆ. ಹ್ರಸ್ವದೀರ್ಘಕಾಕುವೂ ಇಲ್ಲಿ ಕಾರ್ಯವೆಸಗುತ್ತದೆ. I.೪ ರಲ್ಲಿ ಬಂದ 'ಎಲೆ' ಎಂಬ ನಿಪಾತವೂ ಸಂಬೋಧನೆಯ ಕೆಲಸವನ್ನೇ ಮಾಡುತ್ತದೆ[೬]. ಹೀಗೆ ಈ ಹ್ರಸ್ವದೀರ್ಘ ಕಾಕುಗಳು, ಎವರ್ಣ, ಬಹುವಚನದಲ್ಲಿ ಬರುವ 'ಇರ', 'ಎಲೆ' ಎಂಬ ನಿಪಾತ,

೪. ಶಬ್ದಮಣಿದರ್ಪಣ–ಸೂತ್ರ–೧೩೫.

೫. ಪ್ರಕೃತಿಯ ಕೊನೆಯಲ್ಲಿರುವ ಸ್ವರರಹಿತದ ಮನಕಾರಗಳು ಹಳಗನ್ನಡದಲ್ಲಿ ಬಿಂದುವಾಗಿ ಬರೆಯಲ್ಪಟ್ಟವು. ಮೂಲಭೂತವಾಗಿ ಕನ್ನಡದಲ್ಲಿ ಬಿಂದುವಿಲ್ಲವಷ್ಟೆ. ನೋಡಿರಿ— ಕನ್ನಡ ವರ್ಣಮಾಲೆಯಲ್ಲಿ ಬಿಂದು–ಪಿ. ಶ್ರೀಕೃಷ್ಣ ಭಟ್. ಕರ್ನಾಟಕ ಭಾರತಿ ೯–೪, ಪುಟ ೮–೧೭.

೬. "ಎಲೇ ವಿತರ್ಕ ಭಾವನಾಮಂತ್ರೇಷು"—ಕರ್ನಾಟಕ ಭಾಷಾಭೂಷಣ–ಸೂತ್ರ, ೨೬೧.

ಕೊನೆಯ ಅನುನಾಸಿಕಗಳ ಲೋಪ-ಇವೆಲ್ಲ ಯಥಾರ್ಥವಾಗಿ ಸಂಬೋಧನೆಯಲ್ಲಿ ದುಡಿಯುವುವಾಗಿದ್ದು ಕನ್ನಡದ ಸಹಜ ಸಂಬೋಧನೆಗಳಾಗಿವೆ. ಬಹುವಚನದಲ್ಲಿ ಬರುವ 'ಇರ' ಮಧ್ಯಮಪುರುಷ ಸರ್ವನಾಮದ ಬಹುವಚನದ ಮೂಲರೂಪಕ್ಕೆ ಸಂಬಂಧಿಸಿದುದಾಗಿರಬೇಕು ಎಂಬ ಊಹೆಯೂ ಇದೆ[೭]. ಇವುಗಳಲ್ಲಿ ಯಾವುದೊಂದು ಪ್ರಥಮಾ ವಿಭಕ್ತಿಪ್ರತ್ಯಯವಲ್ಲ. ಮಾತ್ರವಲ್ಲ, ಹಳಗನ್ನಡದ ಯಾವ ವೈಯಾಕರಣನೂ ಇವುಗಳನ್ನು ಪ್ರತ್ಯಯವೆಂದಾಗಲಿ, ವಿಭಕ್ತಿಯೆಂದಾಗಲಿ ಹೆಸರಿಸಿಲ್ಲ (ಕೇವಲ ಆಗಮಗಳೆಂದು ಮಾತ್ರ ಹೇಳಿ, ಇನ್ನು ಕೆಲವೊಮ್ಮೆ ಪ್ರಥಮಾ ವಿಭಕ್ತಿಗೆ ಆದೇಶವೆಂದು ಕರೆದಿರುವರು). ಆದ್ದರಿಂದ "ಪ್ರಥಮಾ ವಿಭಕ್ತಿ ಸಂಬೋಧನದೊಳ್ ಪ್ರಭವಿಪ್ಪುದು"[೮] ಎಂಬ ಹೇಳಿಕೆ ಸಮರ್ಪಕವಲ್ಲ. ಸಂಬೋಧನೆಯನ್ನು ಬೇಕಾದರೆ, ಪ್ರತ್ಯೇಕ ವಿಭಕ್ತಿಯಾಗಿ ಪರಿಗಣಿಸಬಹುದು.[೯] ಆಧುನಿಕರಲ್ಲಿ ಕೆಲವರು ಅದಕ್ಕೆ ವಿಭಕ್ತಿಯ ಸ್ಥಾನ ಕೊಡದಿರುವುದೂ ಉಂಟು.[೧೦] "The Vocative is not a case. It has no suffix which can be called as a case suffix. It is an asyntactic construction"[೧೧] ಎಂಬ ಅಭಿಪ್ರಾಯವನ್ನೂ ಗಮನಿಸಬಹುದು. ಕಾಲ್ಡವೆಲ್ಲನ ಅಭಿಪ್ರಾಯವೂ ಇದನ್ನೇ ಸಾರುತ್ತದೆ. "In the Dravidian Languages there is nothing which properly deserves to be styled a suffix or case sign of the vocative. The vocative is formed merely by affixing or suffixing some sign of emphasis, or in certain instances by suffixing fragments of the personal pronouns"[೧೨]. ಹೀಗೆ ಈ

---

೭. ನೀರ್, ಈರು, ಈರು, ಈರು—ಇವು ಅನುಕ್ರಮವಾಗಿ ತಮಿಳು, ತೆಲುಗು, ತುಳು, ಕುಈ ಭಾಷೆಗಳ ಮಧ್ಯಮಪುರುಷ ಸರ್ವನಾಮದ ಬಹುವಚನ ರೂಪಗಳು.

೮. ನೋಡಿರಿ—ಶಬ್ದಸ್ಮೃತಿ: ಸೂತ್ರ ೨೮; ಕರ್ನಾಟಕ ಭಾಷಾಭೂಷಣ-ಸೂತ್ರ ೭೪; ಶಬ ಮಣಿದರ್ಪಣ-ಸೂತ್ರ ೧೩೭.

೯. 'ಲೀಲಾತಿಲಕಂ' ಎಂಬ ಮಲಯಾಳ ವ್ಯಾಕರಣದಲ್ಲಿ ಸಂಬೋಧನೆಯನ್ನು ಎಂಟನೆಯ ವಿಭಕ್ತಿಯಾಗಿ ಪರಿಗಣಿಸಲಾಗಿದೆ. ಕಾಲ್ಡವೆಲ್ The Vocative or 'Eighth' case ಎಂದು ಕರೆದಿರುವುದು ಗಮನಾರ್ಹ.

೧೦. 'ಕೇರಳ ಪಾಣಿನೀಯಂ' ಎಂಬ ಮಲಯಾಳ ವ್ಯಾಕರಣದಲ್ಲಿ ಸಂಬೋಧನೆಯನ್ನು ಪ್ರತ್ಯೇಕ ವಿಭಕ್ತಿಯಾಗಿ ಪರಿಗಣಿಸುವುದು ಬೇಡವೆಂದು ಅಭಿಪ್ರಾಯಿಸಲಾಗಿದೆ.

೧೧. A Descriptive grammar of Pampa Bharatha— Dr. B. Ramachandra Rao-page, 69.

೧೨. A Comparative Grammar of the Dravidian Languages : By Rev. Robert Caldwell (1961). page 305-306.

ನಿಟ್ಟಿನಲ್ಲಿ ವಿಚಾರಿಸಿದಾಗ ಸಂಬೋಧನೆಯಲ್ಲಿ ಪ್ರಥಮಾ ವಿಭಕ್ತಿ ಬರುತ್ತದೆನ್ನುವುದು ಕನ್ನಡದ ಮಟ್ಟಿಗೆ ಸರ್ವಥಾ ಸರಿಯಲ್ಲ ಎನ್ನುವುದು ವೇದ್ಯವಾಗುತ್ತದೆ. ಸಂಸ್ಕೃತ ವ್ಯಾಕರಣವನ್ನು ಅಂಧವಾಗಿ ಅನುಕರಿಸಿದುದರಿಂದ ಆದ ಪ್ರಮಾದಗಳಲ್ಲಿ ಇದೂ ಒಂದೆಂಬುದು ಸ್ಪಷ್ಟವಾಗುತ್ತದೆ.

ಕನ್ನಡ ವೈಯಾಕರಣರು ಆ ಕಾಲದಲ್ಲಿದ್ದ ಸಂಪ್ರದಾಯದ, ವ್ಯಕ್ತಿಗತ ದೃಷ್ಟಿಕೋನದ ಹಿನ್ನೆಲೆಯಲ್ಲಿ ಸಂಸ್ಕೃತ ವ್ಯಾಕರಣಗಳನ್ನು ಆದರ್ಶವಾಗಿಟ್ಟುಕೊಂಡು ಕನ್ನಡ ಭಾಷೆಯನ್ನು ವಿವೇಚಿಸುವಾಗಲೂ ಸ್ವೋಪಜ್ಞಶೀಲತೆಯಿಂದ ಸಂಸ್ಕೃತಕ್ಕಿಂತ ಭಿನ್ನವಾದ ಕನ್ನಡದ ಭಾಷಾಸ್ವಭಾವವನ್ನು ಗುರುತಿಸುವ ಪ್ರಯತ್ನ ಮಾಡಿದರು. ಅದಕ್ಕಾಗಿ ಪ್ರತಿಯೊಬ್ಬ ಕನ್ನಡಿಗನೂ ಅವರಿಗೆ ಚಿರಋಣಿ. ಆದರೂ ಇಂದು ದ್ರಾವಿಡ ಭಾಷಾವಿಜ್ಞಾನ ಬೃಹತ್ತಾಗಿ ಬೆಳೆದು ಬರುತ್ತಿರಲು ಅದರ ಹಿನ್ನೆಲೆಯಲ್ಲಿ ಆ ವ್ಯಾಕರಣಗ್ರಂಥಗಳಲ್ಲಿ ತಲೆಮರೆಸಿಕೊಂಡಿರುವ, ಕನ್ನಡಭಾಷೆಯ ರಚನೆಗೆ ಅಸಹಜವೆನಿಸಿದ, ಅಂಶಗಳನ್ನು ಎತ್ತಿ ತೋರಿಸಿದರೆ ತಪ್ಪೆನಿಸದು.

ಗ್ರಂಥಋಣ

೧. ಕಾವ್ಯಾವಲೋಕನ : ಸಂ. ಆರ್. ನರಸಿಂಹಾಚಾರ್.

೨. ಕರ್ನಾಟಕ ಭಾಷಾಭೂಷಣ : ಸಂ. ಆರ್. ನರಸಿಂಹಾಚಾರ್.

೩. ಶಬ್ದಮಣಿದರ್ಪಣ : ಸಂ. ಡಿ. ಎಲ್. ನರಸಿಂಹಾಚಾರ್.

೪. ಕರ್ನಾಟಕ ಶಬ್ದಾನುಶಾಸನ : ಪದ್ಮನಾಭಶರ್ಮ, ಭುವನಹಳ್ಳಿ.

೫. Astadhyayi of Panini : Srisha Chandra Vasu,

೬. A Comparative Grammar of the Dravidian Languages : Rev. Robert Caldwell.

೭. A Descriptive Grammar of Pampa Bharatha : Dr. B. Ramachandra Rao.

ಹಂಸರಾಜ ಕವಿಯ ಕಾಲವಿಚಾರ

● ಸೀತಾರಾಮ ಜಾಗೀರ್‌ದಾರ್

ಇಮ್ಮಡಿ ನಾಗವರ್ಮನ ಕಾಲ ಕ್ರಿ. ಶ. ೧೦೪೨ ಎಂಬುದು ಈಗ ಅತ್ಯಂತ ಸ್ಪಷ್ಟವಾಗಿರುವುದರಿಂದ[1] ಆತನ ಕೃತಿಯಲ್ಲಿ ಉಲ್ಲೇಖಿತವಾದ ಪದ್ಯಗಳ ಆಕರಗಳು ತತ್ಪೂರ್ವದವು ಎಂಬುದೂ ಸುನಿಶ್ಚಿತ ಸಂಗತಿ. ಅಂತೆಯೇ ಡಾ. ಅ. ವೆಂಕಟಸುಬ್ಬಯ್ಯನವರ ವಾದ ಈಗ ಹೆಚ್ಚು ಬೆಲೆಯುಳ್ಳದ್ದಾಗಿದೆ. ಅವರು ಹಂಸರಾಜನು ಸ್ತುತಿಸಿದ ವಿಕ್ರಮಾಂಕ ದೊರೆ ಕಲ್ಯಾಣದ ಚಾಳುಕ್ಯವಂಶದ ೫ನೆಯ ವಿಕ್ರಮಾದಿತ್ಯ ಇಲ್ಲವೆ ಅದೇ ವಂಶದ ನಾಲ್ಕನೆಯ ವಿಕ್ರಮಾದಿತ್ಯನಾಗಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.[2] ೫ನೆಯ ವಿಕ್ರಮಾದಿತ್ಯ ದೊರೆ ಕ್ರಿ. ಶ. ೧೦೦೯–೧೪ ರ ವರೆಗೆ ಚಾಳುಕ್ಯ ಸಾಮ್ರಾಟನಾದರೂ ಆ ಮುಂದೆ ಆತನನ್ನು ಯುದ್ಧದಲ್ಲಿ ಸೋಲಿಸಿ ಚಾಳುಕ್ಯ ಸಿಂಹಾಸನವನ್ನು ಆಕ್ರಮಿಸಿ ಅಯ್ಯಣ ಹಾಗೂ ಜಯಸಿಂಹರು ರಾಜ್ಯವಾಳಿದರು. ಜಯಸಿಂಹನಿಗೂ ವಿಕ್ರಮಾದಿತ್ಯನಿಗೂ ಬದ್ಧವೈರವಿದ್ದಿತು. "ಕಾವ್ಯಾವಲೋಕನಂ" ಗ್ರಂಥದ ಕರ್ತೃ, ಜಯಸಿಂಹನ ಕಟಕಕ್ಕೆ ಆಚಾರ್ಯನಾಗಿದ್ದು ಆತನಿಂದ ಸನ್ಮಾನಿತ ವ್ಯಕ್ತಿ. ಜನ್ನನ "ಜನನಾತಂ ಜಗದೇಕಮಲ್ಲ ಕಟಕೋಪಾಧ್ಯಾಯನಾ ನಾಗವರ್ಮನ್"[3] ಎಂಬ ಉಕ್ತಿಯನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಂಡರೆ ಸಾಕು.[4] ಹಂಸರಾಜನು ೫ನೆಯ ವಿಕ್ರಮಾದಿತ್ಯನಿಂದ ಪೋಷಿತ ಕವಿಯೇ ಆಗಿದ್ದರೆ ಆಗ ಆತ ಜಯಸಿಂಹನ ವೈರಿಯಾದ ವಿಕ್ರಮಾದಿತ್ಯನ ಕಡೆಯ ವ್ಯಕ್ತಿಯಾಗುತ್ತಾನೆ. ಎಂದರೆ ೨ನೆಯ ನಾಗವರ್ಮ ಹಾಗೂ ಹಂಸರಾಜ ಈ ಇಬ್ಬರೂ ಎರಡು ಬದ್ಧವಿರೋಧ ಪರಿಸರದಲ್ಲಿ ಇದ್ದ ವ್ಯಕ್ತಿಗಳಾಗುತ್ತಾರೆ. ಲೋಕರೂಢಿಯಲ್ಲಿ ಒಬ್ಬ ವ್ಯಕ್ತಿ ವಿರೋಧಿ ಬಣದ ಇನ್ನೊಬ್ಬ ವ್ಯಕ್ತಿಗೆ ಮರ್ಯಾದೆ ಸಲ್ಲಿಸುವುದು. ಆತನ

---

೧. ನಾಗವರ್ಮನ 'ವರ್ಧಮಾನ ಪುರಾಣಂ' (ಸಂ. ಬಿ. ಎಸ್. ಸಣ್ಣಯ್ಯ): ಪು. ಪೀ. xxvi; ೨೭೯.

೨. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಪು. ೧೭೯.

೩. ಕಕಚ. ಸಂಪುಟ-೧, ಪು. ೩೭೮ (ಕ. ಸಾ. ಪ. ಮುದ್ರಣ ೧೯೬೧).

೪. ಡಾ. ಎಂ. ಎಂ. ಕಲಬುರ್ಗಿ ಅವರು "೨ನೆಯ ನಾಗವರ್ಮನು ಜನ್ನನ ಗುರುವಲ್ಲ" ಎಂಬ ಒಂದು ಲೇಖನವನ್ನು ಬರೆದಿದ್ದಾರೆ: ಕರ್ನಾಟಕ ಭಾರತಿ, ಸಂಪುಟ ೭. ಸಂಚಿಕೆ-೧, ಪು. ೧೪೫-೪೯. ಈ ಲೇಖನವೂ ನನ್ನ ವಾದಕ್ಕೆ ಪುಷ್ಟಿಕೊಡುತ್ತದೆ.

ಗ್ರಂಥದ ಪದ್ಯಗಳನ್ನು ತಂದು ತನ್ನ ಕಾವ್ಯದಲ್ಲಿ ಸೇರಿಸುವುದು ಅಸಾಧ್ಯದ ಮಾತು. ಅದರಲ್ಲೂ ರಾಜ ಮಹಾರಾಜರ ಆಶ್ರಯದಲ್ಲಿದ್ದ ವ್ಯಕ್ತಿಗಳು ವಿರೋಧಿ ಬಣದ ವ್ಯಕ್ತಿಗಳಿಗೆ ಲಕ್ಷ್ಯಕೊಡುವುದು ತೀರ ಅಸಹಜ. ಅಂತೆಯೇ ನಾಗವರ್ಮನು ಹಂಸರಾಜನ ಗ್ರಂಥದಿಂದ ೫ನೆಯ ವಿಕ್ರಮಾದಿತ್ಯ ಚಕ್ರವರ್ತಿಯ

ಮ. ಸ್ರ ॥ ತರವೇಱ್ಮಾಣಿಕ್ಯಭಂಡಾರದ ಪುಡಿಕೆಗಳಂ ಪುಂಜಿಸಲ್ವೇಱ್ಸುವರ್ಣೋ
ತ್ಕರಮಂ ತೋಜಲ್ಕೆವೇಱ್ದಂತಿಗಳನಿರಿಸವೇಱ್ಮಂದೆ ವಾಹಂಗಳಂ ಬಿ
ತ್ತರಿಸಲ್ವೇಱ್ಚಿತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ
ಕರನಾಗಲ್ವೇಱ್ದನೀಯಲ್ಕೆರೆದವರ್ಗೆ ಮಹಾದಾನಮಂ **ವಿಕ್ರಮಾಂಕಂ**॥೫

ಎಂಬ ಒಂದು ಸ್ತುತಿಪದ್ಯವನ್ನು ತನ್ನ ಗ್ರಂಥಗಳಲ್ಲಿ ಸೇರಿಸಿದ ಎಂಬುದು ನಂಬಲು ಸಾಧ್ಯವಿಲ್ಲದ ಸಂಗತಿಯಾಗಿದೆ. ಈ ವಿಚಾರ ಸರಿಯಾದರೆ ಹಂಸರಾಜನು ೫ನೆಯ ವಿಕ್ರಮಾದಿತ್ಯನ ಸಮಕಾಲೀನ ಕವಿಯಾಗಿ ಆತನ ಆಸ್ಥಾನದಲ್ಲಿರಲು ಸಾಧ್ಯವಿಲ್ಲ. ಆದುದರಿಂದ ಹಂಸರಾಜ ಕವಿಯ ಕಾಲ ಸು. ಕ್ರಿ. ಶ. ೧೦೦೦ ಎಂಬುದು ಅಷ್ಟು ಸರಿಯಾದ ಊಹೆ ಅಲ್ಲ.

ಕ್ರಿ. ಶ ಸು ೧೦೦೦ ಎಂಬುದು ಸರಿಯಲ್ಲವಾದರೆ ಹಂಸರಾಜನು ೪ ನೆಯ ಇಲ್ಲವೆ ೩ನೆಯ ಇಲ್ಲವೆ ೨ ನೆಯ ವಿಕ್ರಮಾದಿತ್ಯನ ಕಾಲದಲ್ಲಿರಲು ಸಾಧ್ಯವಿದೆ. ಈ ದಿಶೆಯಲ್ಲಿ ಬಾದಾಮಿಯ ಚಾಲುಕ್ಯ೬ ದೊರೆ ೨ನೆಯ ಕೀರ್ತಿವರ್ಮನ ವಕ್ಕಲೇರಿ ಶಾಸನವು ಹೊಸಬೆಳಕನ್ನು ಬೀರುತ್ತದೆ. ಆ ಶಾಸದದಲ್ಲಿ ಬರುವ ೨ನೆಯ ವಿಕ್ರಮಾದಿತ್ಯನ ವರ್ಣನೆಗೂ ಮೇಲಿನ ಪದ್ಯಭಾಗಕ್ಕೂ ಅತ್ಯಂತ ಸಮೀಪದ ಹೋಲಿಕೆಯಿದೆ. ತೌಲನಿಕ ಅಧ್ಯಯನಕ್ಕೆ ಶಾಸನದಲ್ಲಿನ ವರ್ಣನೆಯನ್ನು ಉದ್ಧರಿಸುವುದು ಲೇಸು. ಆ ಭಾಗವಿಂತಿದೆ: "ಸಕಲಭುವನ ಸಾಮ್ರಾಜ್ಯಲಕ್ಷ್ಮೀ ಸ್ವಯಂ ವರಾಭಿಷೇಕಸಮಯಾನಂತಸಮುಪಜಾತಮಹೋತ್ಸಾಹಃ ಆತ್ಮವಂಶಜ ಪೂರ್ವ ನೃಪತಿ ಛಾಯಾಪಹಾರಿಣಃ ಪ್ರಕೃತ್ಯ ಮಿತ್ರಸ್ಯ ಪಲ್ಲವಸ್ಯ ಸಮೂಲೋತ್ಮೂಲನಾಯ ಕೃತಮತಿಃ ಅತಿತ್ವರಯಾ ತುಣ್ಡಾಕ ವಿಷಯಂ ಪ್ರಾಪ್ಯಾಭಿಮುಖಗತಂ ನಂದಿಪೋತ

೫. ನಾಗವರ್ಮನ ಕಾವ್ಯಾವಲೋಕನಂ (ಮೈ. ವಿ. ವಿ. ಪ್ರಕಟಣೆ-೩ನೆಯ ಮುದ್ರಣ) ಪು. ೬೨, ಪದ್ಯ-೨೮೪.

೬. ಬಾದಾಮಿಯ ಚಾಳುಕ್ಯರನ್ನು "ಚಲುಕ್ಯ" ಎಂದು ಕರೆಯುವುದು ಸರಿಯೆಂದು ಡಾ. ಕೆ. ವಿ. ರಮೇಶ ಅವರು ಸಾಧಾರಗಳಿಂದ ಈಗಾಗಲೇ ನಿರೂಪಿಸಿದ್ದಾರೆ; ನೋಡಿ: 'ಕರ್ಣಾಟಕ ಶಾಸನ ಸಮೀಕ್ಷೆ' ಪು. ೩೩-೩೫ (ಬೆಂಗಳೂರು ವಿ. ವಿ. ಪ್ರ. ೧೯೬೧).

ವರ್ಮಾಭಿಧಾನಂ ಪಲ್ಲವಂ ರಣಮುಖೇ ಸಂಪ್ರಹೃತ್ಯ ಪ್ರಪಲಾಯ್ಯ **ಕಟುಮುಖ ವಾದಿತ್ರ[೭] ಸಮುದ್ರಘೋಷಾಭಿಧಾನ ವಾದ್ಯವಿಶೇಷಾನ್ ಖಟ್ವಾಂಗಧ್ವಜ ಪ್ರಭೂತ ಪ್ರಖ್ಯಾತ ಹಸ್ತಿವರಾನ್ ಸ್ವೀಕರಣನಿಕರ ವಿಕಾಸ ನಿರಾಕೃತ ತಿಮಿರಂ ಮಾಣಿಕ್ಯರಾಶಿಂ ಚ ಹಸ್ತೀಕೃತ್ಯ ಕಲಶ ಭವನಿಲಯ ಹರಿದಂಗನಾಂಚಿತ ಕಾಂಚೀಮಯಾನಾಂ ಕಂಚೀಮಾ ವಿನಾಶ್ಯ ಪ್ರವಿಶ್ಯ, ಸತತ ಪ್ರವೃತ್ತ ದಾನಾ ನಂದಿತ ದ್ವಿಜದೀನಾನಾಥ ಜನೋ ನೃಸಿಂಹಪೋತವರ್ಮ ನಿರ್ಮಾಪಿತ ಶಿಲಾ ಮಯ ರಾಜಸಿಂಹೇಶ್ವರಾದಿ ದೇವಕುಲ ಸುವರ್ಣರಾಶಿ ಪ್ರತ್ಯಾರ್ಪಣೋಪಾ ರ್ಜಿತ ಪುಣ್ಯಃ** ಅನಿವಾರಿತ ಪ್ರತಾಪ ಪ್ರಸಾರ ಪ್ರತಾಪಿತ ಪಾಣ್ಡ್ಯ ಚೋಳ ಕೇರಳ ಕಳಭ್ರ ಪ್ರಭೃತಿ ರಾಜನ್ಯಕಃ ಕ್ಷುಭಿತ ಕರಿಮಕರ ಕರ ಹಸ್ತ ದಲಿತ ಶುದ್ಧ ಮುಕ್ತಾಫಲ ಪ್ರಕರ ಮರೀಚಿಜಾಲ ವಿಲಸಿತ ವೇಲಾಕುಲೇ ಘೂರ್ಣಮಾನಾರ್ಣೋಭಿ ಧಾನೇ ದಕ್ಷಿಣಾರ್ಣವೇ ಶರದಮಲ ವಿಸರ ವಿಶದ ಯಶೋರಾಶಿಮಯಂ ಜಯಸ್ತಮ್ಭ ಮತಿಷ್ಟಪದ್ **ವಿಕ್ರಮಾದಿತ್ಯ** ಸತ್ಯಾಶ್ರಯ ಪೃಥಿವೀವಲ್ಲಭ ಮಹಾರಾಜಾಧಿರಾಜ ಭಟ್ಟಾರಕ...[೮]

೨ನೆಯ ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿ ಅವರ ರಾಜಚಿಹ್ನೆಗಳಾದ ಕಟುಮುಖವಾದಿತ್ರ, ಸಮುದ್ರಘೋಷ, ಖಟ್ವಾಂಗಧ್ವಜಗಳ ಜೊತೆಗೆ ಅನೇಕ ರಣೇಭಗಳನ್ನೂ ಮಾಣಿಕ್ಯಾದಿ ರತ್ನರಾಶಿ ಸಂಪತ್ತನ್ನೂ ಕಂಚೀನಗರದಲ್ಲಿನ ರಾಜ ಸಿಂಹೇಶ್ವರ ಮೊದಲಾದ ದೇವಾಲಯದಲ್ಲಿನ ಸುವರ್ಣರಾಶಿಯನ್ನೂ ತೆಗೆದುಕೊಂಡು ಪುನಃ ಅಲ್ಲಿಯೇ ದಾನಮಾಡಿ ಪುಣ್ಯವಂತನೆಂದು ಪ್ರಸಿದ್ಧನಾದನಲ್ಲದೆ ಪಾಂಡ್ಯ, ಚೋಳ, ಕೇರಳ ಮುಂತಾಗಿ ಎಲ್ಲ ರಾಜರನ್ನೂ ಗೆದ್ದು ದಕ್ಷಿಣಸಮುದ್ರದ ದಡದಲ್ಲಿ ಜಯಸ್ತಂಭವನ್ನು ನೆಟ್ಟನು. ಈ ಎರಡು ವರ್ಣನೆಗಳಲ್ಲಿ ಒಂದಕ್ಕೆ ಇನ್ನೊಂದು ಪೂರಕವಾಗಿವೆ. ಇನ್ನು ೩ನೆಯ ಹಾಗೂ ೪ನೆಯ ವಿಕ್ರಮಾದಿತ್ಯರು ಈ ಬಗೆ ಯಾಗಿ ಪಸಿದ್ಧರಾಗಿದ್ದರೆಂದೂ ಹೇಳಲು ಆಧಾರಗಳಿಲ್ಲ. ಆದುದರಿಂದ ಹಂಸರಾಜ ಕವಿಯಿಂದ ವರ್ಣಿತನಾದ 'ವಿಕ್ರಮಾಂಕ' ದೊರೆಯು ೨ನೆಯ ವಿಕ್ರಮಾದಿತ್ಯನೆಂದು ನನಗೆ ತೋರುತ್ತದೆ. ಇದು ಸರಿಯಾದರೆ ಈ ಕವಿಯು ೨ನೆಯ ವಿಕ್ರಮಾದಿತ್ಯನ ಸಮಕಾಲೀನನೆಂದು ಹೇಳಬಹುದು. ಇದೇ 'ವಿಕ್ರಮಾಂಕ' ದೊರೆಯ ವರ್ಣನೆಯು 'ಸೂಕ್ತಿಸುಧಾರ್ಣವಂ' ಗ್ರಂಥದ 'ಪರ್ವತ ವರ್ಣನಂ' ವಿಭಾಗದಲ್ಲಿ ಹೀಗೆ ಬಂದಿವೆ:

---

೭. 'ಕನಕಮುಖವಾದಿತ್ರ' ಎಂದು ಡಾ ಶ್ರೀಕಂಠ ಶಾಸ್ತ್ರಿಗಳು ಭಿನ್ನಪಾಠವನ್ನು ಕೊಟ್ಟಿದ್ದಾರೆ. Sources of Karnataka History, vol. I. pp. 49-51.

೮. ವಕ್ಕಲೇರಿ ತಾಮ್ರಶಾಸನ-EC. X Kl. 63, (757 AD.).

ಮರೆಯುಂ ನುಂಗಿತ್ತು ಪೆರ್ಬಾವಜಗರಮನಿಭಂ ಕುತ್ತಿಸುತ್ತಿತ್ತು ಕೋಡೊಳ್
ಕರಿಯುಂ ಪೊಯ್ವುತ್ತು ಸಿಂಗಂ ಪಿಡಿದುದು ಶರಭಂ ಸಿಂಗಮಂ ಕೋಪದಿಂದಂ
ಮರೆ ಪೆರ್ಬಾವಾನೆ ಸಿಂಗಂ ಶರಭಮಿನಿತುಮಂ ಕರ್ಚಿ ಭೇರುಂಡನಂದಂ
ಬರದೊಳ್ ಪಾಜುತ್ತಿರಲ್ಕಚ್ಚರಿವಡೆ ತಲೆಯುಂ ತೂಗಿದಂ ವಿಕ್ರಮಾಂಕಂ ॥೯

ಇದು ಪರ್ವತವರ್ಣನೆಯಾದುದರಿಂದ ಕಾವ್ಯವೊಂದರಿಂದ ಎತ್ತಿಕೊಂಡ ಪದ್ಯವೆಂದು ನನಗೆ ತೋರುತ್ತದೆ. ಈ ಎರಡು ಪದ್ಯಗಳಲ್ಲದೆ ಇನ್ನೂ ಹಲವು ಪದ್ಯಗಳನ್ನು ಕಾವ್ಯಾವಲೋಕನಕಾರ, ಸೂಕ್ತಿಸುಧಾರ್ಣವಕಾರ ಮತ್ತು ಶಬ್ದಮಣಿದರ್ಪಣಕಾರ[೧೦] ಮುಂತಾದವರು ತಮ್ಮ ಕೃತಿಗಳಲ್ಲಿ ಉದಾಹರಿಸಿರಲು ಸಾಧ್ಯವಿದೆ. ಆದರೆ ಅವುಗಳನ್ನು ಆ ಕವಿಯ ಗ್ರಂಥವು ದೊರೆತಲ್ಲದೆ ಗುರುತಿಸಲು ಸಾಧ್ಯವಿಲ್ಲ. ಈ ಎರಡು ಕವಿತೆಗಳ ಛಂದಸ್ಸು ಮಹಾಸ್ರಗ್ಧರೆ. ಇಲ್ಲಿನ ಭಾಷೆಯೂ ಸುಮಾರಾಗಿ ಒಂದೇ ಶೈಲಿಯದ್ದಾಗಿದೆ. ನೃಪತುಂಗನ ಕವಿರಾಜಮಾರ್ಗದ ಭಾಷೆಗೂ ಅದರ ಸಮಕಾಲೀನ ಶಾಸನಭಾಷೆಗೂ ತುಂಬ ಭೇದವಿದೆ. ಇನ್ನು ಆ ಗ್ರಂಥವಲ್ಲೇ ಅದಕ್ಕೂ ಪೂರ್ವದಲ್ಲಿ ಕವಿಗಳನೇಕರು ಇದ್ದರೆಂಬುದು ಸ್ಪಷ್ಟವಿರುವುದರಿಂದ ಹಂಸರಾಜನು ತತ್ಪೂರ್ವದಲ್ಲಿ ಇದ್ದ ಒಬ್ಬ ಕವಿಯೆಂದರೆ ತಪ್ಪಾಗದು. 'ಕವಿರಾಜಮಾರ್ಗ'ಪೂರ್ವದ ಒಂದೂ ಗ್ರಂಥ ದೊರೆತಿಲ್ಲವಾದ್ದರಿಂದ ಆಗಿನ ಗ್ರಾಂಥಿಕಭಾಷೆಯ ಚೌಕಟ್ಟಿನ ಬಗೆಗೆ ಇದಮಿತ್ಥಂ ಎಂದು ಹೇಳಲು ಬಾರದು. ಈ ವಿಕ್ರಮಾಂಕನು ಅಖಿಲಕರ್ಣಾಟೇಶ್ವರನೂ ಆಗಿದ್ದನು. ಈ ವಿಷಯವನ್ನು ಮನದಂದಾಗ ಜಯಕೀರ್ತಿ ಹೇಳಿದ "ಕರ್ಣಾಟೇಶ್ವರ ಕಥಾ"[೧೧] ಎಂಬ ಕಾವ್ಯವೂ ಇದುವೆ ಆಗಿರಲು ಸಾಧ್ಯವಿದೆ. ಕವಿಯ ಹೆಸರೂ 'ಹಂಸರಾಜ' ಎಂದಿರದೆ ಬೇರೆಯೂ ಆಗಿರಬಹುದು. ಸಂಶೋಧನೆಯಲ್ಲಿ ಕವಿಯ ಕೃತಿ ಹಾಗೂ ಇತಿವೃತ್ತ ವಿಚಾರ ಇನ್ನೂ ಬೆಳಕಿಗೆ ಬರಬೇಕಾಗಿದೆ. ಕವಿಯು ೨ನೆಯ ವಿಕ್ರಮಾದಿತ್ಯನ (ಕ್ರಿ. ಶ. ೭೩೩–೩೪ ರಿಂದ ೭೪೬–೪೭) ಸಮಕಾಲೀನ ಎನ್ನುವುದು ಸರಿಯಾದರೆ ೮ನೆಯ ಶತಮಾನದ ಮಧ್ಯಭಾಗದಲ್ಲಿದ್ದನೆಂದು ವಿದಿತವಾಗುತ್ತದೆ.*

೯. ಸೂಕ್ತಿಸುಧಾರ್ಣವಂ (ಸಂ. ಎನ್. ಅನಂತರಂಗಾಚಾರ್): ಪು. ೩೭. ಪದ್ಯ ೭೭ (೧೯೪೭).

೧೦. ಶಬ್ದಮಣಿದರ್ಪಣಂ (ಸಂ. ಪ್ರೊ. ಡಿ. ಎಲ್. ಎನ್.) ಸೂ. ೩೦೪–೧. ಕೇಶಿರಾಜನೂ ಕಾವ್ಯಾವಲೋಕನದ ಪದ್ಯ 'ತರವೇಟಿಬ್ ಮಾಣಿಕ್ಯಭಂಡಾರದ ಪುಡಿಕೆಗಳಂ.........' ಎಂಬುದನ್ನೇ ಉದಹರಿಸಿದ್ದಾನೆ. ಪು. ೩೩೮ (೧೯೬೮).

೧೧. ಜಯಕೀರ್ತಿ, ಛಂದೋನುಶಾಸನಂ 'ಜಯದಾಮನ್' ಗ್ರಂಥ, ಪು. ೬೬, ಅಧಿ ೭–೩.

* ಈ ಲೇಖನ ಬರೆಯುವಲ್ಲಿ ಹಿರಿಯರಾದ ಡಾ. ಹಾ. ಮಾ. ನಾಯಕ ಹಾಗೂ ಡಾ. ಬಾ. ರಾ. ಗೋಪಾಲ ಅವರಿಗೂ ಋಣಿಯಾಗಿರುವೆ.

ಸೋಜಿಗಾ

● ಬಿ. ಎ. ಸನದಿ

ಖರೇ ಹೇಳಲಾ ?
ನನಗ ಜೇನತುಪ್ಪದಂಥ ಖರೇ ಹೇಳಿ
ರೂಢೀನs ಇಲ್ಲ.
ನಾ ಖರೇ ಹೇಳೂದಿಲ್ಲಾ
ಅಂದ್ರ
ನೀವು ನಂಬೂದಿಲ್ಲ..
ಯಾಕಂದ್ರ
ಸುಳ್ಳು ಹೇಳಾವ್ರು
ಸುಳ್ಳು ಹೇಳ್ತೇವಂತೆಂದೂ ಅಂಬೂದಿಲ್ಲ.
ಹೊತ್ತು ಬಂದಾಗೆಲ್ಲ
ಹತ್ತುಹತ್ತು ಸಲ
ಸುಳ್ಳ ಹೇಳಿದ್ದs ಖರೇವಂತ
ನಂಬತದ ಈ ಜಗಾ
ಸೋಜಿಗಾ !
'ಸತ್ಯಂ ವದ ಧರ್ಮಂ ಚರ'
ಸಾಲ್ಯಾಗ ಓದಿದ್ದು
ನನಗಿನ್ನೂ ನೆಂಪದಪಾs ನೆಂಪದ,
ಆದ್ರ
ನೆಂಪಿದ್ದಿದ್ದೆಲ್ಲ ನಮ್ಮದಾಗೂದಿಲ್ಲ
ನಮ್ಮದಾದದ್ದೆಲ್ಲ
ಎಲ್ಲಾ ಕಾಲಕ್ಕ ಕೆಲಸಕ್ಕ ಬರೂದಿಲ್ಲ.
ಈ ಖರೇ ಹೇಳಿದ್ರ
ನಂಬೂದಿಲ್ಲ ಈ ಜಗಾ
ಸೋಜಿಗಾ !!

ಬವಣೆ

● ಬಿ. ಎಂ. ರಮೇಶ್

ಸಹಿಸಬೇಕೆ
ಕನಸುಗಳ, ಮುಗಿಬೀಳುವ ದಿಗಿಲುಗಳ,
ಹೆಪ್ಪಾದ ಇರುಳುಗಳ, ಅಸ್ತಮಾನಕ್ಕೆ ಉದಯಿಸುವ
ಸಾವಿರ(ದ) ಭೂತ ಭವಿಷ್ಯತ್ತುಗಳ ?
ಸಹಿಸಬೇಕೆ
ಕತ್ತಲ ನೆರಳಲ್ಲಿ ಗಾಳಿಯ ಭಾರಕ್ಕೆ
ರೋಮಕ್ಕೆ ಕಚ್ಚಿಕೊಂಡ ತುರಿಕೆಗಳ,
ಹಠದ ಉಸಿರಾಟಗಳ, ಉದ್ದೇಶಕ್ಕೆ ನಿಲುಕದ
ಹುಡುಕಾಟಗಳ ?
ಸಹಿಸಬೇಕೆ
ಅಸಹ್ಯ ದಾಕ್ಷಿಣ್ಯಕ್ಕೆ ಒಕ್ಕಲಾಗುವ
ಬಂಜೆ ತೀಟೆಗಳ, ಕೈ ಹೊಸೆಯುತ್ತ ನೆರೆವ
ಅಚ್ಚರಿಗಳ, ಮೋಹಿಸುವ ಸ್ವಾರ್ಥಕ್ಕೆ
ಕೊನೆಯಿರದ ದಂಥೆಗಳ ?
ಸಹಿಸಬೇಕು, ಮಗನೆ
ಬದುಕು ನಡುಹಗಲಲ್ಲಿ
ಭೂತವಾಗಲೆವ ವಿಸ್ಮಯಕ್ಕೆ.

● ●

ಸಂಪಾದನೆಯ ಮರಿಸಂಗಯ್ಯ

● ಎಸ್. ಎಸ್. ಭೂಸರಡ್ಡಿ
● ವ್ಹಿ. ಬಿ. ರಾಜೂರ

ವೀರಶೈವ ಸಾಹಿತ್ಯಚರಿತ್ರೆಯಲ್ಲಿ ಸಂಪಾದನೆಯ ಚೆನ್ನಂಜೇದೇವ (೧೫೭೫), ಸಂಪಾದನೆಯ ಸಿದ್ಧವೀರಣಾರ್ಯ (೧೬೨೫.), ಸಂಪಾದನೆಯ ಬೋಳಬಸವ (೧೬೫೦), ಸಂಪಾದನೆಯ ಗುರುಲಿಂಗದೇವ (೧೬೭೫), ಸಂಪಾದನೆಯ ಪರ್ವತೇಶ (೧೬೯೮) ಮೊದಲಾದವರು ವಿಖ್ಯಾತರಾಗಿದ್ದಾರೆ. ಇವರು ಬಸವಾದಿ ಪ್ರಮಥರ ವಚನಗಳಿಗೆ ಟೀಕೆ, ಟಿಪ್ಪಣೆ, ವ್ಯಾಖ್ಯಾನ ಬರೆದು, ಸ್ಥಲಕಟ್ಟಿಗೆ ಹೊಂದಿಸಿ ಸಂಪಾದನ ಕ್ಷೇತ್ರಕ್ಕೆ ಚಿರಸ್ಮರಣೀಯ ಕಾಣಿಕೆ ಸಲ್ಲಿಸಿದ್ದಾರೆ. ಇವರ ಸಾಲಿಗೆ ಸೇರುವ ಇನ್ನೊಬ್ಬ ಸಂಪಾದಕ ಪ್ರಸ್ತುತ 'ಸಂಪಾದನೆಯ ಮರಿಸಂಗಯ್ಯ'. ಇದುವರೆಗೆ ಬೆಳಕಿಗೆ ಬಾರದ ಇವನು ಪ್ರಭುದೇವರ ಸ್ವರವಚನ[1]ಕ್ಕೆ ಬರೆದ ವ್ಯಾಖ್ಯಾನವೊಂದು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ತಾಳೆಪ್ರತಿ ೩೦೪೨ ಗರಿ ೧೯೨–೯೩ರಲ್ಲಿ ದೊರೆತಿದೆ. ಅದರ ಕೊನೆಯಲ್ಲಿ 'ಸಂಪಾದನೆಯ ಮರಿಸಂಗಯ್ಯನವರು ಮಾಡಿದ ವ್ಯಾಖ್ಯಾನ ಸಮಾಪ್ತ ಮಂಗಳಮಹಾ' ಎಂದಿದೆ. ಇವನ ಹೆಸರಿನ ಹಿಂದೆ 'ಸಂಪಾದನೆಯ' ಎಂಬ ವಿಶೇಷಣ ಬಂದಿರುವುದರಿಂದ ಇವನು ಕೆಲವು ವಚನಕೃತಿಗಳನ್ನು ಸಂಪಾದನೆಮಾಡಿರುವ ಸಾಧ್ಯತೆ ಇದೆ. ಸಧ್ಯಕ್ಕೆ ಅವಾವೂ ದೊರೆತಿಲ್ಲ. ಅವನು ಬರೆದ ಪ್ರಭುದೇವರ ಸ್ವರವಚನ ವ್ಯಾಖ್ಯಾನ ಹೀಗಿದೆ :

ಕಂಡೆ ಕಂಡೆ ನಾನೊಂದು ಕನಸನೀಗಳು ಬಣಗು–
ಮುಂಡೆಯೊರ್ವನೊಡನೆ ಕೂಡಿ ಹೆಂಡಿರಾದುದ । ಪಲ್ಲ ।

ಟೀಕು :

ಸದ್ಭಕ್ತನೆಂಬುದೀಗ, ನಾನೆಂಬ ಶಬ್ದಕ್ಕಾರ್ಥ. ಲಿಂಗಧಾರಣವಾದಾಕ್ಷಣವಲ್ಲಿ ಎಂಬುದೀಗ, ಈಗಳೆಂಬ ವಚನಾನ್ವಯ. ಲಿಂಗಾಂಗ ಸಮರಸಕ್ಕೆ ಕಾರಣವಾದ ಸುಜ್ಞಾನವ ತಿಳಿದನೆಂಬುದೀಗ, ಕನಸಕಂಡೆನೆಂಬ ಶಬ್ದಕ್ಕಾರ್ಥ. ಭಿನ್ನಜ್ಞಾನ ನಷ್ಟವಾದ ಶಿಷ್ಯನೆಂಬ ಸತಿ ಸದ್ರೂಪವಾದ ಗುರುವಿನಲ್ಲಿ ಅವಿರಳ ಸಂಗವ ಮಾಡಿ ಭೃತ್ಯಭಾವ

---

೧ ಈ ಸ್ವರವಚನ ಡಾ. ಎಲ್ ಬಸವರಾಜು ಅವರ 'ಶಿವದಾಸಗೀತಾಂಜಲಿ'ಯಲ್ಲಿ ಎಡೆಪಡೆದಿದೆ. ಪು. ೧೫೦ (೧೯೬೩).

ಮಾಡುವ ತಿಳಿದ ಸದ್ಭಕ್ತನೆಂಬುದೀಗ, ಬಣಗು ಮುಂಡೆಯೋರ್ವನೊಡನೆ ಕೂಡಿ ಹೆಂಡಿರಾದುದ ಕಂಡೆನೆಂಬ ವಚನಾನ್ವಯ.

ಹಾಳೂರ ಗೌಡರೆನಿಪ ಏಳುಮಂದಿಯು ಸತ್ತು
ತೋಳನೊಂದು ಮರಿಯತಿಂದು ಏಳಿಗಾಯಿತ್ತು
ಕಾಳಬೇಡನೊಂದು ಕಪಿಯ ಕಾಯ್ದು ಕಾಯ್ದು ಕಣ್ಣುಗೆಟ್ಟು
ಸೂಳೆಯಾದಳವನ ತಂಗಿ ಸೂನೆಗಾರಗೆ ॥ ೧ ॥

ಸುಜನ ಕರಣಂಗಳೆಡೆಯಾಟವಿಲ್ಲದೆ ದುರ್ಜನ ಕರಣಂಗಳೆಡೆಯಾಟವಾದ ದೇಹದ ಕರ್ತೃವೆನಿಸುವ ಸಪ್ತವ್ಯಸನಂಗಳು ಸ್ವಬುದ್ಧಿನಷ್ಟವಾಗಿದ್ದವೆಂಬುದೀಗ, ಹಾಳೂರ ಗೌಡರೆನಿಪ ಏಳು ಮಂದಿಯು ಸತ್ತು ಎಂಬ ಶಬ್ದಕ್ಕರ್ಥ.

ವ್ಯಾಧಿ ಪೀಡಕತ್ವವು ಜೀವರುಗಳ ಸುಜ್ಞಾನವ ನಷ್ಟವ ಮಾಡಿ ಕಳವಳದಿಂದ ಹೆಚ್ಚಿತೆಂಬುದೀಗ, ತೋಳನೊಂದು ಮರಿಯತಿಂದು ಏಳಿಗಾಯಿತ್ತು ಎಂಬ ಶಬ್ದಕ್ಕರ್ಥ.

ಅಜ್ಞಾನಸ್ವರೂಪವಾದ ಮನ್ಮಥನು ಕಾಮನನಾಶ್ರೈಸಿ ಸಾಧ್ಯವಾಗದೆ ಸುಜ್ಞಾನ ದೃಷ್ಟಿ ನಷ್ಟವಾದನೆಂಬುದೀಗ, ಕಾಳಬೇಡನೊಂದು ಕಪಿಯ ಕಾಯ್ದು ಕಾಯ್ದು ಕಣ್ಣುಗೆಟ್ಟ ಎಂಬ ಶಬ್ದಕ್ಕರ್ಥ.

ಹಿಂದೆಹೇಳಿದ ಮನ್ಮಥವಿಕಾರ ಚಿಂತನೆಯಿಂದ ಹುಟ್ಟಿದ ಮಾಯಾಶಕ್ತಿ ಖಂಡಿತ ಬುದ್ಧಿಯನುಳ್ಳ ಜೀವನಿಗೆ ವಿಷಯಸುಖವನುಂಟುಮಾಡಿಕೊಡುವುದಕ್ಕೆ ಸಹಾಯೆಯಾದಳೆಂಬುದೀಗ, ಸೂಳೆಯಾದಳವನ ತಂಗಿ ಸೂನೆಗಾರಗೆ ಎಂಬ ಶಬ್ದಕ್ಕರ್ಥ.

ಮೂಗಿಲ್ಲದ ಮೂಗನೊಂದು ಕಾಗೆಯನ್ನು ತಿನ್ನಲಾಗಿ
ಜಾಗರಂಗಳಾದವಖಿಳ ಜಗದ ಜೀವರಾ
ಜಾಗರಂಗಳೊಳಗೆ ಚಿತ್ಸಾಗರಂಗಳುದ್ಭೈಸಿ ಸತ್ತ
ಕೋಗಿಲೆದ್ದು ಕೊನೆಯನೇಜಿ ಕರೆಯೆ ಕಂಡೆನು ॥ ೨ ॥

ಶಿವಸದ್ವಾಸನಾ ಘ್ರಾಣವಿಲ್ಲದ ಮಾಯಾದುರ್ವಾಸನೆಯೆ ಘ್ರಾಣವಾಗುಳ್ಳ ಜೀವನು, ಅಜ್ಞಾನವನವಗ್ರಹಿಸಿರಲಾಗಿಯೆಂಬುದೀಗ, ಮೂಗಿಲ್ಲದ ಮೂಗನೊಂದು ಕಾಗೆಯನ್ನು ತಿನ್ನಲಾಗಿ ಎಂಬ ಶಬ್ದಕ್ಕರ್ಥ.

ಸಮಸ್ತವಾದ ಲೋಕದಾತ್ಮರ ಭಿನ್ನಪ್ರಪಂಚಿನ ವಿಚಾರದಲ್ಲಿ ಶಿವಸಂಸ್ಕಾರದಿಂದ ಜ್ಞಾನಾನಂದಾಂಬುಧಿ ಜನಿಸಿತೆಂಬುದೀಗ, ಅಖಿಳ ಜಗದ ಜಾಗರಂಗಳೊಳಗೆ ಚಿತ್ಸಾಗರಂಗಳುದ್ಭೈಸಿ ಎಂಬ ಶಬ್ದಕ್ಕರ್ಥ.

ಆರೋಹಣೆಯಾಗಿ ಶಿವೋಹಮೆಂದುಚ್ಚರಿಸಿದುದ ಕಂಡ ಶರಣನೆಂಬುದೀಗ, ಸತ್ತ ಕೋಗಿಲೆದ್ದು ಕೊನೆಯನೇಜಿ ಕರೆಯೆ ಕಂಡೆನೆಂಬ ಶಬ್ದಕ್ಕರ್ಥ.

ಅಕ್ಕ ತಮ್ಮನೊಡನೆಕೂಡಿ ಮಕ್ಕಳೈದ ಹೆತ್ತುಕೊಂಡು
ದಿಕ್ಕುಗೆಟ್ಟು ದೇಶದೊಳಗೆ ತಿರಿದುಂಬುತ ತಾ
ಹೊಕ್ಕು ಸೋಮಸೂರ್ಯವೀಥಿಯಿಕ್ಕೆಲದ ನಡುವೆ ನಿಂದು,
ನಕ್ಕಳವಳು ಎನ್ನ ಕಂಡು ತನ್ನ ತೋಱುತ ॥ ೩ ॥

ಮುನ್ನ ಜ್ಞಾನೋದಯವಾದ ಶಿಷ್ಯನು ಕಡೆಯಲ್ಲಿ ಗುರೂಪದೇಶದ ಬಲದಿಂದ ಪ್ರತ್ಯಕ್ಷವಾದ ಲಿಂಗದಲ್ಲಿ ಅವಿರಳ ಸಂಯೋಗವ ಮಾಡಿ ಪಂಚಲಿಂಗಗಳನುಂಟು ಮಾಡಿಕೊಂಡನೆಂಬುದೀಗ, ಅಕ್ಕ ತಮ್ಮನೊಡನೆ ಕೂಡಿ ಮಕ್ಕಳೈದ ಹೆತ್ತುಕೊಂಡು ಎಂಬ ಶಬ್ದಕ್ಕರ್ಥ.

ಲಿಂಗಾಂಗವೆಂಬ ಖಂಡಿತ ಹೊಲಬು ವಿನಾಶವಾಗಿ ಸರ್ವಾಂಗದಲ್ಲಿಪ್ಪ ಲಿಂಗಕ್ಕೆ ಸಕಲ ಪದಾರ್ಥವನಿತ್ತು ಲಿಂಗಮುಖದಿಂದ ಪ್ರತ್ಯಕ್ಷವ ಮಾಡಿಕೊಂಡ ಪ್ರಸಾದವನನುಭವಿಸುತಿರ್ದ ಶರಣನೆಂಬುದೀಗ, ದಿಕ್ಕುಗೆಟ್ಟು ದೇಶದೊಳಗೆ ತಿರಿದುಂಬುತ ಎಂಬ ಶಬ್ದಕ್ಕರ್ಥ.

ಅಭಿನ್ನಜ್ಞಾನಕ್ರಿಯಾಚಾರದಲ್ಲಿ ಪ್ರವೇಶವಾದ ಶರಣನು ಸ್ಥೂಲತನು ಕಾರಣತನುವಿಂಗೆ ಮಧ್ಯಸ್ಥವಾದ ಸೂಕ್ಷ್ಮ ತನುವಿನಲ್ಲಿಪ್ಪ ಪ್ರಾಣಲಿಂಗದಲ್ಲಿ ಸ್ವಸ್ಥ ಭಾವಿಯಾಗಿದ್ದನೆಂಬುದೀಗ, ಹೊಕ್ಕು ಸೋಮ ಸೂರ್ಯವೀಥಿಯಿಕ್ಕೆಲದ ನಡುವೆ ನಿಂದು ಎಂಬ ಶಬ್ದಕ್ಕರ್ಥ.

ಹಿಂದೆ ಹೇಳಿದ ಶಿಷ್ಯನೆಂಬ ಸತಿ ಶರಣನ ಲಿಂಗಾಂಗ ಸಮರಸೈಕ್ಯವ ನೋಡಿ ಪರಮ ಹರುಷಿತವಾದರೆ ಸದ್ರೂಪವಾದ ಗುರು ತನಗೆ ಮಾಡುವ ಭಕ್ತಿಯನಱುಪಿದನೆಂಬುದೀಗ, ನಕ್ಕಳವಳು ಎನ್ನ ಕಂಡು ತನ್ನ ತೋಱುತ ಎಂಬ ಶಬ್ದಕ್ಕರ್ಥ.

ಹೆತ್ತ ತಾಯಿ ಮಗನ ಮೆಚ್ಚಿ ಅತ್ತೆ ಅಳಿಯನಾಗಿ ನಡೆದು
ಹೊತ್ತುಗಳೆವ ವೇಳೆಯಲ್ಲಿ ಸತ್ತನೊಬ್ಬನು
ಹೊತ್ತು ಹೋಗಿ ಹೊಳೆಯ ದಾಂಟಿ ಅತ್ತಲಿತ್ತ ನೋಡಿ ತನ್ನ
ಮತ್ತೆ ಕದ್ದು ಒಯ್ದನೊಬ್ಬ ಕಳ್ಳಬಂಟನು ॥ ೪ ॥

ಕರಕಮಲವೆಂಬ ನಿರ್ಯೋಗಿಯಲ್ಲಿ ಶಿಷ್ಯನ ಜನನವ ಮಾಡಿದ ಚಿಚ್ಛಕ್ತಿಸ್ವರೂಪವಾದ ಶ್ರೀಗುರು ತನ್ನ ಪುತ್ರನೆನಿಸುವ ಶಿಷ್ಯನ ಭಕ್ತಿಗೆ ಮಮಕರಿಸಿದೆಂಬುದೀಗ, ಹೆತ್ತತಾಯಿ ಮಗನ ಮೆಚ್ಚಿ ಎಂಬ ಶಬ್ದಕ್ಕರ್ಥ.

ಆ ಗುರುತತ್ವವು ತನ್ನುಪದೇಶದಿಂದ ಬಂದ ಲಿಂಗವೆಣ್ಣ ಶರಣನೆಂಬ ಪುರುಷನಿಗೆ ಕೈಗೂಡಿಸಿ ಶರಣಮಾಡುವ ಭಕ್ತಿಯಲ್ಲಿ ಗಮಿಸುತಿರ್ದನೆಂಬುದೀಗ, ಅತ್ತೆ ಅಳಿಯುಗಾಗಿ ನಡದು ಎಂಬ ಶಬ್ದಕ್ಕರ್ಥ.

ಅಕೃತ್ಯವ ಮಾಡುವ ದಿನ ಕಾಲ ಕಲ್ಪಿತಂಗಳ ತೊಲಗಿಸುವ ಕಾಲದಲ್ಲಿ ಶಿಷ್ಯನು ಗುರುತತ್ವದಲ್ಲಿ ನಿಃಪತಿಯಾದನೆಂಬುದೀಗ, ಹೊತ್ತುಗಳವ ವೇಳೆಯಲ್ಲಿ ಸತ್ತನೊಬ್ಬನು ಎಂಬ ಶಬ್ದಕ್ಕರ್ಥ.

ಅಕೃತ್ಯವ ಮಾಡುವ ದಿನ ಕಾಲ ಕಲ್ಪಿತಂಗಳು ಸ್ಪಷ್ಟವಾಗಿ ಭವಸಾಗರವ ಸುತ್ತಾರಂಗೈದು ಅಂತರಂಗ ಬಹಿರಂಗದ ಲಿಂಗಸಂಬಂಧವ ಸುಜ್ಞಾನ ದೃಷ್ಟಿಯಿಂದ ಕಂಡ ಶರಣನೆಂಬುದೀಗ, ಹೊತ್ತುಹೋಗಿ ಹೊಳೆಯದಾಂಟಿ ಅತ್ತಲಿತ್ತ ನೋಡಿ ಕಂಡನೆಂಬ ಶಬ್ದಕ್ಕರ್ಥ.

ಮಾಯಾಮಿಥ್ಯವನಪಹರಿಸಿದ ಶರಣನು ಬಳಿಕ ತಾನೆ ಬ್ರಹ್ಮವೆಂಬ ಅದ್ವೈತವ ನಷ್ಟವಮಾಡಿದನೆಂಬುದೀಗ, ತನ್ನ ಮತ್ತೆ ಕದ್ದುವೊಯ್ದನೊಬ್ಬ ಕಳ್ಳ ಬಂಟನೆಂಬ ಶಬ್ದಕ್ಕರ್ಥ.

ಕಾಡು ಒಂದು ಮೇಡುವೈದು ಓಡುವೊಂದು ಒಲೆಯು ಮೂಱು
ನಾಡ ನಾಯ ಕೂಡಿಕೊಂಡ ಬೇಡನೊಬ್ಬನು
ನೋಡಿ ಹೆಳಕ ಹೂಡಿ ಒಂದು ಜೋಡುಮುಖದ ಕಪಿಯನೆಚ್ಚು
ಓಡಿನಲ್ಲಿ ತಿಂದು ತನ್ನ ನೀಗಲಾಡಿದ || ೫ ||

ಸಂಸಾರಾರಣ್ಯವೆಂಬುದೀಗ, ಕಾಡು ಒಂದು ಎಂಬ ಶಬ್ದಕ್ಕರ್ಥ. ದೇಹಕ್ಕೆ ಕರ್ತೃವಾಗಿಪ್ಪ ಪಂಚೇಂದ್ರಿಯಂಗಳೆಂಬುದೀಗ, ಮೇಡುವೈದು ಎಂಬ ಶಬ್ದಕ್ಕರ್ಥ. ತನ್ನ ನಿಜವ ಮಱೆದಿಪ್ಪ ಜ್ಞಾನವೆಂಬುದೀಗ, ಓಡು ಒಂದು ಎಂಬ ಶಬ್ದಕ್ಕರ್ಥ. ತನುತ್ರಯಂಗಳೆಂಬುದೀಗ, ಒಲೆಯು ಮೂಱು ಎಂಬ ಶಬ್ದಕ್ಕರ್ಥ. ಮನ್ಮಥನೆಂಬ ಪುಳಿಂದನು ಸಕಲ ಕರಣಂಗಳೆಂಬ ಶುನಿಗಳನೊಬ್ಬುಳಿಕರಿಸಿಕೊಂಡಿಪ್ಪನೆಂಬುದೀಗ, ನಾಡ ನಾಯ ಕೂಡಿಕೊಂಡು ಬೇಡನೊಬ್ಬನೆಂಬ ಶಬ್ದಾರ್ಥ.

ಶರಣನೆಂಬ ಬೇಟೆಕಾರನು ಸದ್ಭಾವವೆಂಬ ಬಿಲ್ಲಿಗೆ ಸುಮನವೆಂಬ ನಾರಿಯ ಹೂಡಿ ಸುಜ್ಞಾನವೆಂಬ ಸರಳ ಸಂಬಂಧಿಸಿ ಜಾಗ್ರಸ್ವಪ್ನಂಗಳೆರಡು ಪ್ರಪಂಚಿಕವನವಗ್ರಹಿಸುವುದಕ್ಕೆ ವದನವಾಗಿಪ್ಪ ಮನೋಮರ್ಕಟನ ಸಂಕಲ್ಪವ ಪರಿಪೂರ್ಣ ಜ್ಞಾನದೃಷ್ಟಿಯಿಂದ ನಿರೀಕ್ಷಿಸಿ ಸಂಹರಿಸಿ ಉನ್ಮನೀ ಮನಸ್ಸ ಮಾಡಿದನೆಂಬುದೀಗ, ನೋಡಿ ಹೆಳಕ ಹೂಡಿ ಒಂದು ಜೋಡು ಮುಖದ ಕಪಿಯನೆಚ್ಚು ಎಂಬ ಶಬ್ದಕ್ಕರ್ಥ.

ಭಕ್ತಿಕಾಯದಲ್ಲಿಪ್ಪ ಲಿಂಗಪ್ರಸಾದವನನುಭವಿಸಿ ತಾನೆ ಬ್ರಹ್ಮನೆಂಬ ಚಿದಹಂಕಾರವ ಹೋಗಲಾಡಿದನೆಂಬುದೀಗ, ಓಡಿನಲ್ಲಿ ತಿಂದು ತನ್ನನೀಗಲಾಡಿದನೆಂಬ ಶಬ್ದಕ್ಕರ್ಥ.

ಏಡಿ ಒಂದು ಅಜನ ತಲೆಯ ಆಡಿಸಾಡಿ ತಿಂದು ತೇಗಿ
ಓಡಿನಲ್ಲಿ ನೀರ ಕುಡಿದು ಒಲೆಯಸಾರಲು
ಹಾಡಿ ಹೊಗಳಿ ಹರಸಿಕೊಂಡು ಮಾಡಿದನೊಬ್ಬ ಮಡಕೆಗಳನು
ನೋಡಿ ಒಡದುಹೋದನೊಬ್ಬ ಗಾಡಿಕಾರನು ॥ ೬ ॥

ಸಜ್ಜೀವನು ಬ್ರಹ್ಮನುತ್ಪತ್ಯಕ್ಕೆ ಕಾರಣವಾದಹಂಕಾರವೆಂಬ ಸಿರಸ್ಸ ಹಾಸ್ಯೋಪಮಾನವ ಮಾಡಿ ಸಂಹರಿಸಿ ಪರಮಾನಂದವನೈದಿತೆಂಬುದೀಗ, ಏಡಿಯೊಂದು ಅಜನ ತಲೆಯ ಆಡಿಸಾಡಿ ತಿಂದು ತೇಗಿ ಎಂಬ ಶಬ್ದಕ್ಕರ್ಥ.

ಮಂತ್ರ ಕಾಯದಲ್ಲಿಪ್ಪ ಜ್ಞಾನಾನಂದ ಜಲವ ಸುವಿವೇಕ ಮುಖದ್ವಾರದಲ್ಲಿ ಈಂಟಿ ತ್ಯಾಗ ಭೋಗ ಯೋಗವೆಂಬಂಗತ್ರಯದಲ್ಲಿ ಲಿಂಗತ್ರಯವ ಸಂಬಂಧವ ಮಾಡಿಕೊಂಡಿರಲು ಎಂಬುದೀಗ, ಓಡಿನಲ್ಲಿ ನೀರಕುಡಿದು ಒಲೆಯ ಸಾರಲು ಎಂಬ ಶಬ್ದಕ್ಕರ್ಥ.

ಅದ್ವಿತೀಯ ಸ್ವರೂಪವಾದ ಶರಣನು ಶಿವನಿಗೆ ಮಂತ್ರ ಜಪಸ್ತೋತ್ರವಮಾಡಿ ಚಿದಂಗವನುಂಟುಮಾಡಿಕೊಂಡನೆಂಬುದೀಗ, ಹಾಡಿ ಹೊಗಳಿ ಹರಸಿಕೊಂಡು ಮಾಡಿದನೊಬ್ಬ ಮಡಕೆಗಳನು ಎಂಬ ಶಬ್ದಕ್ಕರ್ಥ.

ನಿರ್ದೇಹ ಸ್ವರೂಪವಾದ ಗುರುತತ್ವವು ಚಿದಂಗವ ಮಹಾಜ್ಞಾನದೃಷ್ಟಿಯಿಂದ ನಿರೀಕ್ಷಿಸಿ ಪರಬ್ರಹ್ಮದಲ್ಲಿ ನಿಃಪತಿಯನೈದಿಸಿ ಲಿಂಗೈಕ್ಯವಾದನೆಂಬುದೀಗ, ನೋಡಿ ಒಡೆದುಹೋದನೊಬ್ಬ ಗಾಡಿಕಾರನು ಎಂಬ ಶಬ್ದಕ್ಕರ್ಥ.

ಎತ್ತು ಒಂದು ಏರಿಯಲ್ಲಿ ಸತ್ತು ಹುಲ್ಲುನೀರನುಂಡು
ಹೊತ್ತು ಹೋಗಿ ಹೊಲಬುದಪ್ಪಿ ಕಾಡ ಸೇರಲು
ಎತ್ತನರಸಿ ಹೋಗಿ ಒಬ್ಬ ಸತ್ತ ಹೆಣನ ಕೈಯಲೊಂದು
ಮುತ್ತ ಕಂಡು ಹೆತ್ತ ತಾಯ ಕೂಡಿಕೊಂಡನು ॥ ೭ ॥

ಸಜ್ಜೀವನು ಭಕ್ತಿಕಾಯದಲ್ಲಿ ಜೀವಭಾವನಷ್ಟವನೈದಿಸಿ ಲಿಂಗಪಾದೋದಕ ಪ್ರಸಾದವನನುಭವಿಸಿತೆಂಬುದೀಗ, ಎತ್ತು ಒಂದು ಏರಿಯಲ್ಲಿ ಸತ್ತು ಹುಲ್ಲು ನೀರ ಕುಡಿದು ಎಂಬ ಶಬ್ದಕ್ಕರ್ಥ.

ಅಕೃತ್ಯಕ್ಕೆ ಕಾರಣವಾದ ದಿನ ಕಾಲಕಲ್ಪಿತಂಗಳು ನಷ್ಟವಾಗಿ ಲಿಂಗಾಂಗವೆಂಬ ಭಿನ್ನಮಾರ್ಗ ತೊಲಗಿ ಚಿದಾರಣ್ಯವೆನಿಸುವ ಸರ್ವಾಚಾರ ಸಂಪತ್ತಿನಲ್ಲಿ ಸಮೀಪಸ್ತ

ವಾಗಲುಯೆಂಬುದೀಗ, ಹೊತ್ತುಹೋಗಿ ಹೊಲಬುದಪ್ಪಿ ಕಾಡ ಸೇರಲು ಎಂಬ ಶಬ್ದಕ್ಕರ್ಥ.

ಸಜ್ಜೀವನ ನಿಲವನಱಿಯಬೇಕೆಂದು ಸನ್ಮಾರ್ಗವಿಡಿದಾಚರಿಸಿದ ಶರಣನು ತಾನೆಂಬಱಿವಿನ ತೋರಿಕೆಯೇನೂ ಇಲ್ಲದ ಸದ್ರೂಪವಾದ ಗುರುವಿನ ಸದ್ಭಾವವೆಂಬ ಹಸ್ತದಲ್ಲಿಪ್ಪ ನಿಜಮುಕ್ತಿಸ್ವರೂಪವಾದ ಇಷ್ಟಲಿಂಗವ ಸುಜ್ಞಾನ ದೃಷ್ಟಿಯಿಂದ ನೋಡಿದನೆಂಬುದೀಗ, ಎತ್ತನರಸ ಹೋಗಿ ಒಬ್ಬ ಸತ್ತ ಹೆಣನ ಕೈಯಲೊಂದು ಮುತ್ತ ಕಂಡ ಎಂಬ ಶಬ್ದಕ್ಕರ್ಥ.

ಅಂತಪ್ಪ ಶರಣನು ತನಗೆ ಮಾತೃಸ್ಥಾನವಾದ ಚಿಚ್ಛಕ್ತಿ ಸ್ವರೂಪವೆನಿಸುವ ಗುರುತತ್ವದಲ್ಲಿ ಸಮರಸೈಕ್ಯವನೈದಿದನೆಂಬುದೀಗ, ಹೆತ್ತತಾಯ ಕೂಡಿಕೊಂಡನೆಂಬ ಶಬ್ದಕ್ಕರ್ಥ.

ನೀರು ಏರಿಯನು ಉಂಡು ವಾರುಧಿಯ ಸಾರಲಾಗಿ
ಆಱು ಮೂಱು ಒಂಭತ್ತು ತೋಟ ಕೆಟ್ಟಡೆ
ನಾರಿವಾಣದ ಸಸಿಯ ಬೇರಿನಲ್ಲಿ ಗೊನೆಯು ಮೂಡಿ
ಮೂಱುಕಣ್ಣಲಿ ರಸ ತೊಟ್ಟಡುತಲಿದೆ ॥ ೮ ॥

ಪರಮಾನಂದ ಜಲವು ದೇಹಭಾವವ ನಷ್ಟವಮಾಡಿ ಪರಮ ಶಿವಸಮುದ್ರವಪ್ಪ ಬ್ರಹ್ಮದಲ್ಲಿ ಸಮೀಪಸ್ಥವಾಗಲಾಗಿ ಎಂಬುಡೀಗ, ನೀರು ಏರಿಯನುಂಡು ವಾರುಧಿಯ ಸಾರಲಾಗಿ ಎಂಬ ಶಬ್ದಕ್ಕರ್ಥ.

ಅಱಿಷಡ್ವರ್ಗ ತನುತ್ರಯ ನವದ್ವಾರಂಗಳ ದುರ್ವರ್ತನೆ ನಷ್ಟವಾದರೆ ಎಂಬುದೀಗ, ಆಱು ಮೂಱು ಒಂಬತ್ತು ತೋಟ ಕೆಟ್ಟಡೆ ಎಂಬ ಶಬ್ದಾರ್ಥ.

ಆರಾಧಿಸಿ ಬೇಡಿದವರಿಗೆ ಇಷ್ಟಾರ್ಥ ಸಿದ್ಧಿಯಕೊಟ್ಟು ರಕ್ಷಿಸುವಲ್ಲಿ ಕಲ್ಪವೃಕ್ಷವು ದೋಷಾದಿಯನುಳ್ಳ ಇಷ್ಟಲಿಂಗವು ಶರಣನ ನಿಜಾಂತರಂಗದ ಮೂಲಜ್ಞಾನದಲ್ಲಿ ಮುಕ್ತಿಫಳಸ್ವರೂಪವಾದ ಪ್ರಾಣಲಿಂಗವಾಗಿ ಪ್ರಭಾವಿಸಿತ್ತೆಂಬುದೀಗ, ನಾರಿವಾಣದ ಸಸಿಯ ಬೇರಿನಲ್ಲಿ ಗೊನೆಯು ಮೂಡಿಯೆಂಬ ಶಬ್ದಕ್ಕರ್ಥ.

ಅಂತಪ್ಪ ಪ್ರಾಣಲಿಂಗವು ಕ್ರಿಯಾಪ್ರಕಾಶ, ಜ್ಞಾನಪ್ರಕಾಶ, ಮಹಾಜ್ಞಾನ ಪ್ರಕಾಶದಲ್ಲಿ ಲಿಂಗಾಂಗ ಸಮರಸಾನಂದ ಸುಭೋಗವೆನಿಸುವ ಚಿದಾಮೃತಸ್ವರೂಪವಾಗಿ ಕರೆಯಲಾಗುತ್ತಿದ್ದಿತೆಂಬುದೀಗ, ಮೂಱು ಕಣ್ಣಲಿ ರಸ ತೊಟ್ಟಡುತ್ತಿದೆ ಎಂಬ ಶಬ್ದಕ್ಕರ್ಥ.

ನಂಜು ಸಿಹಿಯಾದ ಕಾಲ ಬಂಜೆ ಮಗನ ಹಡದ ಕಾಲ
ರಂಜನೆಗಳೆಲ್ಲ ಉಡುಗಿ ಸುಟ್ಟ ಕಾಲವು
ಮುಂಜೂರ ಹಿಡಿದುಕೊಂಡು ಹಿಂದೆ ಮನೆಯ ಸುಟ್ಟುಕೊಂಡು ನಿ-
ರಂಜನ ಪರಮಸಿದ್ಧ ಗೊಹೇಶ್ವರಯ್ಯನ ॥ ೯ ॥

ಸಂಸಾರವಿಷಯರಸ ನಷ್ಟವಾಗಿ ಜ್ಞಾನಾಮೃತಸ್ವರೂಪವಾದ ದಿನದಲ್ಲಿ ಎಂಬುದೀಗ, ನಂಜು ಸಿಹಿಯಾದ ಕಾಲವೆಂಬ ಶಬ್ದಾನ್ವಯ.

ಜೀವಭಾವವಿಲ್ಲದ ಶರಣನೆಂಬ ಸತಿ ನಿಜಾನುಭಾವಾಂತರಂಗದಲ್ಲಿಪ್ಪ ಪ್ರಾಣ ಲಿಂಗವ ಗುರೂಪದೇಶದಿಂದ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡ ದಿನವಲ್ಲಿ ಎಂಬುದೀಗ, ಬಂಜೆ ಮಗನ ಹಡದ ಕಾಲವೆಂಬ ಶಬ್ದಕ್ಕರ್ಥ.

ಮಾಯಾಪ್ರಪಂಚು ಲಯವಾಗಿ ಚಿದಗ್ನಿಯಲ್ಲಿ ದಹನವಾದ ಸಮಯದಲ್ಲಿ ಎಂಬುದೀಗ, ರಂಜನೆಗಳೆಲ್ಲ ಉಡುಗಿ ಸುಟ್ಟ ಕಾಲವು ಎಂಬ ಶಬ್ದಕ್ಕರ್ಥ.

ಪ್ರಥಮವಾದ ಸ್ಥೂಲ ತನುಭಾವವ ತೊಲಗಿಸಿ ಬಳಿಕ ಸೂಕ್ಷ್ಮತನುವೆಂಬ ಗೃಹದ ಇಂದ್ರಿಯ ವಿಷಯ ವರ್ತನೆಯ ಮಹಾಜ್ಞಾನಾಗ್ನಿಯಲ್ಲಿ ದಗ್ಧವ ಮಾಡಿದ ನೆಂಬುದೀಗ, ಮುಂಜೂರ ಹಿಡಿಮಕೊಂಡು ಹಿಂದೆ ಮನೆಯ ಸುಟ್ಟುಕೊಂಡು ಎಂಬ ಶಬ್ದಾರ್ಥ.

ಪಾಪಲೇಪವಿಲ್ಲದ ಉತ್ಕೃಷ್ಟವೆನಿಸಿ ಪ್ರಕಟವಾದ ಸರ್ವರ ಹೃದಯಾಧಿಪತಿ ಯೆನಿಸುವ ಪರಶಿವನ ಶರಣ ತನ್ನ ಕರ, ಮನ, ಭಾವದಲ್ಲಿ ಪ್ರತ್ಯಕ್ಷವಾಗಿ ಅಱಿವ ನೆಂಬುದೀಗ, ನಿರಂಜನ ಪರಮಸಿದ್ಧ ಗೊಹೇಶ್ವರಯ್ಯನ ಕಂಡೆನೆಂಬ ಶಬ್ದಕ್ಕರ್ಥ.

ಸಂಪಾದನೆಯ ಮರಿಸಂಗಯ್ಯನವರು ಮಾಡಿದ ವ್ಯಾಖ್ಯಾನ
ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ.

ಕುವೆಂಪು ಅವರ 'ALIEN HARP'ದ ಕೆಲವು ಪ್ರಕೃತಿಗೀತೆಗಳು

● ಸಣ್ಣ ನಂಜೇಗೌಡ

ಆಧುನಿಕ ಕನ್ನಡಸಾಹಿತ್ಯವನ್ನು ಸಮೃದ್ಧಿಗೊಳಿಸಿದವರಲ್ಲಿ ಕುವೆಂಪು ಅವರು ಪ್ರಮುಖರು. ಅವರ ಸಾಹಿತ್ಯಕೃಷಿ ಬಹುಮುಖವಾದದ್ದು ಅಪಾರವಾದದ್ದು. ಕಥೆ, ಕಾವ್ಯ, ನಾಟಕ ಇತ್ಯಾದಿ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಸಿದ್ಧಿಹಸ್ತ ಪಡೆದಿರುವುದು ಇವರಲ್ಲಿ ಕಂಡುಬರುವ ವೈಶಿಷ್ಟ್ಯ.

ಕುವೆಂಪು ಅವರು ಬರೆಯಲು ಆರಂಭಿಸಿದ್ದು ಇಂಗ್ಲೀಷಿನಲ್ಲಿ. ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕವನಗಳ ರಾಶಿಯನ್ನೇ ಸೃಷ್ಟಿಸಿದರು. ಕುತೂಹಲದ ಸಂಗತಿಯೆಂದರೆ ಈ ಕವನಗಳನ್ನು ಓದಿ ಮೆಚ್ಚಿದ ಆಂಗ್ಲಪ್ರಾಧ್ಯಾಪಕರೊಬ್ಬರು ಕನ್ನಡದಲ್ಲಿ ಬರೆಯುವಂತೆ ಪ್ರೋತ್ಸಾಹಿಸಿದುದು. ಅಂದಿನಿಂದ ಆರಂಭವಾಯಿತು ಅವರ ಕನ್ನಡ ಕಾವ್ಯಧಾರೆ.

ಕುವೆಂಪು ಅವರ ಇಂಗ್ಲೀಷಗೀತೆಗಳು ಗುಣದಲ್ಲಿ ಹಾಗೂ ಸಂಖ್ಯೆಯಲ್ಲಿ ಗಣನೀಯವೆನಿಸಿವೆ. ಅವುಗಳಲ್ಲಿ ಕೆಲವನ್ನು ಹೆಕ್ಕಿ ಕುವೆಂಪುಟ್ರಸ್ಟವತಿಯಿಂದ ಪ್ರಕಟಿಸಿರುವ (೧೯೭೩) ಕವನಸಂಕಲನವೇ 'ALIEN HARP'. ಇದರಲ್ಲಿ ಬಹುಪಾಲು ಕವನಗಳು ಪ್ರಕೃತಿಯನ್ನು ಕುರಿತವುಗಳು. ಅವುಗಳಲ್ಲಿ ಕೆಲವನ್ನು ಮಾತ್ರ ವಿವೇಚಿಸುವುದು ಈ ಲೇಖನದ ಉದ್ದೇಶ. ಸಂಕಲನದ ಕವನಗಳೆಲ್ಲಾ ಉತ್ಕೃಷ್ಟ ಎಂದು ಹೇಳಲು ಬರುವುದಿಲ್ಲ. ಆದರೆ ಬಹುಪಾಲು ಕವಿಯ ಕವಿತಾಶಕ್ತಿಯನ್ನು, ಆಧ್ಯಾತ್ಮವನ್ನು ಹೇಳುವ ಚತುರತೆಯನ್ನು ವ್ಯಕ್ತಪಡಿಸುತ್ತವೆ. ಈ ಕವನಗಳನ್ನು ವಿಮರ್ಶಿಸುವದಕ್ಕಿಂತ ಅನುಭವಿಸುವುದು ಉಚಿತವೆನಿಸುತ್ತದೆ. ಆರಂಭದ ಬರವಣಿಗೆ ಯಾದ್ದರಿಂದ ಈ ಕವನಗಳನ್ನು ಅವರ ಅನಂತರದ ಕವನಗಳೊಂದಿಗೆ ಹೋಲಿಸುವುದೂ ತಪ್ಪಾಗುತ್ತದೆ; ಏಕೆಂದರೆ ಇವುಗಳಲ್ಲಿ ಕವಿಯ ಬೆಳವಣಿಗೆಯನ್ನು ಕಂಡುಕೊಳ್ಳುವ ಯತ್ನ ನಡೆದಿದೆ.

ಈ ಕವನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶವೆಂದರೆ ಆಂಗ್ಲಕವಿಗಳ ಪ್ರಭಾವ – ಅದರಲ್ಲೂ ರೋಮ್ಯಾಂಟಿಕ್ ಕವಿಗಳ ಪ್ರಭಾವ – ಗಾಢವಾದದ್ದು.

Wordsworthನು Daffodils ಹೂಗಳನ್ನು ನೋಡಿ ಮೈಮರೆತು ಹಾಡುವಂತೆ ಕುವೆಂಪು ಅವರು ಪ್ರಕೃತಿಯನ್ನು ಅಂತಶ್ಚಕ್ಷುವಿನಿಂದ ವೀಕ್ಷಿಸಿ ಅಂತರ್ಗತವಾಡಿ ಕೊಂಡು ಅದನ್ನೆ ಕಾವ್ಯಧಾರೆಯನ್ನಾಗಿಸಿರುವುದು ಈ ಪ್ರಕೃತಿಗೀತೆಗಳಲ್ಲಿ ಕಂಡು ಬರುತ್ತದೆ. ಅವರ ಕಾವ್ಯಕ್ಕೆ ಪ್ರೇರಣೆ ನಿಸರ್ಗ. ಅದೇ ಅವರ ಪ್ರಥಮ ಶಾಲೆ. ಅವರು ಪ್ರಕೃತಿಯನ್ನು "Thou art my School" ಎಂದು ಕರೆದಿದ್ದಾರೆ. 'Nature is the greatest of all teachers' ಎಂಬ ಇಂಗ್ಲೀಷ್ ವಾಕ್ಯ ವನ್ನು ಇಲ್ಲಿ ಉದ್ಧರಿಸಬಹುದು.

ಪ್ರಕೃತಿಸೌಂದರ್ಯವನ್ನು ಸವಿಯುವಲ್ಲಿ Intution ಪ್ರಮುಖವಾದದ್ದು. ಕವಿಯ ಅಂತರ್ಮುಖತ್ವ ವಿಶ್ವಸೃಷ್ಟಿಯೊಡನೆ ಬೆರೆತಾಗ ಉಂಟಾದ ಆನಂದವೇ ಕಾವ್ಯವಾಗಿ ಹರಿಯುತ್ತದೆ. ಇದನ್ನೇ "Spontneous over flow of powerful feelings" ಎನ್ನುತ್ತೇವೆ. ಇದರಿಂದ ಸಾಮಾನ್ಯವಸ್ತುಗಳೂ ಅಸಾಮಾನ್ಯವಾಗಿ ತೋರುತ್ತವೆ. ಕಾವ್ಯದ ಉದ್ದೇಶಗಳಲ್ಲಿ ಅದೂ ಒಂದು. Shelley ಹೇಳುವಂತೆ, "Poetry lifts up the veil from the hidden beauty of the world and makes familiar objects be as if they were not familiar." ಮುಂದುವರಿದು "poetry turns all things to loveliness" ಎಂದಿದ್ದಾನೆ.

Intution, Imagination, Introvertion- ಈ ಮೂರೂ ಕವಿಗೆ ಅಗತ್ಯ ವೆನಿಸುತ್ತವೆ. ಇವು ಸಮನಾಗಿ ಹಾಗೂ ಉಚಿತ ರೀತಿಯಲ್ಲಿ ಕೆಲಸಮಾಡಿದಾಗ ಬಹಿರಂಗವ್ಯಾಪಾರಗಳು ಮರೆಯಾಗಿ ಸುಂದರಕಾವ್ಯ ಹೊರಹೊಮ್ಮುತ್ತವೆ. "When once our heavenly guided soul shall climb then all this Earthy grossness quit" ಎಂದು John Milton ಹೇಳಿದ್ದಾನೆ. ಪ್ರಕೃತಿಯನ್ನು ಕುರಿತ ಕುವೆಂಪು ಅವರ ಇಂಗ್ಲೀಷ್ ಕವನಗಳಲ್ಲೂ ಇಂಥ 'Earthy grossness' ಸಂಪೂರ್ಣ ಮರೆಯಾಗಿರುವುದನ್ನು ಕಾಣಬಹುದು.

ಕುವೆಂಪು ಅವರು ಪ್ರಕೃತಿ ಆರಾಧಕರು ಮಾತ್ರವಲ್ಲ; ಅದರೊಡನೆ ಸಮೀಕರಿಸಿ ಕೊಂಡವರು. ಅದರಲ್ಲೇ ಶಾಂತಿಯನ್ನು ಅರಸಿ ಲೀನವಾಗುವ ಅವರ ಅದ್ವೈತ ಭಾವಗಳು 'ಸತ್ಯಂ ಶಿವಂ ಸುಂದರಂ' ಎಂಬ ದಿವ್ಯಮಂತ್ರದಿಂದ ಪ್ರಭಾವಿತ ವಾಗಿವೆ. ಈ ಬಗೆಯ ಅದ್ವೈತ ಭಾವನೆಯನ್ನೇ John keats ನು "Beauty is truth, truth's beauty that is all ye know on earth, and all ye need to know- ಎಂದಿದ್ದಾನೆ. ಸಾಮಾನ್ಯರಿಗೆ ಮಾನಿಸಮರ (ದಾರಿಹೋಕನಿಗೆ) ಕೇವಲ ನೆರಳನ್ನಷ್ಟೇ ನೀಡುವ ವಸ್ತುವಾಗಿ ಕಂಡರೆ ಅದು

ಕವಿಗೆ ಶಾಂತಿನಿಕೇತನವಾಗಿ ಪರಿಣಮಿಸಿದೆ; (home of peace) ಕಾವ್ಯಕ್ಕೆ ಉತ್ಕೃಷ್ಟ ವಸ್ತುವಾಗಿದೆ. "While I stand beneath these mango trees, where flowers blossming fresh and green" ಎಂದು ವರ್ಣಿಸುತ್ತಾ ಸೌಂದರ್ಯದಲ್ಲಿ ಲೀನವಾಗುವ ಅವರ ಯತ್ನ "kiss the Infinite at my heart, I feel that I am not a part of glory absolute but whole ! That may soul is all beings' soul !"(1.3. p–12) ಎಂಬ ಸಾಲುಗಳಲ್ಲಿ ಕಾಣುತ್ತದೆ. ಪ್ರಕೃತಿಯಲ್ಲಿ ಅಡಗಿರುವ ಅಜ್ಞಾತ ನಿನಾದವನ್ನು ಸವಿದ ಕವಿ ಎಲ್ಲದರಲ್ಲೂ ಚೇತನವನ್ನು ಕಂಡಿರುವುದು; ಸೃಷ್ಟಿಯನ್ನು ಉಚ್ಚ ಮಟ್ಟಕ್ಕೆ ಒಯ್ದಿರುವುದು "Your songs do echo in my bosom, for ye are Poets and I a blossom" (Lines. P. 12) ಎಂಬ ಸಾಲುಗಳಿಂದ ತಿಳಿಯುತ್ತದೆ. ಇಲ್ಲಿ ಕವಿಯು ಕವಿತೆಗೆ ಕಾರಣವಾದ ಮರವನ್ನೇ ಕವಿ ಎಂದು ಕರೆದಿರುವದು ಅರ್ಥಪೂರ್ಣವಾಗಿದೆ. ಆಂಗ್ಲಕವಿಯೊಬ್ಬ ದೈವಸೃಷ್ಟಿ ಉತ್ಕೃಷ್ಟತೆಯನ್ನು ಈ ರೀತಿ ಎತ್ತಿಹಿಡಿದಿದ್ದಾನೆ: "Poems are made by fools like me; But God can only create a tree." ಕುವೆಂಪು ಅವರೂ "Ye are Poets" ಎಂದು ಪ್ರಕೃತಿಯನ್ನು ಕರೆದಿರುವುದು; ಕರ್ತಾರನ ಕಮ್ಮಟವನ್ನು, ಅದರ ವಿಸ್ಮಯ ಸ್ವರೂಪವನ್ನು ವರ್ಣಿಸಿ ಆನಂದಿಸಿರುವುದೇ ಆಗಿದೆ. ಮೇ ತಿಂಗಳ ಅರುಣೋದಯುವ ಚೆಲುವನ್ನು ವರ್ಣಿಸುವಾಗ ಶಾಂತಿಯನ್ನು ಅರಸಿ ಅದರಲ್ಲೇ ಲೀನವಾಗುವ ಪ್ರಯತ್ನ ಈ ಪದ್ಯದಲ್ಲಿದೆ:

> "The very stillness chanted "Ōm peace, peace"....
> ....
> The earth, the hills, the Skies
> Melted before my eyes;
> And I in ecstasy upon the green
> Rolled merged in thoughts Sublime divine and
> Serene !" (16. p. 37)

"A good Symbol in the best argument" ಎಂಬ Emersonನ ಮಾತು ಯಾವುದೇ ಕಲಾತ್ಮಕ ಕೃತಿಯನ್ನು ವಿಮರ್ಶಿಸುವಾಗ ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಕವಿಯ ಶ್ರೇಷ್ಠತೆ ಅವನು ಬಳಸುವ ರೂಪಕಗಳನ್ನೂ ಅವಲಂಬಿಸಿರುತ್ತದೆ. ಹೇಳಬೇಕೆಂದುದನ್ನು ನೇರವಾಗಿ ಹೇಳಿದಾಗ ಅದು ಕಾವ್ಯವಾಗುವುದಿಲ್ಲ—ಅದು ಕಾವ್ಯದ ಉದ್ದೇಶವೂ ಅಲ್ಲ. ಯೋಗ್ಯ ರೂಪಕಗಳೊಂದಿಗೆ ಕಾವ್ಯ ಮೂಡಿದಾಗ ಶ್ರೇಷ್ಠವೆನಿಸುತ್ತದೆ. ಇದಕ್ಕೆ ಅಗತ್ಯ ಸಾಮಗ್ರಿ Imagination

"He who does not imagine in stronger and better lineaments, and in a stronger and better light than his pershing mortal eye can see, does not imagine at all" ಎಂಬುದು Blakeನ ಅಭಿಪ್ರಾಯ. ಕುವೆಂಪು ಅವರ ಇಂಗ್ಲೀಷ್ ಕವನಗಳಲ್ಲೂ ಯೋಗ್ಯ ರೂಪಕಗಳನ್ನು ಬಳಸಿರುವುದನ್ನು ಕಾಣುತ್ತೇವೆ. ತುಂಗಾನದಿಯನ್ನು ವರ್ಣಿಸುವಾಗ ನದಿಯನ್ನು "Sweet River-Nymph of dishevelled locks ಎಂದಿರುವುದು(1,p-9)," ವಿಶ್ವದ ಚೆಲುವಿಗೆ ಮತ್ತು ಅದರ ಚಲನೆಗೆ ಕಾರಣನಾದ ಬ್ರಹ್ಮನನ್ನು 'Musician King' (31, p. 56) ಎಂದಿರುವುದು ಔಚಿತ್ಯಪೂರ್ಣ ರೂಪಕಗಳ ಬಳಕೆಗೆ ಉದಾಹರಣೆಗಳಾಗಿವೆ. ತನ್ನ ಸಂಗೀತಶಕ್ತಿಯಿಂದ ಸಕಲಜೀವಿಗಳನ್ನೂ ತನ್ನೆಡೆಗೆ ಆಕರ್ಷಿಸಿ ಅವುಗಳ ಸೂತ್ರವನ್ನು ಹಿಡಿದು ಕುಣಿಸುವ ಬ್ರಹ್ಮನ ಅನಂತತೆಯನ್ನು "The Musician King" ಪದ್ಯದಲ್ಲಿ (31. p-56) ಈ ರೀತಿ ಹೇಳಿದ್ದಾರೆ :

"In the joy song of birds,
In the mute appeal of trees,
In the voice of audible heards
In the murmur of the breeze,
I've seen thee sit, I've heard thee sing,
O thou majestic Musician King ! "

'The Song of the Earth Flower' ಕವನವು Nature's beautyಯ ಔನ್ನತ್ಯವನ್ನು ಹೇಳುತ್ತದೆ. ಇಲ್ಲಿ mortal beauty ಹೊಂದಿರುವ maiden ಗಿಂತ ಹೂ ತನ್ನ ಸೌಂದರ್ಯ ಮತ್ತು ಉದ್ದೇಶಗಳನ್ನು ನಿರೂಪಿಸಿಕೊಳ್ಳುವುದರ ಮೂಲಕ ತನ್ನ ಹೆಚ್ಚುಳವನ್ನು ಸ್ಥಾಪಿಸಿಕೊಂಡಿದೆ. ಹೂವು maiden ಗೆ ಈ ರೀತಿ ಹೇಳುತ್ತದೆ :

"I am sweeter than you, maid,
For I descend from heaven
To deck the spring-time glade
For the given and the given. (9. p-23)

"The self and the universe" 'In the Mangogrove Near Chamundi Hill' ಮತ್ತು 'Music' ಕವನಗಳಲ್ಲಿ ಅದ್ವೈತಭಾವ ಯಥೇಚ್ಛವಾಗಿ ಕಾಣಿಸಿಕೊಂಡಿದೆ. ವಿಶ್ವಾತ್ಮ ಮತ್ತು ಕವಿಯ ಅಂತರಾತ್ಮ ಇವು ಒಂದಾಗಿರುವುದನ್ನು ಈ ಪದ್ಯಗಳಲ್ಲಿ ಕಾಣಬಹುದು.

"....."I feel, far mightier than the sky
In whose vast dome all orbs and systems shine
And move incessant, I am, as a Lover;
For I am one with thee, Mother Divine (28.p-52)

The earth melts before my eye;
Nothing doth remain !
Grim void ! and again
In my day-dream
"Eternity !" I Scream
Enter I eternity (30. p-55)

ಇದೇ ಭಾವನೆಗಳು 'Music' ಕವನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ :

"The universe becomes a song divine
And I become the song !....
....
and That and This :
All mingle; and bliss kisses agony"

"The play Divine" (15. p. 34) ಮತ್ತು "On the way to Chamundi Hills" (17. pp-38-9) ಆತ್ಮೋನ್ನತಿ ಬಗ್ಗೆ ಹೇಳುವ ಕವನಗಳು. ಮನುಷ್ಯನ ಜೀವನಕ್ಕೆ ನಿರ್ದಿಷ್ಟ ಗುರಿಯೊಂದು ಇದೆ; ಅದನ್ನು ಮುಟ್ಟುವುದರಿಂದ 'ಏಕತೆ' (oneness)ಯನ್ನು ಕಾಣಬಹುದು. ಆದರೆ ಮನುಷ್ಯನ ಕೆಲವು ದೋಷಯುಕ್ತ ಗುಣಗಳಿಂದಾಗಿ 'ಏಕತೆ'ಯಿಂದ ಉಂಟಾಗುವ ಆನಂದವನ್ನು ಸವಿಯಲಾರ ಎಂಬುದು ಮೇಲಿನ ಪದ್ಯಗಳಲ್ಲಿ ಉಕ್ತವಾಗಿದೆ. ಆತ್ಮೋನ್ನತಿಯೆಡೆಗೆ ಧಾವಿಸುವಾಗ ಮಾರ್ಗದಲ್ಲಿ ಕೆಲವು ವಸ್ತುಗಳಿಂದ ಆಕರ್ಷಿತವಾಗುವುದುಂಟು; ಅವುಗಳಿಂದ ಗುರಿ ಕಾಣಲು ಅಡಚಣೆಯಾಗುವುದುಂಟು. ಆದರೆ ಅವುಗಳನ್ನು ಆನಂದಿಸಿದರೂ ಅಂಟಿಕೊಳ್ಳದೆ ಮುಂದುವರೆಯಬೇಕು ಎಂದು ಹೇಳುವ ಕವಿವಾಣಿ ಇದು.

"Green grass and fruits and flowers,
Gay birds on leafy bowers
Beside the way allure :
But yet proceed and be pure
All these are but Her joy
And Her we want, dear boy !" (17. p-38)

ಮನುಷ್ಯನ ಶ್ರೇಷ್ಠಗುರಿಯ ಬಗ್ಗೆ ಎಚ್ಚರಿಸುವ ಮೇಲಿನ ಭಾವನೆ Robert Forstನ ಪ್ರಸಿದ್ಧ ಸಾಲುಗಳಲ್ಲಿ ವ್ಯಕ್ತವಾಗಿದೆ: "Woods are lovely dark and deep, but I have promised to keep; And miles to go before I sleep; And miles to go before I sleep......"

ಬಾಲ್ಯಸ್ನೇಹಿತರು, ಅವರೊಡನೆ ಪ್ರಕೃತಿ ಮಡಿಲಲ್ಲಿ ಕಳೆದ ದಿನಗಳನ್ನು ನೆನೆದು ಮರುಗುವುದು "Sadly and sweetly one by one they come And Pass like phantomas, silet, strange and dumb" ಎಂಬ ಸಾಲುಗಳಲ್ಲಿದೆ. "Recollections" (44. p-84), "The friends of the Native Home" ಈ ಕವನಗಳೂ ಇದೇ ಭಾವನೆಯಿಂದ ತುಂಬಿವೆ. ಈ ಬಗೆಯ ಕವನಗಳು ಬಹುಮಟ್ಟಿಗೆ Charles lamb ನ "The old familiar faces ಮತ್ತು Thomas Hood ನ " Past and present " ಕವನಗಳನ್ನು ಹೋಲುತ್ತವೆ. Thomas Hood ನು ಬಾಲ್ಯವನ್ನು ನೆನೆದು ಈ ರೀತಿ ಮರುಗುತ್ತಾನೆ: "To know I'm farther off from Heaven, Than when I was a boy."

ಹಲವು ದೃಷ್ಟಿಯಲ್ಲಿ ಈ ಸಂಕಲನದ ಗೀತೆಗಳು ಮಹತ್ತರವೆನಿಸಿವೆ. ಕವಿಯ ಬೆಳವಣಿಗೆಯ ಹಂತವನ್ನು ನಿರ್ದೇಶಿಸುತ್ತವೆಯಲ್ಲದೆ, ಆ ಹಂತದಲ್ಲಿ ಕಾವ್ಯ ಪ್ರಚೋದನೆಗೆ ಪ್ರಭಾವವಿತ್ತಿರುವ ಆಂಗ್ಲಕವಿಗಳ ಕವನಗಳೊಡನೆ ಹೋಲಿಸಲು ಸಾಧ್ಯವಾಗುತ್ತದೆ. ಪ್ರಕೃತಿವರ್ಣನೆಯು ಹಿಂದೆ ಆಧ್ಯಾತ್ಮ ಪ್ರತಿಪಾದನೆಯನ್ನೇ ಪ್ರಮುಖ ಗುರಿಯನ್ನಾಗಿಸಿಕೊಂಡಿರುವುದು ಈ ಕವನಗಳಲ್ಲಿ ಕಂಡುಬರುವ ವಿಶೇಷ. Thomas Hardeyಯಂತೆ- ಕೆಲವು ಕಡೆ ಅವನಿಗೂ ಮಿಗಿಲಾಗಿ- ಪ್ರಕೃತಿಯನ್ನು ಸಶಕ್ತ ಮಾಧ್ಯಮವನ್ನಾಗಿ ಬಳಸಿರುವುದನ್ನು ಕಾವ್ಯ, ಕಾದಂಬರಿ, ನಾಟಕ- ಎಲ್ಲ ಪ್ರಕಾರಗಳಲ್ಲೂ ಗುರುತಿಸಬಹುದು. Wessex ಪ್ರದೇಶ ಹಾರ್ಡಿಗೆ ಪ್ರಭಾವ ಬೀರಿದಂತೆ ಸುಂದರ ಮಲೆನಾಡು ಕುವೆಂಪು ಅವರ ಕಾವ್ಯಪ್ರಭೆಗೆ ಕಾರಣವಾಗಿದೆ: ವಿಶಿಷ್ಟ ಬಗೆಯ ಸಾಹಿತ್ಯಕೊಡುಗೆಗೆ ಕಾರಣವಾಗಿದೆ.

ಈ ವರ್ಷ

● ದೊಡ್ಡರಂಗೇಗೌಡ

ಈ ವರ್ಷ, ಹೋದ ವರ್ಷದ ಹಾಗಲ್ಲ;
ಬೆಂಗಳೂರು ಬಿಹಾರವೇನಲ್ಲ
ಆದರೂ ಅಲ್ಲಿನಂತೆ ಇಲ್ಲಿಯೂ ಎಲ್ಲ
ಅಹಿತ ಸ್ಫೋಟಿಸದಿದ್ದರೂ
ಒಂದೇ ರಾತ್ರಿಯಲ್ಲಿ ಎಲ್ಲೆಲ್ಲೂ ನೀರು
ನೀರೇ ನೀರು.
ಈ ವರ್ಷ ನೆಟ್ಟಗೆ ನಡೆದರೆ
ತಾಯಿ ಅವನಿ ಮೈಯಲ್ಲಿ ಫಲ ಪಲ್ಲವಿಸಿ
ನಕ್ಕು ರೈತರಿಗಾನಂದ ಸೂರೆ;
ಈ ವರ್ಷ ಕೊಂಚ ಮುನಿದರೂ
ಅಳಬೇಕು ಎಲ್ಲರೂ !
ಶಪಿಸುತ್ತ ಕೂಡಬೇಕಾಗುತ್ತೆ
ಯಾಕಾದರೂ ಈ ವರ್ಷ ಜೋರಾಯ್ತು
ಎಂದೆಲ್ಲ ಮನಸಲ್ಲೇ ಮುಳ್ಳು ಮುರಿದು
ಜಿಗುಪ್ಸೆ ಅಸಹ್ಯ ಜಿನುಗುತ್ತೆ;
ಈ ವರ್ಷ ಭೂಪಾಲ
ಏನೆಲ್ಲ ದರ್ಬಾರು ನಡೆಸುತ್ತಾನೆಂದು
ಯಾರೂ ಹೇಳಬರುವುದಿಲ್ಲ.
ಈಗ ಚಂಡಿ ಹಿಡಿದವನು
ಕಳೆದೆರಡು ಇಸವಿಗಳಲ್ಲಿ
ಮಾಯವಾಗಿದ್ದ. ಈ ನೆಲದಲ್ಲಿ
ಜೀವ ಜೀವಿಗಳಲ್ಲಿ
ಎಮಕೆ ತೇಲಿದ್ದ ಕಂಡವನು-ನಾನು !
ಈ ವರ್ಷ ಹಾಗಲ್ಲ
ರಾಯಚೂರಲ್ಲೂ ಇವನ ಪ್ರತಾಪ
ಇವನ ಅತಿ ಕೋಪಕ್ಕೆ
ಒಂದೇ ? ಎರಡೇ ? ನೂರಾರು ಶಾಪ.

● ●

ಪುರುಷವ್ರತ : ಮರುವಿವೇಚನೆ

● ಎಸ್. ಎಸ್. ಹಿರೇಮಠ

ಪ್ರೊ. ಎಂ. ವಿ. ಸೀತಾರಾಮಯ್ಯನವರು ಪುರುಷವ್ರತದ ಬಗ್ಗೆ ವಿವೇಚನೆ ಮಾಡುತ್ತ "..... ಪುರುಷವ್ರತ ಎಂದರೆ (i) ಆಜೀವಪರ್ಯಂತ ನೈಷ್ಠಿಕ ಬ್ರಹ್ಮಚರ್ಯೆ (=ಮಹಾವ್ರತ) (ii) ವಿವಾಹಪೂರ್ವದ (ವೈದಿಕ ಧರ್ಮವಾದರೆ ಪ್ರಥಮಾಶ್ರಮದ) ಬ್ರಹ್ಮಚರ್ಯೆ (iii) ವಿವಾಹವಾದ ಮೇಲೆ ದಾಂಪತ್ಯಜೀವನ ದಲ್ಲಿ (ಗೃಹಸ್ಥರು; ಜೈನ ಶ್ರಾವಕರು) ವ್ರತರೂಪದಲ್ಲಿ ಕೈಕೊಳ್ಳುವ ಬ್ರಹ್ಮಚರ್ಯೆ (=ಜೈನ ಅಣುವ್ರತದ ಅಂಗ) ಎಂಬುದಾಗಿ ಬ್ರಹ್ಮಚರ್ಯದ ಯಾವ ಪ್ರಕಾರ ವಾದರೂ ಆಗಬಹುದು"[೧] ಎಂದು ಕನ್ನಡ ಕಾವ್ಯ, ಶಾಸನಗಳ ಆಧಾರಗಳಿಂದ ನಿರ್ಣಯಿಸಿದ್ದಾರೆ. ಡಾ. ಆ. ನೇ. ಉಪಾಧ್ಯ ಅವರು ಪ್ರೊ. ಎಂ. ವಿ. ಸೀತಾರಾಮಯ್ಯ ನವರು ಸೂಚಿಸಿದ ಅರ್ಥದ ಬಗ್ಗೆ ಮೆಚ್ಚಿಕೆ, ಒಪ್ಪಿಗೆ ಸೂಚಿಸಿ ಬಂಧುವರ್ಮನ ಜೀವಸಂಬೋಧನದಲ್ಲಿ ಈ ಶಬ್ದ ಮೂರು ಸಲ ಬಳಕೆಯಾಗಿರುವದನ್ನು ತೋರಿಸಿ, ಈ ಗ್ರಂಥಕ್ಕೆ ಮೂಲವೆಂದು ಭಾವಿಸಿರುವ 'ವರಾಂಗ ಚರಿತೆ' (ಜಟಾಸಿಂಹನಂದಿ ಕವಿಯ) ಯ ಸಂದರ್ಭಗಳ ಜತೆ ತುಲನೆ ಮಾಡಿ, "ಬಂಧುವರ್ಮನ 'ಪುರುಷವ್ರತ' ಪ್ರಯೋಗಕ್ಕೆ ಬದಲಿ ಜಟಾಸಿಂಹನಂದಿಯಲ್ಲಿ 'ಸ್ವದಾರಸಂತೋಷರತಿವ್ರತ' 'ಸ್ವದಾರಸಂತೋಷವ್ರತ' ಮತ್ತು 'ಗೃಹೀತದಾರವ್ರತ' ಈ ಪ್ರಯೋಗಗಳಿವೆ" ಎಂದೂ; "ಪುರುಷವ್ರತದ ಅರ್ಥದ ಬಗ್ಗೆ ಇನ್ನು ಸಂದೇಹವಿಲ್ಲ. ಸ್ತ್ರೀಯರ ಸಂಬಂಧದಲ್ಲಿ ಅದು ಪಾತಿವ್ರತ್ಯ ಮತ್ತು ಪುರುಷರ ಸಂಬಂಧದಲ್ಲಿ ಅದು ಸ್ವದಾರ ಸಂತೋಷ– ಅಂದರೆ ವೈವಾಹಿಕ ಜೀವನದ ಪತಿ–ಪತ್ನಿಯರಲ್ಲಿ ಪರಸ್ಪರ ಏಕನಿಷ್ಠೆಯೆ ಪುರುಷವ್ರತವು" ಎಂದು ಹೇಳಿದ್ದಾರೆ.[೨]

ಸಾಂಸ್ಕೃತಿಕ ದೃಷ್ಟಿಯಿಂದ ಮುಖ್ಯವಾದ[೩] ಈ ಶಬ್ದದ ಬಗ್ಗೆ ಬಂದ ಲೇಖನ ಗಳು ಇವೆರಡೇ. ಈ ವಿದ್ವಾಂಸರ ವಿವೇಚನೆಯಲ್ಲಿಯ ಅವಸರದ ತೀರ್ಮಾನ,

---

೧. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ೫-೨, ಎಂ. ವಿ. ಸೀ. "ಪುರುಷವ್ರತ ಮತ್ತು ಕವಿರಾಜ ಮಾರ್ಗ" ಪುಟ ೪೧. ಈ ಲೇಖನದುದ್ದಕ್ಕೂ ಈ ಉಲ್ಲೇಖವನ್ನು "ಎಂ. ವಿ. ಸೀ, ಅದೇ" ಎಂದು ಸೂಚಿಸಲಾಗಿದೆ.

೨. ಕ. ಸಾ. ಪ. ಪತ್ರಿಕೆ ೫೯-೧. ಡಾ. ಆ. ನೇ. ಉಪಾಧ್ಯ "ಪುರುಷವ್ರತದ ನಿಶ್ಚಿತ ಅರ್ಥ."

೩. ಎಂ. ವಿ. ಸೀ. ಅದೇ ಪುಟ ೪೨.

ಅಸ್ಪಷ್ಟತೆ, ತಪ್ಪು ಗ್ರಹಿಕೆಗಳು ಈ ಮರುವಿವೇಚನೆಗೆ ತೊಡಗಿಸಿವೆ. ಇಲ್ಲಿ ಪುರುಷವ್ರತದ ನಿರ್ದಿಷ್ಟವಾದ ಅರ್ಥ ಹುಡುಕಲು ಯತ್ನಿಸಿದೆ.

ಪ್ರೊ. ಎಂ. ವಿ. ಸೀತಾರಾಮಯ್ಯನವರು ಪುರುಷವ್ರತ ಶಬ್ದವು ಬಂದಿರುವ ಕನ್ನಡ ಕಾವ್ಯಸಂದರ್ಭಗಳನ್ನು ವಿವರವಾಗಿ ಚರ್ಚಿಸುವಾಗ ಬಸವೇಶ್ವರರ ಒಂದು ವಚನವನ್ನು ಕೂಲಂಕಷವಾಗಿ ವಿವೇಚಿಸಿಲ್ಲವೆಂದೆನಿಸುತ್ತದೆ.[೪] ಪುರುಷವ್ರತದ ಬಗ್ಗೆ ಮಹತ್ವದ ವಿವರಣೆಯನ್ನು ಕೊಡುವ ಈ ವಚನವು ಹೀಗಿದೆ:

ಮುನ್ನಿನ ಕಲಿ ವೀರ ಧೀರರು ಕಾದಿದ ರಣಗಳನು
ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ
ಆ ದಳವಿದಿರಾದಲ್ಲಿ ಬಿರಿದುಪಚಾರಿಸಿ ಕಾದಿ ತೋಱಲು ಬಾರದು.
ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ
ಪರಿಪರಿಯಲು ಬಣ್ಣಿಸಲು ಬಹುದಲ್ಲದೆ
ಪುರುಷನಿರ್ವಾಣಕ್ಕುರಿವಗ್ನಿಯ
ಬಂದು ಹೊಕ್ಕು ತೋಱಲುಬಾರದು.
ಮುನ್ನಿನ ಪುರಾತನರೆಲ್ಲರು ತನುಮನಧನವನ್ನಿತ್ತು
ಮಾಡಿ, ನೀಡಿ ಲಿಂಗವ ಕೂಡಿದ ಪರಿಗಳನು
ಅನುಭಾವದಲರ್ಥೈಸಿ ಹೇಳಬಹುದಲ್ಲದೆ
ಮಾಡಿ ನೀಡಿ ತೋಱಲುಬಾರದು.
ಇಂತೀ ಅರೆಬಿರಿದಿನ ಬಂಟರು ಪುರುಷವ್ರತಿಯರು, ಪುರಾತನರು
ಬಱಿಯ ಮಾತನಾಡಿ ಹೊರಗೆ ಮೆಱೆವರಲ್ಲ !
ಪರೀಕ್ಷೆಯುಂಟಾಗಿಯಿದ್ದಡೆ ಒಳಗಣವರ ಹೆಸರ ಹಿಡಿದ.
ಪರಿಪರಿಯಲಿ ಹೊಗಳುವರು
ಶರೀರ ಅರ್ಥ ಪ್ರಾಣ ಗುರುಲಿಂಗಜಂಗಮಕೆ ಪರೀಕ್ಷೆಯುಂಟಾಗಿಯೆ
ಆತ ಮಹೇಶ್ವರ ಪುರಾತವಳಿ ಎಂಬ
ಪರಮ ಬಂಧುಗಳಾತನ ನೆನೆನೆನೆದು ಬದುಕುವರು.
ಇಂತೀ ಅನುಭಾವದ ಓದಿನ ಅಕ್ಷರಾಭ್ಯಾಸವ
ಸಾಧಿಸಿ ತರ್ಕಿಸಿ ನಿಂದಿಸಲಾಗದು.
ಕೂಡಲಸಂಗನಶರಣರಿಗಲ್ಲದನುಭಾವವಿಲ್ಲ[೫].

ಈ ವಚನದಲ್ಲಿ ಸರಿಯಾಗಿ ಅರ್ಥವಾಗದ ಕೆಲ ಅಂಶಗಳಿವೆ. ಆದರೂ ಈ ವಚನವನ್ನು ಹೀಗೆ ಸರಳಾನುವಾದಿಸಬಹುದು:

---

೪. ಎಂ. ವಿ. ಸೀ. ಅದೇ. ಪುಟ-೪೯. ಅಡಿಟಿಪ್ಪಣಿ ನೋಡಿ.

೫. ಡಾ. ಆರ್. ಸಿ. ಹಿರೇಮಠ ಅವರು ಸಂಪಾದಿಸಿದ "ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು" (೧೯೬೮) ೬೭೮ ನೆಯ ವಚನ.

ಪೂರ್ವದ ಕಲಿವೀರಧೀರರು ಕಾದಾಡಿದ ಯುದ್ಧಗಳನ್ನು ಅನೇಕ ರೀತಿಯಿಂದ ವರ್ಣಿಸಬಹುದು. ಆದರೆ ಸಾಕ್ಷಾತ್ ಸೈನ್ಯವು ಎದುರಾದಾಗ 'ಬಿರಿದುಪಚಾರಿಸಿ' (ಬರಿಯ ಉಪಚಾರಕ್ಕಾಗಿ ?) ಕಾದಾಡಿ ತೋರಿಸಲು ಬರುವುದಿಲ್ಲ. ಪೂರ್ವದ ಪುರುಷವ್ರತಿಯರು (ಪುರುಷವ್ರತಧಾರಿಗಳು[೬]) ಪರಸ್ಪರ ಏಕನಿಷ್ಠೆಯಿಂದಿರುವುದನ್ನು (ಒಲಿಸಿದ ಆಯತವ), ಅನೇಕ ರೀತಿಯಿಂದ ವರ್ಣಿಸಿ ಹೇಳಬಹುದು. ಆದರೆ ಪುರುಷ ನಿರ್ವಾಣಕ್ಕೆ ಉರಿವ ಅಗ್ನಿಯನ್ನು ಬಂದು ಹೊಕ್ಕು ತೋರಿಸಲು ಬರುವದಿಲ್ಲ. ಮೊದಲಿನ ಪುರಾತನರೆಲ್ಲರು ತಮ್ಮ ತನುಮನಧನವನ್ನು ತ್ಯಾಗಮಾಡಿ ಲಿಂಗವನ್ನು ಕೂಡಿದ ರೀತಿಯನ್ನು ಅನುಭಾವದಿಂದ ಅರ್ಥೈಸಿ ಹೇಳಬಹುದಲ್ಲದೆ ಅದನ್ನೆ ಮಾಡಿ ನೀಡಿ ತೋರಿಸಲು ಬರುವದಿಲ್ಲ. ಹೀಗೆ ಅರೆಜೀವಿದಿನ ಬಂಟರು (?), ಪುರುಷವ್ರತಿಯರು, ಪುರಾತನರು ಬರಿಯ ಮಾತನಾಡಿ ಹೊರಗೆ ಮೆರೆಯುವಂಥವರಲ್ಲ(ಡಂಭಾಚಾರಿಗಳಲ್ಲ). ಪರೀಕ್ಷೆಗೆ ನಿಲ್ಲಬೇಕಾದ ಪ್ರಸಂಗ ಬಂದರೆ ಒಳಗಿನವರ ಹೆಸರು ಹಿಡಿದು (?) ಪರಿಪರಿಯಿಂದ ಹೊಗಳುವರು. ಶರೀರ, ಹಣ, ಪ್ರಾಣಗಳನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸಿದಾಗಲೇ ಅವರು ಮಾಹೇಶ್ವರ ಪುರಾತವಳಿ ಎಂಬ (?), ಇಂಥ ಶರಣನ ಬಂಧುಗಳು ಆತನ ನೆನೆದು ಬದುಕುವರು. ಹೀಗೆ ಅನುಭಾವದ ಓದಿನ ಅಕ್ಷರಾಭ್ಯಾಸವನ್ನು ಸಾಧಿಸಿ ತರ್ಕಮಾಡಿ ನಿಂದಿಸಬಾರದು. ಕೂಡಲಸಂಗನಶರಣರನ್ನು ಬಿಟ್ಟರೆ ಅನ್ಯರಿಗೆ ಅನುಭಾವವು ಇಲ್ಲ.

ಈ ವಚನದಲ್ಲಿ ಅನೇಕ ಸಂಶಯಗಳಿದ್ದರೂ, ಪುರುಷವ್ರತದ ಬಗ್ಗೆ ಇಲ್ಲಿಯ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು:

೧. ಪುರಾತನರ, ಕಲಿವೀರ, ಧೀರರ ಜತೆ ಪುರುಷವ್ರತಿಯನ್ನು ಹೋಲಿಸಿದುದರಿಂದ, ಪುರುಷವ್ರತಿಯರ ಸ್ಥಾನ ಆಗಿನ ಸಮಾಜದಲ್ಲಿ ಪ್ರತಿಷ್ಠೆಯುದಾಗಿತ್ತೆಂಬು ತಿಳಿಯುತ್ತದೆ.

೨. ಯುದ್ಧಸಾಮರ್ಥ್ಯವು ಕಲಿವೀರ ಧೀರರ; ತನುಮನಧನಗಳ ಅರ್ಪಣೆಯು ಪುರಾತನರ ಯೋಗ್ಯತೆಯನ್ನು ಹೇಳುವ ಅಳತೆಗೋಲುಗಳಾದರೆ ''ಒಲಿಸಿದ ಆಯತವು'[೭] ಪುರುಷವ್ರತಿಯರ ಸಾಮರ್ಥ್ಯ ಮತ್ತು ಯೋಗ್ಯತೆಯನ್ನು ಹೇಳುವ ಅಳತೆಗೋಲು. ಒಲಿಸಿದ ಆಯತವೆಂದರೆ ಅರಸ ಸೇವಕ ಸಂಬಂಧದಲ್ಲಿ

೬. ಎಂ. ವಿ. ಸೀ. ಅದೇ. ಪುಟ-೪೮.

೭. ' ಒಲಿಸಿದ ಆಯತ' ಶಿ. ಶಿ. ಬಸವನಾಳರು ಸಂಪಾದಿಸಿದ 'ಬಸವಣ್ಣನವರ ವಚನ'ದಲ್ಲಿ ಈ ಪಾಠಾಂತರವಿದೆ. ಪುಟ ೧೭೭.

ಗಂಡ–ಹೆಂಡತಿ ಸಂಬಂಧದಲ್ಲಿ, ನಡೆ–ನುಡಿಗಳ ಸಂಬಂಧದಲ್ಲಿ ಪರಸ್ಪರ ನಿಷ್ಠೆಯಿಂದಿರು ಎಂದು ಹೇಳಬಹುದೆ ? [೮]

೩. ಬಸವಣ್ಣನವರ ಕಾಲದಲ್ಲಿ ಅಥವಾ ಅದಕ್ಕೂ ಹಿಂದೆ ಪುರುಷವ್ರತಿಯರು ಪುರುಷನಿರ್ವಾಣಕ್ಕಾಗಿ ಅಗ್ನಿಯನ್ನು ಹೊಗುತ್ತಿದ್ದ ಸಂಪ್ರದಾಯವಿತ್ತು. ಮುನ್ನಿನ ಪುರಾತನರಿಗೆ ತನುಮನಧನ ತ್ಯಾಗವು, ಮುನ್ನಿನ ಕಲಿವೀರರಿಗೆ ಕಾದುವದು ಅನಿವಾರ್ಯವಾಗಿರುವಂತೆ [ಗಮನಿಸಿ "ಮುನ್ನಿನ"–ಭೂತಕಾಲ ಸೂಚಕ] ಮುನ್ನಿನ ಪುರುಷವ್ರತಿಯರು ಅಗ್ನಿ ಹೊಗುವದು ಅನಿವಾರ್ಯವಾಗಿದ್ದಿರಬಹುದು. ಕ್ರಿ. ಶ. ಸು. ೧೧೩೪ ರ ಶಿವಮೊಗ್ಗ ಶಾಸನದಲ್ಲಿ, "ದೇವಿಯಕ್ಕಂ ಪುರುಷವ್ರತಮಂ ಕೈಕೊಂಡು" ತನ್ನ ಗಂಡ ಮಡಿದ ನಂತರ ಮಡಿಯುತ್ತಾಳೆ.[೯] ಈ ಹೇಳಿಕೆ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ. ವೀರನಿಷ್ಠೆ ಮತ್ತು ತ್ಯಾಗ ಮೂವರಿಗೂ [ಕಲಿವೀರಧೀರ, ಅನುಭಾವಿ, ಪುರುಷವ್ರತಿ] ಸಂಬಂಧಿಸಿದ ಸಮಾನಾಂಶಗಳು.[೧೦]

೪. "ಬರಿಯ ಮಾತನಾಡಿ ಹೊರಗೆ ಮೆಱೆವವರಲ್ಲ" ಎಂಬ ಮಾತು ಕಲಿವೀರ ಧೀರರಂತೆ, ಪುರುಷವ್ರತಿಯರೂ 'ವೀರಪ್ರತಿಜ್ಞೆ' ಮಾಡುತ್ತಿರಬಹುದು ಎಂಬುದನ್ನು ಸೂಚಿಸುತ್ತದೆ; ಅನುಭಾವಿಗಳು ವೀರಶೈವ ದೀಕ್ಷೆಯನ್ನು ಪಡೆದವರಾಗಿರುವಂತೆ.

ತಮ್ಮ ಲೇಖನದ ಅಡಿಟಿಪ್ಪಣಿಯೊಂದರಲ್ಲಿ ಪ್ರೊ. ಎಂ. ವಿ. ಸೀತಾರಾಮಯ್ಯನವರು ಈ ವಚನಕ್ಕೆ ವಿವರಣೆ ಬರೆಯುತ್ತ "ಇಲ್ಲಿಯ ಪುರುಷವ್ರತ ಎಂದರೆ ಭೀಷ್ಮರು ಕೈಕೊಂಡಂತಹ 'ಆಮರಣಾಂತ ಬ್ರಹ್ಮಚರ್ಯ' ಎಂಬುದೇ ಬಸವೇಶ್ವರರ ಪ್ರಯೋಗದ ಅಭಿಪ್ರಾಯವಿರಬಹುದು. ಇಂಥ ಪುರುಷನಿರ್ವಾಣವನ್ನು ಹೊಂದಬಯಸುವ

೮. ಒಲಿಸಿಕೊಂಡ ಯೋಗ್ಯತೆ, ಹಿರಿಮೆ ಇರಬಹುದೆ ? ಈ ಮಾತಲ್ಲದೆ, ಇಲ್ಲಿಯ ಇನ್ನೂ ಹಲವಾರು ಅಂಶಗಳಿಗಾಗಿ ಡಾ. ಎಂ. ಎಂ. ಕಲಬುರ್ಗಿಯವರಿಗೆ ಋಣಿಯಾಗಿದ್ದೇನೆ.

೯. ಈ ಶಾಸನ ನನಗೆ ನೋಡಲು ಸಿಕ್ಕಲಿಲ್ಲ. ಡಾ. ಎಂ. ಚಿದಾನಂದಮೂರ್ತಿಗಳು ತಮ್ಮ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ"ದಲ್ಲಿ ಉಲ್ಲೇಖಿಸಿದ್ದಾರೆ. ಪುಟ ೩೧೭.

೧೦. ಇಲ್ಲಿ ಬರುವ 'ಪುರುಷನಿರ್ವಾಣ' ಅಂದರೇನು ? ಪುರುಷವ್ರತಕ್ಕೂ ಇದಕ್ಕೂ ಸಂಬಂಧವಿದ್ದಂತಿದೆ. ವೀರನು ಅಥವಾ ಸತಿಯು ಮಡಿದ ತಮ್ಮ ಒಡೆಯರ ಮುಕ್ತಿಗಾಗಿ ಅಗ್ನಿ ಹೊಗುತ್ತಿದ್ದರೆ ? ಅಥವಾ ತಮ್ಮ ಮುಕ್ತಿಗಾಗಿಯೆ ? ಅಥವಾ ಕರ್ತವ್ಯಪಾಲನೆಯ ದೃಷ್ಟಿಯಿಂದಲೊ ? ['ನಿರ್ವಾಣ' ಶಬ್ದ ವೈದಿಕರಲ್ಲೂ ಇದೆ.] ಹೋಲಿಸಿ—"ತಾವು ತಾವು ಕೊಂಡ ವ್ರತಕ್ಕೆ ತಾವೇ ಮುಕ್ತರು" (ಪುಟ ೫೦೦); "ವ್ರತಾಚಾರವೆಂಬುದು ತನಗೊ ತನ್ನ ಸತಿಗೊ ಇದಿರ ಭೂತ ಹಿತಕೊ ?" ಪುಟ ೫೧೮ : "ಶಿವಶರಣೆಯರ ವಚನಗಳು" ಸಂ. ಡಾ. ಆರ್. ಸಿ. ಹಿರೇಮಠ.

ಪುರುಷವ್ರತಿಗಳು ಯೋಗಿಗಳು.[೧೧] ಯೋಗಿಗಳು ಗುಹಾಪ್ರವೇಶ ಮಾಡುವಂತೆ, ಜಲಸಮಾಧಿ ಹೊಂದುವಂತೆ 'ಪುರುಷನಿರ್ವಾಣಕ್ಕಿರುವ ಅಗ್ನಿಯ ಬಂದು (ಹುಗುವ) ಅಂದರೆ ಅಗ್ನಿಪ್ರವೇಶ ಮಾಡುವ ವ್ರತಾಂಗದ ಆಚರಣೆ ಬಸವೇಶ್ವರರ ಕಾಲದಲ್ಲಿಯೋ ಅದಕ್ಕೆ ಹಿಂದೆಯೋ ಇದ್ದಿರಬಹುದು......". "ಪ್ರಚಲಿತವಾಗಿರುವ ಅರ್ಥದಲ್ಲಿ ಅಲ್ಲದೆ ಬೇರೆಯ ಅರ್ಥದಲ್ಲಿ ಅವರು ಶಬ್ದವನ್ನು ಪ್ರಯೋಗಿಸಿದ್ದಾರೆ ಎಂದು ಭಾವಿಸಿದರೆ ಆ ಅರ್ಥವೇನು ? ಅಂತೂ ಸಮಸ್ಯೆ ತೊಡಕಿನದು. ಪುರುಷವ್ರತಿ ಎಂದರೆ 'ಬ್ರಹ್ಮಚರ್ಯ ಮಹಾವ್ರತವನ್ನು ಧರಿಸಿದವನು' ಎಂದೇ ತಾತ್ಪೂರ್ತಿಕವಾಗಿ ನಾವು ಗ್ರಹಿಸುವ ಅರ್ಥ"[೧೨] ಎಂದು ನಿರ್ಣಯಿಸಿದ್ದಾರೆ. ಇಲ್ಲಿಯು ಈ ತೊಡಕಿನ ಸಮಸ್ಯೆಯನ್ನು ಶ್ರೀಯುತರು ತೇಲಿಸಿಬಿಟ್ಟಿದ್ದಾರೆಂಬುದು ಸ್ಪಷ್ಟವಾಗುತ್ತದೆ [ಪುರುಷವ್ರತದ ಅರ್ಥಕ್ಕೆ ಮುಂದೆ ನೋಡಿ].

ಕವಿರಾಜಮಾರ್ಗದಲ್ಲಿ ಮೂರು ಕಡೆಗೆ ಬರುವ ಈ ಶಬ್ದದ ವಿವರಣೆ ಕೊಡುವಾಗಲೂ ಪ್ರೊ. ಎಂ. ವಿ. ಸೀತಾರಾಮಯ್ಯನವರು ಸಮರ್ಪಕ ಅರ್ಥ ಹೇಳಿದ್ದಾರೆ.

೧. ಮೂರನೆಯ ಪರಿಚ್ಛೇದದ ೧೬೩ ನೆಯ ಪದ್ಯ ("ಕರ್ಣಾಟಕ ಕವಿರಾಜಮಾರ್ಗಂ" ಮದ್ರಾಸ ವಿಶ್ವವಿದ್ಯಾಲಯದ ಪ್ರಕಟನೆ) ವ್ಯಾಜಸ್ತುತ್ಯಾಲಂಕಾರಕ್ಕೆ ಕೊಟ್ಟ ಉದಾಹರಣೆ

ಸತತಂ ಭುಜಂಗಭೋಗಾ। ಶ್ರಿತೆ ನಿನ್ನ ಕಳತ್ರಮೀಧರಾವಧು ಮತ್ತೆಂ॥
ತತಿಶಯದ ಮಹಾಪುರುಷ। ವ್ರತಮಂ ತಾಳ್ದುವಳುದಾರಚರಿತ ಕ್ರಮದಿಂ॥

ಇದನ್ನು ಹೀಗೆ ಸರಳಾನುವಾದಿಸಬಹುದು:

ಯಾವಾಗಲೂ ವಿಟರಲ್ಲಿ ಭೋಗಾಶ್ರಯ ಪಡೆದವಳು ನಿನ್ನ ಹೆಂಡತಿ ಈ ಭೂಮಿಯೆಂಬ ಹೆಣ್ಣು. ಅತಿಶಯವಾದ ಉನ್ನತ ಚಾರಿತ್ರ್ಯಕ್ರಮದಿಂದ (ಪಾತಿವ್ರತ್ಯ ಗುಣದಿಂದ ?) ಮಹಾಪುರುಷವ್ರತವನ್ನು (ಸಂಯಮದ ಏಕನಿಷ್ಠಾವ್ರತವನ್ನು) ಅದು ಹೇಗೆ ತಾಳಿಯಾಳು ?

ಈ ಮೊದಲು ಕವಿರಾಜಮಾರ್ಗದ ಪದ್ಯಗಳಿಗೆ ಬರೆದ ಟಿಪ್ಪಣೆಯನ್ನು[೧೩] ತಾವೇ ತಿದ್ದಿಕೊಳ್ಳುತ್ತ ಪ್ರೊ. ಎಂ. ವಿ. ಸೀತಾರಾಮಯ್ಯನವರು "ಉದಾರ ಚರಿತ್ರ

೧೧. ಹೀಗೆಂದು ಹೇಳುವದು ನನಗೆ ಸರಿಯೆನಿಸುವದಿಲ್ಲ. ಪುರುಷವ್ರತಿಯರು ಯೋಗಿಗಳಾಗಿರುವ ಯಾವ ಉದಾಹರಣೆಯೂ ಸಿಕ್ಕಿಲ್ಲ. ಪ್ರೊ. ಎಂ. ವೀ. ಸೀ. ಅವರ ಇಲ್ಲಿಯ ಅಭಿಪ್ರಾಯಗಳು ಬರಿಯ ಊಹೆ ಎಂಬುದನ್ನು ಮರೆಯಬಾರದು.

೧೨. ಎಂ. ವಿ. ಸೀ. ಅದೇ. ಪುಟ ೩೮-೪೯, ಅಡಿಟಿಪ್ಪಣೆ.

೧೩ "ಶ್ರೀ ವಿಜಯ ಕೃತ ಕವಿರಾಜಮಾರ್ಗಂ" ಸಂ: ಪ್ರೊ. ಎಂ. ವಿ. ಸೀತಾರಾಮಯ್ಯ. ಪುಟ-೩೩೧.

ಕ್ರಮದಿಂ' ಎನ್ನುವದಕ್ಕೂ 'ನಿನ್ನ ಔದಾರ್ಯದಿಂದ ನೀನು ಅವಳಿಗೆ ಆಶ್ರಯಕೊಟ್ಟ ಕಾರ್ಯರೀತಿಯಿಂದ' ಎಂದು ಹೆಚ್ಚು ಸಮರ್ಪಕವಾದ ಅರ್ಥಮಾಡಬಹುದು."[೧೪] ಎಂದೂ ಪುರುಷವ್ರತಕ್ಕೆ "ಪರಪುರುಷ ಪರಿಗ್ರಹತ್ಯಾಗ (=ಅಣುವ್ರತ) ವನ್ನೇ ಮಾಡಲಾರದವಳು, ಮಹಾಬ್ರಹ್ಮಚರ್ಯವ್ರತ (= ಮಹಾಪುರುಷವ್ರತ, ಪುರುಷ ಮಾತ್ರ ಪರಿತ್ಯಾಗವೆಂಬ ಮಹಾವ್ರತ)ವನ್ನು ಹೇಗೆ ಧರಿಸಬಲ್ಲಳು."[೧೫] ಎಂದು ಅರ್ಥ ಹೇಳಿದ್ದಾನೆ. ಈ ರೀತಿ ಎಳೆದು ತಂದು ನೃಪತುಂಗನಿಗೆ ಸಂಬಂಧಿಸಿ ಅರ್ಥ ಹಚ್ಚುವದು, ಅಸಹಜವೂ ಅಸಮಂಜಸವೂ ಆಗಿದೆ.

ಪುರುಷವ್ರತವನ್ನು ಜೈನ ಪಾರಿಭಾಷಿಕವೆಂದು ಕಲ್ಪನೆ ಮಾಡಿಕೊಂಡೇ ಪ್ರೊ. ಎಂ. ವಿ. ಸೀತಾರಾಮಯ್ಯನವರು, ಎಲ್ಲ ಸಂದರ್ಭಗಳಲ್ಲೂ ಅರ್ಥಹೇಳಲು ಹೋಗಿದ್ದಾರೆ. ಪುರುಷವ್ರತವನ್ನು ಜೈನರ ಅಣುವ್ರತದ ಅಥವಾ ಮಹಾವ್ರತದ ಜತೆಗೆ ಜೋಡಿಸಿ ಹೇಳುವದಕ್ಕೆ 'ಜೀವಸಂಬೋಧನೆ'ಯ ಅನಿಶ್ಚಿತ ಆಧಾರ ಬಿಟ್ಟರೆ, ಎಲ್ಲಿಯೂ ಆಧಾರವಿಲ್ಲ. ಇವರಿಂದ ಪುರುಷವ್ರತಕ್ಕೆ ಜೈನ ಪರಿಭಾಷಾವಲಯವನ್ನು ಕಲ್ಪಿಸುವುದು ತಪ್ಪೆನಿಸುತ್ತದೆ.

"ಬ್ರಹ್ಮಚರ್ಯ ಎಂಬ ವೈದಿಕ ಧರ್ಮದ ಮಾತಿನ ಪರಿಕಲ್ಪನೆಗೆ ಜೈನ ದೃಷ್ಟಿಗೆ ಸುಗ್ರಾಹ್ಯವೆನಿಸದೆ[೧೬] ಅಬ್ರಹ್ಮವಿರತಿವ್ರತ (=ಬ್ರಹ್ಮಚರ್ಯ) ಶಬ್ದಕ್ಕೆ ಪರ್ಯಾಯವಾಗಿ 'ಪುರುಷವ್ರತ' ಶಬ್ದ ಕನ್ನಡ ನಾಡಿನಲ್ಲಿ ಬಹುಶಃ ಜೈನರಿಂದಲೇ ಸೃಷ್ಟಿಯಾಗಿ ವ್ಯಾಪಕವಾಗಿ ಬಳಕೆಗೆ ಬಂದಿರಬೇಕು. ಬಳಕೆಯಲ್ಲಿಯ ಪದವನ್ನು (ಬಸವೇಶ್ವರ ಮುಂತಾದ) ಜೈನೇತರರೂ ಸ್ವೀಕರಿಸಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ."[೧೭] ಎಂಬ ಮಾತು ಆಧಾರರಹಿತ.[೧೮] ಜೈನ ಕವಿಗಳಿಂದಲೇ ಪ್ರಾರಂಭವಾಗಿರುವ ಕನ್ನಡ ಸಾಹಿತ್ಯದ ಆರಂಭದ ಕಾವ್ಯಗಳಲ್ಲಿ ಜೈನಪಾರಿಭಾಷಿಕ ಮಾತ್ರ ಬರಬೇಕೆಂದಿಲ್ಲ ಜೈನರು ವೈದಿಕರ ರಾಮಾಯಣ, ಮಹಾಭಾರತಗಳನ್ನು ಸ್ವೀಕರಿಸಿಲ್ಲವೆ ?

---

೧೪. ಎಂ. ವಿ. ಸೀ. ಅದೇ. ಪುಟ-೨೮.

೧೫. ಎಂ. ವಿ. ಸೀ, ಅದೇ.

೧೬. ಈ ಹೇಳಿಕೆಯು ಸಮಂಜಸವಲ್ಲ. "ಅಂತು ಬ್ರಹ್ಮಚರ್ಯಮೆಂಬುದು ದೇಶವ್ರತಂ. ಆವ ವ್ರತಕ್ಕಮುತ್ಕೃಷ್ಟಂ" (ಜೀವಸಂಬೋಧನೆ, ಮದ್ರಾಸ ಗೌರ್ನಮೆಂಟ ಓರಿಯಂಟಲ್ ಸೀರೀಜ. ಪುಟ-೧೩೯) ಎಂಬ ಮಾತಾಗಲೀ "ಪತ್ತುಂ ತೆಱದ ಬ್ರಹ್ಮದಿಂ ತುತ್ತತುದಿಯೊಳಾಪತ್ತುವಡಿಸುವ ಕರ್ಮಂಗಳ್ ಪತ್ತುಗುಂ" (ಅದೇ ಪುಟ ೧೩೮) ಹೋಲಿಸಿ.

೧೭. ಎಂ. ವಿ. ಸೀ. ಅದೇ. ಪುಟ-೪೧, ೪೨.

೧೮. ಡಾ. ಆ. ನೇ. ಉಪಾಧ್ಯೆ ಅವರೂ ಕೂಡ ಈ ಶಬ್ದವನ್ನು ಜೈನ ಪರಿಭಾಷೆಗೆ ಸಂಬಂಧಿಸ ಲೆತ್ನಿಸಿದ್ದಾರೆ. ನೋಡಿ: ಕ. ಸಾ. ಪ. ಪ. ೫೯–೧. "ಪುರುಷವ್ರತದ ನಿಶ್ಚಿತ ಅರ್ಥ".

ಕನ್ನಡನಾಡಿನಲ್ಲಿ ಸಾರ್ವತ್ರಿಕವಾಗಿ ಬಳಕೆಯಲ್ಲಿದ್ದ ಈ ವಿಶಿಷ್ಟಪದವನ್ನು ಶ್ರೀವಿಜಯ, ಪಂಪ, ಶಿವಕೋಟ್ಯಾಚಾರ್ಯ, ಬಸವಣ್ಣ ಮುಂತಾದವರು ತಮಗೆ ಬೇಕಾದೆಡೆಗಳಲ್ಲಿ ಬಳಸಿಕೊಂಡಿದ್ದಾರೆ ಅಷ್ಟೆ.

೨. ಕವಿರಾಜಮಾರ್ಗದಲ್ಲಿ ವೀರರಸಕ್ಕೆ ಉದಾಹರಣೆ ಕೊಡುವಾಗ ಈ ಪದ್ಯ ವಿದೆ :

> ರಾವಣನಂ ಕೊಂದು ಜಯ । ಶ್ರೀವಧುವಂ ತಾಳ್ದಿ ಮುಯ್ವಿನೊಳ್ ವರಸೀತಾ
> ದೇವತೆಯಂ ತರ್ಪನ್ನೆಗ । ಮೋವದೆ ಪುರುಷವ್ರತೋಚಿತಂ ವೀರರಸಂ ॥
>
> [ಮದ್ರಾಸ ಪ್ರಕಟನೆ ೩-೧೯೦]

ರಾವಣನನ್ನು ಕೊಂದು ಜಯಶ್ರೀ ಹೆಣ್ಣನ್ನು ಭುಜದಲ್ಲಿ ಹೊಂದಿ ಶ್ರೇಷ್ಠಳಾದ ಸೀತಾ ದೇವತೆಯನ್ನು ತರುವವರೆಗೆ ಸಂರಕ್ಷಿಸದೆ (=ಓವದೆ) ? ಪುರುಷವ್ರತ ಉಚಿತವು ವೀರರಸವು ಅಥವಾ ಪುರುಷವ್ರತದಂತೆ ಶ್ರೇಷ್ಠವು ವೀರರಸವು, ಅಥವಾ ವೀರರಸವು ಪುರುಷವ್ರತೋಚಿತವು, ಅಥವಾ ಪಾತಿವ್ರತ್ಯ ಏಕನಿಷ್ಠೆಯುಳ್ಳ ಸೀತಾದೇವಿಯನ್ನು ತರುವವರೆಗೆ ಪುರುಷವ್ರತವನ್ನು ಸಂರಕ್ಷಿಸಿಕೊಂಡಿದ್ದ ರಾಮನದು ವೀರರಸ ನಿರೂಪಣೆಗೆ ಉಚಿತ ಸಂದರ್ಭ. ಹೀಗೆ ಅನಿರ್ದಿಷ್ಟವಾದ, ಅಸ್ಪಷ್ಟಾರ್ಥ ಬರುವ ಈ ಪದ್ಯ ದಲ್ಲಿಯು 'ಪುರುಷವ್ರತ'ಕ್ಕೆ ಸಂಯಮದ 'ಏಕನಿಷ್ಠಾವ್ರತ' ಎಂದು ಅರ್ಥ ಹೇಳ ಬಹುದು. "ಪುರುಷವ್ರತೋಚಿತವಾದ ವೀರರಸವು ಪಾಲನೀಯ (=ಓವುದೇ)" ಎಂದು ಪ್ರೊ. ಎಂ. ವಿ. ಸೀತಾರಾಮಯ್ಯನವರು ಹೇಳಿದ ಅರ್ಥ. ಅವರು "ಸೀತಾಪಹರಣವಾದ ಮೇಲೆ ಅನೇಕ ಪತ್ನಿಸಮನ್ವಯವಾದ ರಾಮ ಪೌರು ಷೋತ್ಕರ್ಷಕ್ಕಾಗಿ 'ಪುರುಷವ್ರತ'ವನ್ನು ಕೈಕೊಂಡದ್ದು ಅರ್ಥವತ್ತಾಗಿ ಕಾಣುತ್ತದೆ." ಎಂದಿದ್ದಾರೆ.[೧೯] ಸೀತೆಯನ್ನು ಕಳೆದುಕೊಂಡ ಮೇಲೆ ಜೈನರಾಮನಿಗೆ **ಅರಣ್ಯದಲ್ಲಿ** ಅನೇಕ ಪತ್ನಿಯರು ಎಲ್ಲಿದ್ದರು ?

ಈ ಮೇಲಿನ ಪದ್ಯದಿಂದ ತಿಳಿದುಬರುವ ಅಂಶಗಳಿವು :

ಅ. ಸೀತೆಯನ್ನು ರಾವಣನಿಂದ ತರುವವರೆಗೆ ಮಾತ್ರ ರಾಮ ಪುರುಷವ್ರತ ದಿಂದಿದ್ದನು. ಪುರುಷವ್ರತವು ಒಂದು ನಿರ್ದಿಷ್ಟಕಾಲದವರೆಗೋ ನಿರ್ದಿಷ್ಟ ಫಲಪ್ರಾಪ್ತಿ ಯಾಗುವವರೆಗೋ ಅಥವಾ ಅನಿರ್ದಿಷ್ಟ ಕಾಲದವರೆಗೋ (ಜೀವನವಿಡೀ-ಭೀಷ್ಮನ ಸಂದರ್ಭದಲ್ಲಿ) ಹಿಡಿಯಬಹುದಾದ ವ್ರತವಾಗಿತ್ತು.

ಬ. ಸ್ತ್ರೀ ಪುರುಷರಿಬ್ಬರಿಗೂ ಸಂಬಂಧಿಸಿದ ವ್ರತವಾಗಿತ್ತು.

---

೧೯ ಎಂ. ವಿ. ಸೀ, ಅದೇ. ಪುಟ-೬೦.

೫. ವೀರರಸವನ್ನು ಹೇಳುವ ಸಂದರ್ಭದಲ್ಲಿ 'ಪುರುಷವ್ರತ' ಶಬ್ದ ಬಳಕೆ ಯಾವುದು ಇಲ್ಲಿಯ ಗಮನಾರ್ಹ ಅಂಶ. ಬಸವಣ್ಣನವರ ವಚನದಲ್ಲಿ ಕಲಿವೀರ ಧೀರರ ಜತೆ ಪುರುಷವ್ರತಿಯರನ್ನು ಹೋಲಿಸಿದುದನ್ನು ಸ್ಮರಿಸಿಕೊಳ್ಳಬೇಕು.

೬. ಕವಿರಾಜಮಾರ್ಗದಲ್ಲಿ ಕೊನೆಗೆ ಸಭಾಸದನ ವರ್ಣನೆಯಲ್ಲಿ ಬರುವ ಪದ್ಯ ವಿದ್ವಾಂಸರಿಗೆ ಅರ್ಥ ಬಿಟ್ಟುಕೊಟ್ಟಿಲ್ಲ[೨೦]. ಇದಕ್ಕೆ ಕಾರಣ ಈ ಪದ್ಯದಲ್ಲಿ ಬರುವ 'ನಿರಗೀಡಿತ' ಎಂಬ ಶಬ್ದ. ಆದರೆ ಇದನ್ನು 'ತಾನಿರದೆ ಈಡಿತ' ಎಂದು -'ದೆ' ಎಂಬ ಊಹಿತ ಪಾಠವಿಟ್ಟುಕೊಂಡರೆ ಅರ್ಥವು ಸುಲಭವಾಗುವದು. 'ದೀ' ಅಕ್ಷರ ಸಾದೃಶ ದಿಂದ 'ನೀ' ಆಗಿರಬಹುದು. ಆದರೆ ಹೀಗೆ ಹೇಳಲು ಪಾಠಾಂತರ ಆಧಾರ ಮಾತ್ರ ಇಲ್ಲ.

ಕೂಡೆ ಪೇೞ್ದ ನುತಕಾವ್ಯಮನಿಂತಭಿಮಾನಿ ತಾ(ಂ) ನಿ(ರ)
ಗೀಡಿತ ಮಹಾಪುರುಷವ್ರತ ನಿಶ್ಚಿತಂ
ಕೂಡದಂತೆ ಪೆಱರೊ ಮೆಚ್ಚಿ ನೋಳ್ಕೆಜಿನಪ್ಪೊಡಂ
ನೋಡದಂ ಕುಱಿತಾವನಮೇನುಮಂ ॥

(ಮದ್ರಾಸ ಪ್ರಕಟನೆ ೩-೨೨೪)

ಇದನ್ನು, "ಕೂಡೆ ಪೇೞ್ದ ನುತ ಕಾವ್ಯಮನಿಂತಭಿಮಾನಿ ತಾನಿರ
ದೀಡಿತ ಮಹಾಪುರುಷವ್ರತ ನಿಶ್ಚಿತಂ"

ಎಂದು ಇಟ್ಟುಕೊಂಡರೆ 'ಕೂಡೆ ಹೇಳಿದ ಪ್ರಸಿದ್ಧ ಕಾವ್ಯವನ್ನು ("ಕವಿರಾಜಮಾರ್ಗ ವೆಂದೇ ಗ್ರಹಿಸಬೇಕು" ಪ್ರೊ ಎಂ. ವಿ. ಸೀ.) ಇಂತು ಅಭಿಮಾನಿಯಾದ ತಾನು ಬಿಟ್ಟು ಬಿಡದೆ (=ಇರದೆ) ಸ್ತುತ್ಯ (=ಈಡಿತ-'ಕಿಟೆಲ್') ಪುರುಷವ್ರತ ನಿಶ್ಚಿತನು'. (ಇಲ್ಲಿ ಪುರುಷವ್ರತಕ್ಕೆ ಮಹಾ ಸಂಯಮದ ಏಕನಿಷ್ಠಾವ್ರತ ಎಂದರ್ಥ) ಎಂದು ಅರ್ಥವಾಗುವದು. ಪದ್ಯದ ಉಳಿದೆರಡು ಸಾಲು 'ಸಂಯಮದ ಏಕನಿಷ್ಠಾವ್ರತ' ಎಂಬ ಅರ್ಥಕ್ಕೆ ಪುಷ್ಟಿಯನ್ನೂ ವಿವರಣೆಯನ್ನೂ ಕೊಡುತ್ತವೆ.

ವಡ್ಡಾರಾಧನೆಯಲ್ಲಿ ಬಳಕೆಯಾದ ಈ ಶಬ್ದಕ್ಕೆ 'ಬ್ರಹ್ಮಚರ್ಯ' ಅಥವಾ 'ಸಂಭೋಗವರ್ಜನೆ' ಅರ್ಥವೆಂದು ಪ್ರೊ. ಎಂ. ವಿ. ಸೀತಾರಾಮಯ್ಯನವರ ಅಭಿಪ್ರಾಯ.[೨೧] ಆದರೆ ಗಂಡನ ಮೇಲಿನ ಬೇಸರದಿಂದ ಜಿನದತ್ತೆ ಗಂಡನನ್ನು ಕೂಡಿರ

೨೦. "ಇಲ್ಲಿ ಪ್ರಕರಣ ಬಲದಿಂದ ಅರ್ಥ ಹೇಳಲು ಅವಕಾಶವಿಲ್ಲ. ಈ ವರೆಗಿನ ವಿವೇಚನೆಯ ಪರಿಣಾಮವಾಗಿ ಸ್ಪಷ್ಟವಾಗಿರುವ ಅರ್ಥವನ್ನೇ ಈ ಸಂದರ್ಭಕ್ಕೆ ಅನ್ವಯಿಸುವದು ಅಸಂಗತವಾದುದು." ಪ್ರೊ. ಎಂ. ವಿ. ಸೀ. ಅದೇ. ಪುಟ ೪೧.

೨೧. ಎಂ. ವಿ. ಸೀ. ಅದೇ.

ಲಾರನೆಂದು 'ಸಂಯಮದ ನಿಷ್ಠಾವ್ರತ' (=ಪುರುಷವ್ರತ) ವನ್ನು ಕೈಕೊಂಡಳೆಂಬ ಅರ್ಥ ಹೇಳುವದು ಸರಿಯೆನಿಸುತ್ತದೆ. ಬೇಟೆಯಿಂದ ತಿರುಗಿ ಬಂದ ಅರಸ ಜಿನದತ್ತಿಯನ್ನು ಮತ್ತೆ ಸ್ವೀಕರಿಸಲು ಇಚ್ಛಿಸಿದಾಗ ಆಕೆ ಬಹುಶಃ ತನ್ನ ವ್ರತವನ್ನು ಬಿಡುತ್ತಾಳೆ. ಇದಕ್ಕಾಗಿ ಅರಸ "ಅರಸಿಯಂ **ದಾನಸನ್ಮಾನಾದಿಗಳಿಂ ಪೂಜಿಸಿ**ಯಾಕೆಯೊಳಿಷ್ಟ ವಿಷಯ ಕಾಮಭೋಗ" ಗಳನ್ನು ಮತ್ತೆ ಅನುಭವಿಸತೊಡಗಿದನು.[೨೨] ಇತರ ವ್ರತಗಳಲ್ಲಿರುವಂತೆ 'ಪುರುಷವ್ರತ' ವನ್ನು ಬಿಡಲಿಕ್ಕೂ ಒಂದು ನಿರ್ದಿಷ್ಟವಾದ ಕ್ರಮವಿತ್ತು* ಎಂಬುದು ಇದರಿಂದ ಸ್ಪಷ್ಟವಾಗುತ್ತದೆ (ದಾನ ಸನ್ಮಾನಾದಿಗಳಿಂದ ಪೂಜಿಸುವದು).

ಭೀಷ್ಮನ ಸಂದರ್ಭದಲ್ಲಿ ಪಂಪ ಬಳಸಿರುವ ಈ ಶಬ್ದದ ಬಗ್ಗೆ "ಆಜೀವ ಬ್ರಹ್ಮಚರ್ಯವ್ರತ ಅಥವಾ ನೈಷ್ಠಿಕ ಬ್ರಹ್ಮಚರ್ಯ ಎಂದೇ ಅರ್ಥ ಮಾಡಬೇಕು" ಎಂದಿದ್ದಾರೆ ಪ್ರೊ. ಎಂ. ವಿ. ಸೀತಾರಾಮಯ್ಯನವರು.[೨೩]

೧. ಧರಾಭಾರ ವಹಿಸಲು ಕೇಳಿಕೊಂಡ ಸತ್ಯವತಿಗೆ ಭೀಷ್ಮನು ಹೇಳುತ್ತಾನೆ:

ಕಿಡುಗುಮೆ ರಾಜ್ಯಂ ರಾಜ್ಯದ । ತೊಡರ್ಪರ್ದೇವಾಱ್ತೆ ಬಾಱ್ತೆ
ನನ್ನಿಯ ನುಡಿಯಂ ।
ಕಿಡೆ ನೆಗೞ್ತೆ ನಾನುಮೆರಡಂ । ನುಡಿದೊಡೆ ಹರಿಹರ ಹಿರಣ್ಯಗರ್ಭರ್ ನಗರೇ ॥[೨೪]

"ಚಂದ್ರನು ತನ್ನ ಶೀತಲವಾದ ಕಾಂತಿಯನ್ನು ಬಿಡಲಿ, ಸೂರ್ಯ ತನ್ನ ಕಿರಣಗಳ ಉಷ್ಣತೆಯನ್ನು ಕಳೆದುಕೊಳ್ಳಲಿ, ಸಮುದ್ರ ತನ್ನ ಆಳವನ್ನೆ ಕಳೆದುಕೊಳ್ಳಲಿ, ಭೂಮಿ ತನ್ನ ಭಾರವನ್ನು ಕಳೆದುಕೊಳ್ಳಲಿ, ಕುಲಪರ್ವತ ತನ್ನ ಔನ್ನತ್ಯ ಬಿಸುಡಲಿ ಆದರೆ ತಾಯಿ, ನಾನು ನನ್ನ 'ಪುರುಷವ್ರತ' ಒಂದನ್ನು ಬಿಡಲಾರೆ."[೨೫]

---

೨೨. ಕಥೆಯ ಎಲ್ಲ ವಿವರಣೆಗೆ ನೋಡಿ—ವಡ್ಡಾರಾಧನೆ. ಸಂ. ಡಾ. ಡಿ. ಎಲ್. ಎನ್. ಪುಟ ೧೧೨ ಇತ್ಯಾದಿ. 'ಪುರುಷವ್ರತ' ಕೈಕೊಂಡಾಗ ಜಿನದತ್ತೆ ಗರ್ಭಿಣಿಯಾಗಿದ್ದಳು. ಮಸಣದಲ್ಲಿ ಆಕೆಯನ್ನು ಬಿಟ್ಟ ನಂತರ ಅಲ್ಲಿಯೇ ಆಕೆ ಗಂಡುಕೂಸು ಹಡೆದಳು. ಶುಭ ಕನಸು ಕಂಡು ಅರಸ ಆಕೆಯನ್ನು ಮಸಣದಿಂದ ಕರೆಯಿಸಿಕೊಂಡ.

* 'ವ್ರತದ ವರಣ (ತೊಡುವದು) ಮತ್ತು ವರ್ಜನ(ಬಿಡುವದು)'—ನೋಡಿ: ಎಂ. ವಿ. ಸೀ. ಅದೇ. ಪುಟ-೩೧. ಅಡಿಟಿಪ್ಪಣಿ.

೨೩ ಎಂ. ವಿ. ಸೀ. ಅದೇ. ಪುಟ-೩೩.

೨೪. ಪಂಪಭಾರತ (ಮೈಸೂರು ವಿಶ್ವವಿದ್ಯಾಲಯದ ಪ್ರಕಟನೆ) ೧–೮೨.

೨೫. ಅದೇ. ೧-೮೩ ರ ಪದ್ಯದ ಸರಳಾನುವಾದ.

"ವ" ಎಂದು **ತನ್ನ ನುಡಿದ ಪ್ರತಿಜ್ಞೆ**ಯನೇಗೆಯ್ದುಂ ತಪ್ಪಿದನಿಲ್ಲ—

ಕಂ ॥ ರಂಗತರಂಗ ವಾರ್ಧಿಜ । ಯುಂಗಳ್ ತಂತಮ್ಮ
ಮೇರೆಯಂ ದಾಂಟುವೊಡಂ ।
ಗಾಂಗೇಯನುಂ ಪ್ರತಿಜ್ಞಾ । ಗಾಂಗೇಯನುವೊರ್ವೆ **ನುಡಿದುದಂ**
ತಪ್ಪುವರೇ ॥ ೨೬

ವ॥ ಅಂತಚಲಿತ ಪ್ರತಿಜ್ಞಾರೂಢನಾದ ಗಾಂಗೇಯನನೇಗೆಯ್ದು ಮಾತಂಬಡೆಸಲಾರದೆ......೨೭"

ಪಂಪನು ವರ್ಣಿಸಿದ ಈ ಪ್ರಸಂಗವನ್ನು ಇಷ್ಟು ವಿವರವಾಗಿ ಉದ್ಧರಿಸಲು ಕಾರಣವೆಂದರೆ ಭೀಷ್ಮನು ದಾಸರಾಜನೆದುರು ಮಾಡಿದ ಪ್ರತಿಜ್ಞೆಗೆ (ಪೂಣ್ದ ಮಾತಿಗೆ) ಸಂಯಮದ ವೀರನಿಷ್ಠೆಗೆ (=ಪುರುಷವ್ರತ) ಬದ್ಧನಾಗಿರುವದನ್ನು ಒತ್ತಿ ಹೇಳುತ್ತಿದ್ದಾನೆಯೆ ಹೊರತು 'ಬ್ರಹ್ಮಚರ್ಯವನ್ನು ಉಳಿಸಿಕೊಳ್ಳುವ') ಎಂಬ ಸೀಮಿತಾರ್ಥವನ್ನಷ್ಟೇ ಹೇಳುತ್ತಿಲ್ಲ ಎಂಬುದನ್ನು ತೋರಿಸಲಿಕ್ಕೆ. ಪಂಪ ಈ ಸಂದರ್ಭದಲ್ಲಿ ಭೀಷ್ಮನ 'ನುಡಿದ ಪ್ರತಿಜ್ಞೆ'ಗೆ ಒತ್ತುಕೊಟ್ಟು ಹೇಳಿದ್ದಾನೆಯೆ ಹೊರತು ಬ್ರಹ್ಮಚರ್ಯಕ್ಕಲ್ಲ. ಪುರುಷವ್ರತಕ್ಕೆ ಬ್ರಹ್ಮಚರ್ಯ ಎಂಬ ಅರ್ಥವೇ ಇದ್ದಿದ್ದರೆ ಈ ಸಂದರ್ಭದಲ್ಲಿ ಪಂಪ ಬ್ರಹ್ಮಚರ್ಯಕ್ಕೆ ಹೆಚ್ಚು ಒತ್ತುಕೊಡಬಹುದಿತ್ತು. ಹಾಗಿದ್ದರೆ ೧-೮೩ ರ ವಚನವಲ್ಲಿ ಪಂಪ, ಭೀಷ್ಮನು ಬ್ರಹ್ಮಚರ್ಯವನ್ನು ಬಿಟ್ಟಿರಲಾರದೆ ಎಂದು ಹೇಳುತ್ತಿದ್ದನೆಂದು ನನ್ನ ಅನಿಸಿಕೆ. ಈ ಸಂದರ್ಭದಲ್ಲಿಯೂ 'ಪುರುಷವ್ರತ' ವೆಂದರೆ **ಏಕನಿಷ್ಠೆಯಿಂದ ಪಾಲಿಸಬಹುದಾದ ಸಂಯಮದ ಪ್ರತಿಜ್ಞೆ ಅಥವಾ ವ್ರತ.**

೨ ತನ್ನನ್ನು ಮದುವೆ ಆಗಲು ಹಟ ಹಿಡಿದ ಅಂಬೆಗೆ ಭೀಷ್ಮನು-

"ಅತ್ತ ಸ್ವರ್ಗ, ಇತ್ತ ಭೂಮಿ, ಉತ್ತ ಪಾತಾಳವೆ ಮೊದಲಾದ ಎಲ್ಲ ಲೋಕಗಳು ತಿಳಿಯುವಂತೆ ಪ್ರತಿಜ್ಞೆ ಮಾಡಿದ ನನಗೆ ಆಗದೆ. ಕಾಮಸುಖಕ್ಕೆ ಸೋಲುವದು ಸಾಧ್ಯವಿಲ್ಲ. ಪುರುಷವ್ರತವು ನಾಶವಾಗುತ್ತದೆ. ತಾಯಿ ಎಂದು ಕರೆದ ಬಾಯಿಂದ ಅಚ್ಚುಗೆ (ಪ್ರೀತಿಯವಳು) ಎಂದು ಕರೆಯಬಹುದೆ, ಅದು ಸಾಧ್ಯವಿಲ್ಲ.೨೮ "

ಇಲ್ಲಿಯೂ ಪುರುಷವ್ರತಕ್ಕೆ ನಾನು ಹೇಳಿದ ಅರ್ಥ ಹೊಂದುವದು.

'ಒಲಿಸಿದ ಆಯುತ' ಎಂಬ ಬಸವಣ್ಣನವರ ವಚನದ ಮಾತಿಗೆ ಈ ಸಂದರ್ಭದಲ್ಲಿ ಭೀಷ್ಮನ ನಡೆ–ನುಡಿಗಳ ಸಂಬಂಧದಲ್ಲಿ ಹೇಳಬಹುದು.

---

೨೬. ಅದೇ ೧-೮೪.

೨೭. ಅದೇ. ಹೋಲಿಸಿ ಬಸವಣ್ಣನವರ ವಚನ "ಬರಿಯ ಮಾತನಾಡಿ ಹೊಜಗೆ ಮೆಚ್ಚಿವವರಲ್ಲ."

೨೮. ಅದೇ ೧-೭೫ ರ ಸರಳಾನುವಾದ.

ನೇಮಿಚಂದ್ರನ ಲೀಲಾವತಿಯಲ್ಲಿ ಕಂದರ್ಪದೇವನು ವಿದ್ಯಾಧರನ ಹೆಂಡತಿ ಮದನಮಂಜರಿಗೆ "ಪುರುಷವ್ರತಕ್ಕೆ ಭಂಗಂ। ಪರವಧುವಂ ನೋಡಿಪಂದುಮಳಿಪಿಂ" ಎಂದು ಹೇಳಿದಾಗ "......ಸುಗುಣಂ ಚೋರಲಕ್ಷಣಂ ಎಂಬಂತೀ ಗಡಿನ ಗಂಡರ **ನಾಲಗೆಯ ನನ್ನಿಯುಂ** +ಕಚ್ಚೆಯ ಶೌಚಮುಂ+ ಇವೆಲ್ಲಂ ಸಿಲಲಱಿವುದೇ"[೨೯] ಎಂದು ಮದನಮಂಜರಿ ಹೇಳುವಳು. ಇಲ್ಲಿ ಪ್ರೊ. ಎಂ. ವಿ. ಸೀತಾರಾಮಯ್ಯನವರು ಪುರುಷವ್ರತಕ್ಕೆ 'ಕಚ್ಚೆಯ ಶೌಚಮಂ' ಮಾತನ್ನು ಜೋಡಿಸಿ ಬ್ರಹ್ಮಚರ್ಯವೆಂಬ ಅರ್ಥವನ್ನೇ ನಿಶ್ಚಯಿಸಿದ್ದಾರೆ. ಆದರೆ 'ನಾಲಗೆಯ ನನ್ನಿ' ಎಂಬ ಮಾತಿಗೆ ಸಂಬಂಧ ಹೇಳಬೇಕು, ಕಚ್ಚೆಯ ಶೌಚಕ್ಕಷ್ಟೇ ಅಲ್ಲ. ಈ ಸಂದರ್ಭದಲ್ಲೂ 'ಸಂಯಮದ ಏಕನಿಷ್ಠಾವ್ರತ' ಎಂಬ ಅರ್ಥ ಬರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಕ್ರಿ. ಶ. ಸುಮಾರು ೧೨೦೦ರಲ್ಲಿ ರಚಿತವಾದ ಬಂಧುವರ್ಮನ 'ಜೀವಸಂಬೋಧನ' ದಲ್ಲಿಯ 'ವರಾಂಗನ ಕತೆ' ಯಲ್ಲಿ, ಅನುಮತೀದೇವಿ ಮುಂತಾದ ಅನೇಕ ಹೆಂಡಿರುಳ್ಳ ವರಾಂಗನು ಅಪಾಯದ 'ಕುದುರೆ' ಏರಿ ಪಡುವ ಕಷ್ಟ ವಿಪರೀತ. ನೀರು ಕುಡಿಯಲು ಹೋದ ಸರೋವರದಲ್ಲಿ ಮೊಸಳೆ ವರಾಂಗನ ಕಾಲು ಹಿಡಿದಾಗ ನೇಮಿಭಟ್ಟಾರಕರನ್ನು ನೆನೆದು ಪಂಚನಮಸ್ಕಾರ ಜಪಿಸಲು ಯಕ್ಷದೇವತೆ ಮೊಸಳೆ ಬಿಡಿಸಿತು. ಕೊಳದ ತಡಿಗೆ ವರಾಂಗ ಕುಳಿತಾಗ ಯಕ್ಷದೇವತೆ "ವರಾಂಗನ ಪುರುಷವ್ರತದಳವನಾರಯ್ವೆ ನೆಂದು ನವಯುವ್ವನೆಯಪ್ಪ ಕುಮಾರಿಯಾಗಿ ಬಂದಿದಿರೊಳ್ ನಿಂದು" ಅನೇಕ ವಿಧವಾಗಿ ಆಶೆ ಹಚ್ಚಿದರೂ ವರಾಂಗನು

"ಕುಲವಧುವನೀಯೆ ತಪ್ಪುದು। ಬೆಲೆವೆಣ್ಣಂ ಬೆಲೆಗೆ ತಪ್ಪದಲ್ಲದೆ ಮಱಿವಾ।
ಱೊಲಿವ ಕುಲವಧುಗೆ ಬಯಸಿದೊ। ಡಲಂಘ್ಯ ಪುರುಷವ್ರತಕ್ಕೆ ಬನ್ನಂ ಬರ್ಕುಂ॥

ಒಲ್ಲೆನೆನೆ ನೀನೊಲ್ಲದೊಡಾನಮೋಘಂ ಸಾವೆನೆಗೆ ಸತ್ತೊಡಂ ನಿನ್ನ ಪ್ರಾಣಮೊಂದೞಿಗುಂ ಶೌಚವ್ರತಮೆನಗೆ ಕೆಟ್ಟೊಡಂ ಪುರುಷವ್ರತಮುಂ, ಶ್ರುತಮುಂ, ಕುಲಮುಂ, ಚಲಮುಂ, ಮತಿಯುಂ, ಗತಿಯುಂ ಕಿಡುಗುಮಿಂತಿನಿತುಮಂ ಕಿಡಿಸಲಾಱೆಂ".

ಎಂದಾಗ ಯಕ್ಷಿದೇವತೆ "ಮೆಚ್ಚಿ ನಿನ್ನ ಶೌಚವ್ರತದಳವನಾರಯ್ದು ಮೆಚ್ಚಿದೆಂ"[೩೦] ಎನ್ನುತ್ತಾಳೆ.

+ + ಇಷ್ಟನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರ ಲೇಖನದಲ್ಲಿ ದಪ್ಪಕ್ಷರದಲ್ಲಿ ಪ್ರಕಟಿಸಲಾಗಿದೆ.

೨೯. ಲೀಲಾವತಿ ೧೯ = ೧೦೫—೧೧೭.

೩೦. 'ಜೀವಸಂಬೋಧನಂ' ಮದ್ರಾಸ ಗವರ್ನಮೆಂಟ ಓರಿಯಂಟಲ್ ಸಿರೀಜ ೧೯೫೫. ಪುಟ ೫೩, ೫೫.

ಇಲ್ಲಿ ಪುರುಷವ್ರತವನ್ನು ಶೌಚವ್ರತದ ಜತೆಗೂಡಿಸಿ ಹೇಳಲಾಗಿದೆ. ಶೌಚವ್ರತವೆಂದರೇನೆಂಬುದನ್ನು ಜೀವಸಂಬೋಧನೆ ಹೀಗೆ ಹೇಳುತ್ತದೆ:*

ಪರವನಿತೆಯೊಲ್ದು ಬರೆ ಪರಿ । ಹರಿಸಿ ಕುಲಾಂಗನೆಯೊಳೇಕಪತ್ನಿವ್ರತಮಂ ।
ಧರಿಯಿಪುದು ಶೌಚಗುಣಮಿದು । ಪರಿಕಿಸೆ ನಾಲ್ಕನೆಯಣುವ್ರತಂ ತಾನೆನಿಕುಂ ॥[೩೧]

ಜೀವಸಂಬೋಧನೆಗೆ ಮೂಲ ಆಕರವಾಗಿ ಡಾ. ಆ. ನೇ. ಉಪಾಧ್ಯೆ ಅವರು ಹೇಳುವ ಸಂಸ್ಕೃತ ಗ್ರಂಥವೆ ಇರಲಿ,[೩೨] ಗ್ರಂಥದ ಸಂಪಾದಕರಾದ ಎಚ್. ಶೇಷಯ್ಯಂಗಾರರು ಹೇಳುವ ತಮಿಳು ಗ್ರಂಥವೇ ಇರಲಿ.[೩೩] ಪುರುಷವ್ರತವನ್ನು ಶೌಚವ್ರತದ ಅಂಗವಾಗಿ ಬಂಧುವರ್ಮ ಹೇಳಿದ್ದಾನೆ. ಬಂಧುವರ್ಮ ಮಾತ್ರ ಶೌಚವ್ರತದಲ್ಲಿ ಅಥವಾ ಶೌಚವ್ರತವನ್ನು 'ಪುರುಷವ್ರತ' ಒಂದು ಎಂದಿದ್ದಾನೆ.

ಶೌಚವ್ರತ ಬರಿ ಜೈನರು ಬಳಸುತ್ತಿದ್ದ ಶಬ್ದವಲ್ಲ. ಬಂಧುವರ್ಮ ಹೇಳುವಂತೆ ಶೌಚವ್ರತ—'ಏಕಪತ್ನಿವ್ರತ'. ಆದರೆ ಅನೇಕ ಪತ್ನಿಯರನ್ನುಳ್ಳ ಈ ಮೇಲೆ ಹೇಳಿದ ಘಟನೆಯ ನಂತರವೂ ಅನೇಕ ಸ್ತ್ರೀಯರನ್ನು ಮದುವೆ ಆಗುವ ವರಾಂಗನು[೩೪] ಅದು ಹೇಗೆ 'ಶೌಚವ್ರತಿ' ಆಗುತ್ತಾನೆ ? ಅಂದರೆ ಕವಿ ತಾನು ಹೇಳುವ ಶೌಚವ್ರತದ ಲಕ್ಷಣಕ್ಕೆ ವರಾಂಗನ ಶೌಚವ್ರತ ಹೊಂದುವದಿಲ್ಲ. ಅಂದರೆ ಶೌಚವ್ರತದ ಬಗೆಗಾಗಲಿ ಪುರುಷವ್ರತದ ಬಗೆಗಾಗಲಿ ಬಂಧುವರ್ಮ ಖಚಿತವಾದ ವಿಚಾರ ಹೇಳಿದ್ದಾನೆಂಬುದು ಸಂಶಯಾಸ್ಪದ. ಕವಿ ಹೇಳುವಂತೆ 'ಶೌಚವ್ರತ' ವೆಂದರೆ ಪುರುಷವ್ರತ, ಶ್ರುತ, ಕುಲ, ಚಲ, ಗತಿ, ಮತಿ. ಕವಿಯ ಕಾಲದಲ್ಲಿ ಶೌಚವ್ರತದಷ್ಟು ವಿಶಾಲ ಅರ್ಥದಲ್ಲಿ ಪುರುಷವ್ರತ ಇರಲಿಲ್ಲ. ಅಂತೂ ಬಂಧುವರ್ಮನ ಈ ಅನಿರ್ದಿಷ್ಟ ಆಧಾರವೊಂದನ್ನು ಬಿಟ್ಟರೆ ಪುರುಷವ್ರತವನ್ನು ಜೈನ ಪರಿಭಾಷೆ ಎನ್ನಲು ಮನಸ್ಸಾಗದು.

ಒಂದೆರಡು ಶಾಸನಗಳಲ್ಲಿ ಬರುವ ಈ ಶಬ್ದಕ್ಕೆ 'ಸಂಯಮ ನಿಷ್ಠಾವ್ರತ' ಎಂಬ ಅರ್ಥ ಹೊಂದುತ್ತದೆ. ವಿಸ್ತಾರ ಭಯದಿಂದ ವಿವೇಚಿಸಿಲ್ಲ.

೧. 'ಐತರೇಯ ಬ್ರಾಹ್ಮಣ ಆರಣ್ಯಕ ಕೋಶ' (ಸಂ: ಕೇವಲಾನಂದ ಸರಸ್ವತಿ ೧೯೫೨) ದಲ್ಲಿ, "ಪುರುಷ ಇತಿ ತ್ರಿಣ್ಯಕ್ಷರಾಣಿ ಮಹಾವ್ರತೇ ನಿಷ್ಕೇ

---

* "ಶೌಚದ ಪೆಂಪು ತಾಂ ಪರವಧುವಿಂಗೆಜಿಗದೆರ್ಪುದೆ"—ಅದೇ ಪುಟ ೨೨. ಶೌಚವ್ರತಕ್ಕೆ 'ಪರಸ್ತ್ರೀಯರನ್ನು ಅಪೇಕ್ಷಿಸಿದ ಬ್ರಹ್ಮಚರ್ಯ' ಎಂದು ಸಂಪಾದಕರ ಅರ್ಥ. ಇಲ್ಲಿ 'ಬ್ರಹ್ಮಚರ್ಯ' ಎನ್ನುವದಕ್ಕಿಂತ 'ಸಂಯಮ' ಎಂದು ಹೇಳುವದು ಹೆಚ್ಚು ಸಮಂಜಸ.

೩೧. ಅದೇ ಪುಟ ೨೯೦.

೩೨. ಕ. ಸಾ. ಪ. ಪ. ೫೯-೧. ಡಾ. ಆ. ನೇ. ಉಪಾಧ್ಯೆ : 'ಪುರುಷವ್ರತದ ನಿಶ್ಚಿತ ಅರ್ಥ'.

೩೩. 'ಜೀವಸಂಬೋಧನಂ' ಸಂ. ಎಚ್. ಶೇಷಯ್ಯಂಗಾರ. ಪುಟ ೭. ಮುನ್ನುಡಿ.

೩೪. ಅದೇ ಪುಟ ೬೦-೬೨.

ವಲ್ಯಸ್ಯ ಪ್ರತಿಪದಿ, ಪ್ರಥಮ, ದ್ವಿತಿಯ, ಚತುರ್ಥ ಪಾದೇಸು, ಕ್ರಮೇಣ ವಿಹರಣೀಯಾನಿ. ತತ್ರೊ, 'ನದಂ ವ ಓದತೀನಾಂ' ಇತ್ಯಸ್ಯಾ ಋಚಃ ಪಾದಶೋ ವಿಹರಣಂ ಐತರೇಯ ಆರಣ್ಯಕ ೧, ೧೨, ೧೭, ೧೮" (ಪುಟ ೫೯) ಎಂದು ಇದೆ.

೨. ಮಾನಿಯರ್ ವಿಲಿಯ್ಸಂ ಸಂಸ್ಕೃತ ಇಂಗ್ಲಿಷ ಕೋಶದಲ್ಲಿ ಪುರುಷವ್ರತಕ್ಕೆ 'Name of 2 Sāmans. (Ar Br)' ಎಂದಿದೆ.

೩. ಪರಿಷ್ಕೃತ ಕಿಟೆಲ್ ಕೋಶವು ಪುರುಷವ್ರತಕ್ಕೆ "an act or observance becoming of a man" ಎಂದು ಅರ್ಥ ಕೊಟ್ಟಿದೆ.

೪. ಪುರುಷವ್ರತವೆಂದರೆ ಬ್ರಹ್ಮೋಪಾಸನೆ.[೩೫]

೫. ಡಾ. ಡಿ. ಎಲ್. ನರಸಿಂಹಾಚಾರ್ಯರು 'ದೀಪಿಕೆ'ಯಲ್ಲಿ, ಆರ್. ಎಲ್. ಅನಂತರಾಮಯ್ಯ 'ಪಂಪಭಾರತ ಕಥಾಲೋಕದಲ್ಲಿ' "ಬ್ರಹ್ಮಚರ್ಯ" ಎಂತಲೂ; ಆರ್. ನರಸಿಂಹಾಚಾರ್ಯರು 'ಶಾಸನ ಪದ್ಯಮಂಜರಿ'(ಪುಟ ೨೬೨) ಯಲ್ಲಿ 'ಪಾತಿವ್ರತ್ಯ' ಎಂತಲೂ; ಡಾ. ಆರ್. ಸಿ. ಹಿರೇಮಠ ಅವರು 'ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು' ಗ್ರಂಥದಲ್ಲಿ (ಪುಟ ೬೨೩) 'ಪುರುಷವ್ರತಿ' ಶಬ್ದಕ್ಕೆ 'ಪತಿವ್ರತೆ' ಎಂತಲೂ ಅರ್ಥ ಹೇಳಿದ್ದಾರೆ.

೬. ಡಾ. ಎಂ. ಚಿದಾನಂದಮೂರ್ತಿಗಳು "ಪುರುಷವ್ರತ ಎಂದರೆ ಬ್ರಹ್ಮಚರ್ಯ, ಸಂಯಮ, ಪತಿ ಅಥವಾ ಪತ್ನಿಯ ಬಗ್ಗೆ ನಿಷ್ಠೆ Chastity ಎಂದರ್ಥ" ಎಂದಿದ್ದಾರೆ.[೩೬]

ಒಟ್ಟನಲ್ಲಿ ಪುರುಷವ್ರತವನ್ನು ಈ ಕೆಳಗಿನಂತೆ ವಿವೇಚಿಸಬಹುದು :

೧. ಪರಸ್ತ್ರೀ ಅಥವಾ ಪರಪುರುಷ ಇಲ್ಲವೆ ಸ್ವಸ್ತ್ರೀ ಅಥವಾ ಸ್ವಪುರುಷ ಸಂಬಂಧದಲ್ಲಿ ಸಂಯಮವನ್ನು ಹೇಳುವ ಸಂದರ್ಭಗಳಲ್ಲಿ ಪುರುಷವ್ರತ ಶಬ್ದ ಬಳಸಲಾಗಿದೆ. ಆದರೆ ಪಂಪಭಾರತದಲ್ಲಿ ಬಸವಣ್ಣನವರ ವಚನದಲ್ಲಿ ಅನಿಶ್ಚಿತತೆ ಇದೆ.

೨. "ಅಬ್ರಹ್ಮವಿರತಿ (ಬ್ರಹ್ಮಚರ್ಯ) ಪಾಲನೆಗೆ ಪೌರುಷ (= ವೀರ, ಪರಾಕ್ರಮ) ಅಗತ್ಯವಾದ ಕಾರಣ, ಅದು ಪುರುಷವ್ರತ ಎಂದೆನಿಸಿಕೊಂಡಿರಬಹುದು."[೩೭] ಎಂಬ ಮಾತು ಸರಿಯಲ್ಲ. ಬ್ರಹ್ಮಚರ್ಯ ಪಾಲನೆಗೆ ಪೌರುಷ

---

೩೫. ಎಂ. ವಿ. ಸೀ. ಅದೇ ಪುಟ ೪೭.

೩೬. ಪ್ರಬುದ್ಧ ಕರ್ನಾಟಕ ೫೩-೩. "ಅಬ್ಬೆಯೆಂದತ್ತಿಗೆಯೆಂಬ ಮಾತನ್..." ಡಾ. ಎಂ. ಚಿದಾನಂದಮೂರ್ತಿ. ಪುಟ. ೧೨೮.

೩೭. ಎಂ. ವಿ. ಸೀ, ಅದೇ.

(=ವೀರ, ಪರಾಕ್ರಮ) ಬೇಕಾಗಿಲ್ಲ. ಸಂಯಮ, ನಿಷ್ಠೆ ಬೇಕು. ‘ಪುರುಷ’–‘ಪೌರುಷ’ ಈ ಸಾಮೀಪ್ಯ ಸಂಬಂಧದಿಂದ ಅರ್ಥ ಹುಡುಕಿದ್ದು ತಪ್ಪು.

೩. ಪುರುಷವ್ರತವು ನಿಷ್ಠಾವಂತಿಕೆಯ, ಸಂಯಮದ ವೀರಪ್ರತಿಜ್ಞೆ ಅಥವಾ ವ್ರತ. ಇವರಲ್ಲಿ ಬ್ರಹ್ಮಚರ್ಯವೂ ಇರಬಹುದಿತ್ತು. ಆದರೆ ಬ್ರಹ್ಮಚರ್ಯವೇ ಪುರುಷ ವ್ರತವಲ್ಲ.

೪. ಪುರುಷವ್ರತ ಬಹುಶ ವೈದಿಕ ಶಬ್ದ. ಜೈನರ ಸೃಷ್ಟಿಯೆಂದು ತೋರದು.[೩೮] ಜೈನಪರಿಭಾಷೆಗೆ ಈ ಪದ ಸೇರಿಸಬೇಕಾಗಿಲ್ಲ. ಜೈನ ಯತಿ, ಗೃಹಸ್ಥರಿಗೆ ಸಂಬಂಧಿಸಿದ ಮಹಾ ಅಣುವ್ರತಗಳಲ್ಲಿ ಪುರುಷವ್ರತ ಸೇರಿಸಬಾರದು. ಭೀಷ್ಮ, ದೇವಿಯಕ್ಕ (ಶಿವಮೊಗ್ಗಾ ಶಾಸನ), ಬಸವಣ್ಣ ಹೇಳುವ ಪುರುಷವ್ರತಿಯರು ಪಂಚಭಾವನೆ ಹೊಂದಿದವರೆಂದು ಹೇಳುವದು ದೂರದ ಮಾತಾಗುತ್ತದೆ.[೩೯] ಪ್ರಾಕೃತ ಸಂಸ್ಕೃತ ಜೈನ ಗ್ರಂಥಗಳಲ್ಲೆಲ್ಲೂ ಈ ಪದ ಸಿಗಲಾರದೆಂಬುದನ್ನು ಪ್ರೊ. ಎಂ. ವಿ. ಸೀತಾರಾಮಯ್ಯ, ಡಾ. ಆ.ನೇ. ಉಪಾಧ್ಯೆ ಅವರು ಹೇಳುತ್ತಾರೆ.

೫. “ಇದು ಕವಿಸೃಷ್ಟವಾದ ಪದವಾಗಿರದೆ ಕನ್ನಡನಾಡಿನ ಜೈನಸಮಾಜದಲ್ಲಿ ಜನರ ಬಳಕೆಯಲ್ಲಿಯೂ ಬಹುಶಃ ಕನ್ನಡದಲ್ಲಿ ರಚಿತವಾಗಿದ್ದು, ಅನುಪಲಬ್ಧವಾಗಿರುವ ಪ್ರಾಚೀನ ಜೈನಾಗಮಗ್ರಂಥಗಳಲ್ಲಿಯೂ ಪ್ರಚುರವಾಗಿದ್ದಿರಬೇಕು.”[೪೦] ಎಂಬ ಹೇಳಿಕೆ ನಿರಾಧಾರ, ಊಹಿತ.

೬. ‘ಪುರುಷ ನಿರ್ವಾಣ’ಕ್ಕೆ ಸಂಬಂಧಿಸಿದ ವ್ರತವಾಗಿ ಬಸವಣ್ಣನವರ ಕಾಲದಲ್ಲಿ (ಬಹುಶ); ಕನ್ನಡನಾಡಿಲ್ಲಿ ಪ್ರಸಿದ್ಧವಾಗಿದ ‘ಪುರುಷವ್ರತ’ದ ಮುಖ್ಯಲಕ್ಷಣಗಳು ವೀರನಿಷ್ಠೆ, ಸಂಯಮ ಮತ್ತು ತ್ಯಾಗ. ಪ್ರೊ. ಎಂ. ವಿ. ಸೀತಾರಾಮಯ್ಯ ಅವರು ಹೇಳುವಂತೆ ಬರಿ ಶೌಚವಷ್ಟೇ ಅಲ್ಲ.[೪೧]

---

೩೮. ಈ ಊಹೆಗೆ ಹೆಚ್ಚಿನ ಆಧಾರ ಬೇಕು.

೩೯, “ಅಬ್ರಹ್ಮವಿರತಿಯ ಪಂಚಭಾವನೆಯಲ್ಲಿ ಒಂದಾದ ಅಂಗನಾಂಗ ನಿರೀಕ್ಷಣ ತ್ಯಾಗವನ್ನೇ ಸೂಚಿಸುತ್ತಿರುವದರಿಂದ ಇಲ್ಲಿನ ಪುರುಷವ್ರತವು ಜೈನಧರ್ಮದಲ್ಲಿ ಹೇಳಿರುವ ‘ಪರಸ್ತ್ರೀಮಾತ್ರ ಪರಿಗ್ರಹತ್ಯಾಗ’ ನಿಷ್ಠವಾದ ಪಂಚಾಣುವ್ರತಕ್ಕೆ ಸೇರಿದ ಅಬ್ರಹ್ಮವಿರತಿ (=ಬ್ರಹ್ಮಚರ್ಯ) ಎನಿಸುತ್ತದೆ.” ಎಂ. ವಿ. ಸೀ ಅದೇ ಪುಟ ೩೭. ಇಲ್ಲಿ ‘ಅಬ್ರಹ್ಮವಿರತಿ’ ಎಂಬುದಕ್ಕೆ ‘ಬ್ರಹ್ಮಚರ್ಯ’ ಎಂದಿಷ್ಟೇ ಅರ್ಥವಲ್ಲ. ಜೀವಸಂಬೋಧನೆ ಹತ್ತು ಕೆಟ್ಟ ವ್ಯಸನಗಳಿಗೆ ‘ಅಬ್ರಹ್ಮ’ ಎನ್ನುತ್ತದೆ. ನೋಡಿ: ಜೀವಸಂಬೋಧನೆ, ಸಂ. ಎಚ್. ಶೇಷಯ್ಯಂಗಾರ. ಪುಟ ೧೩೮.

೪೦. ಎಂ. ವಿ. ಸೀ. ಅದೇ ಪುಟ ೪೧.

೪೧. ಎಂ. ವಿ. ಸೀ. ಅದೇ ಪುಟ ೩೬.

೭. ಕಾಲಕಾಲಕ್ಕೆ ಪುರುಷವ್ರತದ ಆಚರಣೆ ವ್ಯತ್ಯಾಸವಾಗುತ್ತ ಬಂದಿರುವ ಸಂಭವವಿದೆ. ಬಸವಣ್ಣನವರ ಕಾಲಕ್ಕೆ (ಅಥವಾ ತುಸು ಹಿಂದೆ) 'ಅಗ್ನಿಯನ್ನು ಹೊಗುವ' ವ್ರತವಾಗಿದ್ದಿತೆಂಬುದು ನಿಸ್ಸಂಶಯ. ಈ ಹೇಳಿಕೆಗೆ ಶಿವಮೊಗ್ಗೆಯ ಶಾಸನವೂ ಪುಷ್ಟಿ ನೀಡುತ್ತದೆ.

೮. ಪುರುಷವ್ರತ 'ವೇಳೆವಾಳಿ'ಯನ್ನು ಹೋಲುವದೆ? 'ಮುನ್ನುಡಿದ ಭಾಷೆ'ಗೆ ಇದನ್ನು ಹೋಲಿಸಬಹುದೆ? ಅಥವಾ 'ಗರುಡ'ದಂತೆ 'ಪುರುಷವ್ರತ' ಮೊದಲು ಸಾಮಾನ್ಯಾರ್ಥದ ಪದವಾಗಿದ್ದು ಬಸವಣ್ಣನವರ ಕಾಲಕ್ಕಾಗಲೆ ಪಾರಿಭಾಷಿಕ ಪದವಾಗಿ ವಿಶಿಷ್ಟ ಮಹತ್ವ ಪಡೆದಿರಬಹುದೆ?[೪೨] ಇದೆಲ್ಲ ಬರಿ ಊಹೆ. ಹೆಚ್ಚಿನ ಆಧಾರಗಳು ಬೇಕು. ಪುರುಷವ್ರತವನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರು 'ವೀರವ್ರತ'ಕ್ಕೂ[೪೩] ಸಿ. ಪಿ. ಕೆ. ಅವರು ದೇವವ್ರತಕ್ಕೂ[೪೪] ಸಂಬಂಧ ಹೇಳಬಹುದೇ ಎಂದಿದ್ದಾರೆ. ದೇವವ್ರತದ ಜತೆ ಪುರುಷವ್ರತವನ್ನು ತಳುಕುಹಾಕುವದು ಸರಿಯಲ್ಲ. "ಬ್ರಹ್ಮಚರ್ಯಮೆಂಬುದು ದೇವವ್ರತಂ, ಆವವ್ರತಕ್ಕಮುತ್ಕೃಷ್ಟಂ" (ಜೀವಸಂಬೋಧನೆ. ಸಂ. ಎಚ್. ಶೇಷಯ್ಯಂಗಾರ, ಪುಟ ೧೩೮, ೧೩೯). ಬಸವಣ್ಣನವರ ಒಂದು ವಚನದಲ್ಲಿ ಬರುವ 'ವೀರವ್ರತಿ' ಒಂದೇ ಪದವಾಗಿದ್ದರೆ ಮಾತ್ರ ಇದು ಪುರುಷವ್ರತವನ್ನು ಹೆಚ್ಚು ಹೋಲುತ್ತದೆ ಎಂದು ಹೇಳಬಹುದು.

● ●

---

೪೨. ಇಲ್ಲಿ ಬಂದ 'ವೇಳೆವಾಳಿ', 'ಮುನ್ನುಡಿದ ಭಾಷೆ', 'ಗರುಡ'ಗಳ ವಿವರಣೆಗೆ ನೋಡಿ: ಡಾ. ಎಂ. ಚಿದಾನಂದಮೂರ್ತಿ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಪುಟ ೩೦೨–೩೦೮.

೪೩. ಎಂ. ವಿ. ಸೀ. ಅದೇ ಪುಟ ೩೮, ೩೯.

೪೪. ಕರ್ನಾಟಕ ಭಾರತಿ ೮–೨ ಸಿ. ಪಿ. ಕೆ. "ದೇವವ್ರತ" ಪುಟ ೧೫೪.

ದಾಟು : ಒಂದು ಪ್ರತಿಕ್ರಿಯೆ

● ಕಣವಿ ಮಹಾದೇವ

"ಕಾದಂಬರಿ ಜೀವನದ ಹೆದ್ದಾರಿಯಲ್ಲಿ ಸ್ಥಾಪಿತವಾದ ದೊಡ್ಡ ಕನ್ನಡಿಯಿದ್ದಂತೆ. ಆ ದಾರಿಯಲ್ಲೂ, ಸುತ್ತಮುತ್ತಲೂ ನಡೆಯುವ ಎಲ್ಲ ವ್ಯಾಪಾರಗಳೂ ಅದರಲ್ಲಿ ಪ್ರತಿಬಿಂಬಿತವಾಗುತ್ತವೆ."

—ಹೆನ್ರಿ ಜೇಮ್ಸ್

ಸಮಕಾಲೀನ ಸಮಾಜದ ಅತಿ ಗಂಭೀರಸಮಸ್ಯೆಯಾದ ಜಾತೀಯತೆ, ನಮ್ಮ ದೇಶದ ರಾಜಕಾರಣಿಗಳಿಗೆ ಒಂದು Political stunt. ಪೂಜಾರಿಗಳಿಗೆ ಧರ್ಮ ಗುರುಗಳಿಗೆ ಅದು ಅಜ್ಞಾನಿ ಜನತೆಯನ್ನು ವಂಚಿಸಿ ಹೊಟ್ಟೆ ಹೊರೆದುಕೊಳ್ಳುವ ಸಾಧನ. ಜನಸಮುದಾಯಕ್ಕೆ ನಿಮ್ಮವರೆಂದು ಹೇಳಿ ಕೈ ಚಾಚುವ ಮಾರ್ಗ. ಜಾತಿರಹಿತ ಸಮಾಜದ ಮಾತು ನಮ್ಮ ದೇಶದ ಮಟ್ಟಿಗೆ ಹೇಳುವದಾದರೆ 'ಯುಟೋಪಿಯ' ಆಗಿಯೇ ಉಳಿಯುತ್ತದೇನೋ! ಏಕೆಂದರೆ ಇಲ್ಲಿ ರಾಜಕೀಯ, ಧರ್ಮ, ಜಾತಿ, ಸಾಮಾಜಿಕ ಸ್ಥಿತಿಗತಿಗಳು ಒಂದಕ್ಕೊಂದು ಪರಪುಟ್ಟವಾಗಿರುವ ಬಂದಳಿಕೆಗಳು. ಶತಮಾನಗಳುದ್ದಕ್ಕೂ ಈ ಭೂತವನ್ನು ಹೊಡೆದೋಡಿಸಲು ಪ್ರಯತ್ನಿಸಿದ ಸಾಧುಸಂತರು, ಪ್ರವಾದಿಗಳು ಸೋಲನ್ನನುಭವಿಸಿದ್ದಾರೆ.

ಮಧ್ಯಏಶಿಯದಿಂದ ಬಂದುವೆಂದು ಹೇಳಲಾಗುವ ಈ ಜನಾಂಗವಲ್ಲಿ ಇಷ್ಟೊಂದು ಜಾತಿಗಳು, ಒಳಪಂಗಡಗಳು ಹೇಗೆ ಉಂಟಾದುವೆನ್ನುವದೇ ಆಶ್ಚರ್ಯ

"All most all so called castes in India differ from each other in composition and in many cases it is difficult to discover any criteria by which they properly can be regarded as a unit at all. Take for example the so called Brahmin caste. This has been described as the most heterogenous collection of minute and independant sub divisions that ever bore a common designation. It is not an organised social antity for the Indian census tables show clearly that Brahmin pursue many occupations including those of cultivator, labour and cook. It is not

a jural antity; the law enforcing functions of caste system are located in enogemous groups within which inter group marriage is forbidden."

ಭಾರತದ ಮೇಲೆ ಅನೇಕಸಲ ನಡೆದ ದಾಳಿಯ ಹಾವಳಿ, ರಕ್ತ ಹರಿಸುವಿಕೆ, ಹೊಂದಾಣಿಕೆ ಇವೆಲ್ಲವುಗಳ ಪರಿಣಾಮವಾಗಿ ಬೇರೆಬೇರೆ ಜನಾಂಗಗಳ ರಕ್ತದ ಕಲಬೆರಕೆ ಅನಿವಾರ್ಯವಾಗಿ ಯಾರು ಯಾವ ಜಾತಿ, ಜನಾಂಗಕ್ಕೆ ಸೇರಿದವರು ಎಂಬುದು ತಿಳಿಯದಷ್ಟು ಗೊಂದಲಮಯವಾಗಿ ಹೋಯಿತು.

ಶತಮಾನಗಳಿಂದ ಶೋಷಿಸಲ್ಪಟ್ಟ ಜನಾಂಗವೊಂದು ಮರುಹುಟ್ಟನ್ನು ಪಡೆಯುವದಕ್ಕಾಗಿ ಪ್ರಾರಂಭಿಸಿದ ಹೋರಾಟದ ಕಥೆ ದಾಟುವಿನಲ್ಲಿದೆ. ಜಾತಿ, ಬದುಕಿನ ವಿವಿಧ ಸ್ತರಗಳಲ್ಲಿ ಉಂಟುಮಾಡುವ ದುರಂತತೆಯನ್ನು ಸೈದ್ಧಾಂತಿಕವಾಗಿ ಹೇಳುವ ಕಾದಂಬರಿಕಾರರು, ಅದನ್ನೇ ಸಾರ್ವತ್ರೀಕರಣಗೊಳಿಸುವ, ತನ್ನ ಪರಿಸರವನ್ನು ಬೆದಕುವ ಕ್ರಿಯೆಯಲ್ಲಿ ತೊಡಗುತ್ತಾರೆ. ತನ್ನ ಸಮಾಜದ ಸ್ಥಿತ್ಯಂತರಗಳನ್ನು ಗಮನಿಸುವದರೊಂದಿಗೆ ಗತ ಇತಿಹಾಸದ ಓಟವನ್ನೂ ನಡೆವ ಹಾದಿಯನ್ನೂ ಲೇಖಕನ ಪ್ರಜ್ಞೆ ಗುರುತಿಸಲು ಯತ್ನಿಸಿದೆ. ಬದುಕಿನಲ್ಲಿ ಮೇಲುವರ್ಗಗಳೊಡನೆ ಒಡಂಬಡಿಕೆಯನ್ನು ಮಾಡಿಕೊಂಡು, ದಯೆಗೆ ಪಾತ್ರವಾಗಿ ಬೇಡಿ ತಿನ್ನುವವರಿಂದ ದಲಿತವರ್ಗದ ಉದ್ಧಾರವಾದೀತು ಎಂಬ ಭ್ರಮೆ ಲೇಖಕನಿಗೆ ಇಲ್ಲ. ಸರಕಾರದ ಪ್ರೋತ್ಸಾಹದಿಂದಾಗುವ ಕಾರ್ಯವೂ ಸಿನೇಮಾ ಪೋಸ್ಟರಿನಂತೆ. ನೆಲದಲ್ಲಿ ಹೂಳಿದಷ್ಟೂ ಬಲವಾಗಿ ಸಿಡಿಯುವ ಸಿಡಿಮದ್ದಿನಂತೆ, ತುಳಿಸಿಕೊಂಡ ಜನಾಂಗ ಜಾಗ್ರತವಾಗಿ ಸಿಡಿದರೆ ಮಾತ್ರ ದಾಸ್ಯಕ್ಕೆ ವಿಮೋಚನೆ ಎನ್ನುವ ಕ್ರಾಂತಿಕಾರಕ ಸೂಚನೆ ಅಲ್ಲಿದೆ.

ಬದಲಾದ ವಿಚಾರಧಾರೆಗಳುಳ್ಳ ಮೌಲ್ಯಗಳ ಎರಡು ತಲೆಮಾರಿನ ವ್ಯಕ್ತಿಗಳ ಸಂಘರ್ಷಣೆ, ಅದರಿಂದುಂಟಾಗುವ ಅನಾಹುತಗಳು ಇಲ್ಲಿಯ ಕಥಾವಸ್ತು. ದೇವರು-ದಿಂಡರುಗಳಲ್ಲಿ ನಂಬುಗೆಯಿಟ್ಟು, ತಲೆತಲಾಂತರಗಳಿಂದ ಬಂದ ಜಾತಿಯ ಆಚಾರ-ವಿಚಾರಗಳನ್ನು ತಪ್ಪದೇ ನಡೆಯಿಸಿಕೊಂಡು ಬಂದಿದ್ದಾನೆ ವೆಂಕಟರಮಣಯ್ಯ. ವೈಚಾರಿಕ ಹಿನ್ನೆಲೆಯಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಅವನ ಮಗಳು ಇತಿಹಾಸದ ವಿದ್ಯಾರ್ಥಿನಿ ಸತ್ಯ ಇಚ್ಛಿಸುತ್ತಾಳೆ. ಬದುಕುತ್ತಿರುವ ಸಮಾಜದೊಡನೆ ಹೊಂದಾಣಿಕೆಯನ್ನು ಮಾಡಿಕೊಂಡು ಮುಂದೆಬಂದರೆ ಹಾಯವೆ, ಹಿಂದೆ ಬಂದರೆ ಒದೆಯದೆ ಸುಖವಾಗಿರಲು ತಂದೆ ಜೋಳಿಮನುಷ್ಯ ಬೆಟ್ಟಯ್ಯ ಬಯಸಿದರೆ, ಅವನ್ನು ತಿರಸ್ಕರಿಸಿ ಜಾತಿಯನ್ನು ಬೇರುಸಹಿತ ಕಿತ್ತೊಗೆಯಲು ಸಮಾನತೆಯನ್ನು ಸಾಧಿಸಲು, ಮೇಲ್ಜಾತಿಯವರನ್ನು ಗುದ್ದಿ ಒದೆದು ನ್ಯಾಯ

ಸಂಪಾದಿಸುವದು ಅವನ ಮಗ ಕ್ರಾಂತಿಕಾರಿ ಮೋಹನದಾಸನ ನಿಶ್ಚಯ. ಗತರಾಜ ವಂಶದ ಬಗೆಗೆ ಹೆಮ್ಮೆಪಡುತ್ತ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಲು ಮೀಸೆ ತಿರಿಯುವ ಅಜ್ಜಯ್ಯ ತಿರುಮಲಗೌಡರು ಒಂದೆಡೆಯಾದರೆ, ಸತ್ಯಳನ್ನು ಮದುವೆ ಯಾಗಿ ಆದರ್ಶವಾದಿಯಾಗಬೇಕೆನ್ನುತ್ತಾನೆ ಮೊಮ್ಮಗ ಶ್ರೀನಿವಾಸ. ಜ್ವಲಂತ ಸಮಸ್ಯೆಗೆ ಸ್ಪಂದಿಸುವ ವಿವಿಧ ಪಾತ್ರಗಳ ಪ್ರತಿಕ್ರಿಯೆಗಳು ನಮ್ಮ ಸಮಾಜದ ಮರಂತದ ಪ್ರತಿಚ್ಛಾಯೆಗಳು.

ಕಾದಂಬರಿಯ ಪ್ರಾರಂಭವೇ ಒಂದಕ್ಕೊಂದು ವಿರೋಧಾಭಾಸದ ಘಟನೆಗಳಿಂದ ಕೂಡಿದೆ. ಸನಾತನಿ ವೆಂಕಟರಮಣಯ್ಯ ಮಗನೊಂದಿಗೆ ಮೊಮ್ಮಗನ ನಾಮಕರಣ ದಲ್ಲಿ ತೊಡಗಿದ್ದಾನೆ. ಊಟಕ್ಕೆಬಂದ ಬ್ರಾಹ್ಮಣರು ತಮ್ಮ ಪಂಗಡಗಳ ಸ್ಪೆಶಾಲಿಟಿ ಯನ್ನು ಹೇಳಿಕೊಂಡು ಉಣ್ಣುವದರ ಜೊತೆಗೇ ಶೂದ್ರನಿಂದೆಯೂ ನಡೆದಿದೆ. ನವುರಾದ ವ್ಯಂಗ್ಯ ಅವರ ನಿಜಸ್ವರೂಪವನ್ನು ಪರಿಚಯಿಸುತ್ತದೆ. ಮಗಳನ್ನು ನಿರೀಕ್ಷಿಸುತ್ತಿದ್ದ ತಂದೆಗೆ ಅವಳ ಪತ್ರ ಸಿಗುತ್ತದೆ. ಓದುತ್ತ ಹೋದಂತೆಲ್ಲ ಮೊದಲಿಗೆ ತಲೆತಿರುಗಿ ಬೀಳುವಂತಾಗುತ್ತದೆ, ನಂತರ ತಾಳ್ಮೆ ಸಾಯುತ್ತದೆ. ತಬ್ಬಲಿಯೆಂದು ಓದಲು ಕಳಿಸಿದರೆ ತಲೆಯ ಮೇಲೆ ಮೆಣಸು ಅರೆದಳಲ್ಲ ಎಂಬ ರೋಷ. ಗೌರವ ವನ್ನು ಮೂರುಕಾಸಿಗೆ ಮಾರಲು ನಿಂತಿದಾಳಲ್ಲ ಎಂಬ ತಳಮಳ. ತಂದೆ ಅಟ್ಟದ ಮೇಲಾದರೆ ಮಗಳು ಬೆಟ್ಟದ ಮೇಲೆ. ವೆಂಕಟೇಶನನ್ನು ಕರೆದು ಮೆಟ್ನಲ್ಲಿ ಹೊಡೆದು ಎಳೆದುಕೊಂಡು ಬರಲು ಹೇಳುತ್ತಾರೆ. ಸತ್ಯಳ ಮುಂದೆ ತನ್ನ ಸೋಲನ್ನು ಕಲ್ಪಿಸಿದ ಅವನು ತಂದೆಗೇ ಹೋಗಲು ಹೇಳುತ್ತಾನೆ. ವೆಂಕಟರಮಣಯ್ಯ ಬೆಟ್ಟಯ್ಯನೊಂದಿಗೆ ಬೆಂಗಳೂರಿಗೆ ಹೋಗುತ್ತಾರೆ. 'ದಂಡಂ ದಶಗುಣಂ ಭವೇತ್' ಎಂಬ ದೃಢನಂಬುಗೆ ಯಿಂದ ಕೆರವಿನಿಂದ ಮಗಳನ್ನು ರಕ್ತ ಹೆಪ್ಪಗಟ್ಟುವಂತೆ ಹೊಡೆಯುತ್ತಾರೆ. ನಂತರ ಸಮಸ್ಯೆಯ ಪರಿಹಾರಕ್ಕೆ ತಡಕಾಡುತ್ತಾರೆ.

ತಂದೆಗೆ ಯಾವುದು ಮೌಲ್ಯವೋ, ಜೀವನದಲ್ಲಿ ಅತ್ಯಂತ ಮಹತ್ವದ್ದೋ ಮಗಳಿಗೆ ಅದು ಸವಕಲುನಾಣ್ಯ, ಅರ್ಥಹೀನ ಅಪಮೌಲ್ಯ. ಅವಳು ಜಾತಿ, ಮತ ಅನ್ನುವ ವ್ಯತ್ಯಾಸಗಳೆಲ್ಲ ಸುಳ್ಳು, ವೇದಗಳೂ ದಾಸರೂ ಅದನ್ನೇ ಪ್ರತಿಪಾದಿ ಸಿದರೆಂದು ಹೇಳಿ "ಯಾರು ಅಂದದ್ದೂ, ಅನ್ನೂದೂ ಮುಖ್ಯವಲ್ಲ. ನಮ್ಮ ನಮ್ಮ ಅಂತರಂಗವೇ ನಿಜ ನುಡಿಯುತ್ತೆ. ನಮ್ಮ ನಮ್ಮ ಅನುಭವವೇ ದಿಕ್ಕು ತೋರಿಸುತ್ತೆ. ಆದರೆ ರೂಢಿ ಅಂತರಂಗಾನ ಮುಚ್ಚಿಹಾಕುತ್ತೆ. ಅನುಭವದ ಅರ್ಥವನ್ನ ಕೈ ತಪ್ಪಿ ಸುತ್ತೆ. ಧೈರ್ಯವಿದ್ದೋರು ರೂಢೀನ ಗೆಲ್ತಾರೆ, ಗೆದ್ದು ಬದುಕುತ್ತಾರೆ. ಹೇಡಿಗಳು ಮನಸ್ಸಿನ ಮೇಲೆ ಮಣ್ಣುಮುಚ್ಚಿಕೊಂಡು ಮಣ್ಣುಹುಳುವಿನ ಹಾಗೆ ಜೀವನ ಮಾಡುತ್ತಾರೆ." ತಂದೆಗೆ ಬೇಕಾದುದು ಮಗಳ ಭಾಷಣವಲ್ಲ. ತಾನು ಶೂದ್ರನನ್ನು

ಮದುವೆಯಾಗುವದಿಲ್ಲ ಎನ್ನುವ ಅಭಯ. ಅದು ಅಸಂಭವವೆನಿಸಿದಾಗ ನೇರವಾಗಿ ಊರಿಗೆ ಹೋಗುತ್ತಾರೆ.

ಮಂತ್ರಿ ಮೇಲ್‌ಗಿರಿಗೌಡರ ಮಗ ಶ್ರೀನಿವಾಸನನ್ನು ಸತ್ಯಭಾಮಾ ಮದುವೆಯಾಗುತ್ತಾಳೆಂಬ ಸುದ್ದಿ ಶೂದ್ರರಿಗೂ ಬ್ರಾಹ್ಮಣರಿಗೂ ಶಾಕ್. ಮಗನ ಪತ್ರ ನೋಡಿ ಮಂತ್ರಿಗಳಿಗೆ ದಿಗಿಲು. ಬ್ರಾಹ್ಮಣರ ಸೊಕ್ಕು ಮುರಿಯಲು ಒಳ್ಳೆಯ ಸಂದರ್ಭವೆಂಬ ಸಂತೋಷವಾದರೂ ಜಾತಿ ಬಾಂಧವರಲ್ಲಿ ತಮ್ಮ ಗೌರವ ಕಡಿಮೆಯಾಗಿ ರೈತರ ಓಟುಗಳೆಲ್ಲ ಖೋತಾ ಆದರೆ ತನ್ನ ಮಂತ್ರಿಪದವಿಯೇ ಕೈಬಿಡುತ್ತದೆಂಬ ಲೆಕ್ಕಾಚಾರ. ಗೌಡರು ಸಮೀಕರಣದಲ್ಲಿ ತೊಡಗಿದ್ದಾರೆ. ಮಗನ ಮದುವೆಯಂತಹ ಗಂಭೀರ ವಿಷಯದಲ್ಲಿಯೂ ಅದೇ ಸರಳ ಸೂತ್ರವನ್ನು ಅವಲಂಬಿಸಿದ್ದಾರೆ. ಮದುವೆಯಿಂದ ಲಾಭವಾಗುವಂತಿದ್ದರೆ ಯಾವುದೇ ತೆರನಾದ ರಾಜಿಗೂ ಸಿದ್ಧ. ಲುಕ್ಸಾನಿನ ಪ್ರಮಾಣ ಜಾಸ್ತಿಯೆನಿಸಿದಾಗ ಮದುವೆ ಬೇಡ ಎಂಬ ತೀರ್ಮಾನಕ್ಕೆ ಬರುತ್ತಾರೆ. ಅವರ ತಂತ್ರ ಫಲಿಸುತ್ತದೆ. ದುರ್ಬಲ ಮನಸ್ಸಿನ, ಗೊತ್ತುಗುರಿಯಿಲ್ಲದ, ದೃಢನಿಶ್ಚಯವಿಲ್ಲದ, ತನ್ನ ಸುಖಲಾಲಸೆಯನ್ನೇ ಆದರ್ಶವೆಂದು ಭ್ರಮಿಸಿದ. ಸಿನೆಮಿಕ್ ಜೀವನದ ಬಾಲಕ ಬುದ್ಧಿಯಿಂದ ಅಗಾಧವಾದುದೇನನ್ನೋ ಸಾಧಿಸುತ್ತೇನೆಂಬ ಶ್ರೀನಿವಾಸನ ಭ್ರಮೆ ಬಲು ಬೇಗನೆ ನಿರಸನವಾಗಿ ಕೆಂಪಯ್ಯನವರ ಮಗಳು ನರ್ಗೀಸ್‌ಳಂತಹ ಸುಂದರಿ ಕುಮುದಳನ್ನು ಮದುವೆಯಾಗುತ್ತಾನೆ.

ಭೈರಪ್ಪನವರ ಅಸಾಧಾರಣ ರಾಜಕೀಯಪ್ರಜ್ಞೆ ಕಾದಂಬರಿಯಲ್ಲಿ ನಮ್ಮ ಗಮನ ಸೆಳೆಯುವ ಮತ್ತೊಂದು ಅಂಶ. ಗಾಂಧೀಜಿಯನ್ನು ತಾತ್ವಿಕವಾಗಿ ನಮ್ಮ ಜನ ಅರ್ಥೈಸಲೇ ಇಲ್ಲ. ಅಪಕ್ವ ಗಾಂಧೀವಾದಿಗಳಿಗೆ ಅದೊಂದು 'ಫಾರ್ಸ್' ಆಗಿ ಖಾದಿ, ಉಪವಾಸ, ಪರೋಪದೇಶಗಳಷ್ಟೇ ಆ ವಿಚಾರಧಾರೆ ಸೀಮಿತವಾದದ್ದು ಈ ದೇಶದ ಇನ್ನೊಂದು ದೊಡ್ಡ ದುರಂತ. ಗಾಂಧೀವಾದ ನಮ್ಮ ದೇಶದಲ್ಲಿಂದು ಜೀವಂತವಾಗಿದೆಯೇ ಎಂಬ ಪ್ರಶ್ನೆ. ಮೇಲ್‌ಗಿರಿಗೌಡ, ಚೆಟ್ಟಯ್ಯ ಇಬ್ಬರೂ ಗಾಂಧೀಭಕ್ತರು. ಪ್ರತಿ ಮಾತಿಗೂ "ಮಹಾತ್ಮರು ಅಂಗಂತಿದ್ರು" ಎನ್ನುವ ಮಂತ್ರಿಗಳು ಗಾಂಧಿವಾದವನ್ನು ಗಟಾರದ ನೀರನ್ನಾಗಿ ಪರಿವರ್ತಿಸಿದ್ದಾರೆ. ಅದನ್ನು ತಮ್ಮ ರಾಜಕೀಯ ಚದುರಂಗದ ಆಡುಂಬೊಲವನ್ನಾಗಿಸಿಕೊಂಡಿದ್ದಾರೆ. ವ್ಯಕ್ತಿತ್ವವೇ ಇಲ್ಲದ ಚೆಟ್ಟಯ್ಯನಿಗೆ ಸರಕಾರದ ಸಹಾಯದಿಂದ ತೃಪ್ತಿ. ಕೈಯೆತ್ತಿ ಭತ್ತೆ ಪಡೆಯುವ ಸಂಭಾವಿತ ಜೀವ. ಅಹಿಂಸೆ ಸತ್ಯಾಗ್ರಹಗಳೆಂದರೆ ತಲೆಕೆಳಗಾಗಿ ನಡೆಯುವದೆಂಬುವೇ ಅವರ ಅರ್ಥ. ಚೆಟ್ಟಯ್ಯನ ಹೆಂಡತಿಗಂತೂ ಗಾಂಧೀಜಿ ದೇವರು ತನ್ನ ಗಂಡ ಗಾಂಧೀ ಗುಡಿಗೆ ಹೋಗಿದ್ದರು ಎಂದವಳು ಹೇಳುತ್ತಾಳೆ. ಈಗ ಗುಡಿಯನ್ನು ಕಟ್ಟಿ ಅವರ ತಲೆಯ ಮೇಲೆ ಎಣ್ಣೆ ಸುರಿದು ಜಿಡ್ಡುಗಟ್ಟಿಸಿಯೂ ಆಗಿದೆ. ನಮ್ಮ ಜನಗಳಿಗೆ

ಗಾಂಧಿಯನ್ನು ಹೇಗೆ ಉಪಾಯವಾಗಿ ಶೋಷಣೆಗೆ ಉಪಯೋಗಿಸಿಕೊಳ್ಳಬಹುದೆಂಬ ಚಿಂತೆ. ಅದರ ಚಿಂತನೆಯನ್ನು ಕಾದಂಬರಿಕಾರರು ಚೆನ್ನಾಗಿ ಮಾಡಿದ್ದಾರೆ.

ಕಾದಂಬರಿಯ ಪೂರ್ವಾರ್ಧ ಊರಿನ ಕತೆ, ಬೆಟ್ಟಯ್ಯ, ಮಂತ್ರಿಗಳು, ವೆಂಕಟೇಶ, ಮಾತಂಗಿ-ವೆಂಕಟರಮಣಯ್ಯರ ಕಾಮ ಇಲ್ಲವೆ ಪ್ರೇಮಜೀವನ, ಶ್ರೀನಿವಾಸ–ಸತ್ಯಳ ಮುರಿದ ಪ್ರೇಮದ ಘಟನೆಗಳನ್ನು ಹೇಳುತ್ತದೆ. ಮಾತಂಗಿ ದಾಸ್ಯ, ಸಹನೆಗಳ ಪ್ರತೀಕವಾಗುತ್ತಾಳೆಯೇ ವಿನ ಕಾದಂಬರಿಯಲ್ಲಿ ವಿಶೇಷ ಪ್ರಾಧಾನ್ಯತೆಯನ್ನೇನೂ ಪಡೆದುಕೊಳ್ಳುವದಿಲ್ಲ. ಉತ್ತರಾರ್ಧ ಸಮಸ್ಯೆಯ ಗಡುಚನ್ನು ನಮಗೆ ಪರಿಚಯಿಸುತ್ತದೆ. ಸತ್ತವರ ನೆರಳುಗಳಾದ ಹರಿಜನರನ್ನು ಕ್ರಿಯಾಶಾಲಿಗಳನ್ನಾಗಿ, ಅವರನ್ನು ನೈಚ್ಯಭಾವದಿಂದ ಮೇಲೆತ್ತುವದಕ್ಕೆ ವಾಹಕವಾಗಿರುವ ಪಾತ್ರಗಳು ಸತ್ಯ ಮತ್ತು ಮೋಹನದಾಸ. ಸತ್ಯಳಿಗೆ ತುಳಿಯಲ್ಪಟ್ಟ ಈ ಜನಗಳ ಬಗೆಗೆ ಅತ್ಯಂತ ಸಹಾನುಭೂತಿ. ಅವರನ್ನು ಮೇಲೆತ್ತಲೂ ಯತ್ನಿಸುತ್ತಾಳೆ. ಮದುವೆ ಮುರಿದಾಗ ತಂದೆಗೆ ಹುಚ್ಚು ಹಿಡಿದುದರಿಂದ ತೋಟಕ್ಕೆ ಬರುತ್ತಾಳೆ. ಬೌದ್ಧಿಕವಾಗಿ ಸಮಸ್ಯೆಯಲ್ಲಿ ಪಾಲುಗೊಂಡು, ಮೋಹನದಾಸನ ಆರ್ಭಟದ ಮಾತುಗಳನ್ನು ಕೇಳಿಯೂ ತಂದೆಯ ಮರಣದ ಸೇಡನ್ನು ಮರೆತು ಮಾನವೀಯ ದೃಷ್ಟಿಯಿಂದ ಅವನನ್ನು ಕಾಣುತ್ತಾಳೆ. ಹೊಲೆಯರ ಜಾಗೃತಿಗೆ ಬೇಕಾದ ಸಾಹಿತ್ಯವನ್ನು ಒದಗಿಸುತ್ತಾಳೆ. ಶೂದ್ರಳಂತೆಯೇ ಬದುಕಲಿಚ್ಛಿಸಿ ಮಣ್ಣಿನಲ್ಲಿ ಅವರೊಡನೆ ಆರುಗೇದು ಅವರೊಡನೆ ಉಣ್ಣುತ್ತಾಳೆ.

ಟಿ. ಎಸ್. ಎಲಿಯಟ್ "ಉತ್ತಮ ಕಾದಂಬರಿಯ ಅನುಭವ ಪ್ರಪಂಚ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸಬೇಕು. ಹೊಸದೊಂದು ದೃಷ್ಟಿಕೋನವೊಂದರ ಸಾಧ್ಯತೆಯನ್ನು ಬಿಂಬಿಸಬೇಕು. ನಿರೀಕ್ಷಣಾಸಾಮರ್ಥ್ಯವನ್ನು ಹರಿತಗೊಳಿಸಬೇಕು" ಎಂದು ಹೇಳುತ್ತಾನೆ. ಈ ಮಾನದಂಡದಿಂದ 'ದಾಟು' ಉತ್ತಮ ಕಾದಂಬರಿ. ಸಮಸ್ಯೆಯ ತೀವ್ರತೆಯನ್ನು ಓದುಗನಿಗೆ ತಟ್ಟಿಸುವದರಲ್ಲಿ ಸಂಪೂರ್ಣ ಯಶಸ್ಸನ್ನು ಸಾಧಿಸಿದೆ. ಮೊದಲನೆಯದಾಗಿ ಹರಿಜನರ ಶೋಷಣೆಯಲ್ಲಿ ತೊಡಗಿರುವ ವ್ಯಕ್ತಿಗಳು ಕೇವಲ ಬ್ರಾಹ್ಮಣರಷ್ಟೇ ಅಲ್ಲ, ಉಳಿದ ಎಲ್ಲ ವರ್ಗಗಳೂ ಅದರಲ್ಲಿ ಸಾಮೀಲಾಗಿವೆ. ಸ್ವಾರ್ಥ, ಜಾತಿಯನ್ನು ಮೀರಿಯೂ ಕೆಲಸ ಮಾಡುತ್ತದೆ. ತೆಂಗಿನತೋಟದ ಆಸೆಗಾಗಿ ತಂಗಿಯ ಚಾರಿತ್ರ್ಯವಧೆಗೂ ವೆಂಕಟೇಶ ಹೇಸುವದಿಲ್ಲ. ಗೌಡರಂತೂ ಸರಿಯೇ ಸರಿ. ರಾಜಕೀಯ ಸುರಕ್ಷತೆಯ ಮುಂದೆ ಮಗ, ಅವನ ಮದುವೆ ಅವರಿಗೆ ಗೌಣ. ಸಮಸ್ಯೆಯ ಇನ್ನೊಂದು ಮುಖವನ್ನೂ ಕಾದಂಬರಿಕಾರರು ನಮಗೆ ಹೇಳುತ್ತಾರೆ. ಶೋಷಣೆಗೆ ಒಳಗಾದ ಒಂದು ವರ್ಗ ಮೇಲಕ್ಕೆ ಬಂದಾಗ ಉಳಿದ ವರ್ಗಗಳನ್ನು ಅದು ಕೆಳಕ್ಕೆ ದಬ್ಬುತ್ತದೆ. ಸದ್ಯದ ರಾಜಕೀಯ ಸ್ಥಿತಿ ನೋಡಿದರೆ ಇದಕ್ಕೆ ವಿವರಣೆ ಬೇಡ. ಕೇವಲ ಒಂದು ಜಾತಿಯ ಜನ ಅಲ್ಲ,

ಒಂದು ಪಂಗಡದ ಜನ ರಾಜಕೀಯ ಚದುರಂಗದಲ್ಲಿ ದಾಳ ಉರುಳಿಸುತ್ತವೆ. ಪ್ರತೀಕಾರ ಅದರ ಮನೋಭಾವವಾಗುತ್ತದೆ. ಮೋಹನದಾಸನ ವಿಚಾರವೂ ಇದೇ. ಅಂದರೆ ಉಚ್ಚಜಾತಿಯ ಹೆಂಗಸರನ್ನು ಕೆಡಿಸಬೇಕು, ಅವರನ್ನು ಕೂಲಿ ಆಳುಗಳನ್ನಾಗಿಸಬೇಕು ಎಂಬುದು ಆತನ ಘೋಷಣೆ. ಹೊಲೆಯರ ಹೆಂಗಸರ ಜತೆ ಮಜಾ ಮಾಡಬೇಕೆನ್ನುವ ನೀಚಬುದ್ಧಿಯೇ ಈತನಲ್ಲಿ ತುಂಬಿಕೊಂಡಿದೆ. ಮಚ್ಚು, ಮೊಚ್ಚಿ ಆತನ ಕ್ರಾಂತಿಯ ಮಂತ್ರಗಳು. ಆತನಿಗೆ ಬೇಕಾದುದು ಸಾಮಾಜಿಕ ನ್ಯಾಯ. ಅದಕ್ಕಾಗಿಯೇ ಆತನ ಹೋರಾಟ. ಅದಿಲ್ಲವಾದರೆ ಆತ ದೇವಾಲಯವನ್ನು ಪ್ರವೇಶಿಸುವದರಲ್ಲಾಗಲೀ, ಬಾರನ್ನು ಪ್ರವೇಶಿಸುವದರಲ್ಲಾಗಲೀ ಯಾವ ಅಂತರವನ್ನೂ ಕಾಣುವದಿಲ್ಲ. ಮಾರ್ಕ್ಸನನ್ನು ಓದಿ ಜೀವಂತ ಜ್ವಾಲಾಮುಖಿಯಾದ, ಡೈನಾಮೈಟ್ ಸ್ಫೋಟದ ಸಿದ್ಧತೆಯಲ್ಲಿದ್ದ ಆತ 'Overwhelmed' ಎನ್ನುವದಾಗಲೀ, ವಿರೋಧಾ ಭಕ್ತಿ ಆತನದು ಅನ್ನುವದೆಲ್ಲ ಅರ್ಥವಿಲ್ಲದ ಮಾತುಗಳಾಗುತ್ತವೆ

ಗಮನಿಸಬೇಕಾದ ಮತ್ತೊಂದು ಸ್ವಾರಸ್ಯಕರ ಅಂಶವೆಂದರೆ ಎಲ್ಲ ಜಾತಿಗಳೂ ತಮ್ಮ ಮೇಲ್ಮೆಯನ್ನು ಹೇಳಿಕೊಳ್ಳುವ, ಅದಕ್ಕೆ ಆಧಾರವಾಗುವ ತಲೆ ಬಾಲವಿಲ್ಲದ ಕಟ್ಟುಕಥೆಗಳ ಆಧಾರ ಹುಡುಕಲು ಯತ್ನಿಸುವದು. ಗಾಂಧೀವಾದಿ ಚೆಟ್ಟಯ್ಯನೂ ಕಥಾಸೃಷ್ಟಿಗೆ ವೆಂಕಟೇಶನಿಗೆ ದುಂಬಾಲು ಬೀಳುತ್ತಾನೆ. ಪರಿಸರದ ಸೂಕ್ಷ್ಮ ಪ್ರಜ್ಞೆ ಕಾದಂಬರಿಕಾರರಲ್ಲಿ ಮೆಚ್ಚಬಹುದಾದ ಇನ್ನೊಂದು ಅಂಶ.

ಸೈದ್ಧಾಂತಿಕವಾಗಿ ಐತಿಹಾಸಿಕ ಕಾಲಾನುಕ್ರಮದಲ್ಲಿ ಜಾತಿಪದ್ಧತಿ ಹೇಗೆ ವಿಕೃತರೂಪವನ್ನು ಪಡೆಯಿತೆಂಬುದನ್ನು ಭೈರಪ್ಪನವರು ವಿವರಿಸುವ ರೀತಿಯೂ ಅಷ್ಟೇ ಸಮರ್ಥವಾಗಿದೆ. ಸತ್ಯಳ ಬುದ್ಧಿ ಉಪನಿಷತ್ತುಗಳನ್ನು ನೆನೆಸಿಕೊಂಡಿತು. "ಚರಾಚರ ವಸ್ತುಗಳೆಲ್ಲ ಬ್ರಹ್ಮವೇ. ಪ್ರತಿಯೊಂದು ಜೀವವೂ ಬ್ರಹ್ಮವೇ. ಪ್ರತಿಯೊಂದು ಆತ್ಮವೂ ಬ್ರಹ್ಮನ ಅಂಶ. ಭೇದ ಬೇಡ, ದ್ವೈತ ಬೇಡ; ಅವನೇ ನೀನು, ನೀನೇ ಅವನು. ದೇಶ, ಕಾಲ ಭೇದಗಳೆಲ್ಲ ಮಿಥ್ಯ, ಬ್ರಹ್ಮಜ್ಞಾನವೇ ಸತ್ಯ ಅದಕ್ಕೆ ಲಿಂಗವಿಲ್ಲ, ಜಾತಿಯಿಲ್ಲ, ವರ್ಣವಿಲ್ಲ". ಹಾಗಿರುವಾಗ ವರ್ಣಭೇದವು ಹೇಗೆ ಹುಟ್ಟಿತು? ಬ್ರಹ್ಮಜ್ಞಾನವು ಅದನ್ನು ಪ್ರತಿಪಾದಿಸುವವರ ಮನೋಬುದ್ಧಿ ಪ್ರಜ್ಞೆಗಳಲ್ಲಿ ಪೂರ್ಣವಾಗಿ ಬೆಳಗಲಿಲ್ಲವೋ ಅಥವಾ ಭೇದಸಿದ್ಧಾಂತದೊಡನೆ ರಾಜಿಮಾಡಿಕೊಂಡು ಈ ತತ್ವವು ಉಚ್ಚಕಂಠದಲ್ಲಿ ಘೋಷಣೆ ಮಾಡುತ್ತಿತ್ತೋ? ವರ್ಣಧರ್ಮವೆಂಬ ರೂಪದಲ್ಲಿ ಮಿಥ್ಯೆಯು ಬ್ರಹ್ಮಸತ್ಯವನ್ನು ಕಬಳಿಸಿತು. ಶೂದ್ರತ್ವವು ತನ್ನತನವನ್ನು ಕಳೆದುಕೊಂಡು ಬ್ರಹ್ಮವಾಗಲು ಹವನಿಸುತ್ತದೆ ಆದರೆ ಅದೇ ಶೂದ್ರತ್ವವು ಬೇರೊಂದು ರೂಪ ತಾಳಿ, ಬ್ರಹ್ಮದ ಸೋಗುಹಾಕಿ ಅದನ್ನು ವಿರೋಧಿಸುತ್ತದೆ. ಇಲ್ಲಿಯವರೆಗೆ ನಡೆಯುತ್ತಿರುವ ಪುನರ್ಘಟನೆಯವರೆಗೆ ಇದೇ ಇತಿಹಾಸ ನಡೆಯುತ್ತದೆ.

ಸಮಸ್ಯಾಪ್ರಧಾನವಾದ 'ದಾಟು' ವಿನಲ್ಲಿ ಆತಂಕಕಾರಿ, ಅಪಾಯಕಾರಿಯಾದ ಈ ಟೊಳ್ಳು ಅಪಮೌಲ್ಯದ ನಿವಾರಣೆಯ ಎಲ್ಲ ಸಾಧ್ಯತೆಗಳನ್ನೂ ಕಾದಂಬರಿಕಾರರು ನಮ್ಮೆದುರು ಇಟ್ಟಿದ್ದಾರೆ. ಹರಿಜನರನ್ನು ಬೌದ್ಧಿಕವಾಗಿ ಮೇಲೆತ್ತಲು ಸಮಸ್ಯೆಯಲ್ಲಿ ಸಂಪೂರ್ಣ **involve** ಆಗದೆಯೇ ಉತ್ತರಾರ್ಧದಲ್ಲಿ ಸತ್ಯಳ ಪಾತ್ರ ಪಾತಳಿಯ ಮೇಲೆ ಚಲಿಸುವಂತೆ ಭಾಸವಾಗುತ್ತದೆ. ಹುಮ್ಮಸ್ಸಿನಿಂದ ಕಟ್ಟಳೆಗಳನ್ನು ಮುರಿಯಲು ಯತ್ನಿಸಿದವಳು ತಂದೆಯ ಮರಣದ ನಂತರ ಯಜ್ಞಯುಗದ ಯೋಗಿನಿಯಂತೆ ವರ್ತಿಸುತ್ತಾಳೆ. ಮೀರಳಿಗೆ ಎಲ್ಲರಿಗೂ ಜನಿವಾರ ಹಾಕುವದು ಸಮಸ್ಯೆಗೆ ತೀರಾ ಹಳೆಯ ಪರಿಹಾರ. ಮೀರಳನ್ನು ಸತ್ಯಳೊಡನೆ ಮದುವೆ ಮಾಡಿಸಿದ್ದು ತೋಳನ ಬಾಯಿಗೆ ಕುರಿ ಕೊಟ್ಟಂತೆ. ಸಮಸ್ಯೆಯಿಂದ ಪಲಾಯನ ಹೇಳಿದಂತೆ. ಮೋಹನ ದಾಸನನ್ನು ಮದುವೆಯಾಗಲು ಯೋಚಿಸಿ ಒಳಿತು ಕೆಡಕುಗಳನ್ನು ತೂಗುವ ನ್ಯಾಯಾಧೀಶಳೆನಿಸುತ್ತಾಳೆ. ಅವಳು ಇತಿಹಾಸದ ವಿದ್ಯಾರ್ಥಿನಿಯಾಗಿ ನಿರ್ಲಿಪ್ತ ದೃಷ್ಟಿಯಿಂದ ಘಟನೆಗಳ ದಾಖಲೆಯಲ್ಲಿಯೂ ತೊಡಗಿಲ್ಲ. ಜೊತೆಗೆ ಸಮಸ್ಯೆಯೊಡನೆ ಸಾಮರಸ್ಯ ಪಡೆಯದೆ ದ್ವಂದ್ವಕ್ಕೆ ಸಿಲುಕುತ್ತಾಳೆ. ಪರಿಣಾಮವಾಗಿ ಅವಳು ಹರಿದೊಗೆಯುವ ಜನಿವಾರದ ಸಂಕೇತ ತೀರಾ ದುರ್ಬಲವಾಗಿ ಬೆಲೆ ಕಳೆದು ಕೊಳ್ಳುತ್ತದೆ.

ಮತ್ತೊಂದು ಆಶಯ ಕ್ರಾಂತಿ. ಮೇಲ್ನೋಟಕ್ಕೆ ಮೋಹನದಾಸ 'ರೆಡಿಮೇಡ್' ಕ್ರಾಂತಿಕಾರ ಎನಿಸುತ್ತಾನೆ. ಕ್ರಾಂತಿಗೆ ಬೇಕಾಗುವ ಭಾವೋದ್ವೇಗ ಆತನಲ್ಲಿದೆ. ಹಳೆಯದನ್ನೆಲ್ಲ ಕೊಚ್ಚಿಹಾಕಲು ಡೈನಾಮೈಟ್ ಹಾಕಿ ಒಂದು ಗುಡಿಯನ್ನು ದಾಸ ಒಡೆದರೆ ಭಾರತದಲ್ಲಿ ಲಕ್ಷಲಕ್ಷ ಗುಡಿಗಳಿವೆ. ಹರಿಯಬಹುದಾದ ರಕ್ತದ ಪ್ರಮಾಣ ನೋಡಿದರೆ ಅದು ಅತ್ಯಂತ ಅಪಾಯಕಾರಿಮಾರ್ಗ. ಆದರೆ ದಡ್ಡುಬಿದ್ದ ಭಾರತೀಯ ಸಮಾಜವನ್ನು ಅಲುಗಾಡಿಸಲು ಶೋಷಣೆಯ ಮೂಲಗಳಾದ ಗುಡಿಗಳನ್ನು ಉಡಾ ಯಿಸುವದೊಂದೇ ಅನಿವಾರ್ಯವಾದ ಮಾರ್ಗವೆನಿಸಿದೆ ಕ್ರಾಂತಿ ಸೋವಿಯಾಗಿ ಬಾಯಿಮಾತಿನಿಂದ ಆಗುವದಿಲ್ಲ.

'ದಾಟು' ಒಂದು ಕಾದಂಬರಿಯೇ ಅಲ್ಲ. ಅದಕ್ಕೆ ಪ್ರಶಸ್ತಿ ಹೇಗೆ ಬಂತು ? ಎನ್ನುವ ಕನ್ನಡ ಶಾಲೆಯ ಮಾಸ್ತರುಗಳಿಂದ ಹಿಡಿದು, ಭೈರಪ್ಪನವರು ಬ್ರಾಹ್ಮಣ ಪಕ್ಷಪಾತಿ, ಅವರು ಶೂದ್ರರ ಬಗೆಗೆ ಬರೆದುದು ಹುಸಾಕ್ರಸಿ ಎನ್ನುವ ವಿಶ್ವವಿದ್ಯಾ ಲಯದ ಪ್ರಾಧ್ಯಾಪಕರುಗಳವರೆಗೆ ಅದರ ವಿಮರ್ಶೆಯ ವ್ಯಾಪ್ತಿಯಿದೆ. ಕಥಾಪ್ರಿಯ, ಆದರ್ಶಪ್ರಿಯ ಮೊದಲನೆಯ ವರ್ಗವನ್ನು ನಾವು ಗಣನೆಗೆ ತಂದುಕೊಳ್ಳುವಂತಿಲ್ಲ. ಶಿವರಾಮಯ್ಯನವರು ಹೇಳಿದ ಹಾಗೆ ಅವರು ಬ್ರಾಹ್ಮಣ ಪಕ್ಷಪಾತಿಯಾಗಿದ್ದರೆ ವೆಂಕಟೇಶನಂತಹ ಹಿಪೊಕ್ರ್ಯಾಟ್, ಮನುಷ್ಯನೆನಿಸಿಕೊಳ್ಳಲು ನಾಲಾಯಕ್ ಎನಿಸುವ

ಚೆನ್ನಿಗರಾಯ, ಗುಲ್ಲಾಗಂಟಿ ಗಂಗವ್ವ, ಅಪ್ಪಣ್ಣಯ್ಯನ ಹೆಂಡತಿ ಸೂಳೆಯಾದುದರ ಚಿತ್ರಣಕ್ಕೆ ಬ್ರಾಹ್ಮಣರು ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕೆ ?

ಅಪ್ರಾಮಾಣಿಕ ಬರಹಗಾರ ಎನ್ನುವ ಮಾತು ವಿಮರ್ಶೆ ಅಲ್ಲ. ಶೂದ್ರನಿಂದಲೇ ಶೂದ್ರ ಸಮಸ್ಯೆ ಬರೆಯಲ್ಪಟ್ಟರೆ ಆಥೆಂಟಿಕ್ ಆಗಿರುತ್ತದೆಂದು ಒಪ್ಪಿಕೊಳ್ಳುವದಾದರೆ, ವಾಲ್ಮೀಕಿ ಬೇಡರ ಕಥೆಯನ್ನು ಬರೆಯದೇ ರಾಮಾಯಣವನ್ನೇಕೆ ಬರೆದ ? ಎಂದು ಕೇಳಿದಷ್ಟು ಹಾಸ್ಯಾಸ್ಪದವೆನಿಸುತ್ತದೆ.

ಸಾಹಿತಿ ಧರ್ಮ, ಜಾತಿಯ ಹಿರಿಮೆಯನ್ನು ಎತ್ತಿ ಹೇಳುವ ಪಾದ್ರಿ ಅಲ್ಲ. ಕ್ರಾಂತಿಯ ತುತೂರಿಯನ್ನೂದಿ ಜನತೆಯನ್ನು ಬಡಿದೆಬ್ಬಿಸುವದು ಅವನ ಮೂಲ ಧ್ಯೇಯವೂ ಅಲ್ಲ. ಸುತ್ತಲಿನ ಬದುಕಿಗೆ ಪ್ರತಿಕ್ರಿಯೆಯ ರೂಪದಲ್ಲಿ, ಸಮಸ್ಯೆ ನಿರ್ಮೂಲನೆಯ ಸಾಧ್ಯಾಸಾಧ್ಯತೆಗಳನ್ನು ನಾವು ಕಾಣಬಹುದು ಅಷ್ಟೇ. ಸಾಹಿತ್ಯ ಸೃಷ್ಟಿಯಲ್ಲಿ ಭೈರಪ್ಪನವರ ಶ್ರದ್ಧೆಯನ್ನು, ಜೀವನದ ಸಂಕೀರ್ಣತೆಯನ್ನು ಓದುಗನಿಗೆ ತಟ್ಟಿಸುವಲ್ಲಿ ಅವರ ಪ್ರಾಮಾಣಿಕತೆಯನ್ನು ಮಾನವೀಯ ಮೌಲ್ಯ ಆದರ್ಶಗಳಲ್ಲಿರುವ ಅವರ ಮೂಲಭೂತ ಕಾಳಜಿಯನ್ನು, ಸೈದ್ಧಾಂತಿಕ ಪರಿಜ್ಞಾನವನ್ನು (Theorotical insight) ನಾವು ಪ್ರಶ್ನಿಸುವ ಹಾಗಿಲ್ಲ. ಭೈರಪ್ಪನವರ ಕಾದಂಬರಿಗಳು ದೋಷ ಮುಕ್ತವೆಂದು ಇದರ ಅಭಿಪ್ರಾಯವೂ ಅಲ್ಲ. ಜೇನೆಯನರಿಯದ ನೀರಸರನೇಕೆ ಪುಟ್ಟಿಸಿದನೋ ಎಂದು ಸಾಹಿತಿ ವಿಮರ್ಶಕನ ಬಗೆಗೆ ಪರಿತಾಪ ಪಡಕೂಡದು ಅಷ್ಟೇ.

● ●

ಮುತ್ತಿನಕಂಥೆ ಶತಕ

● ಸಂ: ಎಂ. ಜಿ. ಬಿರಾದಾರ

"ಮುತ್ತಿನಕಂಥೆ ಸದ್ಗುರುವೆ' ಅಂಕಿತದ ಭಾಮಿನಿಷಟ್ಪದಿಗಳ ಹಸ್ತಪ್ರತಿಯೊಂದು ನನಗೆ ಗುಲಬುರ್ಗಾ ಜಿಲ್ಲೆಯ ಚಿತ್ತಾಪುರದ ಶ್ರೀ ಕಲ್ಲಪ್ಪ ರೇಶ್ಮಿಯವರಿಂದ ದೊರೆಯಿತು. ತೆಳ್ಳನೆಯ ಕಾಗದದಲ್ಲಿ ತೀರ ಇತ್ತಿತ್ತಲಾಗಿ ಅಂದರೆ ೧೯ ನೆಯ ಶತಮಾನದಲ್ಲಿ ಇದನ್ನು ಪ್ರತಿಮಾಡಿದ ಸಾಧ್ಯತೆಗಳಿವೆ. ಆದರೆ ನನಗೆ ಇದಕ್ಕೂ ಮೊದಲು ಕಾಗದದ ಜರ್ಜರಿತ ಹಸ್ತಪ್ರತಿಯೊಂದು ವಿಜಾಪುರ ಜಿಲ್ಲೆಯ ಧನ್ಯಾಳ ಗ್ರಾಮದ ವೇ. ಗುರುಪಾದಯ್ಯ ಹಿರೇಮಠ ಅವರದು, ತಿಕೋಟಾದ ಶ್ರೀ ವಿರುಪಯ್ಯ ರಾಮಯ್ಯ ಸಾಲಿಮಠ ಅವರಿಂದ ಉಪಲಬ್ಧವಾಗಿತ್ತು. ಅದರಲ್ಲಿ ಬೇರೆಬೇರೆ ಕೃತಿಗಳ ಜೊತೆಗೆ ಮುತ್ತಿನಕಂಥೆಯ ಲಿಂಗಸ್ಥಳದ ೬೪ ಪದ್ಯಗಳು ಮಾತ್ರ ಇದ್ದವು. ಆಮೇಲೆ ಡಾ. ವಿ. ಶಿವಾನಂದ, ಗುಲಬುರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಸಗರದಲ್ಲಿ ದೊರೆತ ತೀರ ಜೀರ್ಣವಾದ ಕೋರಿಕಾಗದದ ಪ್ರತಿಯೊಂದನ್ನು ಕೊಟ್ಟರು. ಈ ಮೂರೂ ಪ್ರತಿಗಳು ತೀರ ಅಶುದ್ಧವಾಗಿವೆ. ಅ. ಚ. ಕ. ಎಂಬ ಸಂಕೇತವನ್ನಿಟ್ಟುಕೊಂಡು ಈ ಮೂರು ಪ್ರತಿಗಳನ್ನು ಅವಲಂಬಿಸಿ ಈ ಶತಕವನ್ನು ಸಂಪಾದಿಸಲಾಗಿದೆ.

ಈ ಮೂರೂ ಪ್ರತಿಯಲ್ಲಿ ಕೃತಿಕಾರನ ಹೆಸರು ಲಭ್ಯವಿಲ್ಲ. ಭಾಮಿನಿ ಷಟ್ಪದಿಯ ೧೧೫ ಪದ್ಯಗಳನ್ನೊಳಗೊಂಡ ಈ ಕೃತಿಯನ್ನು ೧. ಗುರುಸ್ಥಲದ ವಚನ ೨. ಲಿಂಗಸ್ಥಲದ ವಚನ ೩. ಜಂಗಮಸ್ಥಲದ ವಚನ ಎಂದು ವಿಭಾಗಿಸಿದ್ದಾನೆ. ಕೃತಿಕಾರನು ವಚನಗಳೆಂದು ಹೇಳಿದರೂ ನಾವು ಶತಕವೆಂದು ಕರೆದುದರ ಕಾರಣ ಅದರ ವಸ್ತು ಮತ್ತು ಅದರಲ್ಲಿಯ ಪದ್ಯಸಂಖ್ಯೆ.

ಕರ್ನಾಟಕದಲ್ಲಿ ಮುತ್ತಿನಕಂಥೆಯ ಮಠಗಳು ಸಾಕಷ್ಟಿವೆ. ಅದರಲ್ಲೊಂದು ವಿಜಾಪುರ ಜಿಲ್ಲೆಯ 'ಜಮಖಂಡಿ ತಾಲೂಕಿನ ಕಡಪಟ್ಟಿಯಲ್ಲಿ, ಇನ್ನೊಂದು ಬೆಂಗಳೂರಿನಲ್ಲಿದ್ದುದು ನನಗೆ ಗೊತ್ತು. ಈ ಮಠದ ಪರಂಪರೆಯವರು ಇದನ್ನು ಬರೆದಿರುವರೆಂದು ಹೇಳಬಹುದು. 'ಅ' ಮತ್ತು 'ಚ' ಪ್ರತಿಯಲ್ಲಿ ಇದನ್ನು "ಮುತಿನ್ತಕಂಥೆ" ಎಂದೂ 'ಕ' ಪ್ರತಿಯಲ್ಲಿ 'ಮುತ್ತಿನಕಾಂತೆ' ಎಂದೂ ಕರೆಯಲಾಗಿದೆ. ಇದರಲ್ಲಿ ಮುತ್ತಿನಕಾಂತೆ ಸರಿಯೆಂದು ಹೇಳುವದು ಕಷ್ಟ. ಆದರೂ ನಾವು ಇದರ ಹೆಸರು 'ಮುತ್ತಿನಕಂಥೆ' ಎಂದೇ ಭಾವಿಸಿದ್ದೇವೆ. ಇದು ಸುಮಾರು ೧೭ ನೆಯ ಶತಮಾನದ ಕೃತಿಯಾಗಿರಬೇಕು.

ಗುರುಸ್ಥಲದ ವಚನ

ಶ್ರೀಪತೀಯಜಮಿಂದ್ರವಂದಿತ ।
ಪಾಪಬುಧಹರಕುಲಿಶನಿರ್ಮೂಲ ।
ರೂಪಬ್ರಹ್ಮಾಂಡಖಿಲನಿರ್ಮಿತ ಪರಮಪರಮೂರ್ತಿ ॥
ದೀಪಮುನಿಗಣಹೃದಯವಲ್ಲಭ ।
ಕೋಪಕುಟಿಲಭ[೧]ವ[೧]ತ್ರಸರ್ವ[೨]ಘ[೨] ।
ಆಪಹರ ಶರಣಾರ್ಥಿ ಮುಕ್ತಿನಕಂಥೆ ಸದ್ಗುರುವೆ (?) ॥೧॥

ಸ್ಥಲವನೆಲ್ಲವ ನೋಡಿ ನಿರ್ಗುಣ ।
ಸ್ಥಲವಿವೇಕದ ಮಾರ್ಗವೆತ್ತಿದ ।
ಸ್ಥಲವೆ ಸದ್ಗುರುಲಿಂಗ ಜಂಗಮಸ್ಥಲವೆ ನಿಜವೆಂದು ॥
ಹಲವು ಶರಣರು ಒಪ್ಪುವಂ[೩]ಥ[೩] ।
ಸ್ಥಲತ್ರಯವು ನಿಧಾನ ನಿರ್ಣಯ ।
ಕಲಿಸಿದಲ್ಲಮಪ್ರಭುವೆ ಮುಕ್ತಿನಕಂಥೆ ಸದ್ಗುರುವೆ ॥೨॥

ಹರನು ತನ್ನನು ನಿಜವಿಲಾಸದಿ ।
ಮೆರೆದು ಸಚರಾಚರವ ನೋಡುತ ।
ಪರಮಶಾಂತವ ತಾಳಿದಲ್ಲಮಪ್ರಭುವೆ ತಾನಾಗಿ ॥
ನರಸುರರ ಪ್ರಮಥರನ ಬೋಧಿಸಿ ।
ಹರುಷದಿಂದಲಿ ವರವ ಕೊಟ್ಟನು ।
ಗುರುಸ್ಥಲವದೆನಿಸಿತ್ತು ಮುಕ್ತಿನಕಂಥೆ ಸದ್ಗುರುವೆ ॥೩॥

ವೇದ ಬಲ್ಲವನಲ್ಲ ತರ್ಕದ ।
ವಾದ ಬಲ್ಲವನಲ್ಲ ಶಾಸ್ತ್ರದ ।
ಓದು ಬಲ್ಲವನಲ್ಲ ಶಬ್ದನಿಘಂಟು ಛಂದಸನು ॥
ನಾದ ನಿಶ್ಚಲಲಿಂಗ ನಿಜಗುರು ।
ಪಾದಶಕ್ತಿಯಲಿಂದ ಶಬ್ದವ ।
ಭೇದವಿಲ್ಲದೆ ಪೇಳ್ವೆ ಮುಕ್ತಿನಕಂಥೆ ಸದ್ಗುರುವೆ ॥೪॥

೧–೧. ಮಂ (ಕ). ೨–೨ ಗ (ಕ). ೩–೩ ತಾ (ಕ).

ಶಂಕರನ ನಿಜಲೆಂಕ ಲೆಂಕರ।
ಲೆಂಕನಾ ಶಿವಲೆಂಕ ವೀರನು।
ಶಂಕರನೆ ಗುರುವಾಗಿ ಬಂದುದ ಬಲ್ಲೆ ನಿಜವೆಂದು ॥
ಶಂಕರನ ಪ್ರಮಥರನ ನಾ ನಿ।
ಶ್ಯಂಕದಲಿ ಭಜಿಸುವೆನು ಪನ್ನಗ।
ಕಂಕಣನ ದಯದಿಂದ ಮುಕ್ತಿನಕಂಥೆ ಸದ್ಗುರುವೆ ॥೫॥

ಶಂಕಿಸುವ ಅಜ್ಞಾನವಿದು ನಿ।
ಶ್ಯಂಕ ಖಡ್ಗವ ಹಿಡಿದು ಮನನಿ।
ಶ್ಯಂಕ ನಿರ್ಮೋಹದಲಿ ಗುರುಭಕ್ತ್ಯರ್ಥ ನೆಲೆಗೊಳಿಸಿ ॥
ಶಂಕನಿಶ್ಯಂಕಳಿದನಾ ಶಿವ।
ಲೆಂಕನೆನಿಸುವ ಭವವಿರಹಿತವು।
ಕಂಕಣವ ಕೈಧರಿಸಿ ಮುಕ್ತಿನಕಂಥೆ ಸದ್ಗುರುವೆ ॥೬॥

ಒಂದು ಭಾವದಲಿಪ್ಪ ಶರಣರ
ಬಂಧುವೆನಿಸುವ ನಿಜದಯಾಪರ।
ಕುಂದನದ ನವರತ್ನ ಗದ್ದುಗೆಯ ಮೇಲೆ ನೀವಿರಲು ॥
ಇಂದುಶೇಖರ ನಿಮ್ಮ ಚರಣರ।
ವಿಂದ ಅರ್ಚಿಸುವಗರು ಕುಂಕುಮ।
ಗಂಧ ಕಸ್ತುರಿಯಲ್ಲಿ ಮುಕ್ತಿನಕಂಥೆ ಸದ್ಗುರುವೆ ॥೭॥

ಭಾರದಿಂದಲಿ ಸಲುಹನಾರೊ।
ಭಾರವಿಲ್ಲದೆ ಕಿಡುವನಾರೊ।
ನೀರಜಾಸನ ಹರಿಗೆಶಕೂವ ನಿಮ್ಮ ನಿರ್ಮಿತವು ॥ (?)
ಭಾರ ನಿರ್ಭಾರಗಳ [೪]ಹೊಂದ[೪]ದೆ।
ಧೀರದಲಿ ಬ್ರಹ್ಮಾಂಡ ರಕ್ಷಿಸು।
ಗಾರುಡೇಶ್ವರ ನೀನೆ ಮುಕ್ತಿನಕಂಥೆ ಸದ್ಗುರುವೆ ॥೮॥

ಫಾಲಲೋಚನ ಪ್ರಮಥವಂದಿತ।
ಶೂಲ ಡಮರುಗಹಸ್ತ ಶಂಕರ।
ನೀಲಕಂಠ ಮಹೇಶ ಧೂರ್ಜಟಿ ಸಚ್ಚಿದಾನಂದ ॥

೪-೪. ಹೊದ್ದ (ಕ).

ಕಾಲ ಅಂತಕ ನಿಮ್ಮ ನಾಮವು ।
ಕೇಳಿದೊಡೆ ಭವ ಹಿಂಗಿಹೋಗಲು ।
ಕಾಲದ್ಧ್ವಂಗಿನ್ನೇಕೆ ಮುತ್ತಿನಕಂಥೆ ಸದ್ಗುರುವೆ ॥೯॥

ಸಕಲಪಾತಕ ಹರಿವ ಮಂತ್ರವು ।
ಸಕಲಸಂಪತ್ಕರವು ಪೂಜೆಯು ।
ಸಕಲಭವ ದಾರಿದ್ರಭಂಜನ ನಿಮ್ಮ ನಾಮವಿದು ॥
ಸಕಲವೇದಾತೀತಗೋಚರ ।
ಸಕಲಮುನಿಗಣ ಮುಕ್ತಿಮಾರ್ಗವು ।
ಸಕಲ [೫]ನಿಷ್ಕಲ[೫] ನೀನೆ ಮುತ್ತಿನಕಂಥೆ ಸದ್ಗುರುವೆ ॥೧೦॥

ದುರಿತದಾರಿದ್ರದಂಧಕಾರವ ।
ಪರಿಹರಿಸು ನೀ ಎನ್ನ ಮನದಲಿ ।
ಸ್ಥಿರವು ಸಜ್ಜನಯೆಂಬ ಮನದಲಿ [ಪಟ್ಟವಾಳುತಲಿ] ॥
ನಿರುತ ನಿರ್ಮಲ ಶರಣರೆಲ್ಲರು ।
ಪರಮಪಾವನವಾದ ಮಂತ್ರವ ।}
ಕರುಣದಲಿ ಪಾಲಿಪುಗು ಮುತ್ತಿನಕಂಥೆ ಸದ್ಗುರುವೆ ॥೧೧॥

ವೇದಶಾಸ್ತ್ರಪುರಾಣತತಿಗಳು ।
ಓದುವದು ಮನ [ಪಿಂಡ ಶಕ್ತಿದು]।
ಆದಿವಸ್ತುಪ [೬]ಕಳೆಯು[೬] ತೋರಲಿಕ್ಕಾಗದವರಲ್ಲಿ ॥
ಶೋಧಿಸಿದ ಪರತತ್ತ್ವಪದವಿಯು ।
ಬೋಧಿಸುವ ಸದ್ಗುರುವು ತೋರಲು ।
ಗಾದೆ ಮತಿಗಳ ಬಿಟ್ಟು ಮುತ್ತಿನಕಂಥೆ ಸದ್ಗುರುವೆ (?) ॥೧೨॥

ಗುರುವೆ ಭಕ್ತ ಮಹೇಶನಾದನು ।
ಗುರು ಪ್ರಸಾದಿಯು ಪ್ರಾಣಲಿಂಗಿಯು ।
ಗುರುವೆ ಶರಣನು ಗುರುವೆ ಐಕ್ಯನು ಮುಕ್ತಿಸಾಧಕನು ॥
ಗುರುವೆ ಲಿಂಗವು ಗುರುವೆ ಜಂಗಮ ।
ಗುರುವೆ ಇಹಪರ ಸುಖವು ತಾನೆ ।
ಕರ್ತ ಭೋಕ್ತನು ಗುರುವೆ ಮುತ್ತಿನಕಂಥೆ ಸದ್ಗುರುವೆ ॥೧೩॥

೫-೫. ನಿಃಕಲ (ಅ). ೬-೬. ಬಳಿಯು (ಕ).

ಒಳ ಮಲಿನವನು ಶಾಂತಜಲದಲಿ ।
ತೊಳೆದು ಶುಚಿಮಾಡಿದ ನಿರಾಳವು ।
ಒಳ ಹೊರಗೆ ಒಂದಾಗಿ ತಾ ಹೃತ್ಕಮಲದಲಿ ನಿಲಿಸಿ ॥
ಥಳಥಳಿಸುವ ಜ್ಯೋತಿ ನೋಡಿದ ।
ಬಳಿಕ [ನೀನೇನಾದನಾತ್ಮನು]
ಕಳವಳವ ಪರಿಹರಿಸು ಮುಕ್ತಿನಕಂಥೆ ಸದ್ಗುರುವೆ ॥೧೪॥

ಕಾಯಿಗಿಡದಲಿ ಹತ್ತಿದಂತಹ ।
ಕಾಯಿಪಕ್ವವ ತೋರಿದ್ಹಣ್ಣಿಗೆ ।
ಕಾಯಗುಣವಿನ್ನೇಕೆ ಪೂರ್ಣಿಸಿ ಮಧುರವಿರುತಿರಲು ॥
ಕಾಯ ಗುರುಕರ ಜನಿಸಿ ನಿರ್ಮಲ ।
ಕಾಯವಾಗಿದ್ದಲ್ಲಿ ಮತ್ತೇ
ಕಾಯಕಷ್ಟವಿದೇಕೆ ಮುಕ್ತಿನಕಂಥೆ ಸದ್ಗುರುವೆ ॥೧೫॥

ಜಾತಿಯೊಳು ಜನಿಸಿದ್ದ ಗುರುಕರ ।
ಜಾತನಾಗಿ ವಿವೇಕಮತಿಗಳ ।
ಖ್ಯಾತಿಗಳ ಬಿಟ್ಬಾಡುವರ ಕೂಡಾಡುವದು ಹೀನ ॥
ಮಾತನಾಡಿಸಲಾಗದವರನು ।
ಪಾತಕವ ಹೊಂದಿಪ್ಪುದೆಂದಿಗೆ ।
ಘಾತಕರ ಸಂಗವನು ಮುಕ್ತಿನಕಂಥೆ ಸದ್ಗುರುವೆ ॥೧೬॥

ಹಾಲುಪಕ್ವವನ್ನರಿದು ಕಾಸಿದ ।
ಮೇಲೆ ಶಿವದಾನವನು ನೀಡುವ ।
ಹಾಲು ಶಿವದಾನವನು ಸರಿಯಲಿ ಶಿಷ್ಯಗುರುವುಗಳ ॥
ಫಾಲಲೋಚನನಾದ ಗುರುವಿನ ।
ಮೇಲೆ ತನುಮನವಪ್ಪಿ ಶಿಷ್ಯನು ।
ಕಾಲಕಂಧರನಾದ ಮುಕ್ತಿನಕಂಥೆ ಸದ್ಗುರುವೆ ॥೧೭॥

ನರಶರೀರವ ತಾಳಿ ಭವದೊಳು ।
ಮೆರೆದು ಉಕ್ಕುವ ಮಾಂಸಪಿಂಡವ ।
ಪರಿಹರಿಸಿ ಮಂತ್ರಾರ್ಥ ಪಾಲಿಸಿ ಲಿಂಗರೂಪದಲಿ ॥
ಚರಣಕಮಲವ ತೋರಿ ಎನ್ನೊಳು ।
ಪರಕೆ ಪರವಾಗಿಪ್ಪ ಗುರುವಿನ ।
ಕರುಣದಲಿ ಸುಖಿಸಿದ್ದ ಮುಕ್ತಿನಕಂಥೆ ಸದ್ಗುರುವೆ ॥೧೮॥

ಚಂಡಭಾಸ್ಕರತೇಜ ಧರಿಸಿದ ।
ದಂಡಧರ ಸದ್ಗುರುವನರಿಯದೆ ।
ಪುಂಡವಾಕ್ಯವ ಕೇಳಿ ಭವದೊಳು ಭಂಡಭಂಡಾಗಿ ॥
ಕಂಡಕಂಡವರಲ್ಲಿ ರೊಕ್ಕವ ।
ಕೊಂಡು ಹೋಗುವ ಸೂಳೆಪರಿಯಲಿ ।
ಖಂಡಮತಿ ಅಜ್ಞಾನಿ ಮುತ್ತಿನಕಂಥೆ ಸದ್ಗುರುವೆ ॥೧೯॥

ಸಗುಣದಿಂದೆ ಸಮಸ್ತಕರ್ಮವು ।
ಮುಗಿದು ಪಾವನಮಾಡಿ ಸಲಹುವ ।
ಜಗದ ರಕ್ಷಕನಾದ ಮಹಗುರು ಪೂಜೆಮಾಡುವದು ॥
ಅಗಣಿತವು ನಡೆಲಾರದವರಿಗೆ ।
ನಗಧರ ಇಂದ್ರಾದಿಸುರರಿಗೆ ।
ಗಗನವೆನಿಸುವದಯ್ಯ ಮುತ್ತಿನಕಂಥೆ ಸದ್ಗುರುವೆ ॥೨೦॥

ತನುವ ಶ್ರೀಗುರುನಾಥಗರ್ಪಿಸಿ ।
ಮನವ ಲಿಂಗದ ಮೇಲೆ ನಾಟಿಸಿ ।
ಧನವ ಜಂಗಮದಲ್ಲಿ ಮುಟ್ಟಿಸಿ ಪರಮಸುಖಿಯಾಗಿ ॥
ತನುವುಮನದಲಿ ಚಿತ್ತ[೬]ವನು[೬] ತಾ ।
ನೆನಹುವಿಲ್ಲದೆ ಬಯಲಮೂರ್ತಿಗೆ ।
ಘನವು ತಾನೆನಬಹುದೆ ಮುತ್ತಿನಕಂಥೆ ಸದ್ಗುರುವೆ ॥೨೧॥

ವ್ರತವ ಮಾಡಿದರೇನು ಪೂರ್ವಾ ।
ಕೃತವ ನೋಡಿದಡೇನು ಡಂಬಿನ ।
ಮತದಪೇಕ್ಷೆಯ ನುಡಿದ ಪೂಜೆಯ ಲಾಭವದು ಏನು ॥
ಸತತ ನಿರ್ಮಲ ಸಹಜ ಗುರುವಿನ ।
ಹಿತವು ತಾನಾಗಿರದೆ ಗರ್ವಿಸಿ ।
ಕೃತವ ಮಾಡಿದರೇನು ಮುತ್ತಿನಕಂಥೆ ಸದ್ಗುರುವೆ ॥೨೨॥

ಹಾಲು ಸಕ್ಕರೆ ಬೆರಸಿದಂತಹ ।
ಮೂಲಮಂತ್ರವ ತಂದುದಯದಲಿ ।
ಫಾಲಲೋಚನ ಭಜಿಸುವಂತಹ ಭಕ್ತರಿಲ್ಲಂಗೆ ॥

೬-೬ ಪಲಿ (ಅ).

ಮೇಲುಗತಿ ತಾ ತೋರಿ ಸಲಹುವ ।
ಪಾಲಕುರಿಕೆಯ ಸೋಮನಾಥನು ।
ಕಾಲಕಂಧರನಾದ ಮುಕ್ತಿನಕಂಥೆ ಸದ್ಗುರುವೆ ॥೧೩॥

ತನುಗುಣಂಗಳ ಮೆಚ್ಚಿ ಮೋಹಿಸಿ ।
ತನುವ ಗುರು ದಾಸೋಹ ಸವಿಯದೆ ।
ತನುವಿನಿಚ್ಛೆಗೆ ಎಂಟು ಮದ ಸಂಗವನು ತಾನಾಗಿ ॥
ಮನವು ನಿಶ್ಚಲಸಿದ್ಧಚಕ್ರದ ।
ಕೊನೆಯಲಿಪ್ಪ ಸುವಸ್ತುವರಿಯದೆ ।
ತನಗೆ ತತ್ತ್ವವಸಾಧ್ಯ ಮುಕ್ತಿನಕಂಥೆ ಸದ್ಗುರುವೆ ॥೧೪॥

ಕ್ಷೇತ್ರಸಿದ್ಧಾಜ್ಞೇಯಚಕ್ರದ ।
ಕ್ಷೇತ್ರ ಸಂಗಮ ಘನಸುಧಾರಿಸಿ ।
ಪಾತ್ರವನು ರುಚಿಗೊಂಡು ಇಂದ್ರಿಯ ಭೋಕ್ತೃ ತೃಪ್ತ್ಯಾಗಿ ॥
ಶ್ರೋತ್ರಗಿಂಪುನಾದ ಕೇಳುತ ।
ನೇತ್ರದಲಿ ಸ್ವಯಜ್ಯೋತಿ ನೋಡುತ ।
ಗಾತ್ರಮುಂ ತಾನಾದ ಮುಕ್ತಿನಕಂಥೆ ಸದ್ಗುರುವೆ ॥೧೫॥

ಹಿಂಗಿತವು ತಾ ಕಲಿಸಿ ತನು ಸ ।
ರ್ವಾಂಗವನು ಶುಚಿಮಾಡಿ ತನ್ನೊಳು ।
ಲಿಂಗ ತೋರಿದ ಗುರುವಿನರಿಯದೆ ತಾವು ಸುಮ್ಮನದಿ ॥
ಭಂಗವಾಗಿಹ ಪರಸುಖಂಗಳು ।
ಹಿಂಗೆ ಜವನರ ಬಾಧೆ ಬೀಳ್ವರು ।
ಗಂಗೆವಾಳಸಮಾನ ಮುಕ್ತಿನಕಂಥೆ ಸದ್ಗುರುವೆ ॥ ೧೬॥

ವರುಣಪರಿಗಂಭೀರ ಶಾಂತಾ ।
ಭರಣ ಧರಿಸಿದನಾಗಿ ಸಹಜಾ ।
ಕರಣದೊಳು ಒಪ್ಪಾಗಿ ನಡೆನುಡಿಭಾವ ಒಂದಾಗಿ ॥
ಜರೆಮರಣವನು ಮೀರದಂತೆ ।
ಕರಣ ಗುರುವಿನ ಲಿಂಗದಲಿಟ್ಟು ।
ಕರುಣ ಪಡೆದವ ಭಕ್ತ ಮುಕ್ತಿನಕಂಥೆ ಸದ್ಗುರುವೆ ॥೧೭॥

೮-೮ ಕಿ. (ಅ).

ನಂಬಿದಂತಹ ಗುರುಕುಮಾರಗೆ ।
ಇಂಬುಗುಡಿಸುವ ಸಹಜವದು ತಾ ।
ನಂಬದಿರ್ದೊಡೆ ಕತ್ತಲೆನಿಸುವ ಗುಂಭದೋರುವದು ॥
ಶಂಭುಹರಿಯಜರಲ್ಲಿ ತಾನೆ ।
ತುಂಬಿ ತೆರಪಿಲ್ಲದ ಮಹಾಘನ ।
ಕುಂಭದೊಳಗಿನ ರತ್ನ ಮುತ್ತಿನಕಂಥೆ ಸದ್ಗುರುವೆ ॥೨೮॥

ಎನ್ನ ಸಲಹುವ ಅಲ್ಲಮಪ್ರಭು ।
ಸೊನ್ನಲಾಪುರ ಸಿದ್ಧರಾಮನು ।
ಚನ್ನಬಸವೇಶ್ವರನು ಸಂಗನಬಸವ ನೀಲಮ್ಮ ॥
ಕಿನ್ನರಯ್ಯ ಗೋರಕ್ಷಕನು ಅಜ ।
ಗಣ್ಣ ಮುಕ್ತಾಯಿಗಳು ನಿಜವೆಂ ।
ಕೃಣ್ಣಗೊಲಿದವರಯ್ಯ ಮುತ್ತಿನಕಂಥೆ ಸದ್ಗುರುವೆ ॥೨೯॥

ಬೇಡುವದು ಗುರುಭಕ್ತಿ ಬಯಕೆಯ ।
ಮಾಡುವದು ಪರಶಿವನ ಪೂಜೆಯ ।
ನೋಡುವದು ಮನ ದಿವ್ಯಜ್ಞಾನಚಕ್ಷುದೃಷ್ಟಿಯಲಿ ॥
ಆಡುವದು ಸುಜ್ಞಾನಿಗಳ ಒಡ ।
ಗೂಡುವದು ತಾ ನಿತ್ಯಮುಕ್ತರ ।
ಕಡಿಯುವದು ಕರ್ಮಗಳ ಮುತ್ತಿನಕಂಥೆ ಸದ್ಗುರುವೆ ॥೩೦॥

ಮೃಡನ ವೈರಿಯ ಬಾಣದಲಿ ತಾ ।
ಬಳಕೆಯಿಲ್ಲದೆ ಪರಮಮಂತ್ರವು ।
ನುಡಿವ ನಿಶ್ಚಲ ಗುರು ಪರಾಪರ ಆತ್ಮ ನೆಲೆಗೊಳಿಸಿ ॥
ನಡೆವ ಶರಣರ ನೋಡಿ ತನ್ನೊಳು ।
ಜಡವು ತಾ ಮನ ಕ್ರೋಧ ಹುಸಿಗಳ ।
ಕಡಿಗೆಲಿಸಿದವ ಯೋಗಿ ಮುತ್ತಿನಕಂಥೆ ಸದ್ಗುರುವೆ ॥೩೧॥

ನಾಟಿಸಿದ ಹೃತ್ಕಮಲದೊಳು ಗುರು ।
ಪಟ್ಟವಾಳ್ವದು ಬಲ್ಲ ಶರಣರು ।
ತಟ್ಟು ಮುಟ್ಟಳಿದವನು ನಿರ್ಗುಣ ನಿರ್ಮಲಾತ್ಮಕನು ॥
ಇಟ್ಟದದು ಶಾಪವನು ಕ್ಷಮುಯದಿ ।
ಕೊಟ್ಟ ದೇವರ ತನ್ನೊಳಗೆ ನಿಜ ।
ಘಟ್ಟಿಯಾಗಿಹ ಶರಣ ಮುತ್ತಿನಕಂಥೆ ಸದ್ಗುರುವೆ ॥೩೨॥

ಕುಜನಸಂಗದ ಕರ್ಮ ಖಂಡಿಸಿ ।
ನಿಜವು ತಾನಾಗಿಪ್ಪ ಗುರುವಿನ ।
ಭಜಿಸುವಂಥ ಗುರುಕುಮಾರ ಭವಾಂತ್ರಕಂಜುವನೆ ॥
ತ್ರಿಜಗ ಭೀಕರಸಿಂಹದಂತಹ ।
ವಿಜಯಕೀರ್ತಿ ಪ್ರತಾಪವುಳ್ಳವ ।
ಗಜವ ನೋಡಂಜುವನೆ ಮುತ್ತಿನಕಂಥೆ ಸದ್ಗುರುವೆ ॥೩೩॥

ಮುದ್ದಿಸುವ ಗಿಳಿವಾಕ್ಯ ಕೇಳಡ ।
ಗಿದ್ದ ಬೆಕ್ಕಿಗೆ ಮೋಹವುಂಟೆ ।
ಶುದ್ಧಶರಣರ ಮಾರ್ಗವದು ವನಚರರಿಗಿಂಪನವೆ ॥
ಬುದ್ಧಿಕಲಿಸುವ ಗುರುವಿನಲಿ ತಾ ।
ನಿದ್ದು ಪೂಜೆ ಮಾಡುವದು ಸಟೆ ।
ಕದ್ದುಹೋಗುವ ಕಳ್ಳ ಮುತ್ತಿನಕಂಥೆ ಸದ್ಗುರುವೆ ॥೩೪॥

ಭೂಮಿಯಲಿ ಜನಿಸಿದ್ದ ಶರಣರ ।
ನ್ಯಾಯವನು ಗುರಿಮಾಡಿ ಶ್ರೀಗುರು ।
ಕಾಮಿತಾರ್ಥವನೀವ ಹಸ್ತವ ಮಸ್ತಕವ ಮುಟ್ಟಿ ॥
ಪ್ರೇಮದಲಿ ತಾನಾದ ಮೂರ್ತಿಯ ।
ನಾಮಕರಣವ ನೀಡಿದಾಕ್ಷಣ ।
ಕಾಮಸಂಹರನೆಂಬೆ ಮುತ್ತಿನಕಂಥೆ ಸದ್ಗುರುವೆ ॥೩೫॥

ಸರಸಿಜಾನನ ವಿಷ್ಣು ರುದ್ರರು ।
ಸುರ ಮುನೀಂದ್ರರು ವಿದ್ಯಪುರುಷರು ।
ನರರು ದೈತ್ಯರು ಅಖಿಲಸ್ಥಾವರಜಂಗಮಾದಿಗಳು ॥
ಬೆರಸಿತಾಹಿತರಾಗಿ ಸುಖಿಸುವ ।
ದಾರು ಬಲ್ಲರು ನಿರಾಳಗುರುವಿನ ।
ಕಾರಜನಿಸುವ ಯೋಗಿ ಮುತ್ತಿನಕಂಥೆ ಸದ್ಗುರುವೆ ॥೩೬॥

ಘನವಿವೇಕವನುಳ್ಳ ಗುರುವಿನ ।
ತನುಜನೆನಿಸುವ ಶಿದ್ಧಯೋಗಿಗೆ ।
ಹೀನಹಿ ಮಲಾತ್ಮಕವು ಗಂಗಾ ಯಮುನ ಮಧ್ಯದಲ್ಲಿ ॥
ಮನವು ಬೆರದಲ್ಲುಂಟು ಮುಕ್ತಿಯ ।
ದಿನಕರನ ಶತಕೋಟಿ ತೇಜವು ।
ಕನಕ ಪುತ್ಥಳಿ ಬೊಂಬೆ ಮುತ್ತಿನಕಂಥೆ ಸದ್ಗುರುವೆ ॥೩೭॥

ಲೋಕವಿರಹಿತಶರಣ ತಾ ಭವ ।
ಸೋಂಕದಿಹ ಗುರುವಾಕ್ಯದಿಂದಲಿ ।
ಏಕೊ ದೇವ್ರೋ ರುದ್ರನೆಂಬುದು ಸಾಕ್ಷಿ ಕೃತಿವಚನ ॥
ಜೋಕೆಯಲಿ ತನ್ನೊಳಗೆ ನಿಲಿಸಿದ ।
ತಾಕು ನಿರೋಧವನುಳಿದು ನಿಜಲಿಂ ।
ಗೈಕ್ಯನಾದ ನಿಜಾತ್ಮ ಮುತ್ತಿನಕಂಥೆ ಸದ್ಗುರುವೆ ॥೭೮॥

ಕೊಳಕಹೀನರು ಮರುಳ ಮೂಕರು ।
ಸುಳಿಯರಾ ಬೋಧಿಸುವ ಗುರುವು ತಾ ।
ಹೊಳಹುಮಾಡಿದ ಧರ್ಮಮಾರ್ಗವ ಆಶೆಗೊಳಗಾಗಿ ॥
ಹೇಳಿದಡೆ ಸುಜ್ಞಾನಮಾರ್ಗವು ।
ಕೇಳದೆಯೆ ಭವದಲ್ಲಿ ಕೆಟ್ಟರು ।
ಕಾಳುಮತಿಯಿಂದಾತ ಮುತ್ತಿನಕಂಥೆ ಸದ್ಗುರುವೆ ॥೭೯॥

ಗುರುವೆ ರಾಜಸ ಸರಸಿಜಾನನು ।
ಗುರುವೆ ಶಾಂತದ ಕಮಲನೇತ್ರನು ।
ಗುರುವೆ ತಾಮಸ ರುದ್ರರೂಪನು ದುರಿತ ಭವಹರನು ॥
ಗುರುವೆ ಈಶ್ವರ ಶಾಂತಮಲಹರ ।
ಗುರು ಸದಾಶಿವ ನಿತ್ಯನಿರ್ಗುಣ ।
ಗುರುವೆ ಪರಶಿವಮೂರ್ತಿ ಮುತ್ತಿನಕಂಥೆ ಸದ್ಗುರುವೆ ॥೮೦॥

ಅಂತು ಗುರುಸ್ಥಲ ಸಂಪೂರ್ಣ ಮಂಗಳಮಹಾಶ್ರೀ.

ಲಿಂಗಸ್ಥಲದ ವಚನ

ಶ್ರೀಗಿರಿ ಭ್ರಮರಾಂಬನಾಳುವ ।
ಶ್ರೀಗಿರೀಶ್ವರ ಚರಣಸೇವಕ ।
ನಾಗಿ ಎನ್ನೊಳು ಪರಮಸುಖಸಂಪೂರ್ಣಚಿತ್ತದಲಿ ॥
ಯೋಗ ಎಂಟನು ಸಾಧಿಸಿದ ಶಿವ ।
ಯೋಗಿಗಳನರ್ಚಿಸುವೆನಾಂ ಲಿಂ ।
ನಾಗಮವ ಬೇಕೆಂದ ಮುತ್ತಿನಕಂಥೆ ಸದ್ಗುರುವೆ ॥೧॥

ಅಂಗಸೊಂಪದ ಅಖಿಲಭೋಗವು ।
ಲಿಂಗದಲಿ ರುಚಿಗೊಳಿಸಿ ಮುನ್ನವೆ ।
ಅಂಗಲಿಂಗವು ಭೇದಖಂಡಿಸಿ ಐಕ್ಯಸುಖದಿಂದ ॥
ಅಂಗಲಿಂಗವು ಪ್ರಾಣ ಬೆರಸಿದ ।
ಲಿಂಗವಂತರ ಮಾರ್ಗವಿದು ತಾ ।
ಲಿಂಗಸ್ಥಲವೆನಿಸಿತ್ತು ಮುತ್ತಿನಕಂಥೆ ಸದ್ಗುರುವೆ ॥೧॥

ಬಯಲಿನೊಳಗಾಕಾರ ಉದಯಿಸಿ ।
ಬಯಲಿನೊಳು ಸರ್ವೇಂದ್ರಿಯಂಗಳು ।
ಬಯಲಿನೊಳು ಪಿಂಡಾಂಡವನು ಬ್ರಹ್ಮಾಂಡವೆನಿಸುವುದು ॥
ಬಯಲ ಬಯಲೇ ನುಂಗಿ ಜೀರ್ಣಿಸಿ ।
ಬಯಲೆ ನಿರ್ಬಯಲಾದ ಲಿಂಗವ ।
ಕ್ರಿಯವು ಮಾಡುವರಾರು ಮುತ್ತಿನಕಂಥೆ ಸದ್ಗುರುವೆ ॥೨॥

ಲಿಂಗದೊಳು ನದ ನದಿಗಳೆಲ್ಲವು ।
ಲಿಂಗದೊಳು ಬ್ರಹ್ಮಾಂಡ ಸಕಲವು ।
ಲಿಂಗ [೯]ಮಧ್ಯೇ[೯] ಜಗತ್ಸರ್ವವಿದೆಂಬ ಶ್ರುತಿ ವಚನ ॥
ಲಿಂಗಸಂಗವ ಮಾಡುವವರಿಗೆ ।
ಲಿಂಗ ಕಳೆ ತೋರುವದು ಸಹಜವು ।
ಕಂಗಳಿಗೆ ಪ್ರತ್ಯಕ್ಷ ಮುತ್ತಿನಕಂಥೆ ಸದ್ಗುರುವೆ ॥೩॥

ಅಂಡದೊಳು ರೂಪಾಗಿ ನಿಜಪಿಂ ।
ಡಾಂಡವನು ಧರಿಸಿದ್ದ ಕಾರಣ ।
ಕೊಂಡು ತೀರ್ಥಪ್ರಸಾದವನು ತಾ ಉಂಡು ಸುಖಿಯಾಗಿ ॥
ಪುಂಡಮತಿಗಳನು ಸುಟ್ಟು ಬೆಳಗುವ ।
ಖಂಡಮಂಡಲ ಜ್ಯೋತಿರ್ಲಿಂಗವು ।
ಕಂಡವರಿಗುಂಟಯ್ಯ ಮುತ್ತಿನಕಂಥೆ ಸದ್ಗುರುವೆ ॥೪॥

ಅಷ್ಟವಿಧದಾರ್ಚನೆಯ ಮಾಡುವ ।
ಶ್ರೇಷ್ಠರೆಲ್ಲರು ಗರ್ವದಿಂದಲಿ ।
ಭ್ರಷ್ಟರಾದರು ಸುಖವು ದುಃಖವು ಸೋಂಕಿ ಭವದಿಂದೆ ॥
ನಿಷ್ಠೆ ತೋರುವ ಲಿಂಗ ತನ್ನೊಳೆ ।
ಗಿಷ್ಟವಾಡುವ ಪ್ರಾಣಲಿಂಗಿಗೆ ।
ಕಷ್ಟವಿನ್ನೇಕಯ್ಯ ಮುತ್ತಿನಕಂಥೆ ಸದ್ಗುರುವೆ ॥೫॥

೯–೯ ಗರ್ಭೋ (ಕ).

ಯೋಗವನು ಹತ್ತೆಂಟು ಸಾಧಿಸಿ ।
ಯೋಗಿಯಾದಹನೆಂಬುದದು ಪುಸಿ ।
ಯೋಗವಮು ಜೇರುಂಟು ಪರಶಿವಯೋಗವಮಾರ್ಗವನು ॥
ಯೋಗದಲಿ ನಿಜಲಿಂಗ ನೋಡುತ ।
ಯೋಗಸಿದ್ಧಿಯ ಪಿಡಿದು ಮೆರೆಯಲಿ ।
ಕಾಗದಧಮರ ಕೈಯ ಮುತ್ತಿನಕಂಥೆ ಸದ್ಗುರುವೆ ॥೭॥

ನೀನು ನಾನೆಂಬೆರಡು ಭೇದವು ।
ದೀನರಿಗೆ ಸಲ್ಲುವದು ಸಹಜವು ।
ತಾನು ತಾನಾಗಿಪ್ಪ ಮಹಿಮನಿಗೇನು ಕಾರಣವು ॥
ತಾನು ತಾನಾಗಿಪ್ಪ ಸುಖವನು ।
ತಾನೆ ಪರಶಿವಮೂರ್ತಿ ಕಳೆಯದು ।
ಜ್ಞಾನಪ್ರಿಯನಿಜಲಿಂಗ ಮುತ್ತಿನಕಂಥೆ ಸದ್ಗುರುವೆ ॥೮॥

ಎಲ್ಲಿ ಹೋಗುವದೇನು ಫಲವದು ।
ಸುಲಭವದು ತನ್ನೊಳಗೆ ಮರ್ಮವು ।
ಬಲ್ಲ ಮಹಾಶಿವಶರಣರೊಳು ಘನಲಿಂಗವಿರುತಿರಲು ॥
ಕಳ್ಳತನವೇಕೆಂದು ಬೋಧಿಸಿ ।
ಅಲ್ಲಮನು ನಿಜತೋರಿ ಬಿಡಿಸಿದ ।
ಕಲ್ಲುಪೂಜೆಗಳೆಲ್ಲ ಮುತ್ತಿನಕಂಥೆ ಸದ್ಗುರುವೆ ॥೯॥

ನ್ಯಾಯವನು ಕೈಹಿಡಿದು ಅಖಿಲ ।
ನ್ಯಾಯವನು ಖಂಡಿಸುವ ಭಕ್ತಗೆ
ಸಾಯುವಾಗಿ ಸಮಸ್ತಭಕ್ತರ ಸಲಹು ಬುದ್ಧಿಯಲಿ ॥
ನ್ಯಾಯವನ್ಯಾಯವನು ಅರಿಯುವೆ ।
ಕಾಯ ಮರಿತಿದ್ದೆಲ್ಲ ಲಿಂಗದ ।
ಕಾಯುವೆನಿಸುವದಯ್ಯ ಮುತ್ತಿನಕಂಥೆ ಸದ್ಗುರುವೆ ॥೧೦॥

ತಾಮಸವನಳಿಮುಳಿದು ಮುಕ್ತಿಯ ।
ಸೀಮೆಯೊಳು ತಾ ನಿಂತು ಸಕಲವು ।
ನೇಮ ನಿತ್ಯವನಳಿದು ಚಿತ್ತವು ಲಿಂಗವಲಿ ನಿಲಿಸಿ ॥

ರಾಮ ಮುಖ ನೋಡಿದರೆ ಮನ್ಮಥ ।
ಪ್ರೇಮವಿಲ್ಲದೆ ಯೋಗಿ ನಿಶ್ಚಲ ।
ಕಾಮಸಂಹರನೆಂಬೆ ಮುತ್ತಿನಕಂಥೆ ಸದ್ಗುರುವೆ ॥೧೧॥

ಪ್ರಳಯ[೧೦]ವದು[೧೦] ತಾನುಂಟು ಬ್ರಹ್ಮಗೆ ।
ಪ್ರಳಯವದು ತಾನುಂಟು ವಿಷ್ಣುಗೆ ।
ಪ್ರಳಯವುಂಟಿಂದ್ರಾದಿ ಸುರಕೈಲಾಸವಾಸರಿಗೆ ॥
ಪ್ರಳ[೧೧]ಯೊಳಗೆ[೧೧]ಮಹಪ್ರಳಯವಾಗಿಹ ।
ಪ್ರಳಯವನು ನು[೧೨]ಗಾ[೧೨]ತ್ಮಲಿಂಗದ ।
ಕಳೆಯೊಡುವ ಶರಣ ಮುತ್ತಿನಕಂಥೆ ಸದ್ಗುರುವೆ ॥೧೨॥

ಕರ್ಮಕಾಂಡವ ಜರಿದು ಲೋಕದ ।
[೧೩]ಮ[೧೩]ರ್ಮವನು ಒಳಕೊಂಡು ಪ್ರಭುವಿನ ।
ಮರ್ಮದೊಳು ಬೆರೆದಾಡಿ ಸಂತತ ಲಿಂಗಸುಖಿಯಾಗಿ ॥
ದುರ್ಮದವನೊಡೆಮೆಟ್ಟಿ ಮನದಲಿ ।
ನಿರ್ಮಲಾತ್ಮಕನಾದ ಶರಣಗೆ ॥
ಕರ್ಮವೆಲ್ಲಿಯದಯ್ಯ ಮುತ್ತಿನಕಂಥೆ ಸದ್ಗುರುವೆ ॥೧೩॥

ಪಂಚಯಿಂದ್ರಿಯ ಸುಟ್ಟು ತನುಮನ ।
ವಂಚನೆಯ ಪರಿಹರಿಸಿ ಲಿಂಗವು ।
ಮಿಂಚಿ ಬೆಳಗುವ ಸುಪ್ರಕಾಶವ ತೋರುವವನಾಗಿ ॥
ಪಂಚಲೋಹವು ಕರಗಿದಂತಹ ।
ಕಂಚುದರ್ಪಣಮಾಡಿ ತೋರಿದ ।
ಕಂಚುಗಾರನು ನೀನೆ ಮುತ್ತಿನಕಂಥೆ ಸದ್ಗುರುವೆ ॥೧೪॥

ಪ್ರಾಣಲಿಂಗವು ತನ್ನೊಳಗೆ ಅಭಿ ।
ಮಾನವೆಂಬುದನರಿಯದಂತಹ ।
ಹೀನಮತಿಗಳಿಗೇಕೆ ಜಂಗಮದೀಕ್ಷೆ ಲಾಂಛನವು ॥
ಪ್ರಾಣಲಿಂಗವು ಲೀಯವಾದಡೆ ।
ಪ್ರಾಣಲಿಂಗಿಯು[೧೪]ನೆಂ[೧೪]ಬರಾತನ ।
ಕಾಣಿಸುವದೇ ಗುಪ್ತ ಮುತ್ತಿನಕಂಥೆ ಸದ್ಗುರುವೆ ॥೧೫॥

೧೦–೧೦ ಸು (ಕ. ಚ). ೧೧–೧೧ ಯಕ್ಕೆ (ಚ). ೧೨–೧೨ ಗ್ಯಾ (ಚ). ೧೩–೧೩ ವ(ಕ); ಕ (ಚ). ೧೪–೧೪ ರಿ (ಕ.ಚ).

ಘೋರಪಾತಕ ಶೈಲಕುಲಿಶದ ।
ಧೀರ ಖಡ್ಗದಿ ಹೊಯ್ದು ದುರ್ಗುಣ ।
ದಾರಿ ಕೆಡಿಸುವನಾತ ನಿಶ್ಚಲ ಮೂಜಗಂಗಳಿಗೆ ॥
ಸಾರಿ ತೋರುವ ಮುಕ್ತಿಪದಸಂ ।
ಚಾರದಲಿ ಬೆರದಿಪ್ಪ ಲಿಂಗಾ ।
ಕಾರನಾದವ ಶರಣ ಮುತ್ತಿನಕಂಥೆ ಸದ್ಗುರುವೆ ॥೧೬॥

ಹರಿಯ ಹುಟ್ಟಿಸಿದವನು ನೀನೆ ।
ಹರನ ಹುಟ್ಟಿಸಿದವನು ನೀನೆ ।
ಸರಸಿಜಾಸನ ಇಂದ್ರ ಸುರಮುನಿ ಕಲ್ಪಿತನು ನೀನೆ ॥
ದುರಿತಭವಸಂಹರಣ ನಿರ್ಗುಣ ।
ಪರಮಪಾವನ ಲಿಂಗ ನೀನೆ ।
ಕರುಣ ಕಾರಣ ನೀನೆ ಮುತ್ತಿನಕಂಥೆ ಸದ್ಗುರುವೆ ॥೧೭॥

ಮಡಿದ ಜೀವರು ಬದುಕುವಂತಹ ।
ಗಿಡವು ತನ್ನಲಿದ್ದ ಕಾಯವು ।
ವಡಲಿ ಸಿಲ್ಕುವದೇಕೆ ಸುಸ್ಥಿರಲಿಂಗಸಂಗಿಗಳ ॥
ನುಡಿದರಾಕ್ಷಣದಲ್ಲಿ ಪರುಷವು ।
ನಡೆದು ತನ್ನಯ ಕೈಗೆ ಬಂದರೆ ।
ಕಡನ ಬೇಡುವದ್ಯಾಕೆ ಮುತ್ತಿನಕಂಥೆ ಸದ್ಗುರುವೆ ॥೧೮॥

ಮುಂದೆ ತಾನೇತಕ್ಕೆ ಉದಯಿಸಿ ।
ಬಂದ ಕ್ಷೇತ್ರವನರಿತು ಕಾಮನ ।
ಕೊಂದು ಸಂಚಲವೆಂಬ ಕಪಿಗುಣವೆಲ್ಲ ಪರಿಹರಿಸಿ ।
ಒಂದು ಭಾವವ ಲಿಂಗದಲಿ ನಿಲಿಸಿ ।
ಹಿಂದುಮುಂದಿನ ವಾಕ್ಯವನರಿಯದ ।
ಕಂದ ಶಿವಯೋಗೆಂಬ ಮುತ್ತಿನಕಂಥೆ ಸದ್ಗುರುವೆ ॥೧೯॥

ಕ್ಷಣದ ಮಾತ್ರಖಿಲಾಂಡನಿರ್ಮಿತ ।
ಕ್ಷಣದ ಮಾತ್ರಖಿಲಾಂಡಪಾಲಕ ।
ಕ್ಷಣದ ಮಾತ್ರಖಿಲಾಂಡ ಸಂಹರ ಸರ್ವಪರಿಪೂರ್ಣ ॥
ತೃಣವು ಮೇರುವು ಒಂದೆ ನೋಟದಿ ।
ಗುಣದಲಾಡುವ ಪ್ರಾಣಲಿಂಗಿಗ ।
ಗಣಿತವಿನ್ನೇಕಯ್ಯ ಮುತ್ತಿನಕಂಥೆ ಸದ್ಗುರುವೆ ॥೨೦॥

ಕುಂಡಲಿಯು ಸರ್ಪವನು ತಿರಿವಿಸಿ ।
ಮಂಡೆಯೊಳಗಣ ಅಮೃತಸಾರವ ।
ಕೊಂಡು ಸುಖದೊಳಗಿಪ್ಪ ಜ್ಯೋತಿಯು ಲಿಂಗದೊಳು ಬೆರದು ॥
ಪಂಡಿತೋತ್ತಮನಾಗಿ ಜವನರ ।
ದಂಡನೆಗೆ ಒಳಗಾಗನೆಂದಿಗೆ ।
ಖಂಡಿತವು ಶಿವಯೋಗಿ ಮುತ್ತಿನಕಂಥೆ ಸದ್ಗುರುವೆ ॥೨೦॥

ಪ್ರಾಣಲಿಂಗವ ಘನ ಪ್ರಪಂಚದ ।
ಪ್ರಾಣಿಗಳು ತಾವೆತ್ತ ಬಲ್ಲರು ।
ಪ್ರಾಣನಾಯಕನಾದ ಸದ್ಗುರು ಪರಮಕೃಪೆಯಿಂದ ॥
ಪ್ರಾಣ[೧೫]ಕು[೧೫]ಪದೇಶವನು ಪಾಲಿಸಿ ।
ಪ್ರಾಣಲಿಂಗದ ಸ್ಥಲವ ತೋರಲು ।
ಕಾಣಿಸುವದೈ ಜ್ಯೋತಿ ಮುತ್ತಿನಕಂಥೆ ಸದ್ಗುರುವೆ ॥೨೧॥

ಸರ್ವಜೀವದರೊಳಗಭೇದವು ।
ಸರ್ವಜೀವರ ಸುಖವು ದುಃಖವು ।
ಸರ್ವಜೀವದೊಳಿಪ್ಪ ಲಿಂಗದ ಸಂಗ ಸುಖದಿಂದ ॥
ನಿರ್ವಹಿಸಿ ಪರತತ್ತ್ವವೆನಿಸುವ ।
[೧೬]ಸರ್ವ ಗೋತ್ರರು ಲಿಂಗ[೧೬] ಶರಣರು ।
ಗರ್ವ ಬಿಡಬೇಕಯ್ಯ ಮುತ್ತಿನಕಂಥೆ ಸದ್ಗುರುವೆ ॥೨೨॥

ಸತ್ಯಶರಣರ ಮಾರ್ಗವಲ್ಲದೆ ।
... ...
ಮರ್ತ್ಯದೊಳು ಕ್ರಿಯೆ ಶುಚಿಗಳಿಲ್ಲದೆ ವ್ಯರ್ಥಮಾನವರು ॥
ಸತ್ಯಜಂಗಮಲಿಂಗವರಿಯದೆ ।
....
ಗರ್ತಗೆಲ್ಲಿಯ ಶೀಲ ಮುತ್ತಿನಕಂಥೆ ಸದ್ಗುರುವೆ ॥೨೩॥

ಸರ್ವವೇದಪುರಾಣಶಾಸ್ತ್ರವ ।
ನಿರ್ವಹಿಸಿ ಪರತತ್ತ್ವವೆನಿಸುವ ।
ನರ್ಮದಾ ಕಾವೇರಿ ಗೌತಮ ನದಿಯು ನಿಧಿಯುಲ್ಲಿ ॥
ದುರ್ಮದವ ಬಿಡಲೊಲ್ಲದ ಹೇಸಿಗೆ ।
ಚರ್ಮಪಾತ್ರಗಳಾಸೆಮಾಡುವ ।
ಕರ್ಮಿಗೆಲ್ಲಿಯ ಶೀಲ ಮುತ್ತಿನಕಂಥೆ ಸದ್ಗುರುವೆ ॥೨೪॥

೧೫–೧೫ ಣೆ (ಕ. ಚ). ೧೬–೧೬ ಪರ್ವತಾಗ್ರದಲ್ಲಿಪ್ಪ (ಚ).

ರಂಜಿಸುವ ಮದಸೊಕ್ಕಿ ತನ್ನೊಳು।
ಕುಂಜರಗಳೆಂಟೆಂಬ ಕ್ಷೇತ್ರವ।
ಭಂಜಿಸುವ ನಿರ್ಮಾಯಶಕ್ತಿಯು ಪರಮ ದುರ್ಲಭವು॥
ಅಂಜಿ ಕರೆಯದೆ ಲಿಂಗಸುಜ್ಞಾ।
ನಂಜನವ ಸಾಧಿಸಲು ಕಠಿಣವು।
ಕಂಜದಳನೇತ್ರಂಗೆ ಮುತ್ತಿನಕಂಥೆ ಸದ್ಗುರುವೆ ॥೨೬॥

ಮುತ್ತುಗಳು ಬಂಗಾರು ಸಖಿಯರು।
ರತ್ನಗಜವಾಜಿಗಳು ರಾಜ್ಯವು।
ಚಿತ್ತಜನವದವೆಂದು ಭಾವಿಸಿ ಆಸೆ ಪರಿಹರಿಸಿ॥
ನಿತ್ಯನಿತ್ಯ ವಿವೇಕವೆನಿಸುವ।
ಸತ್ಯದಲಿ ಲಿಂಗಾಂಗವಾದವ।
ಕತ್ತಲಿಗೆ ಒಳಗಾಗ ಮುತ್ತಿನಕಂಥೆ ಸದ್ಗುರುವೆ ॥೨೭॥

ಕಾಯವಿಡಿದು ಸಮಸ್ತಭಕ್ತಿಯ।
ಕಾಯದೊಳು ಗುರಿಮಾಡಿ ನಿರ್ಮಲ।
ಕಾಯ ತೋರಿಹ ಪರಮಸುಖ ದುಃಖವನು ಪರಿಹರಿಸಿ॥
ಕಾಯದಲಿ ಕೈವಲ್ಯವೆನಿಸುವ।
ಕಾಯನಿಜಲಿಂಗೈಕ್ಯ ಮಹಘನ।
ಕಾಯವೆನಿಸುವದಯ್ಯ ಮುತ್ತಿನಕಂಥೆ ಸದ್ಗುರುವೆ ॥೨೮॥

ಪ್ರಣವಪಂಚಾಕ್ಷರಿಯನೋದಿದ।
ಗುಣವು ತನ್ನಲ್ಲಿಲ್ಲದಿರ್ದೊಡೆ।
ಗಿಣಿಯನೋದಿದ ಪರಿಯಲಿಪ್ಪರು ಮುಕ್ತರವರಲ್ಲ॥
ಹಣಕೆ ಮೆಚ್ಚಿದ ಸೂಳೆಯಾ ಪರಿ।
ಬಿನಗು ಜಂಗಮರೆಲ್ಲ ಲಿಂಗದ।
ಗಣಮುನೀಂದ್ರಗಳಲ್ಲ ಮುತ್ತಿನಕಂಥೆ ಸದ್ಗುರುವೆ ॥೨೯॥

ಕುಟಿಲಕುಹಕದಿಂದ ಸದ್ಗುಣ।
ನಟಿಸಿ ತೋರುವ ವೇಷಡಂಬಕ।
[೧೭]ಸಟಿಗೆ ಮಾಡುವ ಲಿಂಗದಾರ್ಚನೆ[೧೭] ಸತ್ಯವೆನಿಸುವವೆ॥

೧೭–೧೭ ಸಟಿಯ ಭಕ್ತಿಕ್ರಿಯೆಗಳಲ್ಲದೆ (ಚ).

ಕುಟಿಲಕುಹಕವ ಮೆಟ್ಟಿ ನಿರ್ಗುಣ ।
ನಟಿಸಿ ತೋರುವ ಪ್ರಾಣಲಿಂಗಿಗೆ ।
ಘಟದೊಳಗೆ ನೀ ಸಹಜ ಮುತ್ತಿನಕಂಥೆ ಸದ್ಗುರುವೆ ॥೨೦॥

ಮಣ್ಣುಗೋಡೆಗಳೆಲ್ಲ ಸಾರಿಸಿ ।
ಸುಣ್ಣ ಹಚ್ಚಿದ ಪರಿಯಲಿಪ್ಪ ।
ಬಣ್ಣಗಿತ್ತಿಯು [೧೮]ರನ್ನಕಳೆಯುವ[೧೮] ನೋಡಿ ವೈಮರೆದು ॥
ಅಣ್ಣರೆಲ್ಲರು ಲಿಂಗನಿಜವನು ।
ಕ್ಕಣ್ಣ ಮಂತ್ರಧ್ಯಾನವಳಿದರು ।
ಕಣ್ಣುನೋಟಕೆ ಸಿಕ್ಕಿ ಮುತ್ತಿನಕಂಥೆ ಸದ್ಗುರುವೆ ॥೨೧॥

ಭೋಗಮಾರ್ಗವ ಜರಿದು ಕಲ್ಪಿಸಿ ।
ದಾಗ ಮಂಗಳ ನೋಡಿ ಚರಿಸುತ ।
ಜೋಗಿವೇಷಂತ್ರದಲಿ ಲಿಂಗದ ಯೋಗಿ ತಾನಲ್ಲ ॥
ನಾಗಭೂಷಣಗಾಗಿ ಕಟ್ಟಿದ ।
ದೇಗುಲದ ಶಿಖರದಲಿ ನಿಂತಡೆ ।
ಕಾಗೆ ಕೋಗಿಲೆಯಹುದೆ ಮುತ್ತಿನಕಂಥೆ ಸದ್ಗುರುವೆ ॥೨೨॥

ಎಂಟುಮದ ಪರಿಹರಿಸಿ ಇಪ್ಪ ।
ತ್ತೆಂಟು ಆಗಮ ನೋಡಿ ದುರಿತದ ।
ಕಂಟಕವನೆಡೆ[೧೯]ಗೆ[೧೯]ಡಿಸಿ ಕರ್ಮದ ಕತ್ತಲೊಡ ಮೆಟ್ಟಿ ॥
ಉಂಟು ಮಾಡಿದ ಲಿಂಗವೆನ್ನೊಳು ।
ನೆಂಟನಾದ ಸಮಸ್ತ [೨೦]ಜೀವರ[೨೦] ।
ಘಂಟನಾದವಲಿಂದ ಮುತ್ತಿನಕಂಥೆ ಸದ್ಗುರುವೆ ॥೨೩॥

ಆರುದರುಶನವೊಪ್ಪುವಂತಹ ।
ಆರುಸ್ಥಲ ನಿರ್ಣೈಸಿ ನಿಶ್ಚಲ ।
ದಾರಿಯಲಿ ತಾ ಬೆಳಗುವಂತಹ ಶಾಂತ ಖಡ್ಗದಲಿ ॥
ಆರುವರ್ಗವ ಹರಿದು ಮೂವ ।
ತ್ತಾರುತತ್ವದ ಘನವು ಲಿಂಗಾ ।
ಕಾರ ಪರಶಿವ ನೀನೆ ಮುತ್ತಿನಕಂಥೆ ಸದ್ಗುರುವೆ ॥೨೪॥

೧೮–೧೮ ಯಲಂಕಾರವ (ಚ)   ೧೯–೧೯ ರೆ (ಚ).   ೨೦–೨೦ ಭಕ್ತರ (ಚ).

ಶಿವನ ಬಲ್ಲವ ಭಕ್ತ ತಾ ಪರ ।
ಶಿವನ ಬಲ್ಲ ವಿರಕ್ತ ಭಾವಿಸಿ ।
ಶಿವನ ಪರಶಿವನೇಕಮಾಡುವನಾತ ನಿಶ್ಚಲನು ॥
ಶಿವನು ತಾನೇನು ಶಬ್ದ ಖಂಡಿಸಿ ।
ಶಿವನು ತಾ ಲಿಂಗೈಕ್ಯವಾದವ ।
ಭವವಿರಹಿತನು ಎಂಬೆ ಮುತ್ತಿನಕಂಥೆ ಸದ್ಗುರುವೆ ॥೩೫॥

ವಿಟನ ಮುಂದೆಯು ತನ್ನ ಚೇಷ್ಟೆಯ ।
ನಟಿಸಿ ತೋರುವ ಸೂಳೆಯಾ ಪರಿ ।
ನಟನೆಮಾಡುವ ಲಿಂಗದರ್ಚನೆ ಸತ್ಯವೆನಿಸುವದೆ ॥
ಪಟುತರದ ಬ್ರಹ್ಮಾಂತರಂಗದ ।
ನಿಟಿಲಲೋಚನ ಮೂಲಮಂತ್ರವು ।
ಕಠಿಣ ಮತಿಗಳವಡದು ಮುತ್ತಿನಕಂಥೆ ಸದ್ಗುರುವೆ ॥೩೬॥

[೨೧]ಇನ ಶಶಿಯು[೨೧] [೨೨]ಕಪಾಂಕಪಾವಕ[೨೨] ।
ಘನಲಲಾಟದ ನೇತ್ರವುಳ್ಳವ ।
ನಿನಗೆ ಎದುರಾರಿಲ್ಲಿ ಮಹಾಘನಲಿಂಗವದು ನೀನೆ ॥
ದನುಜರಾಳುವ ಪುರವ ಖಂಡಿಸಿ ।
ಎನಗೆ ನಿಮ್ಮಯ ಕೃಪೆಯ ತೋರಿದೆ ।
ಕನಕಪರ್ವತಚಾಪ ಮುತ್ತಿನಕಂಥೆ ಸದ್ಗುರುವೆ ॥೩೭॥

ಎಲ್ಲಿ ಚರಿ[೨೩]ಸುವದೇ[೨೩]ನು ತಾ ಘನ ।
ವಲ್ಲ ದುರ್ಜನ ಗೋಷ್ಠಿಯನು ನಿಜ ।
ವಿಲ್ಲವೆಂಬುದು ಸಹಜಲಿಂಗದ ಸಾವಧಾನವದು ।
ಅಲ್ಲಿ ಇಲ್ಲೆಂದರಸುವದು ಭ ।
ಕ್ತಿಲ್ಲ ಮಾರ್ಗವದಲ್ಲದೆಂದಿಗೆ ।
ಕಲ್ಲು ಪರಶಿವನಲ್ಲ ಮುತ್ತಿನಕಂಥೆ ಸದ್ಗುರುವೆ ॥೩೮॥

೨೧–೨೧ ವನಜರಿಪು (ಚ).   ೨೨–೨೨ ಶಕಪಂಕ (ಚ); ತ್ರಿಕಂಠ (ಕ).
೨೩–೨೩ ಸಿದಡೇ (ಅ.ಕ).

ಜೀವಬೊಂಬೆಯು ತೋರಿ ಋಷಿಗಳ ।
ಜೀವ ಚ[೨೪]ಲವನು[೨೪] ಮಾಡಿ ನಿರ್ಮಿತ ।
ಜೀವಮೋಹದ ಮಾಯ ಹೂವಿನ ಚಿತ್ರಬಾಣದಲಿ ॥
ದೇವಮುನಿಗಳನೆಲ್ಲ ದಂಡಿಸಿ ।
ಭಾವಲಿಂಗದ ಬಟ್ಟೆ ಕೆಡಿಸಿತು ।
ಕಾಮನೆನಿಸುವ ಭೂತ ಮುತ್ತಿನಕಂಥೆ ಸದ್ಗುರುವೆ ॥೩೯॥

ಸಪ್ತಮುನಿ ಸಂಸರ್ಗದಲಿ ತಾ ।
ಸಪ್ತವ್ಯಸನವ ಲಿಂಗಕರ್ಪಿಸಿ ।
ಸಪ್ತಸಾಗರದಲ್ಲಿ ತನುಮನ ಸ್ನಾನ ಶುಚಿಯಾಗಿ ॥
ಸಪ್ತಪರ್ವತ ಮೇಲೆ ಜಪಿಸಿದ ।
ಸಪ್ತದೀವಿಯು ಚರಿಸಿದಾಕ್ಷಣ ।
ಸಪ್ತಧಾತು [೨೫]ನಿ[೨೫]ಜಾತ ಮುತ್ತಿನಕಂಥೆ ಸದ್ಗುರುವೇ ॥೪೦॥

ಅಯ್ಯರೊಳು ವಿಖ್ಯಾತನೀ ಶಾಂ ।
ತಯ್ಯ ತಾ ಗುರುವಾಗಿ ಮಹಲಿಂ ।
ಗಯ್ಯನಾತನೆ ಪಾಲಿಸಿದ ದೀಕ್ಷೋಪದೇಶದಲಿ ॥
ಅಯ್ಯನಾಜ್ಞೆಯು ಸುಂಕ ರೊಕ್ಕಕೇ ।
ಅಯ್ಯನೆ ಗುರಿ ನಿಲಿಸಿ ತಾ ಘನ ಬಂ ।
ಕಯ್ಯ ಗೆದ್ದ ಪವಾಡ ಮುತ್ತಿನಕಂಥೆ ಸದ್ಗುರುವೆ ॥೪೧॥

ಅಖಿಳಬ್ರಹ್ಮಾಂಡಾದಿ ನಿರ್ಮಿತ ।
ಅಖಿಳವೇದಾತೀತಗೋಚರ ।
ಅಖಿಳಶಾಸ್ತ್ರಪುರಾಣ ಘನದಿವ್ಯಾಗಮದ ರಚನೆ ॥
ಅಖಿಳಸುರನರದೈತ್ಯಪಾಲಕ ।
ಅಖಿಳಸುಖಲಿಂಗ ನಿರ್ಗುಣ ।
ಅಖಿಳಪರಮಾನಂದ ಮುತ್ತಿನಕಂಥೆ ಸದ್ಗುರುವೆ ॥೪೨॥

೨೪–೨೪ ಲನವ (ಕ). ೨೫–೨೫ ಪ್ತ (ಚ).

ಸುಖವು ದು ಖವು ಸಮವು ನೀನೆ ।
೨೬ನಿಕರಸ್ಥಾವರಜಂಗಮವು೨೬ ನೀ ।
ಪ್ರಕಟ ಬ್ರಹ್ಮಾಂಡಾದಿ ರೂಪುತ್ಪತ್ತಿಸ್ಥಿತಿಲಯವು ॥
ಅಖಿಳ ಸುರನರ ಮುನಿಪ ದೈತ್ಯರು ।
ಸಕಲಘನಲಿಂಗಾಂಗವಾದಡೆ ।
ವಿಕಟವಿನ್ನೇಕಯ್ಯ ಮುತ್ತಿನಕಂಥೆ ಸದ್ಗುರುವೆ ॥೪೩॥

ಪೂರ್ಣವಾದ ನಿಜಾತ್ಮದೊಳು ಸಂ ।
ಪೂರ್ಣ ಘನನಿಜಲಿಂಗ ಧರಿಸಿದ ।
ಪೂರ್ಣಭಕ್ತಿಗೆ ಮೆಚ್ಚಿಯಲ್ಲಮಪ್ರಭುವು ದಯದಿಂದ ॥
ಜೀರ್ಣಮಾಡಿದ ಭವವಿಕಾರವ ।
ಪೂರ್ಣವಿಹಪರಸುಖವು ತೋರಿದ ।
ಕರ್ಣ ಉಪದೇಶದಲಿ ಮುತ್ತಿನಕಂಥೆ ಸದ್ಗುರುವೆ ॥೪೪॥

ಲಿಂಗಸ್ಥಲ ಪೂರ್ಣ ಮಂಗಳಮಹಾಶ್ರೀ

ಜಂಗಮಸ್ಥಲದ ವಚನ

ಶ್ರೀ ಸದಾಶಿವ ನಿಮ್ಮ ಶರಣರು ।
ಆಶೆಮಾಡರು ಎಂದಿಗಿತರನು ।
ಭಾಷೆ ಪಾಲಿ೨೭ಪ೨೭ರಾದ ಜಂಗಮಲಿಂಗಮೂರ್ತಿಗಳು ॥
ಮೋಸ ಹೋಗರು ಕರ್ಮಿಗಳ ಕೈ ।
ಲಾಸದಲಿ ಚರಿಸಾಡಲೊಲ್ಲರು ।
ಕಾಶಿಕೇತಾರಗಳು ಮುತ್ತಿನಕಂಥೆ ಸದ್ಗುರುವೆ ॥೧॥

ಲಿಂಗವಂತರ ನೋಡಿ೨೮ಲಕ್ಷ೨೮ಮೆಯಲಿ ।
ಭಂಗವಿಲ್ಲದೆ ಚರಿಸಿ ಭಕ್ತರ ।
ಅಂಗಳವ ಮೆಟ್ಟಾಡಿ ಮಹಘನಲಿಂಗಮುಖವಾಗಿ ॥
ಲಿಂಗಜಂಗಮಗುರುವಿನಲಿ ತಾ ।
ಜಂಗಮದ ನಿಜ ಆತ್ಮನರಿತವು ।
ಜಂಗಮಸ್ಥಲ ಸಹಜ ಮುತ್ತಿನಕಂಥೆ ಸದ್ಗುರುವೇ ॥೨॥

೨೬–೨೬ ಸಕಲಚರಾಚರವು ನೀವೆ (ಜ). ೨೭–೨೭ ಕ (ಕ). ೨೮–೨೮ ಭ್ರ (ಅ).

ಶಾಂತ ಶ್ರೀಕರುಣಾಕರವುಳ್ಳ ಜಂಗಮು ।
ಶಾಂತಕರವನು ಧರಿಸಿ ನಿಶ್ಚಲ ।
ಶಾಂತವನು ಶೋಧಿಸಿದ ಅನುಪಮಚಿತ್ತಶುದ್ಧಿಯಲಿ ॥
ಭ್ರಾಂತಿಸೂತಕವಳಿದು ಮನ ನಿ ।
ಭ್ರಾಂತರಾಗಿಹ ಯೋಗಿ ಮುಕ್ತಿಯ ।
ಕಾಂತರೊಳು ಮೈಮರೆದು ಮುಕ್ತಿನಕಂಠೆ ಸದ್ಗುರುವೆ ॥೩॥

ನೀರಜಾಸನ ನೀನೆ ರಾಜಸ ।
ನೀರಜೋದರ ನೀನೆ ಶಾಂತವು ।
ನೀರಜಾಸನ ನೀನೆ ರಕ್ಷದ ನೀನೆ ತಾಮಸವು ॥
ನೀರಜಾಪ್ತನು ನೀನೆ ತೇಜವು ।
ನೀರಜಾರಿಪು ನೀ ಸುಧಾರಸ ।
ಕಾರ ಜಂಗಮು ನೀನೆ ಮುಕ್ತಿನಕಂಠೆ ಸದ್ಗುರುವೆ ॥೪॥

ಕ್ಷುದ್ರದಾರಿದ್ರದಂಧಕಾರವು ।
ಭದ್ರಗಜವನು ಸೀಳುವಂತಹ ।
ಮುದ್ರ ಖಡ್ಗವ ಧರಿಸಿ ಜಂಗಮಮೂರ್ತಿಗಳು ಇರಲು ॥
ಭದ್ರನಾಗಿ ಸಮಸ್ತಭಕ್ತರು ।
ಪದ್ರ ಖಂಡಿಸಿ ವರವ ಕೊಟ್ಟನು ।
ಚಿದ್ರಚಿನ್ಮಯಮೂರ್ತಿ ಮುಕ್ತಿನಕಂಠೆ ಸದ್ಗುರುವೆ ॥೫॥

ಕ್ರೂರಗುಣ ಪಂಚೇಂದ್ರಿಯಂಗಳ ।
ಮೀರಿ ಹೋಗದೆ ಮುಂದೆ ತನ್ನೊಳು ।
ಧೀರವನು ನೆಲೆಗೊಳಿಸಿ ನಿಶ್ಚಲವಾಗಿಯುಂ ಪಿಡಿದು ॥
[ನಾರುವನು ನೆರವಾದಿ] ಜಂಗಮ
ದಾರಿಬಲ್ಲವರೆಲ್ಲ ಮದನವಿ ।
ಕಾರಗುಣ ತಾನುಂಟೆ ಮುಕ್ತಿನಕಂಠೆ ಸದ್ಗುರುವೆ ॥೬॥

ಸಜ್ಜನರ ಹೃದಯಾಂತರಂಗದಿ ।
ಸಜ್ಜೆಯಲಿ ನೆಲೆಗೊಂಡು ಜಂಗಮ ।
ಸಜ್ಜನರು ಕೃಪೆಮಾಡುವಂತಾಗಮನ ಚಿತ್ತದಲಿ ॥

೨೯–೨೯ ಕಾರಣರಸವು (ಕ).

ಹೆಜ್ಜೆ ಹಿಡಿದಾ ನಡೆವ ಶಬ್ದವು ।
ಮೂಜಗಂಗಳು ಕೇಳಿ ಬದುಕುವ ।
ಗೆಜ್ಜೆ ಧರಿಸಿದರಯ್ಯ ಮುತ್ತಿನಕಂಥೆ ಸದ್ಗುರುವೆ ॥೭॥

ಸುಂದರೀಮಣಿಚಲುವಿ ಚಂದನ ।
ಗಂಧಿ ಸೊಬಗಿನ ಸಿರಿಯು ಮೋಹಿಸಿ ।
ಚಂದ್ರದಲಿ ಮುದ್ದಿಸುವ ಪುತ್ಥಳಿಬೊಂಬೆ ಚಂದ್ರಮುಖಿ ॥
ಮುಂದೆ ನಿಂತರೆ ಅಂಗಜನ್ಮಕ ।
ಬಿಂದು ನಿಲಿಸುವ ಧೀರಜಂಗಮ ।
ಕಂದುಗೊರಳನ್ನುಹುದು ಮುತ್ತಿನಕಂಥೆ ಸದ್ಗುರುವೆ ॥೮॥

ಕಮಲಮಿತ್ರನ ಹೃದಯದಲಿ ತಾ ।
ಕಮಲವೈರಿಗೆ ತಂದು ನಿಟಿಲದ ।
ಕಾಮದೊಳು ಗುರಿಮಾಡಿ ತಾ ಹೃತ್ಕಮಲ ಮರೆದಿಪ್ಪ ॥
ವಿಮಲಬುದ್ಧಿಯ ಕೆಡಿಸುವಂತಹ ।
[ತವ]ಕವನು ಖಂಡಿಸುವ ಜಂಗಮ ।
ಕಮಲನೇತ್ರಪ್ರಿಯನು ಮುತ್ತಿನಕಂಥೆ ಸದ್ಗುರುವೆ ॥೯॥

ಕೆಲವರಿಗೆ ಸಂಗೀತಶಾಸ್ತ್ರವು ।
ಕೆಲವರಿಗೆ ತತ್ವದ ವಿವೇಕವು ।
ಕೆಲವರಿಗೆ ನಾದಾವಿ ನಾಟ್ಯ ಮೃದಂಗ ತಾಳವನು ॥
ಕೆಲವರಿಗೆ ಚರಲಿಂಗದಾರ್ಚನೆ ।
ಕೆಲವರಿಗೆ ನಿಜತತ್ತ್ವ ನಿರ್ಗುಣ ।
ಕಲಿಸುವನೆ ನೀನಯ್ಯ ಮುತ್ತಿನಕಂಥೆ ಸದ್ಗುರುವೆ ॥೧೦॥

ಆರುಮನೆಗಳ ಪುರದೊಳಗೆ ತಾ ।
ನಾರು[೩೦]ಮು[೩೦]ನೆಗಳ ನಿಲಿಸಿ ನೋಡಿದ ।
ಆರುಮನೆಗಳ ಮೇಲೆ ಹೆಚ್ಚಿನ ಮೂರುಮನೆ ನಿಲಿಸಿ ॥
ಆರುಮೂರನೆ ಸುಖಿಸಿ ನಿರ್ಮಲ ।
ಆರುಚಕ್ರಗಳಲ್ಲಿ ಜಂಗಮ ।
ಕಾರಣಿಕ ನೋಡಯ್ಯ ಮುತ್ತಿನಕಂಥೆ ಸದ್ಗುರುವೆ ॥೧೧॥

೩೦-೩೦ ಮೂದಿ (ಕ).

ನಡೆಗೆ ನುಡಿಗೆದರಾಡುವಂತಹ ।
ಜಡರ ಸಂಗವ ಜರಿದು ತನ್ನೊಳು ।
ಮೃಡನ ಮೂರ್ತಿಯ ಲೀಯ ಮಾಡುವ ಶಾಂತ ನಿಶ್ಚಯಿಸಿ ॥
ಅಡವಿ ಅರಣ್ಯಗಳು ಚರಿಸುತ ।
ಬಡವರಾ ಸಂಸರ್ಗ ಖಂಡಿಸಿ ।
ಕಡೆಗೆ ಹೊಂಟ ವಿರಕ್ತ ಮುಕ್ತಿನಕಂಥೆ ಸದ್ಗುರುವೆ ॥೧೨॥

ತಪ್ಪದೀ ಶಿವವಾಕ್ಯ ಘನವೆಂ ।
ದಿಪ್ಪ ಮೂರ್ಖರ ಕೆಟ್ಟ ಗುಣವನು ।
ತಪ್ಪಿಸುವೆನೆಂದಾಡಲಾಗದು ಅಖಿಲಜಂಗಮರು ॥
ಒಪ್ಪುಗೊಂಡಾಕಾಶ [೩೧]ಮನದಿಂ[೩೧] ।
ಅಪ್ಪುವಿನ ಭವ ಲೋಕಕರ್ಮದ ।
ಕಪ್ಪು ಬಿಡದದು ಸಟೆಯೆ ಮುಕ್ತಿನಕಂಥೆ ಸದ್ಗುರುವೆ ॥೧೩॥

ಉಪಮೆಯುಪಮಾತೀತನಾಗಲಿ ।
ತ್ರಿಪುರಸಂಹರನಾದಡಾಗಲಿ ।
ಚಪಲಬುದ್ಧಿಯು ಸೋಂಕಿದಾಗಲೆ ಎಲ್ಲ ಕೆಡಿಸುವದು ॥
ತಪವ ಮಾಡುವ ತಪಸಿಯಾಗಲಿ ।
ಜಪವ ಮಾಡುವ ಜಂಗಮನಾಗಲಿ ।
ಕಪಟವದು ತಾ ಭಂಗ ಮುಕ್ತಿನಕಂಥೆ ಸದ್ಗುರುವೆ ॥೧೪॥

[ಖೋಡಿಗಳ ಬರವೆಂಟು ಹೇಸಿಗೆ]
ದೊಡ್ಡ ಬಚ್ಚಲ ಮೆಚ್ಚಿ ಮುಳುಗುವ ।
ಹೆಡ್ಡನಾದವಗೇಕೆ ಜಂಗಮವೇಷಲಾಂಛನವು ॥
ದಡ್ಡತನದಲಿ ತೊತ್ತುಗಳ ಕೈ ।
ಸೊಡ್ಡುಗಳನಪ್ಪಿದ್ದ ಹೆಡ್ಡರು ।
ಗಡ್ಡಧರಿಸಿಪರೇನು ಮುಕ್ತಿನಕಂಥೆ ಸದ್ಗುರುವೆ ॥೧೫॥

ಕುಲವ ಖಂಡಿಸಿ ಬಂದ ಜಂಗಮ ।
ಕುಲದಲಾಡುವ ಹಿಂದುಮುಂದಿನ ।
ಕುಲವುಚಿರ ಸಲುವಿಲ್ಲ ಮಹಂತನ ಬೆರಪ ನಿಜದಿಂದೆ ॥

೩೧–೩೧ ಮಾರ್ಗದಿ (ಅ).

ಜಲದಿಜನಿಸಿದ ಮುತ್ತು ಪೂರ್ವದ ।
ಜಲದೊಳೈಕ್ಯತವಾಗದೆಂದಿಗೆ ।
ಫಲಿತವಾದೆನ್ನೊಳಗೆ ಮುತ್ತಿನಕಂಥೆ ಸದ್ಗುರುವೆ ॥೧೬॥

[೩೨]ಹಂ[೩೨]ಚು ಕಂಥೆ ಅತೀತ ಜಂಗಮು ।
ಲಾಂಛನವ ಧರಿಸಿದ್ದ ಹಿರಿಯರು ।
ವಂಚನಿಲ್ಲದೆ ಸಕಲಯೋಗವ ಮಾಡುವಂಥವರು ॥
ಪಂಚಪುರುಷವನುಳ್ಳ ಸಿದ್ಧರು ।
ಮಿಂಚಿಮಾಯಿಗೆ ಸಿಲ್ಕಿ ಸೋತರು ।
ಪಂಚಬಾಣನ ಕೈಯು ಮುತ್ತಿನಕಂಥೆ ಸದ್ಗುರುವೆ ॥೧೭॥

ಕುಕ್ಷಿಯೊಳು ಹಲವಂಚಗಳು ತಾ ।
ಲಕ್ಷವ್ಯಾಧಿಗಳುಂಟು ಜೀವನ ।
ರಕ್ಷಿಸುವ ದಯದಿಂದ ಜಂಗಮರೂಪು ತಾನಾಗಿ ॥
ಭಿಕ್ಷೆಬೇಡುವ ಎಂಟುಮುದವನು ।
ಶಿಕ್ಷಿಸುವ ನಿರ್ಮೋಹನಿರ್ಗುಣ ।
ಕಕ್ಷಪಾಲವ ಧರಿಸಿ ಮುತ್ತಿನಕಂಥೆ ಸದ್ಗುರುವೆ ॥೧೮॥

ಯುಕ್ತಿ ಸಾಧಿಸುವಂಥ ಭುಜಬಲ ।
ಶಕ್ತಿಯಲಿ ಭವಪಾಶ ಖಂಡಿಸಿ ।
ಮುಕ್ತಿ ಗಳಿಸುವನಾಗಿ ತನ್ನೊಳು ತಾನುತಾನಾದ ॥
ಭಕ್ತಿಯುಳ್ಳವನಾಗಿ ತೂರ್ಯದ ।
ಭಕ್ತ ಜಂಗಮನಾಗಿ ಚರಿಸಿ ವಿ ।
ರಕ್ತನೆಂಬುವೆನಯ್ಯ ಮುತ್ತಿನಕಂಥೆ ಸದ್ಗುರುವೆ ॥೧೯॥

ಸ್ವರ್ಗವಿರಹಿತವಾದ ಅರಿಷ ।
ಡ್ವರ್ಗವನು ಜೀರ್ಣಿಸುವ ಜಂಗಮು ।
'ಭರ್ಗ ದೇವ್ಯೋ'ನೆಂದು ನುಡಿವುದು ಘನವ ಗಾಯತ್ರಿ ॥
ದುರ್ಗುಣಂಗಳ ತೋರಿ ತನುಮನ ।
ದುರ್ಗತಿಗೆ ತರುವಂತೆ ತಾಮಸ ।
ವರ್ಗ ಬಿಡಿಸುವದಯ್ಯ ಮುತ್ತಿನಕಂಥೆ ಸದ್ಗುರುವೆ ॥೨೦॥

೩೨-೩೨ ಅ (ಅ).

ತನ್ನ ಮನದಲಿ ಅಂಜಿಕಿಲ್ಲದೆ ।
ಮುನ್ನ ನಿಜ ವಿಶ್ವಾಸ ನೇಮಿಸಿ ।
ಕನ್ನವಿಟ್ಟು ಸಮಸ್ತವಡವಿಯು ತಂಮ ಜಂಗಮಕೆ ॥
ಅನ್ನ ನೀರು ಪ್ರಸಾದ ಭುಂಜಿಸಿ ।
ಪನ್ನಗಧರ ಭಕ್ತಿ ಪಡೆದನು ।
ಕನ್ನದ ಬ್ರಹ್ಮಯ್ಯ ಮುಕ್ತಿನಕಂಥೆ ಸದ್ಗುರುವೆ ॥೨೦॥

ಸಾವಧಾನ ವಿವೇಕನೊಂದಿಸಿ ।
ಸಾವಜೀವರ ಸಂಗಮಾಡುವ ।
ಜೀವವನು ಶಿವಯೇಕ ಮಾಡುವ ಶ್ರುತಿ ವಿಚಾರದಲಿ ॥
ಭಾವಿಸುವ ಪರಿಪೂರ್ಣಜಂಗಮ ।
ದೇವನೆನಿಸುವ ಅಖಿಲಮಾಯಾ ।
ಕಾವನೆ ಸಿದ್ಧನಾತ ಮುಕ್ತಿನಕಂಥೆ ಸದ್ಗುರುವೆ ॥೨೨॥

ದಂಡಿಸಿಂದ್ರಿಯ ಮೋಹರತಿಗಳು ।
ಖಂಡಿಸಿದ ಸಿದ್ಧಾಂತ ಋಷಿಗಳು ।
ಪಂಡಿತರು ಅನುಮಿಷರು ನಿರ್ಜರ ಮುನಿಗಣಂಗಳಿಗೆ ॥
ಮಿಂಡಜಂಗಮನಾಗಿ ಚಿತ್ರದ ।
ಭಂಡುಮಾಡುವ ಮಾಯಾಶಕ್ತಿಗೆ ।
ಗಂಡ ಜಂಗಮಮೂರ್ತಿ ಮುಕ್ತಿನಕಂಥೆ ಸದ್ಗುರುವೆ ॥೨೩

ಅಂತರಂಗವನರಿಯದಂತಹ ।
ಸಂತೆ ಸೂಳೆಯ ಮಗನು ಸುಮ್ಮನೆ ।
ಪಂಥವಾಡಿವರೇನು ಮಹಗುರು ಒಲಿಯರೊಪ್ಪುವರೆ ॥
ಕಂತುಸಂಹರ ಭಕ್ತಿಮಾರ್ಗದ ।
ಚಿಂತೆಯಿಲ್ಲದೆ ವೇಷಡಂಬಕ ।
ಕಂಥೆ ಧರಿಸಿವರೇನು ಮುಕ್ತಿನಕಂಥೆ ಸದ್ಗುರುವೆ ॥೨೪॥

ಪಂಥದಲಿ ತಾಮಸದ ದುರ್ಗುಣ ।
ವಂತರೆಲ್ಲರು ಕೂಡಿ ರಚಿಸಿದ ।
ಸಂತೆವಾಕ್ಯದ ಹಮ್ಮು ಬಿಮ್ಮಿನ ಚಿಂತೆ ಪರಿಹರಿಸಿ ॥
ಸಂತತವು ನೀನೆಂಬ ಮಂತ್ರವು ।
ಅಂತರಂಗಲಿದಟ್ಟು ನಿಶ್ಚಲ ।
ಕಂಥೆ ಧರಿಸಿವರಯ್ಯ ಮುಕ್ತಿನಕಂಥೆ ಸದ್ಗುರುವೆ ॥೨೫॥

ಭಾನುತೇಜವು ನೋಡಿ ಕತ್ತಲು ।
ತಾನು ತಾ ಬಯಲಾದ ಪರಿಯಲಿ ।
[೩೩][ಮಾನಸೂಸದಲಿಂದ ಹೋದವು ದಿನದ ಬುದ್ಧಿಗಳು][೩೩] ॥
ನೀನೆ ಜಂಗಮವೆಂದು ತಿಳಿದೊಡೆ ।
ಏನು ಚಿತ್ರವು ಸುಟ್ಟಿತದು ಭವ ।
ಕಾಣೆನದು ಕ್ಷಣಮಾತ್ರ ಮುತ್ತಿನಕಂಥೆ ಸದ್ಗುರುವೆ ॥೨೬॥

ವಿಟನು ವಿದ್ವಾಂಸಕನು ನೀನೆ ।
ಸಟಿಗಳರಿಯದ ಭಿಕ್ಷು ನೀನೆ ।
ನಟಿಸಿ ನಾಟ್ಯವು ತೋರುವಾ ಪ್ರಭು ನಾಟಕವು ನೀನೆ ॥
ಕುಟಿಲ ಕುಹಕನೆಂಬ ದುರ್ಗುಣ ।
ಕಠಿಣಸಂಹರ ರಾಜ ನೀನೆ ।
ಘಟದೊಳಗೆ ಚರಂತಿಯು ಮುತ್ತಿನಕಂಥೆ ಸದ್ಗುರುವೆ ॥೨೭॥

ಮಧುವ ಪಾನ್ಯದಲಿಂದ ತನ್ನೊಳು ।
ಉದಯವಾಗುವ ಮಾಯ ಖಂಡಿಸಿ ।
ಸದಮಲಾತ್ಮಕನಾದ ನಿರ್ಗುಣ ಶಾಂತರೂಪದಲಿ ॥
ಸುಧೆಯ ರುಚಿಗೊಂಡಾತ್ಮದೊಳಗಿನ ।
ಮದವ ಮತ್ಸರವಳಿದು ಲೋಕದ ।
ಕವನ ಬಿಟ್ಟ ವಿರಕ್ತಿ ಮುತ್ತಿನಕಂಥೆ ಸದ್ಗುರುವೆ ॥೨೮॥

ಕಳ್ಳತನ ಪರಿಹರಿಸಿ ನಿಜಭ ।
ಕ್ತ್ರುಳ್ಳ ಜಂಗಮನಾತ ಪರಶಿವ ।
ಸುಳ್ಳುವಾಕ್ಯವ ನುಡಿವ ದುರ್ಗುಣನಾತ ಜಂಗಮನೆ ॥
ಕಳ್ಳತನ ಬೇಕೆಂದು ಬಯಸಲು ।
ಸಲ್ಲ ಜಂಗಮ ಕೀರ್ತಿ ದುರ್ಜನ ।
ಕಳ್ಳ ಮೂರ್ಖರಿಗೇಕೆ ಮುತ್ತಿನಕಂಥೆ ಸದ್ಗುರುವೆ ॥೨೯॥

ಸತ್ಯಮಾರ್ಗವದಲ್ಲದವರಿಗೆ ।
ಭಕ್ತರೆನಿಸುವ ದೀಕ್ಷೆ ಪಾಲಿಸಿ ।
ತುತ್ತಿಗಾಸೆಯ ಮಾಡುವನ ನಿಜಬಿಟ್ಟು ಸಟೆಯಾಗಿ ॥

೩೩–೩೩ ಮನಸು ಶುದ್ಧದಲಿದ್ದು ಹೊಳವುದ ಹೋದ ಬುದ್ಧಿಗಳು (ಕ).

ಉತ್ತಮರ ಮನ ನೋಯಿಸಿ ಹೇಡಿಕೆ ।
ತೊತ್ತುಗಳ ಬೆನ್ನತ್ತಿ ಚರಿಸುವ ।
ಗಾತ್ರ ಜಂಗಮನಲ್ಲ ಮುತ್ತಿನಕಂಥೆ ಸದ್ಗುರುವೆ ॥೩೦॥

ಭೂತಲಾಧೀಶ್ವರನ ಭಕ್ತಿಗೆ ।
ರೀತಿ ತೂರಾಡುತಲಿ ನಿಜಗುರು ।
ವಾತನಾಗಿ ಸಮಸ್ತ ಭೋಗವ ಪಡೆದು ಸುಖದಿಂದ ॥
ಜಾತಿ ಒಡೆಯರ ನಡತಿ ಗೆಲ್ಲದ ವಿ ।
ಖ್ಯಾತಿ ಮಾಡುವ ಶಿಷ್ಯರೊಳು ತಾ ।
ಖ್ಯಾತಿ ಬಿಲ್ಲಮರಾಯ ಮುತ್ತಿನಕಂಥೆ ಸದ್ಗುರುವೆ ॥೩೮॥

ಗುರುಲಿಂಗಜಂಗಮಸ್ಥಲದ ಸದ್ಗುರುವಚನ ಸಂಪೂರ್ಣ ಮಂಗಳಮಹಾಶ್ರೀ ।

ಎರಡು ಕವಿತೆಗಳು

● ಜಯಶ್ರೀ ಚಾಟಿ

ಕವಿತ್ವ

ನಾನೊಂದು ಮರವಾದೆ.
ನೀ
ನೆಳಲ ಬಯಸಿ
ಅಡಿಯಲ್ಲಿ ನಿಂದೆ.
ಗಿಡದ ಎಲೆಯಾದೆ.
ಇಬ್ಬನಿಯಾಗಿ
ಮೈಯೆಲ್ಲ ಮುದ್ದಿಸಿದೆ.
ಹುಣ್ಣಿಮೆಯ ಚಂದಿರನಾದೆ.
ನೈದಿಲೆಯಾಗಿ ಅರಳಿ
ಮನವ ಸೋಲಿಸಿದೆ.
ಹಿಂಬಾಲಿಸುವಿಯೇನೋ ಎಂದು
ಪರೀಕ್ಷಿಸಲು
ಅರೂಪವಾಗಿ ನಿಂದೆ.
ಅನುಸರಿಸಿಯೇ ಬಂದು
ಆತ್ಮದಲಿ ಬೆರೆತು
ಅಮರವಾದೆ.

ತೃಪ್ತಿಗೆ–ತಣ್ಣೀರು

ಆಶೆ–ನಿಗಿನಿಗಿ ಕೆಂಡ.
ಗಾಳಿ ಆಡದಂತೆ ಏನಾದರೂ ಮುಚ್ಚಿ
ಇದ್ದಿಲು ಮಾಡಲೆತ್ನಿಸುತ್ತೇನೆ.
ಯಾರ್ಯಾರೋ
ಮುಚ್ಚಿದ ಬೂದಿ ಊದಿ
ಮತ್ತೆ ಕೆದಕುತ್ತಾರೆ.
ತೃಪ್ತಿಯ ತಣ್ಣೀರಿಗೆ
ಕೆರೆ–ಹಳ್ಳ ತಿರುಗುತ್ತಿದ್ದೇನೆ–
ಕೆಂಡವಾರಿಸಲು!

ಕೊಳ್ಗಲ್ಲು

● ಎಸ್. ರಾಜಶೇಖರ

ಮಧ್ಯಯುಗೀನ ಕಾಲವಲ್ಲಿ ಕಾರ್ತಿಕೇಯ ಭಕ್ತರಿಗೆ ನೆಲೆಯಾಗಿ ಪ್ರಸಿದ್ಧವಾದ ಕೊಳ್ಗಲ್ಲು ಪ್ರಸ್ತುತ ಬಳ್ಳಾರಿಗೆ ಸಮೀಪದ ಒಂದು ಸಣ್ಣ ಹಳ್ಳಿ. ಇದು ಶಾಸನಗಳಲ್ಲಿ ಕೊಲಗಲ,[೧] ಕೊಳ್ಗಲ್ಲು[೨] ಎಂದು ಉಲ್ಲೇಖಗೊಂಡಿದೆ. ಕೊಟ್ಟತ್ತೊಣೆ (ಈಗಿನ ಕುಡತಿನಿ, ಬಳ್ಳಾರಿ ತಾಲ್ಲೂಕು), ಕುಮಾರಸ್ವಾಮಿ ಬೆಟ್ಟ (ಸಂಡೂರು, ತಾಲ್ಲೂಕು) ಕುರುಗೋಡು, ಹಾಗೂ ಕೊಳ್ಗಲ್ಲುಗಳು ಏಳನೆಯ ಶತಮಾನದಷ್ಟು ಪೂರ್ವದಲ್ಲಿಯೇ ಕಾರ್ತಿಕೇಯ ಭಕ್ತರ ಕೇಂದ್ರಗಳಾಗಿದ್ದವು. ಈ ಪ್ರದೇಶವು ಕಾರ್ತಿಕೇಯ ತಪೋವನವೆಂದೇ ಹೆಸರಾಗಿದ್ದಿತು. ರಾಷ್ಟ್ರಕೂಟ ಖೊಟ್ಟಿಗನ ಕ್ರಿ ಶ. ೯೬೭ ರ ಶಾಸನ ವೊಂದು ಕೊಳ್ಗಲ್ಲನ್ನು ಆಳುತ್ತಿದ್ದ ಗದಾಧರನು, ಕಾರ್ತಿಕೇಯ, ಸೂರ್ಯ, ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ, ಹಾಗೂ ವಿನಾಯಕರ ವಿಗ್ರಹಗಳನ್ನು ಸ್ಥಾಪಿಸಿದ ನೆಂದು ಉಲ್ಲೇಖಿಸುತ್ತದೆ. ಅಲ್ಲದೆ ಅನೇಕ ಕೆರೆ ಬಾವಿಗಳನ್ನೂ ಮಠವೊಂದನ್ನೂ ಕಟ್ಟಿಸಿದ ಉಲ್ಲೇಖ ಅಲ್ಲಿದೆ.[೩] ಆದರೆ ಅಲ್ಲಿ ಉಲ್ಲೇಖಗೊಂಡಿರುವ ವಿಗ್ರಹಗಳ ಲ್ಲೊಂದೂ ಈಗ ಲಭ್ಯವಿಲ್ಲ. ಅಲ್ಲದೆ ಕಾರ್ತಿಕೇಯ ದೇವಾಲಯದ ಇರುವಿಕೆಯ ಬಗ್ಗೆ ಯಾವ ಕುರುಹುಗಳೂ ದೊರೆಯುತ್ತಿಲ್ಲ.

ಗದಾಧರನು ಕ್ರಿ. ಶ. ೯೭೧ ರಲ್ಲಿ ಕೊಟ್ಟತ್ತೊಣೆಯಲ್ಲಿ ಸ್ಕಂಧನ ವಿಗ್ರಹ ವೊಂದನ್ನು ಸ್ಥಾಪಿಸಿದ ಉಲ್ಲೇಖ ಅಲ್ಲಿಯ ಒಂದು ಶಾಸನದಲ್ಲಿದೆ.[೪] ಈಗಿನ ಕುಡತಿನಿ ಯಲ್ಲಿ ಅದನ್ನು ಈಗಲೂ ಕಾಣಬಹುದು. ಗದಾಧರನು ಕಾರ್ತಿಕೇಯನ ನಿಷ್ಠಾವಂತ ಭಕ್ತನಾಗಿದ್ದ. ಇವನು ಕರ್ನಾಟಕಕ್ಕೆ ವಂಗದೇಶದಿಂದ ಬಂದವನೆಂಬುವಕ್ಕೆ ಶಾಸನ ಗಳ ಆಧಾರವಿದೆ. ಒಂದು ಶಾಸನದಲ್ಲಿ[೫] ವರೇಂದ್ರಿ ಪ್ರದೇಶದ (ಈಗಿನ ರಾಜಷಾಹಿ ವಿಭಾಗ, ಬೆಂಗಾಲ) ತಡಾಗ್ರಾಮ (ತರಗ್ರಾಮ) ದಿಂದ ಬಂದವನೆಂದಿದ್ದರೆ, ಇನ್ನೊಂದ ರಲ್ಲಿ[೬] ಭಟ್ಟತಬ್ಬಾಗ್ರಾಮದಿಂದ ಎಂದಿದೆ. ಶಾಂಡಿಲ್ಯ ಗೋತ್ರಕ್ಕೆ ಸೇರಿದ ಗದಾಧರನು ವಿದ್ವಾಂಸರಿಗೆ ಆಶ್ರಯದಾತನು. ರಾಷ್ಟ್ರಕೂಟ ಖೊಟ್ಟಿಗನ ಕ್ರಿ. ಶ. ೯೬೭ರ ಶಾಸನ ವನ್ನು ರಚಿಸಿದ ಮಧುಸೂದನನು ಈತನ ಆಶ್ರಯದಲ್ಲಿದ್ದವನು[೭].

ಗದಾಧರನು ಕೊಳ್ಗಲ್ಲು ಪ್ರದೇಶವನ್ನು ಆಳುತ್ತಿದ್ದನು. ಇವನ ಸಮ್ಮುಖದಲ್ಲಿ ಪತ್ತಿದಾನಗಳು ನಡೆಯುತ್ತಿದ್ದವು. ೯೭೬ರ ಒಂದು ಶಾಸನವಲ್ಲಿ[೮] ಇಮ್ಮಡಿ ತೈಲನು

ಗದಾಧರನ ಸಮ್ಮುಖದಲ್ಲಿ ಕುಡತಿನಿಯ ಭೈರದೇವರಿಗೆ ದತ್ತಿನೀಡಿದ ಉಲ್ಲೇಖವಿದೆ. ಅಲ್ಲಿ ಗದಾಧರನನ್ನು "ದಂಡಾಸನೀ ಗದಾಧರ್ ಬ್ರಹ್ಮಚಾರಿ" ಎಂದು ಹೇಳಲಾಗಿದೆ. ರಾಷ್ಟ್ರಕೂಟ ಅಕಾಲವರ್ಷನ ಕಾಲ (ಕ್ರಿ. ಶ. ೯೬೬)ದಲ್ಲಿ ಚಂಗಗಾವುಂಡನೆಂಬುವನು ಸತ್ಯರಾಶಿ ಭಟಾರರಿಗೆ ೩೦ ಮತ್ತರ ಗದ್ದೆ, ಹೂದೋಟ ಹಾಗೂ ಒಂದು ಗಾಣವನ್ನು ಗದಾಧರನ ಸಮ್ಮುಖದಲ್ಲಿ ದತ್ತಿಯಾಗಿ ಕೊಟ್ಟ ಉಲ್ಲೇಖ ಒಂದು ಶಾಸನದಲ್ಲಿದೆ.[೧೦] ಗದಾಧರನು ಲೋಕಯ್ಯಗಾವುಂಡನ ತರುವಾಯ ಕಾರ್ತಿಕೇಯ ತಪೋವನದ ಅಧಿಪತಿ ಯಾಗಿರುವಂತೆ ಕಂಡುಬರುತ್ತದೆ[೧೧]. ಈತ ತಪೋವನದ ಅಧಿಪತಿಯಾದ ನಂತರ ಕಾರ್ತಿಕೇಯನ ಪೂಜೆಗೆ ವಿಶೇಷ ಮಹತ್ವ ದೊರೆತಂತೆ ತೋರುತ್ತದೆ. ಬಳ್ಳಾರಿ ಮತ್ತು ಸಂಡೂರು ತಾಲ್ಲೂಕುಗಳಲ್ಲಿ ಕಾರ್ತಿಕೇಯನ ಪ್ರಭಾವ ವಿಶೇಷವಾಗಿ ಪಸರಿ ಸಿತ್ತು. ಕುರುಗೋಡಿನಲ್ಲಿ 'ನವಿಲುಪೊನ್ನು' ವಾತಾಪಿಚಾಳುಕ್ಯರಕಾಲದಿಂದಲೇ ಪ್ರಚಾರದಲ್ಲಿದ್ದವು[೧೨]. ಕುಡುತಿನಿಯಲ್ಲಿ ಲೊಕ್ಕಿಗದ್ಯಾಣಗಳನ್ನು ನವಿಲಚ್ಚು ಗಳನ್ನಾಗಿ ಪರಿವರ್ತಿಸುವ ಟಂಕಶಾಲೆ ಇತ್ತು[೧೩]. ನವಿಲು ಕಾರ್ತಿಕೇಯನ ವಾಹನ ವೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕೊಳಗಲ್ಲಿನ ಪ್ರಸ್ತುತ ದೇವಾಲಯಗಳಲ್ಲಿ ಪ್ರಾಚೀನವಾದುದೆಂದರೆ ಕಾಶಿ ವಿಶ್ವನಾಥ ದೇವಾಲಯ. ಕಲ್ಯಾಣಿಚಾಳುಕ್ಯರ ಕಾಲಕ್ಕೆ (ಕ್ರಿ. ಶ ೧೦-೧೧ನೇ ಶತಮಾನ) ಸಂಬಂಧಿಸಿರಬಹುದಾದ ಈ ದೇವಾಲಯ ಏಕಕೂಟಾಕಾರವಾಗಿದ್ದು ಗರ್ಭಗೃಹ, ಅರ್ಧಮಂಟಪ ಹಾಗೂ ನಂದೀಮಂಟಪಗಳನ್ನೊಳಗೊಂಡಿದೆ. ಸಂಪೂರ್ಣವಾಗಿ ಬಿಳೀಕಲ್ಲಿನಲ್ಲಿ ನಿರ್ಮಿತವಾದ ಈ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗ ಹಾಗೂ ಗೋಡೆಗಳ ಗೂಡಿನಲ್ಲಿರುವ ಶಿಲ್ಪಗಳು ಮಾತ್ರ ಕರಿಕಲ್ಲಿನಲ್ಲಿ ಕೆತ್ತಲ್ಪಟ್ಟಿವೆ. ದೇವಾಲಯದ ಅಧಿಷ್ಠಾನದ ಕೆಳಭಾಗ ನೆಲದಲ್ಲಿ ಹೂತುಹೋಗಿದೆ. ಜಗತಿ, ತ್ರಿಪಟ್ಟಕುಮುದ ಮತ್ತು ಕಪೋತವನ್ನೊಳಗೊಂಡ ಅಧಿಷ್ಠಾನ ಮಾತ್ರ ಕಾಣಸಿಗುತ್ತದೆ. ಕಪೋತದಲ್ಲಿ ಕೂಡುಗಳಿವೆ.

ಗರ್ಭಗೃಹವು ಚೌಕಾಕಾರವಾಗಿದ್ದು ಸು. ೬'×೬' ವಿಸ್ತೀರ್ಣವುಳ್ಳದ್ದಾಗಿದೆ. ಮಧ್ಯದಲ್ಲಿ ಕರೀಕಲ್ಲಿನಲ್ಲಿ ಕೆತ್ತಿದ ಶಿವಲಿಂಗವಿದೆ. ಗರ್ಭಗೃಹದ್ವಾರದ ದ್ವಾರಶಾಖೆ ಗಳ ಕೆಳಭಾಗದಲ್ಲಿ ತ್ರಿಶೂಲ, ಸರ್ಪ, ಗದಾ ಹಾಗೂ ಬೀಜಫಲಗಳನ್ನು ಹಿಡಿದ ಶಿವ ದ್ವಾರಪಾಲರ ಚಿತ್ರಗಳನ್ನು ಕೆತ್ತಲಾಗಿದೆ. ಮಂಗಲಫಲಕದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ಅರ್ಧಮಂಟಪವು ೩½'×೬' ವಿಸ್ತೀರ್ಣವಾಗಿದ್ದು ಎರಡೂ ಬದಿಗಳಲ್ಲಿ ಕೂಡ್ಯಸ್ತಂಭಗಳಿವೆ.

ನಂದಿಮಂಟಪವು ಚೌಕಾಕಾರವಾಗಿದೆ (೬'.೮" × ೬'.೮"). ನಾಲ್ಕೂ ಮೂಲೆಗಳಲ್ಲಿ ಉಪಪೀಠದ ಮೇಲೆ ನಿಲ್ಲಿಸಲ್ಪಟ್ಟ ಕಂಬಗಳಿವೆ. ಇವುಗಳ ಎತ್ತರ ಸು. ೫'. ಕಂಬಗಳ ಕೆಳ ಮತ್ತು ಮೇಲ್ಭಾಗವು ಚೌಕಾಗಿದ್ದು, ಮಧ್ಯದ ಭಾಗವು ಮಾತ್ರ ಅಷ್ಟಕೋನಾಕೃತಿಯಲ್ಲಿದೆ ಮೇಲ್ಭಾಗದ ಚೌಕದ ಮೇಲೆ ಅಷ್ಟಕೋನಾಕೃತಿಯ ಕಂಠ, ಅದರ ಮೇಲೆ ದುಂಡಾದ ತಡಿ ಇದೆ.

ಗರ್ಭಗೃಹ ಹಾಗೂ ಅರ್ಧಮಂಟಪದ ಹೊರಗೋಡೆಗಳ ಮೇಲೆ ಕೂಡ್ಯಸ್ತಂಭಗಳನ್ನು ಕೊರೆಯಲಾಗಿದೆ. ಗರ್ಭಗುಡಿಯ ಮೂರೂ ಹೊರಗೋಡೆಗಳ ಮಧ್ಯದಲ್ಲಿ ಗೂಡೊಂದನ್ನು ಕಟ್ಟಲಾಗಿದ್ದು ಅಲ್ಲಿ ದೇವತೆಗಳ ವಿಗ್ರಹಗಳನ್ನಿಡಲಾಗಿದೆ. ಈ ಗೂಡಿನ ಮೇಲ್ಭಾಗವನ್ನು ವಿಮಾನದ ಆಕಾರದಲ್ಲಿ ಕೆತ್ತಲಾಗಿದೆ. ಬಲಬದಿಯ ಗೂಡಿನಲ್ಲಿ ವಿಷ್ಣುವಿನ ಮೂರ್ತಿ ಇದೆ (ಸು. ೨೩" ಎತ್ತರ). ಸಮಭಂಗದಲ್ಲಿರುವ ವಿಷ್ಣುವಿಗೆ ನಾಲ್ಕು ಕೈಗಳಿವೆ. ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಕರ್ತರಿ ಹಸ್ತದಲ್ಲಿ ಹಿಡಿದಿದ್ದಾನೆ. ಕೆಳಗಿನ ಎಡಕೈ ಕಟಿಯ ಮೇಲಿದೆ. ಬಲದ ಕೈಯಲ್ಲಿ ಗದೆ ಇದ್ದು ತ್ರುಟಿತಗೊಂಡಿದೆ. ಕಿರೀಟ, ಕುಂಡಲ, ಹಾರ, ಕಟಿಬಂಧ, ಉದರಬಂಧ, ಕಂಕಣ, ಕೇಯೂರ ಮೊದಲಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ವಿಷ್ಣುವಿನ ಎಡಪಾರ್ಶ್ವಕ್ಕೆ ಅಂಜಲಿಬದ್ಧನಾದ ಗರುಡನ ಮೂರ್ತಿಯಿದೆ.

ಗರ್ಭಗುಡಿಯ ಹಿಂಭಾಗದ ಗೋಡೆಯಲ್ಲಿರುವ ಗೂಡಿನಲ್ಲಿ ಸೂರ್ಯನ ಮೂರ್ತಿ ಇದೆ (ಸು. ೨೫"). ಸಮಭಂಗದಲ್ಲಿರುವ ಸೂರ್ಯ ತನ್ನೆರಡೂ ಕೈಗಳಲ್ಲಿ ಪದ್ಮಗಳನ್ನು ಹಿಡಿದಿದ್ದಾನೆ. ವಿಷ್ಣುವಿನಂತೆಯೇ ಸರ್ವಾಭರಣಗಳಿಂದ ಅಲಂಕೃತನಾಗಿದ್ದಾನೆ. ಆದರೆ ಮೋಜ (Boot) ಗಳನ್ನು ಧರಿಸಿಲ್ಲ. ಕರ್ನಾಟಕದ ಸೂರ್ಯನ ವಿಗ್ರಹಗಳಿಗೆ ಮೋಜ ಇಲ್ಲದಿರುವುದು ಒಂದು ವೈಶಿಷ್ಟ್ಯ. ಉತ್ತರ ಹಾಗೂ ವಾಯುವ್ಯ ಪ್ರಾಂತಗಳ ಸೂರ್ಯನ ವಿಗ್ರಹದಲ್ಲಿ ಮುಖ್ಯವಾಗಿ ಕಂಡುಬರುವುದು ಆತ ಧರಿಸಿರುವ ಮೋಜ. ಸೂರ್ಯನ ವಿಗ್ರಹಗಳಲ್ಲಿ ಮೋಜಗಳನ್ನು ಕೆತ್ತದಿದ್ದರೆ ಆ ವಿಗ್ರಹ ಕೆತ್ತಿದ ಶಿಲ್ಪಿಗೆ ಕುಷ್ಟರೋಗ ಪ್ರಾಪ್ತವಾಗುತ್ತದೆ ಎಂಬ ಆ ಪ್ರದೇಶದ ಸಾಂಪ್ರದಾಯಿಕ ನಂಬುಗೆಯೇ ಇದಕ್ಕೆ ಕಾರಣ. ಆದರೆ ದಕ್ಷಿಣದಲ್ಲಿ ಇಂತಹ ಯಾವುದೇ ನಂಬುಗೆ ಪ್ರಚಲಿತವಾಗಿರಲಿಲ್ಲವೆಂದು ತೋರುತ್ತದೆ. ಹೀಗಾಗಿ ಇಲ್ಲಿಯ ಸೂರ್ಯನ ವಿಗ್ರಹಗಳಲ್ಲಿ ಮೋಜಗಳು ಕಾಣಿಸಿಕೊಳ್ಳುವುದಿಲ್ಲ. ಸೂರ್ಯನ ಎಡಬಲಗಳಲ್ಲಿ ಉಷೆ ಮತ್ತು ಪ್ರತ್ಯುಷೆಯರು ಬಿಲ್ಲು ಹಾಗೂ ಚೌರಿಗಳನ್ನು ಹಿಡಿದುಕೊಂಡು ನಿಂತಿದ್ದಾರೆ.

ಎಡಗೋಡೆಯ ಮೇಲಿರುವ ಗೂಡಿನಲ್ಲಿ ತ್ರಿಭಂಗಿಯಲ್ಲಿರುವ ದುರ್ಗೆಯ ಮೂರ್ತಿ ಇದೆ. ನಾಲ್ಕು ಕೈಗಳಲ್ಲಿ ಕೆಳಗಿನ ಎರಡು ತ್ರುಟಿತವಾಗಿವೆ. ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಶಂಖಗಳಿವೆ. ಆವಳ ಬಲಬದಿಗೆ ಸಿಂಹವಿದೆ. ದೇವಿಯು ಕೋಣದ

ತಲೆಯ ಮೇಲೆ ನಿಂತಿದ್ದಾಳೆ. ದಕ್ಷಿಣದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ವಿರಳವಾದ ಈ ಮೂರ್ತಿಯ ಎತ್ತರ ಸು. ೨೭" ಪಲ್ಲವರ ಕಾಲಕ್ಕೆ ಸಂಬಂಧಪಟ್ಟ ಇಂತಹ ಒಂದು ಶಿಲ್ಪ ಮಹಾಬಲಿಪುರಂದಲ್ಲಿದೆ[೧೪] ಇನ್ನೊಂದು ಮ್ಯೂಜಿಯಂ ಆಫ್ ಫೈನ್ ಆರ್ಟ್ಸ್ (Museum of Fine Arts), ಬೋಸ್ಟನ್‌ದಲ್ಲಿದೆ.[೧೫] ಇವೆರಡೂ ದುರ್ಗಾಮೂರ್ತಿಗಳಿಗೆ ಎಂಟು ಕೈಗಳಿವೆ. ಮಹಾಬಲಿಪುರಂದ ದುರ್ಗಾಮೂರ್ತಿಯ ಕೆಳಗಿನ ಎರಡು ಕೈಗಳು ಅಭಯ ಹಾಗೂ ಕಟಿ ಹಸ್ತದಲ್ಲಿದ್ದು, ಉಳಿದ ಕೈಗಳಲ್ಲಿ ಖಡ್ಗ, ಚಕ್ರ, ಶಂಖ, ಖೇಟಕ ಮುಂತಾದ ಆಯುಧಗಳಿವೆ. ಬೋಸ್ಟನ್ ಮ್ಯೂಜಿಯಂ ದಲ್ಲಿರುವ ದುರ್ಗಾಮೂರ್ತಿಯ ಕೆಳಗಿನ ಬಲಗೈ ಮುರಿದಿದೆ. ಎಡದ ಕೈ ಕಟಿಯ ಮೇಲಿದೆ. ಉಳಿದ ಕೈಗಳಲ್ಲಿ ತ್ರಿಶೂಲ, ಖಡ್ಗ, ಚಕ್ರ, ಶಂಖ, ಧನಸ್ಸು ಮತ್ತು ಖೇಟಕಗಳಿವೆ. ಕೊಳ್ಗಲ್ಲಿನ ದುರ್ಗಾಮೂರ್ತಿಗೆ ಚತುರ್ಭುಜಗಳಿದ್ದು, ಮುರಿದು ಹೋದ ಕೆಳಗಿನ ಕೈಗಳಲ್ಲಿ ಬಲಗೈ ಅಭಯ ಹಸ್ತದಲ್ಲಿಯೂ ಕೆಳಗಿನ ಎಡಗೈಯನ್ನು ಕಟಿಹಸ್ತದಲ್ಲಿಯೂ ಇರಿಸಿರಬಹುದೆಂದು ಊಹಿಸಬಹುದು.

ಪಲ್ಲವರ ಸಮಕಾಲೀನರಾದ ವಾತಾಪಿಚಾಳುಕ್ಯರ ಶಿಲ್ಪಗಳಲ್ಲಿ ಇಂತಹ ದುರ್ಗಾ ದೇವಿಯ ಶಿಲ್ಪ ಇದುವರೆಗೆ ಕಂಡುಬಂದಿಲ್ಲ. ರಾಷ್ಟ್ರಕೂಟರ ಕಾಲಕ್ಕೂ ಕೂಡ ಇದೇ ಮಾತು ಅನ್ವಯಿಸುತ್ತದೆ. ಹೊಯ್ಸಳರ ಕಾಲದ ಶಿಲ್ಪದಲ್ಲಿಯೂ ಕೂಡ ದುರ್ಗಾ ಮೂರ್ತಿ ಕಾಣಸಿಗುವುದಿಲ್ಲ. ಇದರಿಂದಾಗಿ ಕೊಳ್ಗಲ್ಲಿನಲ್ಲಿ ಕಾಣಸಿಗುವ ಈ ದುರ್ಗಾ ಮೂರ್ತಿಯೇ ಕರ್ನಾಟಕದ ದುರ್ಗಾಮೂರ್ತಿಗಳಲ್ಲಿ ಮೊದಲನೆಯದೆಂದು ಹೇಳಲು ಅವಕಾಶವಿದೆ. ಸು. ೧೦–೧೧ ನೇ ಶತಮಾನಕ್ಕೆ ಸಂಬಂಧಿಸಿದ ಈ ದೇವಾಲಯದ ಶಿಖರ ಶಿಥಿಲಗೊಂಡಿದ್ದು, ಕದಂಬನಾಗರ ಶೈಲಿಯಲ್ಲಿದೆ.

ಇಲ್ಲಿಯ ದೇವಾಲಯಗಳಲ್ಲಿ ಇನ್ನೊಂದು ಮುಖ್ಯವಾದ ದೇವಾಲಯವೆಂದರೆ ನರಸಿಂಹಸ್ವಾಮಿಯದು. ಇದು ವಿಜಯನಗರ ಶೈಲಿಯಲ್ಲಿದೆ. ಇಟ್ಟಿಗೆಗಳಿಂದ ಕಟ್ಟಿದ ಸುಂದರ ಶಿಖರವನ್ನೊಳಗೊಂಡಿದೆ. ಶಿಖರದ ಪ್ರಮುಖ ಭಾಗಗಳಲ್ಲಿ ನರಸಿಂಹ ಮೂರ್ತಿಗಳಿವೆ. ವಿದ್ಯಾರಣ್ಯರ ವಿಗ್ರಹವೆಂದು ನಂಬಲಾಗಿರುವ ವಿಗ್ರಹವೊಂದು ಈ ದೇವಾಲಯದಲ್ಲಿದೆ.

ನರಸಿಂಹಸ್ವಾಮಿ ದೇವಾಲಯದ ಎಡಪಾರ್ಶ್ವದಲ್ಲಿ ಕೇಶವಸ್ವಾಮಿ ದೇವಾಲಯ ವಿದೆ. ಇದರ ಗರ್ಭಗುಡಿಯಲ್ಲಿರುವ ವಿಗ್ರಹ ವಿಜಯನಗರ ಕಾಲಕ್ಕೆ ಸಂಬಂಧಿಸಿದ ದಾಗಿದೆ.

ನರಸಿಂಹಸ್ವಾಮಿ ದೇವಾಲಯದ ಬಲಪಾರ್ಶ್ವದಲ್ಲಿ ಪಂಪಾಪತಿ ದೇವಾಲಯ ವಿದೆ. ಈ ದೇವಾಲಯದ ಒಳಗೋಡೆಗಳಲ್ಲಿ ಶಿಲ್ಪಗಳನ್ನುಳ್ಳ ಮೂರು ಕಲ್ಲುಗಳನ್ನು ಸೇರಿಸಿದ್ದಾರೆ. ಸುಣ್ಣ ಬಳಿದಿರುವುದರಿಂದ ಶಿಲ್ಪಗಳನ್ನು ಗುರುತಿಸುವುದು ಕಷ್ಟ

ಸಾಧ್ಯವಾಗಿದ್ದರೂ ಅವುಗಳಲ್ಲೊಂದು ಲಿಂಗೋದ್ಭವ ಶಿವನ ಮೂರ್ತಿಯೆಂದು ಗುರುತಿಸಲವಕಾಶವಿದೆ.

ಕಾಶೀವಿಶ್ವನಾಥ ದೇವಾಲಯದ ಎದುರಿನಲ್ಲಿ ಮತ್ತೊಂದು ಶಿವದೇವಾಲಯವಿದೆ. ಈ ದೇವಾಲಯದ ಗೋಡೆಯೊಂದರಲ್ಲಿ ಸಪ್ತಮಾತೃಕೆಯರ ಶಿಲ್ಪವುಳ್ಳ ಕಲ್ಲೊಂದಿದೆ. ಈ ಶಿಲ್ಪ ಕೊಳ್ಗಲ್ಲಿನಲ್ಲಿರುವ ಪ್ರಾಚೀನ ಅವಶೇಷಗಳಲ್ಲಿಯೇ ಹಳೆಯದು. ಇದು ವಾತಾಪಿಚಾಳುಕ್ಯರ ಕಾಲದ ಅಂತ್ಯ ಇಲ್ಲವೆ ರಾಷ್ಟ್ರಕೂಟರ ಕಾಲದ ಆದಿಭಾಗಕ್ಕೆ ಸೇರಿರಬಹುದಾಗಿದೆ. ಶಿಲ್ಪದ ಎಡಭಾಗದಲ್ಲಿರುವ ಗಣೇಶವಿಗ್ರಹದ ಭಾಗ ಪಕ್ಕದ ಗೋಡೆಯಲ್ಲಿ ಹೂತುಹೋಗಿದೆ. ಈಗ ಕಾಣಿಸುವ ಭಾಗ ೧'.೬" ಎತ್ತರ ಹಾಗೂ ಸು. ೫'·೧೦" ಅಗಲವಾಗಿದೆ. ಮೂರ್ತಿಗಳನ್ನು ಪೀಠವೊಂದರ ಮೇಲೆ ಕೆತ್ತಿದ್ದಾರೆ. ಪೀಠದಲ್ಲಿ ಆಯಾ ಮಾತೃಕೆಯರ ವಾಹನಗಳೂ ಕೆತ್ತಲ್ಪಟ್ಟಿವೆ. ಪ್ರತಿಯೊಂದು ಮೂರ್ತಿಗೂ ನಾಲ್ಕು ಕೈಗಳಿವೆ. ಕೆಳಗಿನ ಬಲದ ಕೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಫಲವಿದೆ. ಮೇಲಿನ ಕೈಗಳಲ್ಲಿ ಹಿಡಿದರುವ ಆಯುಧಗಳಾವುವೆಂಬುದನ್ನು ನಿರ್ಧರಿಸುವುದು ಕಷ್ಟಸಾಧ್ಯ. ಈ ಮೂರ್ತಿಗಳನ್ನು ಅನುಕ್ರಮವಾಗಿ ಹೀಗೆ ಗುರುತಿಸಬಹುದು.—(ಬಲಗಡೆಯಿಂದ) ವೀರಭದ್ರ ಅವನ ವಾಹನ ನಂದಿ, ಬ್ರಾಹ್ಮಿ ಅವಳ ವಾಹನ ಹಂಸ, ಮಾಹೇಶ್ವರಿ ಅವಳ ವಾಹನ ನಂದಿ, ಕೌಮಾರಿ ಅವಳ ವಾಹನ ನವಿಲು, ವೈಷ್ಣವಿ ಅವಳ ವಾಹನ ಗರುಡ, ವಾರಾಹಿ ಮತ್ತು ಅವಳ ವಾಹನ, ಇಂದ್ರಾಣಿ ಅವಳ ವಾಹನ ಗಜ, ಚಾಮುಂಡಿ ಅವಳ ವಾಹನ ವರಾಹ. ಗಣೇಶನಿದ್ದ ಭಾಗ ಗೋಡೆಯಲ್ಲಿ ಹೂತುಹೋಗಿದೆ. ಮಾತೃಕೆಯರ ವಾಹನಗಳನ್ನು ಕೆತ್ತುವಾಗ ರೂವಾರಿಯು(ಶಿಲ್ಪಿ) ವಾರಾಹಿಯ ವಾಹನವನ್ನು ಚಾಮುಂಡಿಗೂ, ಚಾಮುಂಡಿಯ ವಾಹನವನ್ನು ವಾರಾಹಿಗೂ ಜೋಡಿಸಿದ್ದಾನೆ. ಇದೇ ಶಿವಾಲಯದ ಮುಂಭಾಗದ ಬಯಲಲ್ಲಿ ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟ ವಿಷ್ಣುವಿನ ವಿಗ್ರಹವೊಂದಿದೆ; ಪದ್ಮಾಸನದ ಮೇಲೆ ಸುಖಾಸೀನನಾಗಿದ್ದಾನೆ. ಅವನ ಎಡತೊಡೆಯ ಮೇಲೆ ಲಕ್ಷ್ಮಿ, ಎತ್ತರವಾದ ಕಿರೀಟ, ಬಾಹುಬಂಧಿ, ಹಾರ, ಕಟಿಬಂಧ, ಉದರಬಂಧ, ಕುಂಡಲ, ಕಂಕಣ, ಕೇಯೂರ, ನೂಪುರ, ಕಾಲ್ಗಡಗ, ಮುಂತಾದ ಅನೇಕಾನೇಕ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಚತುರ್ಭುಜಗಳಿದ್ದು ಕೆಳಗಿನ ಬಲಗೈ ಒಡೆದಿದೆ. ಮೇಲಿನ ಬಲಗೈಯಲ್ಲಿ ಕರ್ತರಿ ಹಸ್ತದಲ್ಲಿ ಚಕ್ರವನ್ನೂ, ಎಡಗೈಯಲ್ಲಿ ಶಂಖವನ್ನೂ ಹಿಡಿದಿದ್ದಾನೆ. ಕೆಳಗಿನ ಎಡಗೈ ಲಕ್ಷ್ಮಿಯನ್ನು ಆಲಂಗಿಸಿದೆ. ಲಕ್ಷ್ಮಿಯ ಬಲಗೈ ವಿಷ್ಣುವಿನ ಬೆನ್ನಿನ ಮೇಲಿದ್ದು ಎಡಗೈಯಲ್ಲಿ ಕಮಲವಿದೆ ಅವಳ ಸೀರೆ ಪಾದದ ವರೆಗೂ ಇದೆ. ವಿಷ್ಣುವಿನ ಬಲಪಾರ್ಶ್ವದಲ್ಲಿ ಅತೀ ಚಿಕ್ಕದಾದ ನರಸಿಂಹನ ಮೂರ್ತಿ ಇದೆ. ಪ್ರಭಾವಳಿಯಲ್ಲಿ ದಶಾವತಾರಗಳನ್ನು ಕೆತ್ತಲಾಗಿದೆ. ವಿಷ್ಣುವಿನ ಹಿಂಬದಿಗೆ

ನಾಗನ ಹೆಡೆಗಳಿವೆ. ವಿಜಯನಗರ ಕಾಲಕ್ಕೆ ಸಂಬಂಧಿಸಿದ ಈ ಮೂರ್ತಿ ಸುಮಾರು ೪' ಎತ್ತರವಾಗಿದೆ.

ದುರ್ಗಮ್ಮನ ಗುಡಿಯು ಹತ್ತಿರವಿರುವ ಕಲ್ಲಿನ ಕಟ್ಟೆಯ ಮೇಲೆ ಮಹಿಷಾಸುರ ಮರ್ದಿನಿಯ ವಿಗ್ರಹವೊಂದಿದೆ. ೧೦-೧೧ ನೆಯ ಶತಮಾನಕ್ಕೆ ಸಂಬಂಧಿಸಿದ ಈ ವಿಗ್ರಹದ ತೊಡೆಯ ಕೆಳಭಾಗವು ಮೊಟಕಾಗಿದೆ. ಚತುರ್ಭುಜಗಳಲ್ಲಿ ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳಿವೆ. ಕೆಳಗಿನ ಎಡಗೈಯಲ್ಲಿ ಮಹಿಷನ ಮೂರ್ತಿಯನ್ನೂ, ಬಲಗೈಯಲ್ಲಿ (ತ್ರುಟಿತವಾಗಿದೆ) ತ್ರಿಶೂಲವನ್ನೂ ಹಿಡಿದಿದ್ದಾಳೆ.

ಕೊಳ್ಗಲ್ಲಿನಲ್ಲಿ ಎರಡು ವೀರಗಲ್ಲುಗಳಿದ್ದು ಒಂದು ಮಹಾಲಿಂಗನಮಠದ ಆವರಣ ಲ್ಲಿದೆ. ೧೦-೧೧ ನೆಯ ಶತಮಾನಕ್ಕೆ ಸಂಬಂಧಿಸಿದ ಇದು ಅಲ್ಲಲ್ಲಿ ಸವೆದಿದೆ. ಕೆಳಭಾಗ ದಲ್ಲಿ ವೀರನು ಕಠಾರಿಯೊಂದನ್ನು ಹಿಡಿದು ನಿಂತಿದ್ದಾನೆ. ಮೂರು ಬಾಣಗಳು ಅವನ ದೇಹವನ್ನು ಹೊಕ್ಕಿವೆ. ಮೇಲ್ಭಾಗದಲ್ಲಿ ಅಪ್ಸರೆಯರೊಂದಿಗೆ ಅವನು ಸ್ವರ್ಗಕ್ಕೆ ಹೋಗುವ ದೃಶ್ಯವಿದೆ. ಇನ್ನೊಂದು, ಊರ ಪ್ರವೇಶದಲ್ಲಿರುವ ಎರ್ರಿತಾತನ ಗುಡಿಯ ಹೊರಭಾಗದಲ್ಲಿದೆ. ೧೦ ನೆಯ ಶತಮಾನಕ್ಕೆ ಸಂಬಂಧಪಟ್ಟಿದ್ದು ಕರೀ ಕಲ್ಲಿನಲ್ಲಿ ಕೆತ್ತಲಾಗಿದೆ. ಇದರಲ್ಲಿಯ ಶಾಸನಭಾಗ ಸವೆದು ಹೋಗಿದೆ. ತುರುಗಾಳಗಕ್ಕೆ ಸಂಬಂಧಿಸಿದ ಈ ಕಲ್ಲಿನಲ್ಲಿ ವೀರನೊಬ್ಬನು ಖಡ್ಗ, ಬಾಣಗಳನ್ನು ಹಿಡಿದು ಶತ್ರು ವಿನೊಂದಿಗೆ ಹೋರಾಡುತ್ತಿದ್ದಾನೆ. ವೀರನ ಬಲಪಾರ್ಶ್ವದಲ್ಲಿ ನಾಲ್ಕು ಆಕಳುಗಳಿವೆ. ವೀರಗಲ್ಲಿನ ಮಧ್ಯಭಾಗದಲ್ಲಿ ವೀರನು ಅಪ್ಸರೆಯರೊಂದಿಗೆ ಸ್ವರ್ಗಕ್ಕೆ ಹೋಗುವ ದೃಶ್ಯವಿದೆ. ಮೇಲ್ಭಾಗದಲ್ಲಿ ವೀರನು ಸ್ವರ್ಗದಲ್ಲಿ ಪೂಜೆಗೆಯ್ಯುವ ದೃಶ್ಯವಿದೆ.

ಅಡಿಟಿಪ್ಪಣಿಗಳು

೧ *Epigraphia Indica*, vol. XXI, No. 40. ಮುಂದಿನ ಟಿಪ್ಪಣಿಗಳಲ್ಲಿ *EI* ಎಂದು ಸಂಬೋಧಿಸಲಾಗಿದೆ.)
೨ *South Indian Inscriytions*, vol. IX. Part I, No. 67., (ಮುಂದಿನ ಟಿಪ್ಪಣಿಗಳಲ್ಲಿ *SII* ಎಂದು ಉಲ್ಲೇಖಿಸಲಾಗಿದ).
೩ *EI* XXI, No. 40.
೪ *SII* IX, Pt, I, No. 70.
೫ *EI* XXI, No. 40.
೬ *SII* IX, Pt, I, No. 70.
೭ *EI* XXI, No. 40.
೮ *SII* IX, Pt. I, No. 73.
೯ ಅದೇ, No. 73.

೧೦ ಅದೇ, No. 67.

೧೧ ಅದೇ, No. 65.

೧೨ ಅದೇ, No. 53.

೧೩ ಅದೇ, No.

೧೪ *Elements of Hindu Iconography* Vol. I, Part-I, T. A. Gopinath Rao, Delhi, 1968, pl. xcix

೧೫ *The Arts and Arcaitecture of India : Buddhist, Hindu, Jaina*, Rowland, Benjamin, penguin, 1953, pl. 116.

● ●

ರೇಚದ ಬಂಕಣ್ಣಯ್ಯಗಳ ಒಂದು ವಚನ

● ಕಾಶಿಪುಟ್ಟಸೋಮಾರಾಧ್ಯ

ರೇಚದ ಬಂಕಣ್ಣ ಇದುವರೆಗೆ ಬೆಳಕಿಗೆಬಾರದ ಒಬ್ಬ ಅಜ್ಞಾತ ವಚನಕಾರ. ವಚನ ಸಾಹಿತ್ಯದಲ್ಲಿ ಪ್ರಸಿದ್ಧರಾಗಿರುವ ಪ್ರಸಾದಿ ಬಂಕಣ್ಣ, ಪ್ರಸಾದಿ ಲೆಂಕಬಂಕಣ್ಣ, ಹೊಡೆಹುಲ್ಲ ಬಂಕಣ್ಣ, ಸುಂಕದ ಬಂಕಣ್ಣ, ವೀರಬಂಕಯ್ಯ ಎಂಬ ವಚನಕಾರರಿಂದ ಇವನು ಭಿನ್ನ. ಈತನು "ಬಸವರಾಜದೇವರ ಮನೆಯ ರೇಚದ ಬಂಕಣ್ಣಯ್ಯ" ಎಂದು ಹೇಳಿಕೊಂಡಿರುವುದರಿಂದ ಬಸವಸಮಕಾಲೀನನಾಗಿರಬೇಕು. ಇವನ ಒಂದು ವಚನ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದ ತಾಳೆ ಪ್ರತಿ ನಂ. ೧೪೭೫ ರ ಬಿಡಿ ಗರಿ ಒಂದರಲ್ಲಿ ಈಗ ದೊರೆತಿದೆ. ಅದರ ಕೊನೆಯಲ್ಲಿ "ಗುಹೇಶ್ವರಯ್ಯಪ್ರಿಯ ಬಂಕಣ್ಣನಿಟ್ಟ ಮುಂಡಿಗೆಯನೆತ್ತುವರಿಲ್ಲ" ಎಂಬ ವಾಕ್ಯವಿದೆ. ಪ್ರಾರಂಭದಲ್ಲಿ "ಶ್ರೀಮತು ಸಕಲ ತತ್ವಜ್ಞಾನಿಸಂಪನ್ನರಾದ ಮಹಾನುಭಾವಿಗಳ ಸ್ವರೂಪಿನ ವಚನವಿದು" ಎಂದಿರುವುದರಿಂದ ಕೃತಿಕಾರನೇ ಇವನ್ನು ವಚನವೆಂದು ಕರೆಮುದು ಸ್ಪಷ್ಟವಾಗುತ್ತದೆ. ಇದರ ಕೊನೆಯಲ್ಲಿ 'ಗುಹೇಶ್ವರಲ್ಲಯ್ಯಪ್ರಿಯ ಬಂಕಣ್ಣ' ಮತ್ತು 'ಬಸವಣ್ಣಪ್ರಿಯ ಮಹಾಪ್ರಭುವೆ' ಎಂದು ಹೇಳಿರುವುದರಿಂದ ಇವೆರಡರಲ್ಲಿ ಅಂಕಿತ ಯಾವುದು ಎಂಬ ಸಂಶಯ ಉಂಟಾಗುತ್ತದೆ ಬಸವಣ್ಣನವರ ಮನೆಯ ರೇಚದ ಕೆಲಸದವನಾದುದರಿಂದ 'ಬಸವಣ್ಣಪ್ರಿಯ ಮಹಾಪ್ರಭುವೆ' ಎಂಬುದೆ ಇವನ ಅಂಕಿತವಾಗಿರಬೇಕೆಂದು ಹೇಳಬಹುದು. ಆ ವಚನ ಹೀಗಿದೆ :

[೧]ಎರಡೆಂಬತ್ತು ಯೆಂಟುಕೋಟಿ ವಚನನೆಂಬ ಶಾಸ್ತ್ರದ ತತ್ವವೆಂದು ಪೂರ್ವದ ವಚನದಲ್ಲಿ ನಿಕ್ಷೇಪಿಸಿ ಇದ್ದಿತು. ಈ ವಚನದ ಅನುಭಾವ ಅನಾದಿ ಶರಣಂಗಲ್ಲದೆ ಆರಿಗೆಯು ತಿಳಿಯಬಾರದು. ಅದೆಂತೆಂದಡೆ :

೧. ಶ್ರೀ ಗುರು ಬಸವಲಿಂಗಾಯನಮಃ। ಶ್ರೀಮತು ಸಕಲ ತತ್ವಜ್ಞಾನಸಂಪನ್ನರಾದ ಮಹಾನುಭಾವಿಗಳ ಸ್ವರೂಪಿನ ವಚನಾಮೃತವಿದು, ಬಸವರಾಜದೇವರ ಮನೆಯ ರೇಚದ ಬಂಕಣ್ಣಯ್ಯಗಳ ವಚನ :

ಅಯ್ಯಾ ಕೇಳಿ, ಗುರುವಿಂಗೆ ಗುರುವುಂಟು, ಲಿಂಗಕ್ಕೆ ಲಿಂಗವುಂಟು, ಜಂಗಮಕ್ಕೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ. ಈ ತ್ರಿವಿಧವೂ ನಾಸ್ತಿಯಾದ ಮಹಾ ಮಹಿಮಂಗೆ ಗುರುವುಂಟು, ಲಿಂಗವುಂಟು, ಜಂಗಮವುಂಟು. ಇವರ ಸ್ವರೂಪು ಎಂತುಟಯ್ಯ ಎಂದಡೆ :

ಮರ್ಕಟ, ಪಿಪ್ಪಲಕ, ವಿಹಂಗ, ಕುಕ್ಕುಟ, ಶ್ವಾನ, ಗಜ ಈ ಷಡ್ವಿಧವು, ೧[ಮರ್ಕಟ ಪಿಪ್ಪಲಕ ಇವೆರಡು ಗುರುಸ್ವರೂಪವೆಂದು]೧ ಪೂರ್ವದ ವಚನಾರ್ಥ ದಲ್ಲಿ೨[ಹುದು]೨ ಅದು ಎಂತಯ್ಯಯೆಂದಡೆ :

ಮರ್ಕಟನು ಆವುದಾನೊಂದು ಫಲವಸ್ತುವನು ಕೈಯಿಂದ ಹಿಡಿದು, ವಾಸನೆ ನೋಡಿ ಪಕ್ವಾದುವ ಹಿಡಿವುದು, ಅಪಕ್ವವಾದುದ ಬಿಡುವುದು. ಶರಣ ತನ್ನ ಅಂತ ರಂಗಕ್ಕೆ ಸರಿಬಂದುದ ಹಿಡಿವನು, ಸರಿಬಾರದುದ ಬಿಡುವನು. ಪಿಪ್ಪಲಿಕವು ಇವ ಮೊದಲು ವಾಸಿಸಿ ನೋಡಿ ಮೇಲಿದ್ದ ಫಲಪಕ್ವವನರಿವುದು, ಅಲ್ಲಿಗೆ ಹೋಗಿ ಆ ರಸ ಸ್ವಾದಿಸುವುದು. ಅದುಕಾರಣ ಗುರುವಿರಲು ಶಿಷ್ಯನಾದೇನೆಂದು ಬಂದರೆ, ಆ ಶಿಷ್ಯ ಮನದ ರತ್ನವನರಿದು ಆತನಲ್ಲಿ ಜ್ಞಾನರಸವಾಸ್ವಾದಿಸುವನಾದಕಾರಣ, ಮರ್ಕಟ ಪಿಪ್ಪಲಿಕ ಇವೆರಡು ಗುರುವಿನ ಗುಣವುಂಟಾದ ಕಾರಣ, ಶರಣನ ಭಾವಕೆ ಗುರು ಸ್ವರೂಪಿಯೆನಬೇಕಾಯಿತ್ತು.

ವಿಹಂಗ, ಕುಕ್ಕುಟ ಇವೆರಡು ಲಿಂಗಸ್ವರೂಪವೆಂದು ಪೂರ್ವದ ವಚನಾರ್ಥದಲ್ಲಿ ಹುದು. ಅದು ಹೇಂಗಯ್ಯ ಎಂದಡೆ :

ವಿಹಂಗ ಎಷ್ಟು ದೂರದಲ್ಲಿ ಇದ್ದರೆಯು ನೆನದಲ್ಲಿ ಆ ಫಲವನಪ್ಪುವುದು. ಶರಣ, ತನ್ನ ಪ್ರಾಣಲಿಂಗವನರಿದ ಕಾರಣ, ಕುಕ್ಕುಟ ಸಮಯವರಿತು ಎಚ್ಚರವಾಗಿ ೩[ಪರಿಪರಿಯಾಗಿ]೩ ಧ್ವನಿಮಾಡುವುದು. ಶರಣ ತನ್ನ ಪ್ರಾರಬ್ಧ ತೀರಿದ ವಿಸ್ತಾರವನರಿದ ಕಾರಣ, ವಿಹಂಗ, ಕುಕ್ಕುಟ ಇವೆರಡು ಶರಣಂಗೆ ಲಿಂಗ ಸ್ವರೂಪಿಯೆನಬೇಕಾಯಿತ್ತು.

ಶ್ವಾನ, ಗಜವು ಇವೆರಡು ಜಂಗಮಸ್ವರೂಪವೆಂದು ಪೂರ್ವದ ವಚನಾರ್ಥ ದಲ್ಲಿಹುದು. ಅದೆಂತೆಂದಡೆ :

೧–೧ ಶರಣಂಗೆ, ಗುರುಲಿಂಗಜಂಗಮವೆಂದು (ಮೂ).

೨–೨ ಇವುಂಟು (ಮೂ).

೩–೩ ಪರಿತರವಾಗಿ (ಮೂ).

ಶ್ವಾನ ನಿದ್ರೆಗೈವಾಗ ತನ್ನ ಆದಿ ಮಧ್ಯಾವಸಾನವರಿವುತ್ತಿದ್ದಿತ್ತಾಗಿ, ಶರಣ ತನ್ನ ಪ್ರಾರಬ್ಧಕರ್ಮ ತೀರಿದ ವಿಸ್ತಾರವನರಿದು ಪ್ರಕಾಶಿಸುತ್ತಿದ್ದ ಕಾರಣ, ಶ್ವಾನ ಜಂಗಮಸ್ವರೂಪವೆನಬೇಕಾಯಿತ್ತು. ಗಜಮತಿಯಾದ ಪುರದಲ್ಲಿಗೆ ಬಂದು, ಆ ಪುರದಲ್ಲಿ ಎಷ್ಟು ಸುಖವಾಗಿದ್ದರೂ ಮಿಗೆ ಮಿಗೆ ತನ್ನ ಮತಿಯನೆ ನೆನವುತ್ತಿಪ್ಪುದು ಆ ಜಂಗಮ ಮೊದಲು ಪರಬ್ರಹ್ಮದಿಂದ ದೇಹವಿಡಿದನಾಗಿ, ಆ ದೇಹದಲ್ಲಿ ಎಷ್ಟು ಸುಖವಾಗಿದ್ದರೆಯು, ಮಿಗೆ ಮಿಗೆ ಆ ಪರಬ್ರಹ್ಮವನೆ ನೆನವುತ್ತಿಹನು. ಇದುಕಾರಣ ಶ್ವಾನ, ಗಜ ಇವೆರಡೂ ಶರಣಂಗೆ ಜಂಗಮಸ್ವರೂಪವೆನಬೇಕಾಯಿತ್ತು.

ಮನವೆ ಮರ್ಕಟ, ಅಱಿವೆ ಪಿಪ್ಪಲಿಕ, ಮಹಾಜ್ಞಾನವೆ ವಿಹಂಗ, ನಿತ್ಯ ಎಚ್ಚರವೇ ಕುಕ್ಕುಟ, ತನ್ನ ತಾನರಿವುದಕ್ಕೆ ಶ್ವಾನ, ತನ್ನ ಬುದ್ಧಿಯೇ ಗಜ. ಇಂತೀ ಷಡ್ವಿಧವ ಬಲ್ಲಾತನೆ ಬ್ರಹ್ಮಜ್ಞಾನಿ, ನಿಮ್ಮಾಣೆ ನಿಮ್ಮ ಪ್ರಮಥರಾಣೆ ಗುಹೇಶ್ವರಯ್ಯಪ್ರಿಯ ಬಂಕಣ್ಣನಿಟ್ಟ ಮುಂಡಿಗೆಯನೆತ್ತುವರಿಲ್ಲ ಬಸವಣ್ಣಪ್ರಿಯ ಮಹಾಪ್ರಭುವೆ.

● ●

ಶಾಸನಗಳಲ್ಲಿ ಸಂಘ-ಸಂಸ್ಥೆಗಳು

● ಆರ್. ಎನ್. ಗುರವ

ಮಧ್ಯಯುಗದ ಕರ್ನಾಟಕದಲ್ಲಿ ಸಮಾಜ ವ್ಯವಸ್ಥೆ ಸಹಕಾರಿ ತತ್ವದ ಮೇಲೆ ಸಂಘಟಿತವಾದುದು ಆ ಕಾಲದ ಸಾರ್ವಜನಿಕ ಜೀವನದ ಒಂದು ವೈಶಿಷ್ಟ್ಯ. ಸಹಕಾರಿಜೀವನದಲ್ಲಿಯ ಸ್ಥೈರ್ಯ ಹಾಗೂ ಉಪಯುಕ್ತತೆ ಇವುಗಳನ್ನು ನಮ್ಮ ಪೂರ್ವಜರು ಪೂರ್ಣವಾಗಿ ತಿಳಿದುಕೊಂಡಿದ್ದರು. ಗ್ರಾಮ ಮತ್ತು ಪಟ್ಟಣಗಳ ಜನತೆ ತಮ್ಮ ತಮ್ಮ ವ್ಯವಸಾಯಗಳಲ್ಲಿ ಸಾಂಘಿಕಪದ್ಧತಿಯಿಂದ ಕಾರ್ಯ ನಡೆಸುವುದು ಒಂದು ಸಹಜವಾದ ಸಂಗತಿಯಾಗಿತ್ತು. ಈ ಕಾರ್ಯಪದ್ಧತಿಯಿಂದ ಅರಸು ಅರಸುಗಳಲ್ಲಿ ನಡೆಯುವ ಯುದ್ಧಗಳು, ಗೋಗ್ರಹಣ, ಸ್ತ್ರೀಹರಣ ಪ್ರಸಂಗಗಳು, ಕಳ್ಳರ ಹಾಗೂ ಕೊಳ್ಳೆಹೊಡೆಯುವವರ ಪಿಡುಗು, ಧಾರ್ಮಿಕ ಆಂದೋಲನ ಮುಂತಾದವುಗಳನ್ನು ಸಹಿಸಿಕೊಂಡು ಸಮಾಜವು ಮುಂದೆ ಸಾಗಿ ತನ್ನ ಸಂಸ್ಕೃತಿಯನ್ನು ಕಾಯ್ದುಕೊಂಡಿತ್ತು. ಗ್ರಾಮದ ಘಟಕಗಳಾದ ಒಕ್ಕಲಿಗರು, ತೋಟಿಗರು, ಎಲೆಗಾರರು, ಗಾಣಿಗರು, ನೇಕಾರರು, ಶ್ರಮಜೀವಿಗಳು, ಆಯುಧಜೀವಿಗಳು ಮತ್ತು ವಿವಿಧ ವರ್ಗದ ವ್ಯಾಪಾರಸ್ಥರು ತಮ್ಮ ತಮ್ಮ ವೃತ್ತಿ ವ್ಯವಸಾಯ ಬಾಂಧವರ ಸಂಘಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದರು. ಈ ಸಂಘಗಳು ಜಾತಿವಾಚಕವಾಗಲಿ ಧರ್ಮವಾಚಕವಾಗಲಿ ಇರಲಿಲ್ಲ. ಅವು ವೃತ್ತಿವಾಚಕವಾಗಿದ್ದವು.

ಸಂಘದ ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಹೋಗುವುದಕ್ಕಾಗಿ ಮತ್ತು ವೃತ್ತಿಗಳನ್ನು ಸರಿಯಾಗಿ ನಡೆಸಿಕೊಂಡು ಪರಸ್ಪರ ಹಿತ ಹಾಗೂ ವೃತ್ತಿಗಳ ಉತ್ಕರ್ಷ ಸಾಧಿಸುವ ಸಲುವಾಗಿ ಬಹುಕಾಲದಿಂದ ಆ ಆ ವೃತ್ತಿಗೆ ತಕ್ಕ ನಿಯಮಗಳು ಅಸ್ತಿತ್ವದಲ್ಲಿದ್ದವು. ಇಂಥ ನಿಯಮಗಳ ಸಂಹಿತೆಗೆ ಸಮಯವೆಂದು ಹೆಸರು. ಸಮಯಗಳ ಉಲ್ಲೇಖಗಳು ಶಾಸನಗಳಲ್ಲಿ ಪ್ರಸಂಗಾನುಸಾರವಾಗಿ ಬರುತ್ತವೆ. ಅದೇ ಪ್ರಕಾರ ಸಂಘದ ವೆಚ್ಚಕ್ಕಾಗಿ ಹಣದ ವ್ಯವಸ್ಥೆ ಮಾಡಿದ ಉಲ್ಲೇಖಗಳು ಬರುತ್ತವೆ.

ವ್ಯವಸಾಯ ಭೇದದಿಂದ ಆಗಿನ ಕಾಲದ ಸಂಘಗಳನ್ನು ೧. ಕೃಷಿ ಸಂಘಗಳು ೨. ಉದ್ಯಮ ಸಂಘಗಳು ೩. ಆಯುಧಜೀವಿಗಳ ಸಂಘಗಳು ೪. ಶ್ರಮಜೀವಿಗಳ ಸಂಘಗಳು ೫. ವಿವಿಧ ವರ್ತಕರ ಸಂಘಗಳು ಮುಂತಾಗಿ ವಿಭಾಗಿಸಬಹುದು.

ಈ ವಿಭಜನೆಯ ಪ್ರಕಾರ ಕೆಲವು ಸಂಘಗಳನ್ನು ಸ್ವಲ್ಪ ವಿಸ್ತಾರವಾಗಿ ಹೀಗೆ ವಿವೇಚಿಸಬಹುದು :

ಕೃಷಿಸಂಘಗಳು

೧. ಅರುವತ್ತೊಕ್ಕಲು :

ಇದು ಗ್ರಾಮದಲ್ಲಿ ಒಕ್ಕಲತನ ಮಾಡುವ ರೈತರ ಸಂಘ.[೧]

೨. ಮಾಲಗಾರ ನಾಲ್ವತ್ತೊಕ್ಕಲು :

ಮಾಲಗಾರರು ಶಾಸನಕಾಲದಲ್ಲಿ ಹೂವಿನ ಗಿಡಗಳನ್ನು ಬೆಳೆಸಿ ಮಾಲೆ, ಬಾಸಿಗ, ದಂಡೆ ಮುಂತಾದವುಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಸಾಯಿಗರಾಗಿದ್ದರು. ರತ್ನಾಗಿರಿಜಿಲ್ಲೆಯ ಖಾರೇಪಾಟಣ ತಾಮ್ರಪಟದಲ್ಲಿ[೨] (ಕ್ರಿ. ಶ. ೧೦೦೮) 'ಮಾಲಾಕಾರ ಕುಟುಂಬಮೇಕಂ' ದೇವರಿಗೆ ಬಿಟ್ಟರೆಂದು ಸಂಸ್ಕೃತದಲ್ಲಿ ಹೇಳಲಾಗಿದೆ. ಮಾಲಾಕಾರ ಶಬ್ದದ ತದ್ಭವ ರೂಪ ಮಾಲಗಾರ ಇಲ್ಲವೆ ಮಾಲೆಗಾರ. 'ಹೂದೋಟದ ಮಾಲೆಗಾಱಗೆ ಕಮ್ಮ ೨೦' ಎಂದು ಶಿಕಾರಿಪುರ ತಾಲೂಕಿನ ತಾಣಗುಂದೂರ ಶಾಸನದಲ್ಲಿ[೩] (ಕ್ರಿ. ಶ. ೧೧೫೭) ಉಲ್ಲೇಖ ಬರುತ್ತದೆ. ಗದಗ ತಾಲೂಕಿನ ಚಿಂಚಲಿ ಗ್ರಾಮದ ಶಾಸನದಲ್ಲಿ[೪] (ಕ್ರಿ. ಶ. ೧೦೬೯) ನಾಗೇಶ್ವರದೇವರ ಪೂದೋಟ ಮಾಡುವ ಮಾಲಗಾಱ, ಕಣಗಿಲೆಯ ಗಿಡವಿಪ್ಪತ್ತು, ಮತ್ತಿನ ಪುಷ್ಪ ಜಾತಿಯೇನೊಂದಾಡೆ ಗಿಡಜಾತಿಯೊಳಯ್ದು, ದವನಂ ಮರುಗಿನ ಮಡಿಯೊಂದ ಱಲಯ್ದು, ದೇವರ್ಗೆ ಕೊಡತಕ್ಕುದೆಂದು ಹೇಳಲಾಗಿದೆ. ನಾಂದೇಡ ಜಿಲ್ಲೆಯ ದೇಗಳೂರ ತಾಲೂಕಿನ ಏರಗಿ ಗ್ರಾಮದ ಶಾಸನದಲ್ಲಿ[೫] (ಕ್ರಿ. ಶ. ೧೧೩೮) 'ದೇವಸವಳ ಬಾಸಿಗ, ದಂಡೆ, ಹೂ, ಏಕಾದಶಿಯ ದೇವಸ ತೋಂಟದ ಹೂವೆಲ್ಲವಂ ಪೂಜೆಯ ಕಟ್ಟಿ ಹೂಗಿಡುವ ಸಲಹಿದಾತ ಮಾಲಗಾಱ' ಎಂದು ಹೇಳಲಾಗಿದೆ. 'ವಸಂತಕನೆಂಬ ಮಾಲೆಗಾಱ, ಆತನ ಪೆಂಡತಿ ವನಮಾಳೆ' ಎಂದು ವಡ್ಡಾರಾಧನೆಯಲ್ಲಿ[೬] ಬರುವ ಉಲ್ಲೇಖ ಹಾಗೂ 'ಮಾಲಗಾಱ ವಾಸಂತಿಕಬ್ಬೆ' ಎಂದು ಕಲಘಟಗಿ ತಾಲೂಕಿನ

---

೧. ಈ ಸಂಘದ ಬಗ್ಗೆ ನನ್ನ ಸವಿಸ್ತಾರವಾದ ಲೇಖನ ಕರ್ನಾಟಕ ಭಾರತಿಯ ಎಂಟನೆಯ ಸಂಪುಟದ ಮೂರನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ.

೨. E.. I, III p, 301, ll. 58-59.

೩. E. C. VII Sk. 185, p. 276, l-62.

೪. S. I. I. XI-I p. 106, ll. 16-19.

೫. Inscriptions in the Nanded District; No. 32, p. 62, ll. 19-21.

೬. PP. 172-73 Kannada Sahitya Parishatta Edition.

ಜಿನ್ನೂರ ಗ್ರಾಮದ ಶಾಸನದಲ್ಲಿ[೭] (ಕ್ರಿ. ಶ. ೧೧೩೮) ಬರುವ ಉಲ್ಲೇಖಗಳು ಮಾಲಗಾರರ ಹೂಗಾರ ವೃತ್ತಿಯನ್ನು ಸೂಚಿಸುತ್ತವೆ. ಮಾಲಗಾರರು ಬಾಡು ಕಾಯಿಗಳನ್ನೂ ಬೆಳೆಸುತ್ತಿದ್ದುದು ಕೆಲವು ಶಾಸನಗಳಿಂದ ವಿದಿತವಾಗುತ್ತದೆ. ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಡಗ್ರಾಮದ ಶಾಸನದಲ್ಲಿ[೮] (ಕ್ರಿ.ಶ. ೧೧೯೭) 'ಮಾಲಗಾಱರು ಹೆಡಿಗೆಗೆ ನಾಲ್ಕು ಕಾಯಿ, ಒಂದು ಹಿಡಿ ಬಾಡು' ಚಂದೇಶ್ವರ ದೇವರಿಗೆ ಬಿಟ್ಟರೆಂದು ಹೇಳಲಾಗಿದೆ. ಜಮುಖಂಡಿ ತಾಲೂಕಿನ ತುಂಗಳ ಗ್ರಾಮದ ಶಾಸನದಲ್ಲಿ[೯] (ಸು. ಕ್ರಿ. ಶ. ೧೧೫೦) ಮಾಲಗಾಱರು ತಮ್ಮ ತೋಟದಲು ಎರಡು ಗಿಡುವಿನ ಹೂವಂ, ಕಾಯಿ ಬಾಡಾದಡೆ ಬದನೆಯ ಕಾಯೆರಡಯ್ದು, ಹಿರೇಯ ಕಾಯಯ್ದು, ಹಾಗಲಕಾಯಿ ಹತ್ತು, ಕುಂಬಳಕಾಯೊಂದು, ಸೌತೆಯ ಕಾಯೆರಡು ಬಾಡಾಪಡೆ ಪೊಪ್ಪಿಡಿ, ದೇವರಿಗೆ ಕೊಡುವರೆಂದು ಹೇಳಲಾಗಿದೆ.

ಮಾಲಗಾರರು ತಮ್ಮದೊಂದು ಪ್ರತ್ಯೇಕವಾದ ಸಂಘವನ್ನು ಕಟ್ಟಿಕೊಂಡಿದ್ದರು. ಈ ಸಂಘಕ್ಕೆ 'ಮಾಲಗಾರ ನಾಲ್ವತ್ತೊಕ್ಕಲು' ಎಂದು ಹೆಸರು. ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯ ಶಾಸನವೊಂದರಲ್ಲಿ[೧೦] (ಕ್ರಿ. ಶ. ೧೧೫೦) ಮಾಲಗಾರ ನಾಲ್ವತ್ತೊಕ್ಕಲು ತಮ್ಮ ಕರಂಡಗೆಗಳಲು ಪ್ರತ್ಯೇಕ ಹೂವಿನ ಸರವೊಂದನ್ನು ಶ್ರೀ ಗವರೇಶ್ವರ ದೇವರಿಗೆ ಕೊಟ್ಟರೆಂದು ಹೇಳಲಾಗಿದೆ. ಕೆಲವು ಗ್ರಾಮಗಳಲ್ಲಿ ಈ ಸಂಘದ ಸದಸ್ಯರ ಸಂಖ್ಯೆ ಹೆಚ್ಚುಕಡಿಮೆ ಇದ್ದದ್ದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರ ಗ್ರಾಮದ ಶಾಸನದಲ್ಲಿ[೧೧] (ಕ್ರಿ. ಶ. ೧೦೪೪) ಈ ಸಂಘದಲ್ಲಿಯ ಸದಸ್ಯರ ಸಂಖ್ಯೆ ಅರುವತ್ತು ಎಂದು ಹೇಳಲಾಗಿದೆ. ಮಾಲಗಾಱ ಅರುವತ್ತೊಕ್ಕಲು ನಾಗಭೂಷಣ ದೇವರಿಗೆ ಭತ್ತವನ್ನು ಮತ್ತು ಮೋಳೇಶ್ವರದೇವರಿಗೆ ಹೂವಿನ ಗಿಡಗಳನ್ನು ಬಿಟ್ಟುಕೊಟ್ಟರೆಂದು ಆ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅದೇ ಪ್ರಕಾರ, ಮುಳಗುಂದ ಗ್ರಾಮದ ಶಾಸನವೊಂದರಲ್ಲಿ[೧೨] (ಕ್ರಿ. ಶ. ೧೦೬೨) ಗ್ರಾಮದ ಈ ಸಂಘದಲ್ಲಿ ಐವತ್ತೆಂಟು ಸದಸ್ಯರಿದ್ದರೆಂದು ಹೇಳಲಾಗಿದೆ. 'ಮಾಲಿಗಾರರೆಯಿವದೆಣ್ಬರುಂ' ಇನ್ನಿತರ ಸಂಘ ಸಂಸ್ಥೆಗಳೊಡನೆ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ನಗರೇಶ್ವರ ದೇವರಿಗೆ ದಾನಮಾಡಿಕೊಟ್ಟರೆಂದು ಈ ಶಾಸನ ತಿಳಿಸುತ್ತದೆ.

---

೭. Quoting from ink-impressions; ll. 37-32.

೮. S. I. I. XX. No. 183, p. 232, ll. 10–11.

೯. Quoting from ink-impressions; ll. 16-17.

೧೦ E. C. VII. Sk. 118, p. 220, l. 62.

೧೧. A. R. I. E. 1958-59 Nos. 664 and 666.

೧೨. S. I. I. XI-I No. 97, p. 93, l. 27.

೩. ಐನೂರುನಾಲ್ವರು :

ಇದು ಗ್ರಾಮದಲ್ಲಿ ಮುಖ್ಯತ ವೀಳೆಯದೆಲೆಯ ಉತ್ಪಾದನ ಮಾಡುವ ಎಲೆದೋಟಗಾರರ ಸಂಘ. ಐನೂರು ನಾಲ್ವರು ಎಲೆಯಬೊಜಂಗರು ಎಂದು ಈ ಸಂಘಕ್ಕೆ ಹೆಸರು. ವೀಳೆಯದೆಲೆಯ ಆಕಾರ ಭುಜಂಗ ಎಂದರೆ ನಾಗರ ಹಾವಿನ ಹೆಡೆಯಂತೆ ಇರುವುದರಿಂದ ವೀಳೆಯದೆಲೆ ಉತ್ಪಾದಿಸುವ ಎಲೆದೋಟಗಾರರಿಗೆ ಎಲೆಯುಭೊಜಂಗರೆನ್ನುವರು. ಭುಜಗ, ಭುಜಂಗ ಶಬ್ದಗಳಿಂದ ಭೊಜಗ, ಭೊಜಂಗ, ಬೊಜಗ ಬೊಜಂಗ ಎಂಬ ರೂಪಗಳಾಗಿರುತ್ತವೆ. ಸಾಂಪ್ರದಾಯಿಕ ವಾಗಿ ಈ ಸಂಘದಲ್ಲಿ ಐನೂರುನಾಲ್ವರು ಸದಸ್ಯರಿರುತ್ತಿದ್ದರು. ಇವರ ಇಷ್ಟದೇವತೆ ಬೊಜಗೇಶ್ವರ. ಈ ಸಂಘದವರೇ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ತಮ್ಮ ಇಷ್ಟ ದೇವತೆಯ ಪ್ರತಿಷ್ಠಾಪನೆಯನ್ನು ಮಾಡುತ್ತಿದ್ದರು.

ಹುಬ್ಬಳ್ಳಿ ತಾಲೂಕಿನ ಕುರ್ಡಿಕೇರಿ ಗ್ರಾಮದ ಶಾಸನವೊಂದರಲ್ಲಿ[೧೩] (ಕ್ರಿ. ಶ. ೧೧೦೮) ಐನೂರುನಾಲ್ವರೆಲೆಯಬೊಜಂಗರನ್ನು ಹೀಗೆ ವರ್ಣಿಸಲಾಗಿದೆ: "ಅನೇಕ ದಾನಧರ್ಮಪರೋಪಕಾರಾರ್ಥತೀರ್ಥರು, ನುಡಿದು ಮತ್ತೆನ್ನರು, ಮರೆವುಗೆ ಕಾವರು, ದೀನಾನಾಥಬದಿರವೈತಾಳಿಕಗೀತವಾದ್ಯನೃತ್ಯವಂದಿಜನಾಧಾರರು, ಸತ್ಯ ರತ್ನಾಕರರು, ಶ್ರೀಮತು ಭೊಜಗೇಶ್ವರದೇವಪಾದಾರಾಧಕರು, ವಿವೇಕ ವಿದ್ಯಾಧರರು, ಆಶ್ರಿತಜನ ಕಲ್ಪವೃಕ್ಷರು, ಚಲದಂಕಕಾರರು, ಪರನಾರೀದೂರರು" ಇತ್ಯಾದಿ. ಇಂತಹ ಈ ಐನೂರುನಾಲ್ವರೆಲೆಯಭೊಜಂಗರು ಭೊಜಗೇಶ್ವರದೇವರಿಗೆ ಒಂದು ಹಾಗವನ್ನು[೧೪] ಬಿಟ್ಟರೆಂದು ಆ ಶಾಸನದಲ್ಲಿ ಹೇಳಲಾಗಿದೆ. ಧಾರವಾಡ ತಾಲೂಕಿನ ಮನಗುಂಡಿ ಗ್ರಾಮದ ಶಾಸನವೊಂದರಲ್ಲಿ[೧೫] (ಕ್ರಿ. ಶ. ೧೨೦೩) ಐನೂರು ನಾಲ್ವರ ವರ್ಣನೆ ಹೀಗೆ ಬರೆತ್ತದೆ :

ಎಲೆಯಬೊಜಂಗರಂಗಜನ ರೂಪಿನ ಪೆಂಪಿನೊಳಂ ಸಮಾನದಿಂ
ಸಲೆ ಸೊಗಯಿಪ್ಪರೀ ಧರೆಗೆ ಸತ್ಯ ಬಳಂ ಸುಚರಿತ್ರವೃತ್ತಿಯಿಂ
ದಲಸದೆ ಮಾಳ್ಪ ದಾನಗುಣದಿಂ ಮಹಿಮೋನ್ನತಿಯಿಂ ಜಗಜ್ಜನಂ
ಪಲತೆರದಿಂದೆ ಬಣ್ಣಿಸಲುದಾತ್ತಗುಣಾನ್ವಿತರೀ ಧರಿತ್ರಿಯೊಳ್ ॥

ಮನಗುಂಡಿಯ ಈ ಐನೂರನಾಲ್ವರು ತ್ರಿಭುವನವೀರ ಜಯಕೇಸಿದೇವರ ದೇವಾಲಯಕ್ಕೆ ಚೈತ್ರದ ಪರ್ವಕ್ಕೆ ಆಳಲ್ಲಿ ಹಾಗ ಪವಿತ್ರದ ಪರ್ವಕ್ಕೆ ಆಳಲ್ಲಿ ಹಾಗ ವನ್ನನಿತುಮಂ ಕೊಟ್ಟರು. ಕಲಘಟಗಿ ತಾಲೂಕಿನ ಮಡಕಿಹೊನ್ನಿಹಳ್ಳಿ ಗ್ರಾಮದ

---

೧೩. Quoting from ink-impressions; ll. 20-30.
೧೪. ಒಂದು ನಾಣ್ಯ ವಿಶೇಷ; ನಾಲ್ಕು ಹಾಡುಗಳೆಂದರೆ ಒಂದು ಪಣಾ (ಪಣ).
೧೫. Karnatak Inscriptions; Vol. V, No. 32, pp. 128-29, ll. 37-39

ಶಾಸನವಲ್ಲಿ[೧೬] (ಕ್ರಿ. ಶ. ೧೧೫೬) ಅಲ್ಲಿಯ ಗ್ರಾಮೇಶ್ವರದೇವರಿಗೆ ಐನೂರು ನಾಲ್ವಲೆಯ ಬೋಜಂಗರು ಎಲೆಯ ಹೇರಿಂಗೆ ಎರಡು ವೀಸಗಳನ್ನು[೧೭] ಬಿಟ್ಟರೆಂದು ಹೇಳಲಾಗಿದೆ. ಧಾರವಾಡ ತಾಲೂಕಿನ ದೇವರಹುಬ್ಬಳ್ಳಿ ಗ್ರಾಮದ ಶಾಸನದಲ್ಲಿ[೧೮] (ಕ್ರಿ.ಶ. ೧೨೦೬) ಐನೂರುನಾಲ್ವರೆಲೆಯಬೋಜಂಗರು ಮಹಾಲಕ್ಷ್ಮಿದೇವಿಯ ಚೈತ್ರದ ಹಬ್ಬಕ್ಕೆ ಆಳಲ್ಲಿ ಒಂದು ಹಣವನ್ನು ಬಿಟ್ಟರೆಂದು ಉಲ್ಲೇಖ ಬರುತ್ತದೆ. ರೋಣ ತಾಲೂಕಿನ ಕಳಕಪ್ಪನಗುಡ್ಡ ಗ್ರಾಮದ ಶಾಸನದಲ್ಲಿ[೧೯] (ಕ್ರಿ. ಶ. ೧೨೨೦) ರಾಜೂರ ಸ್ಥಳದ ಐನೂರನಾಲ್ವರು ದೇವರ ಶ್ರೀಕಾರ್ಯಕ್ಕೆ ಚೈತ್ರದಲ್ಲಿ ಆಳಿಂಗೆ ಎಲೆಯಬೋಜಗರಲ್ಲಿ ಹಾಗ ಪವಿತ್ರದಲ್ಲಿ ಹಾಗ ಬಿಟ್ಟರೆಂದು ಹೇಳಲಾಗಿದೆ. ಇದೇ ಪ್ರಕಾರ ಇನ್ನೂ ಅನೇಕ ಉಲ್ಲೇಖಗಳು ಶಾಸನಗಳಲ್ಲಿ ಬರುತ್ತವೆ.

೪. ತೋಟಿಗರೈನೂರ್ವರು :

ಮಾಲಗಾರ ನಾಲ್ವತ್ತೊಕ್ಕಲು ಮತ್ತು ಐನೂರುನಾಲ್ವರು ಈ ಸಂಘಗಳಲ್ಲದೆ 'ತೋಟಿಗರೈನೂರ್ವರು' ಇಲ್ಲವೆ 'ಐನೂರ್ವರು' ಎಂಬ ತೋಟಗಾರರ ವ್ಯವಸಾಯ ಮಾಡುವವರ ಇನ್ನೊಂದು ಸಂಘವಿದ್ದದ್ದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಇದು ಹೂವಿನ ಗಿಡ, ಕಾಯಿಪಲ್ಲೆ, ಹಣ್ಣು-ಹಂಪಲ ಮುಂತಾದ ಎಲ್ಲ ತರದ ನೀರಾವರಿ ಪೈರಿನ ಹುಟ್ಟುವಳಿಯನ್ನು ಮಾಡುವ ಸಾಮಾನ್ಯ ತೋಟಗಾರರ ಸಂಘವಿದ್ದಂತೆ ಕಾಣುತ್ತದೆ. ಧಾರವಾಡ ತಾಲೂಕಿನ ಸಿದ್ದಾಪೂರ ಗ್ರಾಮದ ಶಾಸನದಲ್ಲಿ[೨೦] (ಕ್ರಿ. ಶ. ೧೧೫೮) ತೋಟಿಗರ್ರೈನೂರ್ವರು ಪಂಚಲಿಂಗದೇವರಿಗೆ ಒಕ್ಕಲಲ್ಲಿ ಚೈತ್ರಕ್ಕೆ ಹಾಗ ಪವಿತ್ರಕ್ಕೆ ಹಾಗ ಬಿಟ್ಟರೆಂದು ಹೇಳಲಾಗಿದೆ. ಕಲಘಟಗಿ ತಾಲೂಕಿನ ಸೀಗಿಗಟ್ಟಿ ಗ್ರಾಮದ ಶಾಸನದಲ್ಲಿ[೨೧] (ಕ್ರಿ. ಶ. ೧೧೬೨) 'ಅಯಿನೂರ್ವರು ದೇವರಿಗೆ ಹೊಂಗೆ ಅರವೀಸದ[೨೨] ಆಯುವ ಬಿಟ್ಟರು' ಎಂದು ಉಲ್ಲೇಖ ಬರುತ್ತದೆ. ಸೌದತ್ತಿಯ ಶಾಸನವೊಂದರಲ್ಲಿ[೨೩] (ಕ್ರಿ. ಶ. ೧೨೨೮) ಕೋಲಾರದ ಪ್ರಭು ಕೇಸಿರಾಜನು ಮಾಡಿಸಿದ ಮಲ್ಲಿನಾಥ ದೇವಾಲಯಕ್ಕೆ ಅಯ್ನೂರ್ವರು ಬಾಡುಕಾಯಿ ಮಾರುವ ಜಿಲ್ಲೆಗೆ ಎರಡು ಸೂಡು ಮತ್ತು ಹೇರಿಗೆ ನಾಲ್ಕು ಕಾಯಿಗಳನ್ನು ಕೊಟ್ಟರೆಂದು ಉಲ್ಲೇಖಿಸಲಾಗಿದೆ.

---

೧೬. ಸ್ವಂತ ಸಂಗ್ರಹ; ಸಾ. ೩೩.

೧೭. ಒಂದು ನಾಣ್ಯವಿಶೇಷ; ನಾಲ್ಕು ವೀಸಗಳೆಂದರೆ ಒಂದು ಹಾಗ.

೧೮. S.I.I. XV No. 232, p. 284, l. 25.

೧೯. S.I.I. XV No. 165, p. 211, ll. 8-10.

೨೦. S.I.I. XV No. 229, p. 281, l. 29, 36.

೨೧. ಸ್ವಂತಸಂಗ್ರಹ, ಸಾ, ೪೯.

೨೨. ಒಂದು ನಾಣ್ಯವಿಶೇಷ; ಎರಡು ಅರವೀಸವೆಂದರೆ ಒಂದು ವೀಸ. ಹೊಂಗೆ=ಗದ್ಯಾಣಕ್ಕೆ.

೨೩. Karnataka Inscriptions; Vol. V, No. 73, pp. 212-13, l. 75.

೫. ಮೋಳಿಸಾಸಿರ್ವರು :

ಇದು ಹೊಲಗಳಲ್ಲಿ ಹರಗುವ, ಎಡಿಕುಂಟೆ ಹೊಡೆಯುವ ಇಲ್ಲವೆ ತತ್ಸಮ ಕೆಲಸಗಳನ್ನು ಮಾಡುವ ರೈತರ ಸಂಘ. ವಾಡಿಕೆಯಾಗಿ ಇವರಲ್ಲಿಯ ಸದಸ್ಯರ ಸಂಖ್ಯೆ ಒಂದು ಸಾವಿರ. ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರ ಗ್ರಾಮದಲ್ಲಿ ಈ ಸಂಘದವರು ಮಹಾಲಿಂಗ ಮೋಳೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿ ಆ ದೇವರಿಗೆ ಪ್ರತಿಯೊಂದು ಕುಂಟೆಯ ಮೋಳಿಯ ಮೇಲೆ ಒಂದು ಪಣದ ಲೆಕ್ಕದಿಂದ ಹಣವನ್ನು ಕೂಡಿಸಿ ದಾನಮಾಡಿ ಕೊಟ್ಟರೆಂದು ಅಲ್ಲಿಯ ಮೋಳಿಶಂಕರ ದೇವಾಲಯದಲ್ಲಿದ್ದ ಶಾಸನದಿಂದ[೨೪] (ಕ್ರಿ. ಶ. ೧೧೮೫) ತಿಳಿಯುಬರುತ್ತದೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಬಳ್ಳಿಗೇರಿ ಗ್ರಾಮದ ಶಾಸನದಲ್ಲಿ[೨೫] (ಕ್ರಿ. ಶ. ೧೧೫೬) ಅಲ್ಲಿ ಮೋಳಿಶಂಕರ ದೇವಾಲಯವಿತ್ತೆಂದು ಹೇಳಲಾಗಿದೆ.

೬. ಗಳೆಯಮೂನೂರ್ವರು :

ಈ ಸಂಘದ ಉಲ್ಲೇಖ ರಾಯಚೂರ ಜಿಲ್ಲೆಯ ಕುಕ್ಕನೂರ ಗ್ರಾಮದ ಶಾಸನದಲ್ಲಿ[೨೬] (ಕ್ರಿ. ಶ. ೧೧೪೩) ಬರುತ್ತದೆ. ಇದೊಂದು ಭೂಮಿಯಲ್ಲಿ ಗಳೆಯ ಕೆಲಸ ಮಾಡುವ ಒಕ್ಕಲಿಗರ ಸಂಘವಿದ್ದಂತೆ ಕಾಣುತ್ತದೆ. 'ಶ್ರೀಮನ್ಮಹಾಗ್ರಹಾರ ಕುಕ್ಕನೂರ ಸಾಸಿರ್ವರ(ಮಹಾಜನರ) ಪ್ರಿಯಪುತ್ರರು ಗಳೆಯಮೂನೂರ್ವರು ಶ್ರೀಮಚ್ಚಾಳುಕ್ಯ ಪ್ರತಾಪಚಕ್ರವರ್ತಿ ಜಗದೇಕಮಲ್ಲ ವರ್ಷದ ಆರನೆಯ ರುಧಿರೋದ್ಗಾರಿ ಸಂವತ್ಸರದ ಶ್ರಾವಣದ ಪೂರ್ಣಿಮಾ ಬುಧವಾರ ಸೋಮಗ್ರಹಣದ ಪುಣ್ಯತಿಥಿಯಲು ತಮ್ಮ ತೋಟಗೇಶ್ವರದೇವರಿಗೆ ವರ್ಷಂಪ್ರತಿ ತೋಟಗೆಲಸದೊಳು ಹಾಗವನ್ನು ಆಚಂದ್ರಾರ್ಕ ತಾರಂಬರಂ ಬಿಟ್ಟರು' ಎಂದು ಈ ಶಾಸನದಲ್ಲಿ ಹೇಳಲಾಗಿದೆ.

ಉದ್ಯಮಸಂಘಗಳು

೧. ತೆಲ್ಲಿಗರಯ್ವತ್ತೊಕ್ಕಲು:

ಗ್ರಾಮದಲ್ಲಿ ಎಣ್ಣೆಯ ಉತ್ಪಾದನ ಮಾಡುವ ಗಾಣಿಗರ ಸಂಘಕ್ಕೆ ತೆಲ್ಲಿಗರಯ್ವತ್ತೊಕ್ಕಲು ಎಂದು ಹೆಸರು. ಸಾಂಪ್ರದಾಯಿಕವಾಗಿ ಈ ಸಂಘದಲ್ಲಿಯ ಸದಸ್ಯ ಒಕ್ಕಲುಗಳ ಸಂಖ್ಯೆ ಐಯ್ವತ್ತು. ನಮ್ಮ ನಾಡಿನಲ್ಲಿ ಊರೂರಿಗೆ ದೇವಾಲಯಗಳಿದ್ದು

---

೨೪. A. R. I. E. 58-59; p. 93, No. 665 and 666.

೨೫. ಸ್ವಂತಸಂಗ್ರಹ, ಸಾ. ೮೫.

೨೬. A. P. G. A. S; 9; p. 30, ll, 9-16.

ದೇವರ ಮುಂದೆ ನಂದಾದೀವಿಗೆಯನ್ನಿಡುವುದು ಅನಾದಿಕಾಲದಿಂದ ಬಂದ ರೂಢಿ. ಈ ನಂದಾದೀವಿಗೆಗೆ ಎಣ್ಣೆಯನ್ನು ದಾನ ಕೊಡುವುದರಲ್ಲಿ ಈ ಸಂಘವು ಭಕ್ತಿಭಾವದಿಂದ ಮುಂದೆ ಬರುತ್ತಿತ್ತು. ಆದುದರಿಂದ ತೆಲ್ಲಿಗರಯ್ವತ್ತೊಕ್ಕಲದ ಉಲ್ಲೇಖಗಳು ಶಾಸನಗಳಲ್ಲಿ ಮೇಲಿಂದ ಮೇಲೆ ಬರುತ್ತವೆ.

ಕಲಘಟಗಿ ತಾಲೂಕಿನ ತಂಬೂರ ಗ್ರಾಮದ ಶಾಸನವೊಂದರಲ್ಲಿ[೨೭] (ಕ್ರಿ. ಶ. ೧೧೪೩) ಅಲ್ಲಿಯ ಚೌಡೇಶ್ವರದೇವರಿಗೆ ತೆಲ್ಲಿಗರಯ್ವತ್ತೊಕ್ಕಲು ಚೈತ್ರಕ್ಕೆ ಪಾಗ, ಪವಿತ್ರಕ್ಕೆ ಪಾಗ ಹಾಗೂ ನಂದಾದೀವಿಗೆಗೆ ಸೌಟಗೆ ಎಣ್ಣೆಯನ್ನು ಕೊಟ್ಟರೆಂದು ಹೇಳಲಾಗಿದೆ. ದಾವಣಗೆರೆ ತಾಲೂಕಿನ ಹರಿಹರ ಗ್ರಾಮದ ಶಾಸನವೊಂದರಲ್ಲಿ[೨೮] (ಕ್ರಿ. ಶ. ೧೧೭೨) ಅಲ್ಲಿಯ ಯೋಗೇಶ್ವರದೇವರ ನಂದಾದೀವಿಗೆಗೆ ತೆಲ್ಲಿಗರಯ್ವತ್ತೊಕ್ಕಲು ಗಾಣದಲ್ಲಿ ಸೊಲ್ಲಿಗೆಯ ಪ್ರಮಾಣಿನಲು ಎಣ್ಣೆಯನ್ನು ದಾನಮಾಡಿ ಕೊಟ್ಟರೆಂದು ಉಲ್ಲೇಖ ಬರುತ್ತದೆ ಧಾರವಾಡ ತಾಲೂಕಿನ ಮನಗುಂಡಿ ಗ್ರಾಮದ ಶಾಸನವೊಂದರಲ್ಲಿ[೨೯] (ಕ್ರಿ. ಶ. ೧೨೨೧) ಮಣಿಗುಂಡಗೆಯ ಅಯ್ವತ್ತೊಕ್ಕಲು ಆ ಸ್ಥಳದ ಪ್ರಾಕಾರದೊಳಗಣ ನಗರಜಿನಾಲಯಕ್ಕೆ ಸೊಂಟಗೆ ಎಣ್ಣೆಯನ್ನು ಬಿಟ್ಟರೆಂದು ಹೇಳಲಾಗಿದೆ.

ವಿನಯವಿಳಾಸರೆಂದು, ಬುಧಬಾಂಧವರೆಂದು, ಸಜ್ಜನನುತರೆಂದು, ಸಾಕ್ಷರಿಕರೆಂದು, ದಯಾಪರರೆಂದು, ಭಾರತೀಸ್ತನಹಾರರೆಂದು, ಸುಜನಾಶ್ರಯರೆಂದು, ಪರಹಿತಚರಿತರೆಂದು, ಪರನಾರೀದೂರರೆಂದು, ಪರಧರ್ಮತತ್ಪರರೆಂದು ಅಲ್ಲಿಯ ಅಯ್ವದಿಂಬರನ್ನು ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ಶಾಸನವೊಂದು[೩೦] (ಕ್ರಿ ಶ. ೧೦೯೮) ವರ್ಣಿಸುತ್ತದೆ. ಈ ಪ್ರಕಾರವಾಗಿ ನೆಗಳ್ತೆವಡೆದ ತೆಲ್ಲಿಗರಯ್ವತ್ತೊಕ್ಕಲು ಡಂಬಳ ಗ್ರಾಮದಲ್ಲಿ ಸಂಗವಸೆಟ್ಟಿ ಮಾಡಿಸಿದ ಬೌದ್ಧವಿಹಾರಕ್ಕೆ ನಂದಾದೀವಿಗೆಗೆ ಪ್ರತಿಗಾಣದಲು ಸೊಳಸೆಯ ಪ್ರಮಾಣದ ಸೊಂಟಗೆ ಎಣ್ಣೆಯನ್ನು ಕೊಟ್ಟರೆಂದು ಈ ಶಾಸನದಲ್ಲಿ ಉಲ್ಲೇಖ ಬರುತ್ತದೆ.

ತೆಲ್ಲಿಗರಯ್ವತ್ತೊಕ್ಕಲು ತಮ್ಮ ಸಂಘದ ವತಿಯಿಂದ ಶಿವಾಲಯವನ್ನು ಕಟ್ಟಿಸಿ ಅದರಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡುತ್ತಿದ್ದರು. ಇಂತಹ ಶಿವಾಲಯಕ್ಕೆ ತೆಲ್ಲಿಗೇಶ್ವರದೇವಾಲಯವೆಂದು ಹೆಸರು. ಹುನಗುಂದ ತಾಲೂಕಿನ ಕಂದಗಲ್ಲ ಗ್ರಾಮದ ಶಾಸನದಲ್ಲಿ[೩೧] (ಕ್ರಿ. ಶ. ೧೨೦೭) ಆಚಿಸೆಟ್ಟಿಯ ಮಗ ಕಲ್ಲಿಸೆಟ್ಟಿ, ಹೊಲ್ಲೊವ್ವೆಯ

---

೨೭. ಸಾಧನೆ; ಸಂಪುಟ ೪, ಸಂಚಿಕೆ ೧; ಪುಟ ೮೦, ಸಾ. ೫೪.

೨೮. E. C. XI Dn. 61, p. 142, ll. 38-39.

೨೯. K. I. V No. 70, p. 261, ll. 11-12.

೩೦. S. I. I. XI-II No. 144, p. 175, ll. 6-18.

೩೧. S. I. I. XV No. 156, pp. 200-201, ll. 15-17, 22, 25-26.

ಕೇತಿಸೆಟ್ಟಿ, ಸ್ವಯಂಭುದೇವರ ಗಾವುಂಡ ಕೇತಿಸೆಟ್ಟಿ ಇನ್ತಿವರು ಮುಖ್ಯವಾಗಿ ಐಯ್ವತ್ತೊಕ್ಕಲುಗಳು ತಾವು ಮಾಡಿಸಿದ ಶ್ರೀ ತೆಲ್ಲಿಗೇಶ್ವರದೇವರ್ಗೆ ಒಂದು ಮತ್ತರ[೨೨] ಭೂಮಿಯನ್ನು ಕೊಟ್ಟರೆಂದು ಮತ್ತು ತಾವು ಮಾರುಗೊಂಡ ಎಳ್ಳಿಗೆ ಹೋಂಗೆ ವೀಸವೊಂದು, ಗಾಣಕ್ಕೆ ಪ್ರತಿದಿನ ಒಂದು ಸೊಲಗೆ ಎಣ್ಣೆ ಹಾಗೂ ಸಂತೆಯಲ್ಲಿ ಮಾರಾಟಕ್ಕೆ ಬಂದ ಒಂದೊಂದು ಕೊಡಕ್ಕೆ ಒಂದೊಂದು ಮಾನ ಎಣ್ಣೆ ಬಿಟ್ಟರೆಂದು ಹೇಳಲಾಗಿದೆ. ಮುಳಗುಂದ ಗ್ರಾಮದ ತೆಲ್ಲಿಗೇಶ್ವರದೇವರಿಗೆ ಊರ ಅಧಿದೇವನೆಂದು ಕರೆದು, ಅಲ್ಲಿಯ ಅಯ್ವತ್ತೊಕ್ಕಲು ತಮ್ಮ ಗಾಣದಲ್ಲಿ ದೀಪಾವಳಿಗೆ ಎರಡು ಮಾನ ಎಣ್ಣೆ ಹಾಗ ನಂದಾದೀವಿಗೆಗೆ ಅರ್ಧಮಾನ ಎಣ್ಣೆಯನ್ನು ಬಿಟ್ಟರೆಂದು ಅಲ್ಲಿಯ ಶಾಸನವೊಂದರಲ್ಲಿ[೨೩] (ಕ್ರಿ. ಶ. ೧೨೦೭) ಹೇಳಲಾಗಿದೆ.

'ಯೆಲ್ಲಾ ಧರ್ಮಗಳುಮಂ ತೆಲ್ಲಿಗರಾರಯ್ವರು, ಅವರವೊಲ್ ಮತ್ತೊರ್ವರು ಬಲ್ಲರೆ ಪುಣ್ಯಮನಾರ್ಜ್ಜಿಸಲ್, ಎಲ್ಲಾ ನಾಡೊಳಗೆ ಆವರ ಧರ್ಮ್ಮವೇ ಧರ್ಮ್ಮಂ, ಕತ್ತಲೆದಾಡುತ್ತಿಪ್ಪ ಶಿವಗೇಹಮನಾದರದಿಂ ಬೆಳಪ್ಪರ್ ಲೋಕೋತ್ತಮರಯ್ವತ್ತೊಕ್ಕಲವರಿಲ್ಲದ ಮಂಡಳಮುಂಟೆ, ಮತ್ತವರುತ್ತಮನೀಯದೊಂದು ತಿಥಿಯುಂಟೆ, ತಥಾ ಅಮರಗ್ಗಿಂ ತಪೋಧನರಗ್ಗಿಂ ಉತ್ತಮ ಪಾತ್ರದಾನಮನೆ ಮಾಳ್ಪವರೆಲ್ಲಿಯುಮಲ್ತೆ ತೆಲ್ಲಿಗರು' ಎಂದು ತೆಲ್ಲಿಗರನ್ನು ವರ್ಣಿಸಿ, ಅವರ ಸಂಘವಾದ ಅಯ್ವತ್ತೊಕ್ಕಲು ಶ್ರೀ ಕಾಳೇಶ್ವರದೇವರಿಗೆ ಸೊಲ್ಲಗೆ ಎಣ್ಣೆಯಂ ಆಚಂದ್ರಾರ್ಕತಾರಂಬರಂ ಕೊಟ್ಟ ತೆಂದು ಕುಂದಗೋಳ ತಾಲೂಕಿನ ಗುಡಗೇರಿ ಗ್ರಾಮದ ಶಾಸನ[೨೪] (ಕ್ರಿ. ಶ. ೧೨೧೭) ಹೇಳುತ್ತದೆ.

ರಟ್ಟರ ಪಟ್ಟಜಿನಾಲಯಕ್ಕೆ ಅಯ್ವತ್ತೊಕ್ಕಲದನುಮತದಿಂದ ಜಿನೇಂದ್ರ ಪೂಜೆಗೆ ದೀಪಾವಳಿಯ ಹಬ್ಬದಲ್ಲಿ ದೀಪದ ಸಲುವಾಗಿ ಗಾಣವಲೊಂದು ಮಾನೆಣ್ಣೆಯನ್ನು ಬಿಟ್ಟರೆಂದು ಸೌದತ್ತಿಯ ಶಾಸನವೊಂದರಲ್ಲಿ[೨೫] (ಕ್ರಿ. ಶ. ೯೮೦); ತಾವರಗೆರೆಯ ನಖರೇಶ್ವರದೇವರ ನಂದಾದೀವಿಗೆಗೆ ಹಾಗೂ ಮಠದ ದೀಪಕ್ಕೆ ಅಯ್ವತ್ತೊಕ್ಕಲಮಿದ್ದು ಸೌಟಗೆ ಎಣ್ಣೆಯನ್ನು ಬಿಟ್ಟರೆಂದು ಶಿಕಾರಿಪುರ ತಾಲೂಕಿನ ಬಳ್ಳಿಗಾವೆ ಶಾಸನದಲ್ಲಿ[೨೬] (ಕ್ರಿ. ಶ. ೧೦೯೪); ತೆಲ್ಲಿಗರಯ್ವತ್ತೊಕ್ಕಲು ಬಿಲ್ಲೇಶ್ವರದೇವರ ನಂದಾದೀವಿಗೆಗೆ ಅರಸೊಲ್ಲಗೆ ಎಣ್ಣೆಯನ್ನು ಬಿಟ್ಟರೆಂದು

---

೨೨. ಭೂಮಿಯನ್ನು ಅಳೆಯುವ ಪ್ರಮಾಣ; ಈಗಿನ ಹೆಕ್ಟೇರ, ಎಕರೆ ಇದ್ದಂತೆ.
೨೩. S. I. I. XV No. 220, p. 269, l. 41.
೨೪. S. I. I. XX No. 193, p. 242, ll. 5-11, 17-19.
೨೫. Ibid. No. 18, p. 16, 3.
೨೬. E. C. VII Sk. 94 p. 177, ll. 34-36.

ಮುಂಡರಗಿ ತಾಲೂಕಿನ ಮೇವುಂಡಿ ಗ್ರಾಮದ ಶಾಸನದಲ್ಲಿ[೩೭] (ಕ್ರಿ. ಶ. ೧೧೯೬); ಕುಂಮುಂಗೊಳದ ಧರ್ಮಿಷ್ಠರಯ್ಯಾಪ್ತೊತ್ತ್ರಕ್ಕಲು ಶ್ರೀಮತು ದುರ್ಗಾದೇವತೆಯ ನಂದಾವ ಳಕ್ಕೆ ಗಾಣಕ್ಕಾವ್ದನ ಎಣ್ಣೆಯುಂ ಬಿಟ್ಟರೆಂದು ಕುಂದಗೋಳ ಶಾಸನದಲ್ಲಿ[೩೮] (ಕ್ರಿ. ಶ. ೧೨೪೦); ಶ್ರೀವರದ ಗೋಪೀನಾಥದೇವರಿಗೆ ತೆಲ್ಲಿಗರಯ್ವತ್ತೊಕ್ಕಲು ನಂದಾದೀವಿಗೆಗೆ ಪಳಿಗೆಯೆಣ್ಣೆಯನ್ನು ಇತ್ತರೆಂದು ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದ ಶಾಸನದಲ್ಲಿ[೩೯]— ಹೀಗೆ ಅವ್ಯಾಹತವಾಗಿ ಅನೇಕ ಉಲ್ಲೇಖಗಳು ಶಾಸನಗಳಲ್ಲಿ ಬರುತ್ತವೆ.

ಈ ಸಂಘದ ಸದಸ್ಯರ ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಹೇಳುವ ಒಂದೆರಡು ಶಾಸನಗಳಿವೆ. ಮುಳಗುಂದ ಗ್ರಾಮದ ಶಾಸನವೊಂದರಲ್ಲಿ[೪೦] (ಕ್ರಿ. ಶ. ೧೦೬೨) ತೆಲ್ಲಿಗನೂರಿರ್ಪದಿಂಬರು ಬೇರೆ ಸಂಘಸಂಸ್ಥೆಗಳೊಡನೆ ಅಲ್ಲಿಯ ನಗರೇಶ್ವರ ದೇವಾಲಯದಲ್ಲಿರುವ ತಪೋಧನರಿಗೆ ಅಶನಾಚ್ಛಾದನಕ್ಕಂ ಭೂಮಿಯನ್ನು ದಾನ ಮಾಡಿ ಕೊಟ್ಟರೆಂದು ಹೇಳಲಾಗಿದೆ. ಈ ಶಾಸನದ ಪ್ರಕಾರ ಮುಳಗುಂದದ ಈ ಕಾಲದ ತೆಲ್ಲಿಗರ ಸಂಘದಲ್ಲಿ ನೂರಿಪ್ಪತ್ತು ಸದಸ್ಯರಿದ್ದರೆಂದು ವಿದಿತವಾಗುತ್ತದೆ. ಆದರೆ ಅದೇ ಗ್ರಾಮದ ಬೇರೆ ಶಾಸನಗಳಲ್ಲಿ[೪೧] (ಕ್ರಿ. ಶ ೧೧೨೩, ೧೨೦೭) ಅಯ್ವತ್ತೊಕ್ಕಲು ಎಂದೇ ಹೇಳಲಾಗಿದೆ. ಅದೇ ಮೇರೆಗೆ, ಬಳ್ಳಾರಿ ತಾಲೂಕಿನ ಕುಡತಿನಿ ಗ್ರಾಮದ ಶಾಸನವೊಂದರಲ್ಲಿ[೪೨] (ಕ್ರಿ. ಶ. ೧೨೧೯) ಗಾಣದರುವತ್ತೊಕ್ಕಲು ಗಳೆಲ್ಲರು ನೆರೆದು ತೆಲ್ಲಿಗೇಶ್ವರದೇವರ ಪ್ರತಿಷ್ಠೆಯನ್ನು ಮಾಡಿ ದೇವರಿಗೆ ಗಾಣಕ್ಕೆ ಅರ್ಧಸೊಲ್ಲಿಗೆ ಎಣ್ಣೆಯನ್ನು ಬಿಟ್ಟರೆಂದು ಹೇಳಲಾಗಿದೆ.

೨. ಸಾಲೆಸಾಸಿರ್ವರು:

ಈ ಸಂಘಕ್ಕೆ ಸಮಯಸಾಸಿರ್ವರು ಎಂದೂ ಹೆಸರು. ಊರಲ್ಲಿ ನೇಕಾರವೃತ್ತಿ ಯಿಂದ ಉಪಜೀವನ ಮಾಡುವವರ ಸಂಘವಿದು. ವಾಡಿಕೆಯಾಗಿ ಈ ಸಂಘದಲ್ಲಿಯ ಸದಸ್ಯರ ಸಂಖ್ಯೆ ಒಂದು ಸಾವಿರ. ಧಾರವಾಡ ತಾಲೂಕಿನ ಅಮ್ಮಿನಭಾವಿ ಗ್ರಾಮದ

---

೩೭. S. I. I. XV No. 210; p. 253, ll 15-17.
೩೮. S. I. I. XX No. 199; p. 248, ll. 35-37.
೩೯. S. I. I. XV No. 195; p. 244, ll. 32-33.
೪೦. S. I. I. XI-I No. 97; p. 93, l. 27.
೪೧. S. I. I. XI-II No. 198 p. 254, ll. 21-23 and S. I. I. XV No. 220, p. 269, ll. 39-40.
೪೨. S. I. I. IX-I No. 336, p. 357, l·18.

ಶಾಸನವೊಂದರಲ್ಲಿ[೪೩] (ಕ್ರಿ. ಶ. ೧೦೭೧) ಸಾಲೆಸಾಸಿರ್ವರನ್ನು ವರ್ಣಿಸಿದ ಬಗೆ ಹೀಗೆ ಇದೆ: 'ಅಜನೆಂತಂತೆ ಮತಪ್ರಯುಕ್ತರ್, ಸೂರ್ಯನಂತೆ ಅತ್ಯುಜ್ವಳರ್, ಕರ್ಣನಂತೆ ದಾನಿಗಳ್, ಕುಬೇರನಂತೆ ಅರ್ಥಸಂಯುಕ್ತರ್, ಕಾಮನಂತೆ ಸುರೂಪಿಗಳ್, ಶಿವಪಾದಾಂಭೋಜಾತಷಟ್ಪಾದರ್' ಇತ್ಯಾದಿ.

ಅವರೊಳಗೆ ಮಾಚಿಯಣ್ಣನೆಂಬವನು ಊರಿಂದ ತೆಂಕಲೊಂದು ಶಿವಗೃಹಮಂ ವಿಸ್ತರದಿಂ ಮಾಡಿಸಿ ಅದರಲ್ಲಿ ಕುಂಭೇಶ್ವರದೇವರನ್ನು ಪ್ರತಿಷ್ಠೆ ಮಾಡಿದನೆಂದು ಮತ್ತು ಆ ದೇವರಿಗೆ ನಿವೇದ್ಯ ಗಂಧಧೂಪದೀಪಾದ್ಯಷ್ಟವಿಧಾರ್ಚನೆಗೆ ಸಾಲಿ ಸಾಸಿರ್ವರು ಕೆಲವು ದಾನಗಳನ್ನು ನೀಡಿದರೆಂದು ಆ ಶಾಸನದಲ್ಲಿ ಹೇಳಲಾಗಿದೆ.

ಅಣ್ಣಿಗೇರಿಯ ಅಮೃತೇಶ್ವರ ದೇವಾಲಯದ ಮಂಟಪದ ಮೇಲಿದ್ದ ಗಣಪತಿಯ ವಿಗ್ರಹದ ಕೆಳಗೆ ಬರೆದ ಶಾಸನದಲ್ಲಿ[೪೪] ಶ್ರೀಮತು ರಾಜಧಾನಿ ಅಣ್ಣಿಗೆರೆಯ ಅಮೃತೇಶ್ವರ ದೇವಪುತ್ರಕರಾದ ಧೋರೇಶ್ವರ ಕೇಶವೇಶ್ವರದ ಸಾಸಿರ್ವರ ಸಮಯದ ಮಹಿಮೆಯನ್ನು 'ನುಡಿದಂತೆ ಗಂಡರು, ದಾನವಿನೋದರು. ಶರಣಾಗತವಜ್ರಪಂಜರರು ಸತ್ಯರಾಧೇಯರು, ಶೌಚಗಾಂಗೇಯರು, ಭಗವತೀಲಬ್ಧವರಪ್ರಸಾದರು ಎನಿಸಿದ ಸಾಸಿರ್ವರು' ಎಂದು ವರ್ಣಿಸಿ, ಅವರ ಪ್ರೀತಿಗೆ ಪಾತ್ರನಾದ ನಾಕಿಮಯ್ಯ ಹಾಗೂ ಮಲ್ಲಣನು ಮಾಡಿಸಿದ ವಿನಾಯಕ ಎಂಬ ಉಲ್ಲೇಖ ಬರುತ್ತದೆ. ಶಾಸನದ ಕಾಲ ಸುಮಾರು ಹನ್ನೆರಡನೆಯ ಶತಮಾನ. ಅಣ್ಣಿಗೇರಿಯ ಇನ್ನೊಂದು ಶಾಸನದಲ್ಲಿ[೪೫] (ಕ್ರಿ. ಶ. ೧೧೫೭) ಸಾಸಿರ್ವರನ್ನು 'ಉದ್ಯದ್ಗುಣರ್, ತಂತುವಾಯಾನ್ವಯರ್ (ನೇಕಾರ ಕುಲದವರು), ಪರಬಳಭೀಮರ್, ನಿರವದ್ಯರ್, ಬಂಟರ್, ನಂಟರ್, ಪಟ್ಟಸಾಲಿಗರ್ (ನಯವಾದ ವಸ್ತ್ರಗಳನ್ನು ನೇಯುವವರು), ಧೋರೇಶ್ವರಪಾದ ಪಂಕೇರುಹಭೃಂಗರ್' ಎಂದು ವರ್ಣಿಸಲಾಗಿದೆ.

ಮೇಲೆ ಉಲ್ಲೇಖಿಸಿದ ಮುಳಗುಂದ ಗ್ರಾಮದ ಶಾಸನದಿಂದ[೪೬] (ಕ್ರಿ. ಶ. ೧೦೬೨) ಈ ಸಂಘದಲ್ಲಿ ಐವತ್ತು ಸದಸ್ಯರಿದ್ದರೆಂದು ಮತ್ತು ಸಂಘಕ್ಕೆ 'ಸಾಲಿಗರಯ್ವದಿಂಬರು' ಎಂದು ಹೆಸರಿತ್ತೆಂದು ತಿಳಿದುಬರುತ್ತದೆ. ಅದೇ ಪ್ರಕಾರ, ಬಾಗೇವಾಡಿ ತಾಲೂಕಿನ ಸಾಲವಾಡಗಿ ಗ್ರಾಮದ ಶಾಸನದಲ್ಲಿ[೪೭] (ಸು. ಕ್ರಿ. ಶ. ೧೧೬೫) ಸಾಲಿಗ

---

೪೩. S. I. I. XI-II No. 121; pp. 139-40.

೪೪. S I. XX No. 304, p. 337, ll. 1-4.

೪೫. S. I. I. XV No. 96, p. 121-12, ll. 32-33, 36-41.

೪೬. S. I. I. XI-I No. 97; p. 93, l. 27.

೪೭. S. I. I. XV No. 42, p. 62, ll. 32-33.

ಮೂನೂರ್ವರು ಅಲ್ಲಿಯ ಸಿದ್ಧನಾಥ ಪರಮೇಶ್ವರ ಹಾಗೂ ಪಾಪವಿನಾಶ ದೇವರಿಗೆ ಒಂದು ಹಾಗವನ್ನು ಪ್ರತಿ ಒಕ್ಕಲಲ್ಲಿ ಬಿಟ್ಟರೆಂದು ಹೇಳಲಾಗಿದೆ. ಈ ಉಲ್ಲೇಖದಿಂದ ಈ ಗ್ರಾಮದ ಸಾಲಿಗರ ಸಂಘದಲ್ಲಿ ಮುನ್ನೂರು ಸದಸ್ಯರಿದ್ದರೆಂದು ವಿದಿತವಾಗುತ್ತದೆ.

ಮಹಬೂಬನಗರ ಜಿಲ್ಲೆಯ ಗಂಗಾಪುರ ಗ್ರಾಮದ ಶಾಸನವೊಂದರಲ್ಲಿ[೪೮] (ಕ್ರಿ. ಶ. ೧೧೧೬) ಸಾಲೇಶ್ವರದೇವರ ಉಲ್ಲೇಖ ಬರುತ್ತದೆ. ಇದು ಸಾಲೆಸಾಸಿರ್ವರು ಇಲ್ಲವೆ ಸಾಲಿಗಸಮುಯದವರು ಕಟ್ಟಿಸಿದ ದೇವಾಲಯವಿದ್ದಂತೆ ಕಾಣುತ್ತದೆ.

ಬೇರೆ ಕೆಲವು ಸಂಘ ಸಂಸ್ಥೆಗಳಂತೆ ಈ ಸಂಘಕ್ಕಾದರೂ ಊರ ಗೌಡನು ಮುಖ್ಯನಾಗಿರುತ್ತಿದ್ದುದು ಕಂಡುಬರುತ್ತದೆ. ಬಾಗೇವಾಡಿ ತಾಲೂಕಿನ ಮನಗೂಳಿ ಗ್ರಾಮದ ಶಾಸನದಲ್ಲಿ[೪೯] (ಕ್ರಿ. ಶ. ೧೧೬೧) ಗೌಡ ಮುಖ್ಯವಾಗಿ ಸಾಲಿಗಸಮಯಂಗಳು ನೂಲಪರ್ವಕ್ಕೆ ಒಕ್ಕಲಲ್ಲಿ ವೀಸವಯ್ದು ಕೊಟ್ಟರೆಂದು ಹೇಳಲಾಗಿದೆ.

ಆಯುಧಜೀವಿಗಳ ಸಂಘಗಳು

೧. ಲೆಂಕಸಾಸಿರ್ವರು
೨. ಬಂಟಸಾಸಿರ್ವರು
೩. ಬಿಲ್ಲಮೂನೂರ್ವರು[೫೦]

ಶ್ರಮಜೀವಿಗಳ ಸಂಘಗಳು

೧. ದೋಣಿಸಾಸಿರ್ವರು:

ಅತಿ ಸೂಕ್ಷ್ಮವಾದ ಚಿನ್ನದ ಕಣಗಳಿಂದ ಮಿಶ್ರಿತವಾದ ಮಣ್ಣಿನಿಂದ ಇಲ್ಲವೆ ಮಳಲಿನಿಂದ ದೋಣಿಗಳನ್ನುಪಯೋಗಿಸಿ ಬಂಗಾರವನ್ನು ತಯಾರಿಸುವ ವ್ಯವಸಾಯಗಾರರ ಸಂಘಕ್ಕೆ ದೋಣಿಸಾಸಿರ್ವರು ಎಂದು ಹೆಸರು. ಈ ಸಂಘಕ್ಕೆ 'ಜರಗಿನ ದೋಣಿಸಾಸಿರ್ವರು', 'ದ್ರೋಣಿಸಾಸಿರ್ವರು' ಎಂದೂ ಹೆಸರುಗಳು ಕಂಡುಬರುತ್ತವೆ. ಸಾಂಪ್ರದಾಯಿಕವಾಗಿ ಈ ಸಂಘದ ಸದಸ್ಯರ ಸಂಖ್ಯೆ ಒಂದು ಸಾವಿರ. ಜರಗು ಅಥವಾ ಜಲಗು ಎಂದರೆ ಬಂಗಾರದ ಸೂಕ್ಷ್ಮ ಕಣಗಳಿಂದ ಮಿಶ್ರಿತವಾದ ಕೆಸರು ಇಲ್ಲವೆ ಮಳಲು. ಇಂತಹ ಬಂಗಾರವನ್ನು ಶೋಧಿಸಿ ತೆಗೆಯುವವರ ಮೇಲೆ

೪೮. A. P. G. A. S. 3; Mn 42; p. 31, ll. 13-14.
೪೯. E. I. V p-19-20, ll-67-68.
೫೦. ಈ ಸಂಘಗಳ ವಿಷಯದಲ್ಲಿ ನನ್ನ ಸವಿಸ್ತರವಾದ ಲೇಖನ ಕರ್ನಾಟಕ ಭಾರತಿಯ ೧೦ ನೆಯ ಸಂಪುಟದ ೧ ನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ.

ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಮತ್ತು ದ್ರೋಣಿಯ ಲೆಕ್ಕದಿಂದ ತೆರಿಗೆಯನ್ನು ವಸೂಲು ಮಾಡಲು ಅಧಿಕಾರಿಗಳಿರುತ್ತಿದ್ದರು.

ಗದಗ ತಾಲೂಕಿನ ಕುರ್ತಕೋಟಿ ಗ್ರಾಮದ ಶಾಸನದಲ್ಲಿ[೫೧] (ಕ್ರಿ. ಶ. ೧೧೨೬) ಜರಗಿನ ತೆರೆಯ ಸರ್ವಾಧಿಕಾರಿ ದಂಡನಾಯಕ ಸೆಲ್ಲಪಯ್ಯನು ಜರಗಿನ ತೆರೆಯಲ್ಲಿ ಒಂದು ದ್ರೋಣಿಯ ತೆರೆಯನ್ನು ಅಲ್ಲಿಯ ದಾಸೇಶ್ವರದೇವರಿಗೆ ಬಿಟ್ಟನೆಂದು, ಅದನ್ನು ಗುಂಜಿಗ ದಾಸಿಯಣ್ಣ, ಬಲ್ಲಿಸೆಟ್ಟಿ, ವೈಜಯ್ಯ ಬಮ್ಮಣ್ಣ, ಹಡವಳ ಮಾಚಣ್ಣ ಅಣುವ ನಾಗಸೋಮಯ್ಯನಾಯಕ, ಬಳಗಾರ ದೇವಣ್ಣ ಮತ್ತು ಉಂದುಗ ಮಾಜಣ್ಣ ಇಂತಿವರು ಮುಖ್ಯವಾಗಿ ದ್ರೋಣಿಸಾರ್ವರು ದೇವರಿಗಾಗಿ ಪಡೆದರೆಂದು ಹೇಳಲಾಗಿದೆ. ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಸಂಗಡ ಅವರು ಈ ಧರ್ಮ ವನ್ನು ಪ್ರತಿಪಾಳಿಸುವರು ಎಂದು ಹೇಳಲಾಗಿದೆ. ಸಂಘದ ಸದಸ್ಯರ ಹೆಸರುಗಳಿಂದ ಸಂಘವು ಜಾತಿವಾಚಕವಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅದೇ ತಾಲೂಕಿನ ಎಲಿಶಿರೂರ ಗ್ರಾಮದ ಶಾಸನದಲ್ಲಿ[೫೨] (ಕ್ರಿ. ಶ. ೧೧೧೯) 'ನುಡಿಯಿಸುವುದರಿಗು ನುಡಿದಡೆ ಮೃಡನ ಬರ, ಕರ್ಣನ ವಚನಂ ಕಡೆದ ಶಿಳಾಶಾಸನ ಮೆನೆ ನುಡಿದೇವಣ್ಣಿಸುವೆ ದ್ರೋಣಿಸಾಸಿರ್ವರುಮ' ಎಂದು ಈ ಸಂಘದವರು ನೆಗಳ್ತೆ ಬರುತ್ತದೆ. ಈ ಸಂಘದವರು ಗ್ರಾಮದ ಭೋಗೇಶ್ವರದೇವರಿಗೆ ದ್ರೋಣಿ ಯಲು ಒಂದು ಪಣ ಹಾಗೂ ಜರಗಿನ ತೆರೆಯ ಅರಸರು ಒಂದು ದ್ರೋಣಿಯ ಬನಿಯಂ ತೆರೆಯುಮಂ ಬಿಟ್ಟರೆಂದು ಹೇಳಲಾಗಿದೆ.

ಅದೇ ತಾಲೂಕಿನ ಶಿರೋಳ ಗ್ರಾಮದ ಶಾಸನದಲ್ಲಿ[೫೩] (ಕ್ರಿ. ಶ. ೧೧೬೧) ಅಲ್ಲಿಯ ಮೂಲಸ್ಥಾನದೇವರಿಗೆ ದ್ರೋಣಿಸಾಸಿರ್ವರು ದ್ರೋಣಿಯಲು ಅಡ್ಡ ವ್ರೊಂದು[೫೪] ಮತ್ತು ಜರಗಿನ ತೆರೆಯ ಅಧಿಕಾರಿಗಳು ಒಂದು ದ್ರೋಣಿಯ ತೆರೆಯನ್ನು ಬಿಟ್ಟರೆಂದು ಉಲ್ಲೇಖ ಬರುತ್ತದೆ. ಹೊಸೂರ ಗ್ರಾಮದ ಶಾಸನದಲ್ಲಿ[೫೫] (ಕ್ರಿ. ಶ. ೧೧೪೮) ಜರಗಿನ ಪೆರ್ಗಡೆ ಪರಮಶಿವಭಕ್ತ ಬೋವರಸನು ಅಲ್ಲಿಯ ಮೂಲಸ್ಥಾನ ದೇವರ ನಿತ್ಯಪೂಜೆಗೆ ಜರಗರ ಅಯ್ದು ಒಕ್ಕಲ ತೆರೆಯನ್ನು ಬಿಟ್ಟನೆಂದು ಹಾಗೂ

೫೧. S.I.I.XI-II No, 200; p-255, ll. 6-22.
೫೨. Ibid.; No. 158; p. 202, ll. 18-21.
೫೩. S.I.I.XI-II; No. 172, p. 221, ll-39-41.
೫೪. ನಾಣ್ಯ ವಿಶೇಷ; ಎರಡು ಅಡ್ಡಗಳೆಂದರೆ ಒಂದು ಪಣ
೫೫. S.I.I.XV No. 36, p. 46, ll-47-48, 52.

ಡೋಣಿಸಾಸಿರ್ವರ ಈ ಐದು ಒಕ್ಕಲುಗಳು ದೇವರ ನಂದಾದೀವಿಗೆಗೆ ಪಾಗವೊಂದನ್ನು ಕೊಟ್ಟರೆಂದು ಹೇಳಲಾಗಿದೆ

೨. ಉಗುರಮೂನೂರ್ವರು, ಉಳಿಯಮೂನೂರ್ವರು :

ಗ್ರಾಮದ ಎಲೆದೋಟಗಳಲ್ಲಿ ವೀಳೆಯದೆಲೆಕೊಯ್ಯುವ ವ್ಯವಸಾಯಮಾಡುವವರ ಸಂಘಗಳಿವು. ತಮ್ಮ ಹೆಬ್ಬೆರಳಿನ ಉಗುರನ್ನು ಬೆಳೆಯಿಸಿ ಅದರಿಂದ ಬಳ್ಳಿಗಳಲ್ಲಿಯ ಎಲೆಗಳನ್ನು ಕೊಯ್ಯುವದರಿಂದ ಅವರ ಸಂಘಕ್ಕೆ ಉಗುರಮೂನೂರ್ವರು ಎಂದು ಹೆಸರು. ಇವರಲ್ಲಿ ಕೆಲವರು ತಮ್ಮ ಹೆಬ್ಬೆರಳಿನ ಉಗುರಿಗೆ ಹೊಂದಿಕೊಳ್ಳುವಂತೆ ಒಂದು ಕಬ್ಬಿಣದ ಹರಿತವಾದ ಚಿಕ್ಕ ಉಳಿಯನ್ನು ಹಾಕಿಕೊಂಡು ಅದರಿಂದ ಎಲೆಗಳನ್ನು ಕೊಯ್ಯುವದರಿಂದ ಇಂಥವರ ಸಂಘಕ್ಕೆ ಉಳಿಯಮೂನೂರ್ವರು ಎಂಬ ಹೆಸರು ಬಂದಿದೆ.

ಈ ವರೆಗೆ ವಿವರಿಸಿದ ಸಂಘಗಳ ಹೊರತಾಗಿ ಅಯ್ಯಾವಳೆಯಯ್ನೂರ ಸ್ವಾಮಿಗಳು, ತಂಬುಲಿಗ ಸಾಸಿರ್ವರು ಮುಂತಾದ ವ್ಯಾಪಾರಸ್ಥರ ಸಂಘಗಳು, ಅಗಸರ ಕೊತ್ತಳಿ, ಕಂಚಗಾರಕೊತ್ತಳಿ, ಚಿಪ್ಪಿಗರಕೊತ್ತಳಿ, ಕಲ್ಕುಟಿಗರ ಕೊತ್ತಳಿ, ಎಂಟುಹಿಟ್ಟು, ಪಂಚಮಠ, ಐಮಣ್ಣಿಗರು ಮುಂತಾದ ಸಂಸ್ಥೆಗಳು ಶಾಸನಗಳಲ್ಲಿ ಕಂಡು ಬರುತ್ತವೆ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯಮಾಡುವ ಈ ಸಂಘ ಸಂಸ್ಥೆಗಳು, ಸಹಕಾರಿತತ್ವಗಳಲ್ಲಿ ವಿಕಾಸಹೊಂದಿ, ಸ್ವನಿಯಂತ್ರಿತ ಶಕ್ತಿಗಳಾಗಿ, ಮಧ್ಯಯುಗದ ಕರ್ನಾಟಕದ ಸಾಮಾಜಿಕ ಹಾಗೂ ಆರ್ಥಿಕ ಜೀವನವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಲು ತುಂಬಾ ಸಮರ್ಥವಾಗಿದ್ದವು.

● ●

೫೬. ಈ ಸಂಘಗಳ ಬಗ್ಗೆ ನನ್ನ ಸವಿಸ್ತಾರವಾದ ಲೇಖನ ಕರ್ನಾಟಕ ಭಾರತಿಯ ೯ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಕಣವಿಯವರ ಸುನೀತಗಳಲ್ಲಿ ವ್ಯಕ್ತಿಚಿತ್ರಗಳು

● ಜಿ. ಎಂ. ಹೆಗಡೆ

ಹೊಸಗನ್ನಡಕಾವ್ಯದ ಬೆಳವಣಿಗೆ ಹಾಗೂ ಚರಿತ್ರೆಯಲ್ಲಿ ಸುನೀತಗಳ ಪರಂಪರೆಯನ್ನು ಮಾಸ್ತಿ ಹಾಗೂ ದ. ರಾ. ಬೇಂದ್ರೆಯವರಂತೆ ಅವ್ಯಾಹತವಾಗಿ ನಡೆಸಿಕೊಂಡು ಬಂದ ಕವಿ ಕಣವಿಯವರು ಈ ಕ್ಷೇತ್ರದಲ್ಲಿ ಅತ್ಯಂತ ಗಮನಾರ್ಹವಾದ ಸಾಧನೆಯನ್ನು ಮಾಡಿದ್ದಾರೆ. ಸಾಹಿತ್ಯಲೋಕದ ಕಲಾತ್ಮಕ ಪ್ರಕಾರವಾದ ವ್ಯಕ್ತಿಚಿತ್ರವನ್ನು ಕಣವಿಯವರು ತಮ್ಮ ಸುನೀತಗಳಲ್ಲಿ ಪ್ರಭಾವಯುತವಾಗಿ ಅಭಿವ್ಯಕ್ತಿಸುವಲ್ಲಿ ಮಾಡಿದ ಸಾಧನೆ, ಗಳಿಸಿದ ಯಶಸ್ಸು ಮತ್ತು ಅವುಗಳ ಮಹತ್ವ ಇವುಗಳನ್ನು ವಿವೇಚಿಸುವದು ಈ ಪ್ರಬಂಧದ ಉದ್ದೇಶ.[೧] ಡಾ. ಜಿ.ಎಸ್. ಶಿವರುದ್ರಪ್ಪನವರು ಅರ್ಧಶತಮಾನದ ಕನ್ನಡ ಕಾವ್ಯವನ್ನು ವಿಮರ್ಶಿಸುತ್ತ "ನಿಜವಾದ ಕವಿಗೆ 'ಚಾರಿತ್ರಿಕ ಪ್ರಜ್ಞೆ' (Historical Sense) ಇರಬೇಕು ಎಂದು ಇಂಗ್ಲಂಡಿನ ನವ್ಯಕಾವ್ಯದ ಕಾಲದಲ್ಲಿ ಟಿ. ಎಸ್. ಇಲಿಯಟ್ ಹೇಳಿದ ಮಾತು ಕನ್ನಡದ ನವೋದಯ ಕವಿಗಳ ವಿಚಾರದಲ್ಲಿ ಸಾರ್ಥಕವಾಯಿತೆ ಹೊರತು, ಕನ್ನಡದ ನವ್ಯಕವಿಗಳ ವಿಚಾರದಲ್ಲಿ ಅಲ್ಲ" ಎಂದಿದ್ದಾರೆ[೨]. ಚೆನ್ನವೀರ ಕಣವಿಯವರಲ್ಲಿರುವ ಕನ್ನಡ ಕಾವ್ಯಪರಂಪರೆಯ ಪ್ರಜ್ಞೆಗೆ ಚಾರಿತ್ರಿಕ, ಸಾಂಸ್ಕೃತಿಕ ಧೋರಣೆಗಳನ್ನು ಅಭಿವ್ಯಕ್ತಿಸುವ ಅವರ ಸುನೀತಗಳು ಸ್ಪಷ್ಟವಾದ ನಿದರ್ಶನಗಳನ್ನೊದಗಿಸುತ್ತವೆ. ಕನ್ನಡದ ಗಣ್ಯಕವಿಗಳ ವ್ಯಕ್ತಿತ್ವ ಅವರ ಸುನೀತಗಳ ವಸ್ತುವಾಗಿರುವದರಿಂದ ಕನ್ನಡ ಕವಿಗಳ ಚರಿತ್ರೆಯ ದೃಷ್ಟಿಯಿಂದ ಅವು ವಿನೂತನ ಕೊಡುಗೆಗಳಾಗಿವೆ. ಕಣವಿಯವರು ಸುನೀತಗಳ ರಚನೆಗೆ ತೊಡಗಿದಾಗ ಅದು ಪ್ರಯೋಗಾವಸ್ಥೆಯಿಂದ ಪ್ರವರ್ಧಮಾನವಾದ ಸ್ಥಿತಿಗೇರಿತ್ತು ಎಂದೆನಿಸುತ್ತದೆ. ಆದುದರಿಂದ ಸುನೀತದ

---

೧. ಚೆನ್ನವೀರ ಕಣವಿಯವರು ತಮ್ಮ ಸುನೀತಗಳಲ್ಲಿ ವ್ಯಕ್ತಿಚಿತ್ರಗಳನ್ನಷ್ಟೇ ಮೂಡಿಸಿದ್ದಾರೆ ಎಂದಲ್ಲ. ಅವರು ನಿಸರ್ಗ ಹಾಗೂ ಬಾಳಿನ ಬೇರೆ ಬೇರೆ ಮುಖಗಳ ಕಡೆಗೆ ಸಂಕೀರ್ಣವಾದ ಸುನೀತಗಳನ್ನು ಯಶಸ್ವಿಯಾಗಿಯೇ ಚಿತ್ರಿಸಿದ್ದಾರೆ. ಅವರ ಸುನೀತಗಳಲ್ಲಿಯ ವ್ಯಕ್ತಿಚಿತ್ರಗಳನ್ನು ಮಾತ್ರ ಅವಲೋಕಿಸುವದು ಈ ಪ್ರಬಂಧದ ಮಿತಿಯಲ್ಲಿ ಸೇರುತ್ತದೆ.

೨. ಡಾ. ಜಿ. ಎಸ್. ಶಿವರುದ್ರಪ್ಪ—"ಅರ್ಧ ಶತಮಾನದ ಕನ್ನಡಕಾವ್ಯ" ಕಸ್ತೂರಿ-ಎಪ್ರಿಲ್, ೧೯೭೪. ಪು. ೫೧.

ಶಿಲ್ಪಕ್ಕಿಂತಲೂ ವಸ್ತು ಮತ್ತು ಆಶಯಕ್ಕೆ ಹೆಚ್ಚಿನ ಮಹತ್ವ ಕಣವಿಯವರ ಸುನೀತಗಳಿಗೆ ಪ್ರಾಪ್ತವಾಯಿತು. ಒಂದು ದೃಷ್ಟಿಯಲ್ಲಿ ಕಣವಿಯವರ ಸುನೀತಗಳು (ವ್ಯಕ್ತಿಚಿತ್ರವನ್ನೊಳಗೊಂಡ) ಸಾಂದರ್ಭಿಕ ಮಹತ್ವವನ್ನು ಪಡೆದಿರುತ್ತವೆ. ಇದರಿಂದ ಕಣವಿಯವರು ಗಣ್ಯವ್ಯಕ್ತಿಗಳ ಮೌಲ್ಯಮಾಪನ ಮಾಡುವ ವಿಧಾನವೂ ಆಲೋಚನೀಯವಾಗಿದೆ.

ಧಾರವಾಡದಲ್ಲಿ ಬೇಂದ್ರೆಯವರು ಗೆಳೆಯರ ಗುಂಪನ್ನು ಕಟ್ಟಿದ ವಿಷಯ ಹೊಸಗನ್ನಡಕಾವ್ಯದ ಇತಿಹಾಸಕ್ಕೆ ಸೇರಿದ ಸಂಗತಿಯಾಗಿದೆ. ಗೆಳೆಯರ ಗುಂಪಿನ ದ. ರಾ. ಬೇಂದ್ರೆ, ವಿನಾಯಕ ಗೋಕಾಕ, ರಂ. ಶ್ರೀ. ಮುಗಳಿಯವರು ಸಾಹಿತ್ಯ ಕ್ಷೇತ್ರದಲ್ಲಿ ಗಳಿಸಿದ ಘನವಾದ ಯಶಸ್ಸು, ಅವರ ಜೀವನದ ಧ್ಯೇಯ, ವ್ಯಕ್ತಿತ್ವವನ್ನು ಕುರಿತು ಕಣವಿಯವರು ಬರೆದ ಸುನೀತಗಳು ಮಹತ್ವಪೂರ್ಣವಾಗಿವೆ. ಎಪ್ಪತ್ತರ ಬೇಂದ್ರೆಯವರನ್ನು ಕಂಡಾಗ ಉದ್ಗರಿಸುವ ಸುನೀತದ ಮೊದಲಭಾಗ ಹೀಗಿದೆ:

ಕಣ್ಣು ಮಿಂಚಿಸಿ, ನೂರು ಹಂಚಿಕೆಯ ಸಂಚಿಕೆಯ
ತುಂಬಿ–ತಲೆಯಾಡಿಸುತ, ಯಾವುದೋ ಒಳದನಿಗೆ
ನಾದ ಕೂಡಿಸಿ, ನೆಲಕೆ ನೀರು ಬರಿಸುವ ಹಾಗೆ
ಬೀಸುಗಾಳಿಯ ಜೊತೆಗೆ ಬಂದರದೊ ಬೇಂದ್ರೆ ![೩]

ಬೇಂದ್ರೆಯವರ ಕವಿತ್ವಶಕ್ತಿಯನ್ನು ಅಪೂರ್ವವಾದ ಮಳೆಗಾಲದ ಮೋಡದ ಪ್ರತಿಮೆಯ ಮೂಲಕ ಧ್ವನಿರಮ್ಯತೆಯಿಂದ ಕಣವಿ ವರ್ಣಿಸಿದ್ದಾರೆ. ಆಕಾಶದಲ್ಲಿ ಮಳೆ ಬರುವ ಪೂರ್ವದಲ್ಲಿ ಮಿಂಚು, ಮೋಡಗಳ ಸಂಚಾರ ಹಾಗೂ ಬೀಸಿದ ತಂಪಾದ ಗಾಳಿಗೆ ನೆಲಕೆ ನೀರು ಬರಿಸುವ ಮಳೆ ಹೇಗೆ ಉಂಟಾಗುತ್ತದೋ ಅದೇ ರೀತಿಯಲ್ಲಿ ಕವಿಯಲ್ಲೂ ಕಾವ್ಯ ಹುಟ್ಟುವಾಗ ನೂರಾರು ಭಾವನೆಗಳು, ಹೃದಯದ ಅನುಭವವಾಗಿ ಹೊರಚಿಮ್ಮುವಲ್ಲೂ ಒಂದು ಕವಿಕಾರ್ಯ ನಡೆದಿರುತ್ತದೆ[೪] ಎಂಬುದನ್ನು ಬೇಂದ್ರೆಯವರ ಕಾವ್ಯಪ್ರಕ್ರಿಯೆಯಲ್ಲಿ ಕಂಡ ಕಣವಿಯವರು ಕನ್ನಡದ ಭಾವಗೀತೆಯ ಸಕಲ ಮಾಧುರ್ಯವೆಲ್ಲವೂ ಅವರ ಕಾವ್ಯದಲ್ಲಿ ತುಂಬಿ, ನೆಲಕೆ ನೀರು ಬರಿಸುವ ಹಾಗೆ ರಸಾನಂದವನ್ನು ನೀಡುತ್ತದೆ ಎಂದಿದ್ದಾರೆ. ವ್ಯಕ್ತಿ ಬೇಂದ್ರೆ

---

೩. 'ಎರಡು ದಡ'–"ಎಪ್ಪತ್ತರ ಬೇಂದ್ರೆ." ೧೯೬೯. ಪು. ೨೪

೪. ಭಾವಗೀತೆಯ ಬಗೆಗೆ ವರ್ಡ್ಸ್‌ವರ್ತ ಕವಿ ತನ್ನ "preface to the lyrical ballads" ದಲ್ಲಿ "poetry is the Spontaneous overflow of powerful feelings reflected in tranquility" ಎಂದು ಹೇಳಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಹಾಗೂ ಕವಿ ಬೇಂದ್ರೆ ಇವೆರಡರ ಸಾಮರಸ್ಯವನ್ನೂ ಈ ಸುನೀತದಲ್ಲಿ ಕಣವಿಯವರು ಸೆರೆಹಿಡಿದಿದ್ದಾರೆ. ಬೇಂದ್ರೆ ವ್ಯಕ್ತಿತ್ವ ಹಾಗೂ ಕಾವ್ಯದ ಗುಣಗಳನ್ನು ಸುನೀತದ ಮುಂದಿನ ಪಂಕ್ತಿಗಳು ನಿರೂಪಿಸುತ್ತವೆ.

> ....ಕೈಯ
> ಮಾಟಕ್ಕೆ ಮಾತು ಮಾಂತ್ರಿಕನಾಟ : ಕೈಯ ಅರಗಳಿಗೆ
> ಹೊರ-ಒಳಗೆ ತುಂಬಿ ತುಳುಕುವ ಬೆಡಗು. ಕಡಲ ಗುಟುಕರಿಸಿ, ಚಿಕ್ಕೆಗಳ ಮುಕ್ಕಳಿಸುವರು; ತಟ್ಟನೆ ಒಗಟು
> ಒಡೆಯುವ ಒಡಪು-ನುಡಿ : ಕುಡಿಮಿಂಚು ಬಾನ ಗುಡಿಗೆ.

ಗಾರುಡಿಗತನ, ಮಾಂತ್ರಿಕಪ್ರತಿಭೆಗಳಿಂದ ಕೂಡಿದ ಬೇಂದ್ರೆ ವ್ಯಕ್ತಿತ್ವವೇ ಒಂದು ಬೆಡಗು. ಅವರ ಮಾತಿನಂತೆ ಕಾವ್ಯದಲ್ಲಿಯೂ ಕಾಣುವ ಈ ಗುಣಗಳೊಂದಿಗೆ ಹಾಲುಚೆಲ್ಲಿದ ಬೆಳದಿಂಗಳಿನ ಮಾಧುರ್ಯ ಸದಾ ಸುವ್ಯಕ್ತವಾಗುತ್ತದೆ. "ಕಡಲ ಗುಟುಕರಿಸಿ, ಚಿಕ್ಕೆಗಳ ಮುಕ್ಕಳಿಸುವರು"– ಕಡಲಿನಂಥ ವಿಶಾಲವಾದ ಜ್ಞಾನ ಸಂಪತ್ತನ್ನೆಲ್ಲ ತಾರೆಗಳಂತೆ ಕಿರಿದಾಗಿ ಕವಿತೆಯಲ್ಲಿ ಬಣ್ಣಿಸುವಲ್ಲಿ ಒಂದು ಬೇಂದ್ರೆ ಪಾಕವಿದೆ. ಬೇಂದ್ರೆ ಮಾತು ಮತ್ತು ಕಾವ್ಯ ರಸಿಕನಿಗೆ ಹೊಸಹೊಸ ಅರ್ಥ ಪ್ರಪಂಚವನ್ನು ನೀಡುವ ಬಗೆ ಒಂದು ನವೀನ ವೈಶಿಷ್ಟ್ಯ ಎಂದು ಕಣವಿ ಗಮನಿಸಿದ್ದಾರೆ. "ಇಲ್ಲಿ ಜಗದಂಬೆ– ಹಡಲಿಗೆ ಹೊತ್ತು ಕುಣಿವಗೆಲ್ಲಿ ಪುರುಸೊತ್ತು ?' ಎಂಬ ರೂಪಕವನ್ನೂ ಬಳಸಿದುದು ಅರ್ಥಪೂರ್ಣವಾಗಿದೆ. ಹಣ್ಣಾದ ಕೇದಿಗೆಯಂತೆ ಬೇಂದ್ರೆ ವಯಸ್ಸಿನಲ್ಲಿ ಮಾಗಿನಿಂತರೂ ಕಾವ್ಯದ ಕಂಪನ್ನು ಮತ್ತೆ ಮತ್ತೆ ನೀಡುತ್ತಿರುವದನ್ನು ಕಣವಿ ಹೇಳುತ್ತ ಸುನೀತದ ಕೊನೆಯಲ್ಲಿ "ನಡೆದದ್ದೆ ಸಾಧನಕೇರಿ, ನುಡಿದದ್ದೆ ಕವಿತೆ" ಎಂಬ ಪರಿಣಾಮಕಾರಿಯಾದ ಸತ್ಯಚಿತ್ರವನ್ನು ಬೇಂದ್ರೆಯವರ ಬಗೆಗೆ ನೀಡಿದ್ದಾರೆ. ಬೇಂದ್ರೆಯವರ ವ್ಯಕ್ತಿತ್ವದ ಸಮರ್ಥ ನಿರೂಪಣೆಯನ್ನು ಇನ್ನಾವ ಉಕ್ತಿಗಳಿಂದಲೂ ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ಈ "ಎಪ್ಪತ್ತರ ಬೇಂದ್ರೆ" ಸುನೀತ ಪರಿಪೂರ್ಣವಾಗಿದೆ.

ಸಮೃದ್ಧವಾದ ಜೀವನವನ್ನು ನಡೆಸುತ್ತ, ಬಾಳಿನಲ್ಲಿ ಯಶಸ್ಸಿನ ಹೆಜ್ಜೆಗಳನ್ನಿಡುತ್ತ ನಡೆದ ವಿನಾಯಕ ಗೋಕಾಕರು ಸಾಹಿತ್ಯರಂಗದಲ್ಲಿ ಅಪ್ರತಿಮವಾದ ಸಾಧನೆಯನ್ನು ಮಾಡಿದ್ದಾರೆ. ವಿನಾಯಕರ ಪ್ರತಿಭಾಪ್ರಪಂಚವನ್ನು ಕುರಿತ ಕಣವಿಯವರ ನುಡಿಗಳು ತುಂಬಾ ಮಾರ್ಮಿಕವಾಗಿವೆ.

> "ತುಂಬಿದ ತಲೆಯು ಬೆಳ್ಳಿಗೂದಲಿಗೆ ಬೆರಳಾಡಿ
> ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
> ಅಂತಃಕರಣದಂಗೈಯಲ್ಲಿ ತೂಗಿ, ಬದುಕ
> ಬೆಲೆಗೈವ; 'ಅದೇನದಲ್ಲ' ಅವೆಲ್ಲವ ಕೂಡಿ".

"ವಿನಾಯಕರಿಗೆ ವಂದಿಸಿ"[೫] ಎಂಬ ಶೇಕ್ಸಪಿಯರನ ಮಾದರಿಯ ಈ ಸುನೀತದ ಮೊದಲ ಪಂಕ್ತಿಗಳು ವಿನಾಯಕರ ಸಂವೇದನಾಶೀಲ, ಚಿಂತನಪರ ಪ್ರತಿಭೆಯ ದ್ಯೋತಕವಾಗಿವೆ. ವಿನಾಯಕರ ಸೃಜನಶೀಲವಾದ ಪ್ರತಿಭೆ ಬದುಕಿನ ಮೌಲ್ಯಗಳನ್ನು ಜಿಜ್ಞಾಸೆಗೆ ಗುರಿಪಡಿಸಿರುವ ರೀತಿಯನ್ನು ಅವರ ಸಾಹಿತ್ಯ ಮತ್ತು ವ್ಯಕ್ತಿತ್ವದಲ್ಲಿ ಕಣವಿ ಕಂಡಿದ್ದಾರೆ.

"ಎಂಟುದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು,
ಮೂಡ-ಪಡುವಣ ನೆಳಲು-ಬೆಳಕಿನಲಿ ತೇಲುವರ
ಸಂಜೆ ಬಾಳದೇಗುಲದಿ ಸಮನ್ವಯ-ತೇರ
ಸಿಂಗಾರ. ಅರುವತ್ತರಲು ಭಾರಿ ಕಸರತ್ತು
ಎತ್ತರದಲ್ಲೂ ಬಾಗಿ ಹತ್ತಿರ ಬರುವ ಮಹತಿ:
ಸಂಕ್ರಾಂತಿ: ಕೈಕುಲುಕಿದಂತೆ ದ್ಯಾವಾಪೃಥಿವಿ".

ಗೋಕಾಕರ ಸಾಹಿತ್ಯಜೀವನದ ವಿವಿಧ ಮಜಲುಗಳು ಇಲ್ಲಿ ಕೆನೆಗಟ್ಟಿನಿಂತಿವೆ. ಕಡಲಾಚೆ ಸಾಗಿ ಸಮುದ್ರಗೀತೆಗಳನ್ನು ಕನ್ನಡಕ್ಕೆ ಕೊಟ್ಟ ಗೋಕಾಕರು ಭಾರತೀಯ ಸಾಹಿತ್ಯಪರಂಪರೆಗೆ ಪಾಶ್ಚಾತ್ಯ ಆಲೋಚನೆಯ ಎರಕಹೊಯ್ದರು. ಅವರ ಸಮನ್ವಯ ಧೋರಣೆ ಪ್ರಬುದ್ಧವಾದ ಸತ್ವ ಹಾಗೂ ಜೀವನಾನುಭವದ ಆಳವಾದ ಅವಲೋಕನದ ಫಲ. ಕಾವ್ಯದಲ್ಲಿ ನವ್ಯತೆಯನ್ನು ಸ್ವಾಗತಿಸಿದ, ಸಾಹಿತ್ಯದಲ್ಲಿ ಹೊಸಪ್ರಜ್ಞೆ ಸದಾ ಮೂಡಬೇಕೆನ್ನುವ ಗೋಕಾಕರು ಕೈಕುಲುಕಿದಂತೆ ದ್ಯಾವಾಪೃಥಿವಿಯನ್ನು ನೀಡಿ ತಮ್ಮ ಚಿಂತನಶೀಲತೆಯನ್ನು ತುಂಬಾ ಸಮರ್ಥವಾಗಿ ಪುನಃ ಪ್ರದರ್ಶಿಸಿದ್ದಾರೆ. ಹೀಗೆ ಗೋಕಾಕರ ಪರಿಣತವಾದ ಜೀವನದೃಷ್ಟಿಯನ್ನು ಕಣವಿಯವರು "ಅರವತ್ತರಲು ಭಾರಿ ಕಸರತ್ತು" ಎಂದಿದ್ದಾರೆ.

ಕಣವಿಯವರ ಕಾವ್ಯದ ಮುಖ್ಯ ಗುಣವಾದ ವರ್ಣನೆಯ ವಿಧಾನ ಅವರ ಸುನೀತಗಳಲ್ಲಿಯೂ ಅಂತಸ್ಥವಾಗಿದೆ. ಕವಿ ತನ್ಮಯನಾಗಿ ಭಾವನೆಗಳನ್ನು ಉತ್ಕಟವಾದ ರೀತಿಯಲ್ಲಿ ಅಭಿವ್ಯಕ್ತಿಸುತ್ತ ಹೋಗುವ ಅಂಶ ಗಮನಾರ್ಹವಾದುದು. ಅವರ "ರಸಿಕರಂಗ"[೬] ಎಂಬ ಸುನೀತ ಇದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿದೆ.

---

೫. 'ನಗರದಲ್ಲಿ ನೆರಳು' "ವಿನಾಯಕರಿಗೆ ವಂದಿಸಿ" (೧೯೭೪) ಪು. ೩.

೬. 'ಎರಡುದಡ'. "ರಸಿಕರಂಗ". (೧೯೬೯), ಪು. ೧೯.

"ಜೀವನದ ಯಾತ್ರೆಯಲಿ ಕಣ್ಣೀರ ತೀರ್ಥವ
ಕುಡಿದು, ನೋವುಗಳ ತಗ್ಗಿನಲಿ ನುಗ್ಗುಸುರಿಯಾಗಿ
ಮುಗ್ಗರಿಸದೆಯು ಮುಂದಕಡಿಯಿಟ್ಟು, ಮುಡಿ ಬಾಗಿ
ಹಿಗ್ಗು-ದಿಣ್ಣೆಯನೇರಿ ನಿಂತ ರಸಿಕ! ಭೈರವ
ರೂಪದೆದುರು ಸೌಮ್ಯನಂದಾದೀಪ. ಮಲ್ಲಿಗೆ
ಬಕುಲ, ಸಂಪಿಗೆಯು ತಂಪನು ಜೀವಕೋಲಯಿಸಿ
ಸಖ್ಯದ ಕಂಪನುಂಡು, ತಂಬೂರಿ ನಾದದಲಿ
ತುಂಬಿ ಕರುಣೆಯು, ಪಡೆದೆ ರಸಸರಸ್ವತಿ ಹರಕೆ."

ಆಧುನಿಕ ಸಾಹಿತ್ಯದ ಇತಿಹಾಸದಲ್ಲಿ ವಿಚಾರ, ವಿಮರ್ಶೆ, ಸಂಶೋಧನೆಗಳಿಂದ ಕೀರ್ತಿಪ್ರಾಯವಾದ ಕೈಂಕರ್ಯದಿಂದ ವಿಖ್ಯಾತರಾದ ರಂಗನಾಥ ಮುಗಳಿಯವರ ಜೀವನ ಕಷ್ಟಕೋಟಲೆಗಳ ವ್ಯಥೆಯ ಕಥೆ. ಆದರೂ ಮುಗಳಿ ರಸಿಕರಂಗರು. ಅವರು ನೋವನ್ನು ನಗೆಯಾಗಿಸುವ, ಗಹನವಾದುದನ್ನು ತಿಳಿಯಾಗಿಸುವ ಕಲೆಯನ್ನು ಹೊಂದಿದ ಅಂಶ ಒಂದು ಕುತೂಹಲಕರ ಸಂಗತಿ ಎಂದು ಕವಿ ಉಲ್ಲೇಖಿಸುತ್ತಾರೆ. ಮುಗಳಿಯವರು ಸಾಹಿತ್ಯ, ಸಂಸ್ಕೃತಿಯ ಸೌರಭವನ್ನು ಬೀರಿದ ಹಾಗೆಯೇ ಸಂಗೀತ ಪ್ರಿಯರೂ ಆಗಿದ್ದಾರೆ. ಮುಗಳಿಯವರ ಜೀವನ ವಿಧಾನವನ್ನು, ಸುನೀತದ ಮೊದಲ ಭಾಗ ವರ್ಣಿಸಿದರೆ, ಮುಂದಿನ ಭಾಗ ಅವರ ಅನುಪಮವಾದ ಸಾಧನೆಯನ್ನು ಪರಿಚಯಿಸುತ್ತದೆ.

"ನಾಡಗಡಿಯಲಿ ಒಲವು-ಗುಡಿ ಕಟ್ಟಿ, ಚೆಲುವಿಗೆದೆ
ತೆರೆದು, ಸಜ್ಜನಿಕೆಯಲಿ ಹಾಲು ಜೇನನು ಕರೆದು
ಹಲವು ಪಣತಿಗೆ ಎಣ್ಣೆಯೆರೆದು, ಮಕ್ಕಾನು ತೆಗೆದು
ದೀಪಾವಳಿಯ ಗೈದೆ: ಮುಳ್ಳಿನಲು ಮುಗುಳೊಡೆದೆ.
ನಂದನದ ಮಂದಾರ ಒಂದಾರ ಕೊಳ್ಳೋಣ
ಲೋಕದೀ ಹೂವದಕೆ ಬಾಸಿಂಗ ಬಾಗಿನ."

ರಂಗನಾಥ ಮುಗಳಿಯವರು ಮಹಾರಾಷ್ಟ್ರದಲ್ಲಿದ್ದು ಕನ್ನಡದ ಪಾಂಡಿತ್ಯಧ್ವಜವನ್ನು ಎತ್ತಿಹಿಡಿದು ನಾಡಿನುದ್ದಗಲಕ್ಕೂ, ವಿದ್ಯಾರ್ಥಿಗಳಿಗೆ ಸಮರ್ಥವಾದ ಜ್ಞಾನದಾನ ಮಾಡಿದುದನ್ನು ವರ್ಣಿಸಿದ ಕಣವಿಯವರು ಮುಗಳಿಯವರ ಮಾತನ್ನೇ ಉಲ್ಲೇಖಿಸಿ ಅವರ ಸಾಹಿತ್ಯಕೃಷಿಯಲ್ಲಿ ಯಾವುದನ್ನಾದರೂ ನೋಡಿದಲ್ಲಿ ಅದು ಪ್ರೇರಣಾಪರವೂ ಚೈತನ್ಯಯುತವೂ ಆಗಿದೆಯೆನ್ನುತ್ತಾರೆ.

ಕಣವಿಯವರು ಕಾವ್ಯಾಭ್ಯಾಸಿಯಾಗಿ, ರಸಸ್ಪಂದನದ ಸಹೃದಯಿಯಾಗಿ, ಯಾವುದೇ ಕವಿಯ ಮೌಲ್ಯವನ್ನೂ ನಿರ್ಧರಿಸಬಲ್ಲರು. ಅಲ್ಲಿ ಅವರ ರಸಗ್ರಾಹಕ

ದೃಷ್ಟಿಯ ಮೇಲ್ಮೆಯನ್ನು ನಾವು ಕಾಣಬಹುದು. ಇದಕ್ಕೆ ಕಣವಿಯವರ "ಪು ತಿ ನ."[೭] ಎಂಬ ಸುನೀತ ಸೊಗಸಾದ ಉದಾಹರಣೆಯಾಗಿದೆ. ಕನ್ನಡದ ನವೋದಯಕಾವ್ಯದಲ್ಲಿ ಪು. ತಿ. ನರಸಿಂಹಾಚಾರ್ಯರದು ಒಂದು ವಿಶಿಷ್ಟವಾದ ಸ್ಥಾನ. ಅವರ ಕಾವ್ಯದಲ್ಲಿರುವ ಚಿಂತನೆಯ ಮಾಧುರ್ಯ, ಪ್ರಸನ್ನತೆ, ಅನುಭೂತಿ ಮಧುರಚೆನ್ನರನ್ನು ಬಿಟ್ಟರೆ ಇನ್ನಾರಲ್ಲೂ ಕಾಣಲು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಅವರು ಹೊಸಗನ್ನಡ ಕಾವ್ಯದಲ್ಲಿ ಭಿನ್ನರಾಗಿದ್ದಾರೆ. ಪು ತಿ. ನ. ಅವರನ್ನು ಕುರಿತ ಸುನೀತದಲ್ಲಿ ಅವರ ಕಾವ್ಯಗುಣವನ್ನು ಕಣವಿ ಬಹು ಸ್ಪಷ್ಟವಾಗಿ ವರ್ಣಿಸಿದ್ದಾರೆ. ಪು. ತಿ. ನ. ಅವರನ್ನು ಕಣವಿ ವರ್ಣಿಸುವ ರೀತಿ ಹೀಗಿದೆ :

"ತುಂಬಿದುದು ತುಳುಕಿ ಹೋಗದ ಹಾಗೆ ತುಟಿಯಂಚಿ
ನಲ್ಲೆ ನಗು. ಒಗುಮಿಗುವ ನವ್ರ ಪ್ರತಿಭೆಯ ಮಿನುಗು
ಕಣ್ಣಿನಲಿ : ಬಾನ ಬೆಳ್ಳಕ್ಕಿ ಹಾರಿದ ಬೆರಗು.
ಬೆಳ್ಳಿ ಬಟ್ಟಲಿಗೆ ದಾಳಿಂಬೆ ಬಿಡಿಸುವ ಶುಚಿ
ರುಚಿ ಮಾತು : ಮೈದಡವಿ ಚಿಗುರಿ ಹೂಬಿಡುವ ಕೆಳೆ
ಇರವಿನೊಳಹೊರಗು ಸ್ವರಲಹರಿ, ಶರದದ ಹಗಲು
ತೆರವು ತುಂಬುತ್ತ ತೇಲುವಾಗಂತುಕ ಮುಗಿಲು,
ಜಗದಚ್ಚರಿ ತೆರಂಬೊಳೆವ ಮನದಪೂರ್ವಕಳೆ."

ಇಲ್ಲಿಯ ಅಭಿವ್ಯಕ್ತಿ ಅತ್ಯಂತ ಧ್ವನಿಪೂರ್ಣವಾಗಿದ್ದು, ಕಣವಿಯವರ ಸೂಕ್ಷ್ಮವಾದ ಸಂವೇದನಾಶೀಲತೆಯೂ ಸುವ್ಯಕ್ತವಾಗಿದೆ. ಭಾವಪೂರ್ಣವಾದ ಭಾಷೆಯಿಂದ ಪು. ತಿ. ನ. ಅವರ ಪ್ರಸನ್ನವಾದ ಕಲಾತ್ಮಕ ವ್ಯಕ್ತಿತ್ವವನ್ನು ಮೂರ್ತಿಪ್ರತಿಮೆಯಂತೆ ಚಿತ್ರಿಸಲಾಗಿದೆ. ಅವರ ಕಾವ್ಯವನ್ನು ಜಿಜ್ಞಾಸೆಗೆ ಗುರಿಪಡಿಸಿ ಕಣವಿಯವರು ಜೀವನಾನುಭವ, ಆತ್ಮಸೌಂದರ್ಯದಿಂದ ಕಂಡ ಬೆಳಕನ್ನು ಸ್ವಾರಸ್ಯಮಯವಾಗಿ ಬಣ್ಣಿಸುತ್ತಾರೆ.

"ಹೊಚ್ಚ ಹೊಸ ಪ್ರಕೃತಿ ವಿನಯದ ಪ್ರಜ್ಞೆ : ದೈವಾಜ್ಞೆ.
ಸಂಪ್ರದಾಯಕ್ಕೊಸೆದು ಮಸೆದ ಭಾವದ ಮೂಸೆ
ಹೊರ-ಒಳ ಜಗದ ಸೊಗದ ನಿರ್ಲಿಪ್ತ ಜಿಜ್ಞಾಸೆ.
ಆತ್ಮಪ್ರಕಟನೆ ಚೆಲುವ ಸೃಷ್ಟಿಯರಳುವ ಸಂಜ್ಞೆ.
ಮತಿದೇಗುಲವ ಗಂಟೆಯುಲಿಗೆ ಚಲಿಸುವ ಲೋಕ.
ಒದುಕನವಲೋಕಿಸಿದಲೌಕಿಕ ಜೀವಪಾಕ."

೭. 'ನಗರದಲ್ಲಿ ನೆರಳು'-"ಪು.ತಿ.ನ." (೧೯೭೪) ಪು. ೩೮.

ಕಣವಿಯವರ ಪದ ಸಾಮರ್ಥ್ಯ, ಸುನೀತದ ಶಿಲ್ಪಸೌಷ್ಠವ ಹಾಗೂ ವಸ್ತು ಮತ್ತು ಆಶಯಗಳ ಅಭಿವ್ಯಕ್ತಿಯ ಉತ್ಕೃಷ್ಟತೆ ಇಲ್ಲಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲ್ಪಟ್ಟಿದೆ ಎಂದು ಹೇಳಬಹುದು.

ಕನ್ನಡದ ಪ್ರಸಿದ್ಧ ಕಾವ್ಯಮೀಮಾಂಸಕರಾದ ತೀ.ನಂ ಶ್ರೀಯವರು ಅಗಲಿದಾಗ ಅವರ ಆದರ್ಶಮಯ ಬದುಕನ್ನು ಸ್ಮರಿಸುತ್ತ ಬರೆದ ಶೋಕಗೀತೆಯನ್ನು ಸುನೀತದ ಬಂಧದಲ್ಲಿ ಕಣವಿ ರಚಿಸಿದ್ದಾರೆ. ಸಾಮಾನ್ಯವಾಗಿ ಆಂಗ್ಲ ರೊಮ್ಯಾಂಟಿಕ್ ಕವಿಗಳ ಶೋಕಗೀತೆ(elegy)ಯಲ್ಲಿ ಅಗಲಿದ ವ್ಯಕ್ತಿಗಳ ಶೋಕವನ್ನು ಬಣ್ಣಿಸಿದಂತೆ ತೋರುತ್ತದೆ. ಕುತೂಹಲಕರ ಸಂಗತಿಯೆಂದರೆ ಕನ್ನಡದಲ್ಲಿ ಸುನೀತಗಳು ಕೇವಲ ಕಾವ್ಯದ ಬಂಧದ ದೃಷ್ಟಿಯಿಂದ ಮಾತ್ರ ಆಂಗ್ಲಸಾಹಿತ್ಯದಿಂದ ಪ್ರೇರಣೆ ಪಡೆದು ಅದರಲ್ಲಿಯ ವಸ್ತುವಿಧಾನವನ್ನು ಸ್ವತಂತ್ರವಾಗಿ ಬಳಸಿಕೊಂಡುದನ್ನು ಕಾಣಬಹುದು. ಮೈಸೂರು-ಧಾರವಾಡಗಳಲ್ಲಿ ಕನ್ನಡಕ್ಕೆ ಭದ್ರವಾದ ತಳಹದಿಯನ್ನು ಹಾಕಿದ ತೀ. ನಂ. ಶ್ರೀ. ಕಲ್ಕತ್ತೆಯಲ್ಲಿ ನಿಧನರಾದಾಗ "ಕನ್ನಡದ ಕಲಶ ತುಳುಕಿತ್ತೆ ? ಕೈಯ ಹೊತ್ತಗೆ ಜಾರಿ, ಸರಸತಿಯ ವಜ್ರದ ಓಲೆ ಕಳಚಿತ್ತೆ ?" ಎಂದು ಶೋಕಿಸುವ ಕಣವಿ ತೀ. ನಂ. ಶ್ರೀಯವರ ವಿದ್ವತ್ತತೆಯ ಸಹೃದಯ ವ್ಯಕ್ತಿತ್ವವನ್ನು ನೆನಪಿಸುತ್ತ ಸಾಗುವ ಸುನೀತದ ನುಡಿಚಿತ್ರಗಳಿವು :

"ಕಲ್ಪವೃಕ್ಷದೆಳನೀರು, ಬಾಗಿರುವ ಗೊನೆವಾಳೆ,
ವಸಂತದ ಚಂದನ ಗಂಧ, ಒಲುಮೆ ಹೂಮಾಲೆ,
ಸ್ನೇಹದಮೂದುಬತ್ತಿಯ ನವುರು, ನರುದಂಬುಲದ
ರುಚಿ-ಶುಚಿಗೊಳಿಸಿ, ನಸುನಗೆಯ ರೇಶಿಮೆವಸ್ತ್ರ
ಹೊದಿಸಿ, ನುಡಿಯ ಕನ್ನಡಿ ನೋಡಿ, ತಿದ್ದಿ ತೀಡಿ,
ಜನಪದ ಭಾವ-ಬುದ್ಧಿಯ ಬೃಹತ್‌ಕೋಶದಲಿ
ಪ್ರೀತಿ ಪಾಥೇಯವನು ಕೈಕೊಂಡು ಬಲುದಿನದ
ಪಯಣಕ್ಕೆ ಹೊರಟುಬಿಟ್ಟರು : ನಮ್ಮ ತೀ.ನಂ.ಶ್ರೀ"೮.

ಸುನೀತದ ಕೊನೆಯ ಎರಡು ಸಾಲುಗಳಲ್ಲಿ ಕಣವಿಯವರು ಒಂದು ಘನೀಭೂತವಾದ ಅನುಭವವನ್ನು ಮೂಡಿಸಿದ್ದಾರೆ.

"ಇಂದಿಲ್ಲ ನಾಳೆ ಬಂದು, 'ಎಲ್ಲಿಗೆ ಬಂತು ಕೆಲಸ' ?
ಎಂದಾರು; ಈ ಗುಡಿಗೆ ಯಾರಿಡಬೇಕು ಕಳಸ ?"

೮. 'ಎರಡುದಡ' – "ತೀ. ನಂ. ಶ್ರೀಯವರ ಪಯಣ" (೧೯೬೯) ಪು. ೩೧.

ತೀ.ನಂ.ಶ್ರೀ. ಜ್ಞಾನಕ್ಕಾಗಿ ಬದುಕಿದವರು. ಅವರು ಪ್ರಾರಂಭಿಸಿದ ಕನ್ನಡ ವಿದ್ವತ್ತೆಯ, ಸಂಶೋಧನೆಯ ಪರಂಪರೆ ಮುಂದುವರಿಯಬೇಕು ಎಂಬ ಆಶಯವನ್ನು ಕವಿ ಬಿಂಬಿಸುತ್ತ ನಮ್ಮ ಮೇಲಿರುವ ಹೊಣೆಯ ಬಗೆಗೂ ಎಚ್ಚರಿಸಿದ್ದಾರೆ.

ಕನ್ನಡಕಾವ್ಯದಲ್ಲಿ ಭಾವಮಯವಾದ ನಾದ, ಛಂದಗಳಿಗೆ ಪುಟ ತೆರೆದ ಕವಿ ಕರ್ಕಿಯವರ ವ್ಯಕ್ತಿತ್ವವನ್ನು ಕಣವಿಯವರು ನಿರೂಪಿಸುವಲ್ಲಿಯೂ ಒಂದು ತೆರನಾದ ಮನೋಜ್ಞತೆ ವ್ಯಕ್ತವಾಗುತ್ತದೆ.

"ತೀರ ಎತ್ತರವಿರದ ದೇವಗಣಗಿಲ ಗಿಡದ
ಸುತ್ತು ನೀರುಂಡು ನಳನಳಿಸಿರುವ ಹಸಲೆ; ಎಳೆ-
ಬಿಸಿಲ ಮಿಂದು, ಸಂತೃಪ್ತಿ ಸುಳಿಗಾಳಿಯಲಿ ತಲೆ-
ಯೊಲೆದು, ಮಾಸದ ಹಸುಗೂಸಿನಂತೆ ನಸುನಗುತ
ಕೊಂಬೆ ತುತ್ತುತುದಿಗೆ ಹಳದಿ-ಬಿಳಿ ಮಧುರಪಾಕದಿ
ಹೂವಿನಾರತಿಯ ಬಾನಿಗೆ ಹಿಡಿದು, ನಿರುಮ್ಮಳ
ನಿಂತ ರಸಿಕ"[೯].

ದೇವಕಣಗಿಲದ ಪ್ರತಿಮೆಯ ಮೂಲಕ ಕಣವಿಯವರು ಅವರ ಜೀವನಸಿದ್ಧಿಯನ್ನು ಗುರುತಿಸಿದ್ದಾರೆ. ಕರ್ಕಿಯವರ ನಿರ್ಮಲವಾದ ಅಂತರಂಗದಲ್ಲಿಯ ರಸಿಕತೆಯ ಸ್ವಾರಸ್ಯವನ್ನು ಬಣ್ಣಿಸಿದ್ದಾರೆ.

ಹೊಸಗನ್ನಡಕಾವ್ಯಕ್ಕೆ ನಾಂದಿ ಹಾಡಿದ ಪಂಜೆ ಮಂಗೇಶರಾಯರ ಕಾವ್ಯದ ಭಾವ ಭಾಷೆಗಳ ಆಹ್ಲಾದಕಾರಿಯಾದ ಅನುಭವವನ್ನು, ಅವರ ದೃಷ್ಟಿವೈಶಾಲ್ಯವನ್ನು ಕಣವಿಯವರು ಸುನೀತದಲ್ಲಿ ಹೇಳಿದಿರುವಿಕೆಯೂ ಪರಿಶೀಲನಾರ್ಹವಾದುದು. ಕವಿ "ಪಂಜೆಯವರನ್ನು ನೆನೆದು"—

"....ಮಕ್ಕಳ ಜೊತೆಗೆ ಆಡಿ, ಹಾಡಿ, ಕುಣಿ-
ದು, ಕಥೆಹೇಳಿ ನಲಿದ ಕವಿಶಿಷ್ಟ ಗುರುವೆ ತಲೆ ಮಣಿ-
ದು, ನವೋದಯದ ಹೃದಯದೌದಾರ್ಯಕ್ಕೆ ನಮ್ಮ
ಹಮ್ಮು ಬಿರಿದು, ಅಂತಃಕರಣ ಚಿಮ್ಮುವದು. ಬಿಳಿ
ಬಣ್ಣದಲ್ಲೇಳು ಬಣ್ಣಗಳ ತಿರುಗಿಸಿ ಕಣ್ಣು
ಮನ ತಣಿಸಿ ತಂಗಾಳಿಯಾಗಿ, ಮಂಗಳ ಮಣ್ಣು

೯. 'ನಗರದಲ್ಲಿ ನೆರಳು'–"ಕರಕಿ ಕಣಗಿಲ" (೧೯೭೪) ಪು. ೪.

ಅರಳಿ ತೆನೆ-ಚಿನ್ನ. ಕನ್ನಡ ನುಡಿಯ ಗೋಧೂಳಿ
ಸಮಯಕ್ಕೆ ಹಲವು ನಕ್ಷತ್ರ ಮಿನುಗಿಸಿ ನಕ್ಕೆ.
ತೃಪ್ತಿ ತುಳುಕಿಸಿ ಶರತ್ಕಾಲದಾಗಸಕ್ಕೆ''[೧೦].

"ಕವಿಶಿಷ್ಯ"ರೆಂದು ಖ್ಯಾತರಾದ ಪಂಜೆಯವರು ನವೋದಯ ಕನ್ನಡಕಾವ್ಯ ಪರಂಪರೆಯನ್ನು ಪ್ರಾರಂಭಿಸಿದುದಷ್ಟೇ ಆಗಿರದೆ ಮಂಗಳೂರಿನಲ್ಲಿಯ ಗೋವಿಂದ ಪೈ, ಪೇಜಾವರ ಸದಾಶಿವರಾಯ, ಕಡೆಂಗೋಡ್ಲು ಶಂಕರಭಟ್ಟ, ಮುಳಿಯ ತಿಮ್ಮಪ್ಪಯ್ಯ, ಗಣಪತಿರಾವ್ ಪಾಂಡೇಶ್ವರ ಮುಂತಾದ ಕವಿಗಳಿಗೆ ಪ್ರೇರಣೆಯನ್ನೂ ಚೈತನ್ಯವನ್ನೂ ನೀಡಿದುದರಿಂದಲೇ ಕನ್ನಡ ಸಾಹಿತ್ಯರಂಗದಲ್ಲಿ ಶರತ್ಕಾಲವನ್ನೂ ಕಾಣುವಂತಾಯಿತೆಂಬುದನ್ನು ಕಣವಿಯವರು ಇಲ್ಲಿ ಮನಗಾಣಿಸಿದ್ದಾರೆ.

ಜ. ಚ. ನಿ.ಯವರು ಕನ್ನಡದಲ್ಲಿ ವಚನಪರಂಪರೆಯ ಪ್ರೇರಣೆಯಿಂದ ಸಾಹಿತ್ಯಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಜ್ಞಾನಸಂಚಯವನ್ನು ಪುರೋಭಿವೃದ್ಧಿಗೊಳಿಸುವಲ್ಲಿ ಪ್ರಮುಖ್ಯರಾದವರು. ಜ. ಚ. ನಿ.ಯವರ ಗ್ರಂಥರಾಶಿಯನ್ನು ಅವಲೋಕಿಸಿದಾಗ ಶ್ರೀಗಳ ಅಪೂರ್ವವಾದ ಪಾಂಡಿತ್ಯ- ಪ್ರತಿಭೆಗಳು ಪುರಾತನ ಜ್ಞಾನಭಂಡಾರವನ್ನಿಲ್ಲಿ ವಿನೂತನವಾದ ದೃಷ್ಟಿಯಲ್ಲಿ ಅವಲೋಕಿಸುವ ಪ್ರಯತ್ನದಲ್ಲಿ ನಿರತವಾಗಿರುವಂತೆ ತೋರುತ್ತದೆ. ಕಣವಿಯವರು ತಮ್ಮ ಸುನೀತದಲ್ಲಿ ಜ.ಚ.ನಿ.ಯವರ ಅಪೂರ್ವವಾದ ಆಧ್ಯಾತ್ಮಿಕ ವ್ಯಕ್ತಿತ್ವವನ್ನೂ ಅವರ ಜೀವನದರ್ಶನವನ್ನೂ ಹೀಗೆ ಬಣ್ಣಿಸುತ್ತಾರೆ:

"......ಷಟ್ಸ್ಥಲದ ಕಣದಲ್ಲಿ ಜೀವನದಹಂ
ಕೃತಿಯ ಹಂತಿಯ ಕಟ್ಟಿ ತುಳಿಸಿ, ಗಾಳಿಗೆ ತೂರಿ
ಸ್ವಾನುಭವಸಾರ ಸಿದ್ಧಾಂತ ಸಂಪುಟ ರಾಶಿ :
ಹಗೆಹದಲಿ ಹಾಕಿ ಬರಗಾಲಕ್ಕೆ ತೆಗೆದಿರಿಸಿ
ಮುಗ್ಗು ತಿನ್ನುವದಲ್ಲ; ನಿತ್ಯಬದುಕಿನ ದಾರಿ.
ದಣಿವಿರದೆ ತೋಡಿ ತೆಗೆಯುವರು ಚಿನ್ನದ ಗಣಿಯ
ಇರವು—ಬರೆಹದ ನಡುವೆ ತೆರವು ತುಂಬುಮಣಿಹ''.[೧೧]

ಬಾಳಿನಲ್ಲಿ ಮಾನವ ಆದರ್ಶವನ್ನು ಹಾಕಿಕೊಳ್ಳದಿದ್ದರೆ, ಅನುಭಾವದ ಅರಿವನ್ನೂ ಪಡೆಯದಿದ್ದರೆ ಅದು ಬರಗಾಲದ ಬದುಕಾಗುತ್ತದೆ. ಪ್ರತಿಯೊಬ್ಬನಿಗೂ ಈ ಅರಿವಿನ ಸೇಚನವನ್ನು ಮಾತು ಮತ್ತು ಕೃತಿಗಳ ಮೂಲಕ ನಿರ್ದೇಶಿಸುತ್ತ ಬಂದ

೧೦. 'ನಗರದಲ್ಲಿ ನೆರಳು'-"ಪಂಜೆಯವರನ್ನು ನೆನೆದು" (೧೯೭೪) ಪು. ೬೯.
೧೧. ಅದೇ "ಶ್ರೀ ಜ. ಚ. ನಿ." (೧೯೭೪) ಪು. ೩೩.

ಜ. ಚ. ನಿ. ಚಿನ್ನದಗಣಿಯಿದ್ದಂತೆ ಎಂದು ಕಣವಿ ಪರಿಚಯಿಸುತ್ತಾರೆ. "ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ"[೧೨] ಎಂಬ ಆಕರ್ಷಕ ಶೀರ್ಷಿಕೆಯ ಸುನೀತ ಮಲ್ಲಿಕಾರ್ಜುನ ಮನ್ಸೂರರ ಕಲಾಪ್ರತಿಭೆಯನ್ನು ಪರಿಚಯಿಸುತ್ತದೆ. ಮಲ್ಲಿಕಾರ್ಜುನ ಮನ್ಸೂರ್ ಅವರು ಹಿಂದುಸ್ತಾನಿ ಸಂಗೀತದಲ್ಲಿ ಭಾರತೀಯ ಖ್ಯಾತಿಯನ್ನು ಗಳಿಸಿದ ಕನ್ನಡದ ಉನ್ನತ ಕಲಾವಿದರು. ಅವರ ಗಾನಲಹರಿ, ಸಂಗೀತದ ಸ್ವರಮಾಧುರ್ಯ ವನ್ನು ಈ ಕವಿ ಬಣ್ಣಿಸುವ ಬಗೆ ಹೀಗಿದೆ:

"ನಸುಕಿನ ಕ್ಷಿತಿಜ ಕಂಠಕ್ಕೆ ಹೊಮ್ಮಿ ಆಕಾಶ
ಕ್ಕುಲಿವ ರಾಗ, ಬಯಲನಾಲೋಡಿಸುತ ಪ್ರತಿಪ
ದಾರ್ಥವ ಹಿಂಜಿ, ಆಲಾಪಕ್ಕೆ ಸ್ವರ ಸ್ವರೂಪ
ದ ಹಂಜಿ : ಸೃಷ್ಟಿಮೂಲದ ನಾದ : ಸ್ವಪ್ರಕಾಶ.
ಹಿಗ್ಗಿ ತಳತಳ ಹೊಳೆದು, ಎಳೆದು ತನ್ನೊಳಸೆಳೆದು
ಹಡೆದ ಮೂರ್ತಿಗೆ ಜೀವದುಂಬಿ ನೊರೆವ ನಿನಾದ".

ಸೃಷ್ಟಿಯ ಸಮಸ್ತವಾದ ಕ್ರಿಯೆಗಳಲ್ಲಿಯೂ ನಾದ-ಲಯಗಳ ವೈವಿಧ್ಯ ತುಂಬಿರು ತ್ತದೆ. ಸ್ವರ, ರಾಗ, ನಾದ-ಲಯಗಳು ಮನ್ಸೂರರ ಕಂಠದಿಂದ ಮೂಡಿ ಬರುವಾಗ ಉಂಟಾಗುವ ಭಾವಾಭಿವ್ಯಕ್ತಿ ಸೃಷ್ಟಿಮೂಲವಾಗಿದ್ದು "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದಂತೆ" ಮಲ್ಲಿಕಾರ್ಜುನ ಮನ್ಸೂರರು ಕಣವಿಯವರಿಗೆ ಕಂಡಿದ್ದಾರೆ. ಸುನೀತದ ಮುಂದಿನ ಭಾಗವು ಅವರ ವೈಯಕ್ತಿಕ ಸಾಧನೆಯ ಇನ್ನೊಂದು ಮುಖ ವನ್ನು ನೀಡುತ್ತದೆ.

"ವಚನಕ್ಕೆ ವಚನ ಕೊಟ್ಟಂತೆ ಕಟ್ಟಿದ ಸೇತು,
ನೊಂತು ಶರಣರ ಕರುಳ ಮಿಡಿದು ಇಹ-ಪರ ಸೋಂಕೆ.
ಕಿವಿಗೊಟ್ಟ ಸಲಕೆ ಹೊಸಮಿಂಚು-ಕಂಚಿನ ತಾನ.
ರಸವರ್ಷ, ದಿಗ್ದಿಗಂತ ಸ್ಪರ್ಶ : ಪುನರುತ್ಥಾನ".

ವಚನದ ಸಂಗೀತಮಾಧುರ್ಯವನ್ನು ಮಲ್ಲಿಕಾರ್ಜುನ ಮನ್ಸೂರರು ಸುಶ್ರಾವ್ಯ ವಾಗಿ ಹಾಡುತ್ತ ವಚನದಲ್ಲಿಯ ಗೀತಾಂಶವನ್ನು ಪ್ರಕಟಿಸುವ ಬಗೆ ಅನನ್ಯವಾದುದು. ಈ ದೃಷ್ಟಿಯಿಂದ ಅವರು ವಚನಗಳ ಸಂಗೀತ ಪ್ರತಿಭೆಯನ್ನು ಬೆಳಗಿಸಿರುವದನ್ನು ಕವಿ ಮನ್ಸೂರರ ವ್ಯಕ್ತಿತ್ವದ ಅನನ್ಯಾಂಶಗಳನ್ನು ಗುರುತಿಸುತ್ತ ಸ್ಪಷ್ಟಪಡಿಸಿದ್ದಾರೆ.

---

೧೨. 'ನಗರದಲ್ಲಿ ನೆರಳು'-"ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ" (೧೯೭೪) ಪು. ೩೯.

ಸ್ವತಂತ್ರಭಾರತದ ಪ್ರಧಾನಮಂತ್ರಿಯಾದ ಲಾಲಬಹಾದ್ದೂರ ಶಾಸ್ತ್ರಿಯವರನ್ನೂ ಕುರಿತು ಬರೆದ ಸುನೀತದಲ್ಲಿ ಅವರ ಸರಳತೆ, ಬಡತನ, ಪ್ರಾಮಾಣಿಕತೆ, ಕಾಯಕನಿಷ್ಠೆಯನ್ನು ಕಣವಿಯವರು ಚಿತ್ರಿಸುತ್ತ ಅವರ ಅಪರೂಪದ ವ್ಯಕ್ತಿತ್ವವನ್ನು ಸ್ಮರಿಸಿದ್ದಾರೆ.

"ಗದ್ದುಗೆಯನೇರಿದರು ಕಾಣಿಸಿಕೊಳದ ಕಿರಿಯ
ಬಾಜಾ ಬಜಂತ್ರಿಯ ನಿಲಿಸಿ ಸಹಜ ತಂತಿಯ ಮಿಡಿದ.
ಎಲ್ಲರಿಗು ಕಿವಿಗೊಟ್ಟು ತನ್ನ ಒಳದನಿ ಮರೆಯ".[೧೩]

ಎನ್ನುತ್ತ ಲಾಲಬಹಾದ್ದೂರ "ಯಾರಿಗೂ ಸಿಗದ ಬಿಳಿಪಾರಿವಾಳವ ಹಿಡಿದ"; "ಮಧ್ಯರಾತ್ರಿಯಲಿಂತು ಕೊರೆದು ಮಿಂಚಿನ ಗೆರೆಯ ಮರೆಯಾದ" ಈ ಅರ್ಥಪೂರ್ಣ ನುಡಿಗಳು ಗಣ್ಯವ್ಯಕ್ತಿಯ ಸ್ಮರಣೆಯನ್ನು ಚಿರಸ್ಥಾಯಿಯಾಗಿಸುತ್ತವೆ. ಶಾಂತಿ ತತ್ವದಿಂದ ಮತ್ತು ದುಡಿಮೆಯಿಂದ ಯಶಸ್ಸು ಸಾಧಿಸಿದ ಲಾಲಬಹಾದ್ದೂರರ ಆಂತರಿಕ ಹಾಗೂ ಬಾಹ್ಯ ವ್ಯಕ್ತಿತ್ವವನ್ನು ಕಣವಿಯವರು ಸುನೀತದಲ್ಲಿ ಬಹು ಸಮಂಜಸವಾಗಿಯೇ ಚಿತ್ರಿಸಿದ್ದಾರೆ.

ಕಣವಿಯವರ ವ್ಯಕ್ತಿಚಿತ್ರವನ್ನೊಳಗೊಂಡ ಸುನೀತಗಳನ್ನು ಅವಲೋಕಿಸಿದಾಗ ಕಾವ್ಯಾಭ್ಯಾಸಿಯಾದ ಸಹೃದಯನಿಗೆ ಗೋಚರಿಸುವ ಕೆಲವು ಅಂಶಗಳನ್ನು ಇಲ್ಲಿ ಸ್ಪಷ್ಟಪಡಿಸಬಹುದು. "ಕಣವಿ ಅವರ ಕಾವ್ಯದೃಷ್ಟಿ ನಿಸರ್ಗದ, ಜೀವನದ ಚೆಲುವಿಗೆ ಆಕರ್ಷಿತವಾದ ರೊಮ್ಯಾಂಟಿಕ್ ದೃಷ್ಟಿಯಾಗಿದೆ. ಇದು ನನ್ನವೂ ಆಗಬಹುದು".[೧೪] ಎಂಬ ಹೇಳಿಕೆಯನ್ನು ಇಲ್ಲಿ ಗಮನಿಸಬೇಕು. ಕಣವಿಯವರು ವ್ಯಕ್ತಿಚಿತ್ರವನ್ನೊಳಗೊಂಡ ಸುನೀತಗಳಲ್ಲಿ ಗಣ್ಯರಾದವರ ವ್ಯಕ್ತಿತ್ವವನ್ನು ಚಿತ್ರಿಸುವಾಗ ರೂಪಕಗಳನ್ನೂ ಪ್ರತಿಮೆಗಳನ್ನೂ ಬಳಸುವಾಗ ಅವು ನಿಸರ್ಗಕ್ಕೊಂದು ವಸ್ತುಗಳಾಗಿರುವದನ್ನೂ ನೋಡಬಹುದು. ಕಣವಿಯವರ ಸುನೀತಗಳ ವಿಶಿಷ್ಟಾಂಶಗಳೆಂದರೆ ಅವುಗಳಲ್ಲಿರುವ ಸಹಜತೆ, ಸರಳತೆ ಮತ್ತು ಧ್ವನಿರಮ್ಯತೆಯಿಂದ ಕೂಡಿದ ಕವಿಪ್ರತಿಭೆ, ಕಲ್ಪನೆಯ ಸೂಕ್ಷ್ಮತೆಗಳೇ ಪ್ರಮುಖವಾಗಿವೆ. ಕಣವಿಯವರ ಸುನೀತಗಳಲ್ಲಿಯ ಶಬ್ದಸೃಷ್ಟಿ ಹಾಗೂ ಛಂದಸ್ಸಿನ ವೈವಿಧ್ಯ ಅವರ ವಿಶಿಷ್ಟವಾದ ಸಾಮರ್ಥ್ಯವನ್ನು ಆಕರ್ಷಕವಾದ ರೀತಿಯಲ್ಲಿ ಸಹೃದಯನ ಮನಸ್ಸನ್ನು ಸೂರೆಗೊಳ್ಳುತ್ತವೆ.

---

೧೩. 'ಎರಡು ದಡ'–"ಲಾಲಬಹಾದ್ದೂರ ಶಾಸ್ತ್ರಿ"; (೧೯೬೯) ಪು. ೨೫.

೧೪. ಕೀರ್ತಿನಾಥ ಕುರ್ತಕೋಟಿ–"ಯುಗಧರ್ಮ ಹಾಗೂ ಸಾಹಿತ್ಯ ದರ್ಶನ." (೧೯೬೨); ಪು. ೮೮.

'ರಸಿಕರಂಗ' ಸುನೀತದಲ್ಲಿ ಜೀವನದಲ್ಲಿ ಕಡು ಕಷ್ಟಗಳು ಬಂದಾಗ ವ್ಯಕ್ತಿಯ ಪರೀಕ್ಷೆ ನಡೆಯುತ್ತದೆನ್ನುವ ಕ್ಷಣಗಳಲ್ಲಿ ಮುಗಳಿ ತಮ್ಮ ವ್ಯಕ್ತಿತ್ವದ ಶ್ರೀಮಂತಿಕೆಯನ್ನು ತೋರಿಸಿದ್ದಾರೆನ್ನಲು ಕಣವಿ ಅವರ ಬಗೆಗೆ "ಮುಳ್ಳಿನಲು ಮುಗುಳೊಡೆದ" ಎಂದು ಹೇಳಿಬಿಡುತ್ತಾರೆ. ಗುಲಾಬಿಯ ಗಿಡ ಮುಳ್ಳಿನಿಂದ ಕೂಡಿದ್ದರೂ ಹೂವಿನ ಸುಗಂಧ ದಿಂದ ಜನರನ್ನು ಸದಾ ಆಕರ್ಷಿಸುತ್ತದೆ. ಹಾಗೆಯೇ ಮುಗಳಿ ತಮ್ಮ ಕಷ್ಟಗಳಲ್ಲೂ ಉತ್ತಮ ಅಭಿರುಚಿ ಹಾಗೂ ಸಂತೋಷದ ಮುಗುಳುನಗೆಯ ಕಳೆಯನ್ನು ಕಳೆದು ಕೊಳ್ಳಲಿಲ್ಲವಂತೆ. ಹೀಗೆಯೇ ಕವಿ ಹಳೆಗನ್ನಡದ ಕೆಲವು ಪದಗಳನ್ನು ತೆಗೆದು ಕೊಂಡು ಅವಕ್ಕೆ ಒಂದು ಹೊಸಚೇತನವನ್ನು ನೀಡುತ್ತಾರೆ. ಪಂಪನಲ್ಲಿ ಬರುವ "ತೆರಂಬೊಳೆ"ಯನ್ನು ಪು.ತಿ.ನ. ಅವರ ಬಗೆಗೆ "ಜಗದಚ್ಚರಿ ತೆರಂಬೊಳೆವ ಮನದ ಪೂರ್ವಕಳೆ' ಎನ್ನುವಲ್ಲಿ ಪು. ತಿ. ನ. ಅವರ ವ್ಯಕ್ತಿತ್ವದ ಅಂತರಾಳದಲ್ಲಿಯ ಅಪೂರ್ವ ವಾದ ಕಳೆ ಕಾವ್ಯದಲ್ಲಿ, ನೀರಿನಲ್ಲಿ ವಾಳೆಮೀನು ಹೊಳೆದಂತೆ ಭಾಸವಾಗುತ್ತದೆಂದು ಸ್ಪಷ್ಟಪಡಿಸಿದ್ದಾರೆ. ವಿನಾಯಕರ ಮನೋಧರ್ಮದಲ್ಲಿ ಇರುವ "ಅಂತಃಕರಣ ದಂಗೈಯಲ್ಲಿ ಬೆಳೆಗ್ಗೈವ" ಸಾಧನೆಯನ್ನು ಕಣವಿ ಮನೋಜ್ಞವಾಗಿ ಗುರುತಿಸಿದ್ದಾರೆ. ಬೇಂದ್ರೆಯವರ ಕಾವ್ಯಪ್ರತಿಭೆ "ಹಣ್ಣಾದ ಕೇದಿಗೆಯ ಹೊಡೆ' ಯೆನ್ನುವ ಕವಿ, ಅವರ ಕಾವ್ಯದಲ್ಲಿಯ "ನಾದ" "ಒಳದನಿ" (ಧ್ವನಿರಮ್ಯತೆ)"ಮಾಂತ್ರಿಕನಾಡಿ" ಮುಂತಾದವುಗಳಲ್ಲಿ ಸೂಕ್ತವಾದುದನ್ನೇ ಬಳಸಿದ್ದಾರೆ. ಛಂದಸ್ಸಿನ ದೃಷ್ಟಿಯಿಂದ "ರಸಿಕರಂಗ", "ಎಪ್ಪತ್ತರ ಬೇಂದ್ರೆ", ಇಟಾಲಿಯನ್ ಮಾದರಿಯ ಸುನೀತ (೮+೬=೧೪ ಪಂಕ್ತಿಗಳು)ಗಳಾದರೆ "ವಿನಾಯಕರಿಗೆ ವಂದನೆ' ಶೇಕ್ಸಪಿಯರಿಯನ್ ಮಾದರಿಯ ಸುನೀತ (೪×೩+೨=೧೪ ಪಂಕ್ತಿಗಳು)ವಾಗಿದೆ. ಉಳಿದವುಗಳಲ್ಲಿ "ಕರಕಿ ಕಣಗಿಲು", "ಶ್ರೀ. ಜ. ಚ. ನಿ.", "ಪು.ತಿ.ನ.", "ಪಂಜೆಯುವರನ್ನು ನೆನೆದು", "ಮಲ್ಲಿಕಾರ್ಜುನ ಶಿಖರಕ್ಕೆ ಬೆಳಕಾಗಿ" ಸುನೀತಗಳಲ್ಲಿ ಕಣವಿಯವರು ಹದಿನಾಲ್ಕು ಪಂಕ್ತಿಗಳ ನೂತನವಾದ ಪ್ರಯೋಗವನ್ನು ಮಾಡಿದ್ದಾರೆ. "ಲಾಲಬಹಾದ್ದೂರ ಶಾಸ್ತ್ರಿ" ಸುನೀತದಲ್ಲಿ ಮೂರು ಮೂರು ಪಂಕ್ತಿಗಳಲ್ಲಿ ನಾಲ್ಕು ಪಂಕ್ತಿಗಳಿಗೆ ಬದಲು ವ್ಯಕ್ತಿತ್ವವನ್ನು ವರ್ಣಿಸುತ್ತ ಕೊನೆಯ ಎರಡು ಸಾಲುಗಳಲ್ಲಿ ವಿಚಾರಕ್ಕೆ ಮಹತ್ವದ ತಿರುವನ್ನು ಕೊಟ್ಟು ಮುಕ್ತಾಯಗೊಳಿಸಲಾಗಿದೆ.

ಕಣವಿಯವರ ನವ್ಯಮನೋಧರ್ಮ ಅವರ ಸುನೀತಗಳಲ್ಲಿಯೂ ವ್ಯಕ್ತವಾಗಿದೆ. "ಪಂಜೆಯುವರನ್ನು ನೆನೆದು" ಸುನೀತ ಪ್ರಾರಂಭವಾಗುವದು ನವ್ಯಕಾವ್ಯದ ದೃಷ್ಟಾಂತ ವಿಧಾನದ ಈ ಮಾತುಗಳಿಂದ–

"ಟಿಟ ಟಿಟ ಟೈಟ್ ಪ್ಯಾಂಟು, ಒತ್ತು–ಬೂಟಿಗೆ ಗುಡ್
ನೈಟ್ ಎಂದು, ತಲೆ ಪಂಜೆಯುಟ್ಟು, ಚಪ್ಪಲಿ ಮೆಟ್ಟಿ

ತೆಂಕಣಗಾಳಿಗೊಡ್ಡಿ ವೈಯ್ಯ, ಸಹಜ ಭೆಟ್ಟಿ
ಯಾದ ಗೆಳೆಯರ ಜೊತೆಗೆ ಮಾತಾಡುತ್ತ ಗುಡ್ಡ
ವೇರಿ ಕುಳಿತಂತೆ ಹಾಯೆನಿಸುವದು : ಪಂಜೆ ನಿಮ್ಮ
ನೆನೆದಾಗ[೧೫]—

ಒಟ್ಟಿನಲ್ಲಿ ಸಮನ್ವಯ ಮನೋಧರ್ಮದ ಕಣವಿಯವರು ಕನ್ನಡದ ಪ್ರಸಿದ್ಧ ಕವಿಗಳನ್ನು ಸುನೀತದಲ್ಲಿ ಚಿತ್ರಿಸಿರುವ ರೀತಿ ಆಯಾ ಕವಿಗಳ ವ್ಯಕ್ತಿತ್ವ ಮತ್ತು ಕಾವ್ಯದ ಮೇಲೆ ಬರೆದ ಭಾಷ್ಯವೆಂದು ಹೇಳಬಹುದು. ಮೌಲ್ಯಮಾಪನದಲ್ಲಿರುವ ಅವರ ಪರಿಶುದ್ಧವೂ ಅಂತಃಕರಣಪೂರ್ವಕವೂ ಆದ ಮನೋಧರ್ಮವು ಸುನೀತಗಳ ಶ್ರೇಷ್ಠತೆಯನ್ನು ಹೆಚ್ಚಿಸುತ್ತದೆ. ಸುನೀತಗಳಲ್ಲಿ ವ್ಯಕ್ತವಾಗುವ ಕಾವ್ಯಾತ್ಮಕವಾದ ಮೌಲ್ಯಗಳಿಂದಲೂ ಕನ್ನಡ ಕವಿಗಳ ಚರಿತ್ರೆಗೆ ಪೂರಕವಾದ ಅನುಭವವನ್ನು ಈ ಸುನೀತಗಳು ನೀಡಬಲ್ಲವು. ಕಣವಿಯವರಲ್ಲಿರುವ ಪರಂಪರೆಯ ಪ್ರಜ್ಞೆಯನ್ನೂ ಸಾಂಸ್ಕೃತಿಕ ಧೋರಣೆಯ ಕಾಳಜಿಯನ್ನೂ ಅವರ ಸುನೀತಗಳು ಪ್ರಬಲವಾಗಿ ಪ್ರಚುರಪಡಿಸುತ್ತವೆ.

● ●

೧೫. 'ನಗರಪಲ್ಲಿ ನೆರಳು'–"ಪಂಜೆಯವರನ್ನು ನೆನೆದು" (೧೯೬೪) ಪು. ೪೯.

ಚಂದ್ರೇಶ್ವರದೇವರು	ದೇವ.	೬೪೬:೧
ಚಂನಕೇಶವದೇವ	ದೇವ.	೩೫:೨೮;೧೧೧:೩
ಚಕ್ರಪಾಣಿ	ವ್ಯ.	೧೮೭:೨೯
ಚಕ್ರಪಾಣಿ ದಂಡನಾಯಕ	ಅಧಿ.	೧೬೩:೧೪
ಚಟಿಯನಾಯಕ	ವ್ಯ.	೬೦೭:೩
ಚಟ್ಟಗೌಡ	ಅಧಿ.	೨೨೩:೭
ಚಟ್ಟಯ್ಯ	ವ್ಯ.	೧೩೪:೬೩
ಚಟ್ಟಯ್ಯದೇವರಸ	ಕಲ.ಮಾ.	೧೯೫:೬೩
ಚಟ್ಟಾಂಬಿಕೆ	ಸ್ತ್ರೀ.	೧೩೪:೫೬
ಚಟ್ಟಸೆಟ್ಟಿ	ವ್ಯ.	೩೨:೫೮
ಚತುರ್ದ್ಧಶಭುವನಾಧೀಸ್ವರಿ	ದೇವ.	೬೫೫:೧
ಚನ್ನಯ್ಯ	ವ್ಯ.	೭೩:೬೩
ಚವುಂಡ	ಮಾ.	೨೪೧:೧೪
ಚವುಂಡರಾಜ	ಮಾ.	೨೨೦:೧೯
ಚವುಡಯನಾಯಕರು	ವ್ಯ.	೨೪೬:೧೦
ಚವುಡಿಕದಂಬನಾಯಕರು	ವ್ಯ.	೬೭೨:೨೧
ಚವುಡಿಸೆಟ್ಟಿ	ಅಧಿ.	೧೮೮:೧೯
ಚಾಗಲದೇವಿ	ರಾ.	೮೨:೨
ಚಾಮುಗವುಡ	ವ್ಯ.	೧೨೯:೪೮
ಚಾಮಿಕಬ್ಬೆ	ಸ್ತ್ರೀ.	೫೮೭:೩
ಚಾಮುಂಡನೃಪ	ಮಾ.	೨೩೮:೧೦
ಚಾಮುಂಡ ಭೂಪಾಳ	ಮಾ.	೧೧೭:೩
ಚಾಮುಂಡರಸರು	ಮಾ.	೨೪೩:೪
ಚಾವೋಜ	ರೂ.	೭೨:೭೦
ಚಾವಗಾವುಣ್ಡ	ವ್ಯ.	೮೨:೩
ಚಾವಭೂಭುಜ	ಅಧಿ.	೨೩೮:೧೫

(ಮುಂದುವರಿಯುವುದು)

ಒರೆಗಲ್ಲು

೧. ನೃಪತುಂಗಾಭ್ಯುದಯ

ಈವರೆಗೆ ನಮಗೆ ಲಭಿಸಿದ ಕವಿರಾಜಮಾರ್ಗದ ಹಸ್ತಪ್ರತಿಗಳು ನಾಲ್ಕು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಸಂಸ್ಥೆಯ ಹಸ್ತಪ್ರತಿಭಾಂಡಾರದಲ್ಲಿರುವ ಇವುಗಳಲ್ಲಿ ೨ ತಾಳೆಗರಿ ಪ್ರತಿಗಳು, ೨ ಕಾಗದ ಪ್ರತಿಗಳು. ತಾಳೆಗರಿ ಪ್ರತಿಗಳ ನಕಲು ಕಾಗದಪ್ರತಿಗಳಾದುದರಿಂದ ಈವರೆಗೆ ಲಭ್ಯವಾದುವು ವಸ್ತುತಃ ಎರಡೇ ಪ್ರತಿಗಳೆಂದು ಹೇಳಬೇಕಾಗುತ್ತದೆ.[೧]

'ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ' ವಿಷಯವನ್ನು ಕುರಿತು ಪಿಎಚ್. ಡಿ. ಅಧ್ಯಯನ ಮಾಡುತ್ತಲಿದ್ದ ಸಂದರ್ಭದಲ್ಲಿ ಕವಿರಾಜಮಾರ್ಗದ ಬೇರೆ ಹಸ್ತಪ್ರತಿಗಳನ್ನು ಶೋಧಿಸಲು ತೊಡಗಿ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡ, ಲಕ್ಷ್ಮೀಸೇನ ಹಸ್ತಪ್ರತಿಭಾಂಡಾರವನ್ನೊಳಗೊಂಡ ಕೊಲ್ಲಾಪುರ ಮೊದಲಾದ ಗ್ರಾಮ, ಪಟ್ಟಣಗಳನ್ನು ಸುತ್ತಾಡುತ್ತಲಿದ್ದೆ. ಸುತ್ತಾಟ ಸುದೀರ್ಘವಾಯಿತು. ಹಸ್ತಪ್ರತಿ ಮಾತ್ರ ಒಂದೂ ಲಭಿಸಲಿಲ್ಲ. ನನ್ನ ಪರಿದಾಟ, ಪ್ರಯತ್ನಗಳನ್ನು ಗಮನಿಸಿದ ದಿವಂಗತ ಡಿ. ಕೆ. ಭೀಮಸೇನರಾಯರು "ಗುಲ್ಬರ್ಗಾ ಜಿಲ್ಲೆಯ ಐನೂರು ಅಥವಾ ಐನೂಲಿ ಗ್ರಾಮದಲ್ಲಿ ಕವಿರಾಜಮಾರ್ಗದ ಒಂದು ಹಸ್ತಪ್ರತಿಯಿದೆ, ಪ್ರಯತ್ನಿಸಿರಿ" ಎಂದು ತಿಳಿಸಿದರು. ಈ ಸೂಚನೆಯ ಮೇರೆಗೆ ಐನೂರಿನಲ್ಲಿ ಶೋಧಿಸಲಾಗಿ ಬೇರೆ ಹಸ್ತಪ್ರತಿಗಳು ಸಿಕ್ಕವೇ ಹೊರತು ಕವಿರಾಜಮಾರ್ಗ ಕಣ್ಣಿಗೆ ಬೀಳಲಿಲ್ಲ. ಹೀಗಾಗಿ ಜೇಸತ್ತು ಐನೂಲಿಗೆ ಹೋಗುವ ವಿಚಾರವನ್ನು ಬಿಟ್ಟುಕೊಡಲಾಯಿತು. ಆದರೆ ಆ ಪ್ರದೇಶದ ಸ್ನೇಹಿತರಿಗೆ, ವಿದ್ಯಾರ್ಥಿಗಳಿಗೆ ಕವಿರಾಜಮಾರ್ಗ ಹಸ್ತಪ್ರತಿಗಾಗಿ ಐನೂಲಿಯಲ್ಲಿ ಶೋಧಿಸಲು ಹೇಳುತ್ತಲೇ ಇದ್ದೆನು. ಒಬ್ಬಿಬ್ಬರು (ಪ್ರೊ. ಮಾಣಿಕರಾವ ಧನಾಶ್ರೀ ಬಸವಕಲ್ಯಾಣ, ಪ್ರೊ. ಭೈರೊಡಗಿ

---

೧. Mackenze Collection, A Descriptive catalogue of the oriental manuscripts, By H. H. Wilson Vol. II page 62 (1828) ರಲ್ಲಿ ಕವಿರಾಜಮಾರ್ಗದ ಹಸ್ತಪ್ರತಿಯ ಸೂಚನೆ ಇದೆ. ೧೯೫೫ರಲ್ಲಿ ಮೆಕೆಂಝಿ ಸಂಗ್ರಹವನ್ನು ಹೊರತುಪಡಿಸಿ ಮಿಕ್ಕ ಹಸ್ತಪ್ರತಿಗಳನ್ನು ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಕೊಡಲಾಯಿತು. ಹೀಗಾಗಿ ಮೆಕೆಂಝಿ ಸಂಗ್ರಹಿಸಿರುವ ಹಸ್ತಪ್ರತಿ ಮದ್ರಾಸದಲ್ಲಿಯೇ ಉಳಿದಿದೆಯೆಂದು ೨೭-೧-೭೮ರಂದು ಮೆಕೆಂಝಿ ಗ್ರಂಥ ಭಂಡಾರಕ್ಕೆ ನೀಡಿದ ಪ್ರತ್ಯಕ್ಷಸಂದರ್ಶನದಿಂದ ಮನದಟ್ಟಾಯಿತು.

ಭಾಲ್ಕಿ ಇತ್ಯಾದಿ) ನನ್ನ ಮಾತಿನಂತೆ ಪ್ರಯತ್ನಿಸಿದರು. ಕವಿರಾಜಮಾರ್ಗದ ಸುಳುಹು ಹತ್ತಲಿಲ್ಲ. ಈ ಮಧ್ಯೆ ಐನೂಲಿ ಗ್ರಾಮದ ಒಬ್ಬ ಜಂಗಮವ್ಯಕ್ತಿಗಳು ಪತ್ರ ಬರೆದು, ಕಳೆದ ಶತಮಾನದಲ್ಲಿ ತಮ್ಮ ಹಿರಿಯರು ರಚಿಸಿದ ಪುರಾಣಗ್ರಂಥಗಳಿವೆ; ಅವುಗಳನ್ನು ಅಚ್ಚುಹಾಕಿಸಲು ಸಾಧ್ಯವೇ ? ಎಂದು ಕೋರಿ ಪತ್ರವನ್ನು ಬರೆದರು. ನನ್ನ ಕವಿರಾಜಮಾರ್ಗಹಸ್ತಪ್ರತಿಯ ದಾಹ ಈ ಪತ್ರವನ್ನು ಅಲಕ್ಷಿಸಿತು. ಹೀಗೆ ಐನೂಲಿ ಗ್ರಾಮದ ಹಸ್ತಪ್ರತಿ ವಿಷಯವಾಗಿ ನನ್ನ ಪ್ರಯತ್ನ ನಡೆದೇ ಇದ್ದಿತು.

ಇತ್ತೀಚೆ ಪ್ರೊ. ಮಾಣಿಕರಾವ ಧನಶ್ರೀ ಅವರು ಐನೂಲಿಗೆ ಹೋದ ಸಂದರ್ಭ: ಹಸ್ತಪ್ರತಿಗಳನ್ನೆಲ್ಲ ಬಿಚ್ಚಿನೋಡಿ ಆ ರಾಶಿಯಲ್ಲಿ ಬಿಡಿಯಾಗಿ ಸಿಕ್ಕ ಒಂದು ಕಾಗದವನ್ನು ನನಗೆ ತಂದುಕೊಟ್ಟರು. ಅದು ಹೀಗಿದೆ :

ಶ್ರೀಗುರುಪ್ರಸನ್ನ, ಇದರಲ್ಲಿ

೭	ನೃಪತುಂಗಾಭ್ಯುದಯ	೮	ವಿಷ್ಣುಕೃತ ಮಹಿಮ್ನ
೧	ಮಣ್ಣೇಶ್ವರ ನಾಂದ್ಯಪದ	೩	ನಾನಾರ್ಥರತ್ನಾಕರ ನಿಘಂಟು
೩	ರಾಜಶೇಖರ ವಿಳಾಸ	೪	ಭರ್ತೃಹರಿ ನೀತಿಶತಕದ ಟೀಕಾ
೫	ಶಿವಾಧಿಕ್ಯ ರತ್ನಾವಳಿ	೯	ಸಾರಸ್ವತೀ ವ್ಯಾಕರಣ
೬	ಭಕ್ತಾಧಿಕ್ಯ ರತ್ನಾವಳಿ		

ಒಂದು ಕಾಗದ ಪುಸ್ತಕ (ಅಥವಾ ತಾಳೆ ಪುಸ್ತಕ)ದಲ್ಲಿ ಬರೆಯಲಾದ ಕೃತಿಗಳ ವಿವರಣೆಯನ್ನೊಳಗೊಂಡಿದೆ, ಈ ಬಿಡಿ ಕಾಗದ. ಆ ಪುಸ್ತಕದಲ್ಲಿ ಅಡಕವಾಗಿರುವ ಒಂಬತ್ತು ಕೃತಿಗಳಲ್ಲಿ 'ನೃಪತುಂಗಾಭ್ಯುದಯ' ಒಂದು. ಈ ಶೀರ್ಷಿಕೆ ತುಂಬ ಆಕರ್ಷಕವಾದುದು. 'ನೃಪತುಂಗಾನುಮತಮಪ್ಪ ಕವಿರಾಜಮಾರ್ಗ' ಯಾವ ಊರಿನಲ್ಲಿದೆಯೆಂಬ ಪ್ರತೀತಿ ಇದೆಯೋ ಅದೇ ಊರಿನಲ್ಲಿ 'ನೃಪತುಂಗಾಭ್ಯುದಯ' ಎಂಬ ಈ ಕೃತಿನಾಮ ದೊರೆತಿದೆಯೆಂಬುದನ್ನು ಗಮನಿಸಿದರೆ ಈ ತುಂಡುಕಾಗದ ಇನ್ನೂ ಹೆಚ್ಚಿನ ಕುತೂಹಲವನ್ನು ಹುಟ್ಟಿಸುತ್ತದೆ. ಐನೂಲಿ, ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡಕ್ಕೆ ಸಮೀಪದ ಗ್ರಾಮವೆಂಬುದು ಇಲ್ಲಿ ಅವಶ್ಯ ಗಮನಿಸಬೇಕು. ಇದು ಅರಸು ನೃಪತುಂಗನನ್ನು ಕುರಿತ ಕೃತಿಯಾಗಿರುವ ಸಾಧ್ಯತೆಯಿದೆ. ಪೊನ್ನನ ಭುವನೈಕರಾಮಾಭ್ಯುದಯವನ್ನು ನೆನೆದರೆ 'ನೃಪತುಂಗಾಭ್ಯುದಯ' ಆ ಕಾಲದ ಕೃತಿನಾಮಪದ್ಧತಿಯ ಜಾಡಿನಲ್ಲಿಯೇ ಹುಟ್ಟಿಕೊಂಡುದು ಸ್ಪಷ್ಟವಾಗುತ್ತದೆ.

ಈಗ ಆ ಗ್ರಾಮಕ್ಕೆ ಹೋಗಿ, ವಿದ್ವಾಂಸರು ಕಣ್ಣಲ್ಲಿ ಕಣ್ಣಿಟ್ಟು ಹಸ್ತಪ್ರತಿಗಳನ್ನು ಓದಬೇಕು. ಅಲ್ಲದೆ ಈ ಮೊದಲು ಕೆಲವು ವಿದ್ವಾಂಸರು ಅಲ್ಲಿಯ ಕೆಲವು

ಶ್ರೀ ಗಣಪತಯೇ ನಮಃ । [illegible]

[illegible]

[illegible]

[illegible]

[illegible]

[illegible]

ಹಸ್ತಪ್ರತಿಗಳನ್ನು ತೆಗೆದುಕೊಂಡುಹೋಗಿರುವರೆಂದು (ಡಾ. ಸಿದ್ದಯ್ಯ ಪುರಾಣಿಕ ಮೊದಲಾದವರು) ತಿಳಿದುಬಂದಿದೆ. ಅವರು ಒಯ್ದ ಪ್ರತಿಗಳಲ್ಲಿ 'ನೃಪತುಂಗಾಭ್ಯುದಯ' ಸೇರಿಕೊಂಡಿರುವ ಸಾಧ್ಯತೆಯಿದೆ.

೨. ಬಾಲಚಂದ್ರನ ತಿಲೋಯಪಣ್ಣತ್ತಿ

ಲೋಕಸ್ವರೂಪವನ್ನು ಅಧಿಕೃತವಾಗಿ, ವಿಸ್ತಾರವಾಗಿ ವಿವರಿಸುವ 'ತಿಲೋಯಪಣ್ಣತ್ತಿ'ಯೆಂಬುದು ಜೈನಧರ್ಮದ ಉತ್ಕೃಷ್ಟ ಗ್ರಂಥವೆನಿಸಿದೆ. ಶ್ರೀ ನಾಥೂರಾಮ ಪ್ರೇಮಿ ಅವರು ತಮ್ಮ 'ಜೈನಸಾಹಿತ್ಯ ಔರ ಇತಿಹಾಸ'[1] ಗ್ರಂಥದಲ್ಲಿ "ತಿಲೋಯಪಣ್ಣತ್ತಿಯ ಕರ್ತೃ ಯಾರೆಂಬ ಬಗ್ಗೆ ಆ ಗ್ರಂಥದಲ್ಲಿ ಸ್ಪಷ್ಟ ಉಲ್ಲೇಖವಿಲ್ಲ" ಎಂದು ಹೇಳುತ್ತ

> ಪಣಮಹ ಜಿಣವರವಸಹಂ ಗಣಹರವಸಹಂ ತಹೇವ ಗುಣವಸಹಂ
> ದಟ್ಠೂಣ ಪರಿಸವಸಹಂ ಜದಿವಸಹಂ ಧಮ್ಮಸುತ್ತಪಾಡಏ ವಸಹಂ ॥

ಎಂಬ ಈ ಅಂತ್ಯಪ್ರಶಸ್ತಿಯನ್ನು ಅವಲಂಬಿಸಿ ಎಲ್ಲ ವಿದ್ವಾಂಸರಂತೆ ಈ ಕೃತಿಯ ಕರ್ತೃ ಯತಿವೃಷಭನಾಗಿರಬೇಕೆಂದು ಅನುಮಾನದ ಅಭಿಪ್ರಾಯ ನೀಡಿದ್ದಾರೆ. ಈ ಗ್ರಂಥದ ನಾಲ್ಕನೆಯ ಅಧ್ಯಾಯದ ೧೨೧೧ನೆಯ ಪದ್ಯವಾದ

> ಘೋರಟ್ಠ ಕಮ್ಮಣಿಯರೇ ದಲಿದೂಣ ಲದ್ಧಂ ಣಿಸ್ಸೇಯಸಾ
> ಜಿಣವರಾ ಜಗವಂದಣಿಜ್ಜಾ
> ಸಿದ್ಧಿಂ ದಿಸಂತು ತುರಿದಂ ಸಿರಿಬಾಲಚಂದ ಸಿದ್ಧಂತಿಯಪ್ಪಹುದಿ
> ಭವ್ವಜಣಾಣ ಸವ್ವೇ ॥

ಎಂಬಲ್ಲಿ ಬರುವ ಬಾಲಚಂದ್ರ ಎಂಬ ಹೆಸರು ತಿಲೋಯಪಣ್ಣತ್ತಿಯ ಕರ್ತೃವಿನ ಬಗ್ಗೆ ಇನ್ನೂ ಸಂದೇಹವನ್ನು ಹುಟ್ಟಿಸಿದೆ. ಈ ಸಂದೇಹದ ಪರಿಹಾರಕ್ಕಾಗಿ ಯತಿವೃಷಭನು ಕರ್ತೃವೆಂದೂ ಬಾಲಚಂದ್ರನೆಂಬವನು ಲಿಪಿಕಾರನೆಂದೂ ವಿದ್ವಾಂಸರು ಊಹಿಸಿದ್ದಾರೆ. ಲಿಪಿಕಾರನಾಗಿರಬಹುದಾದ ಬಾಲಚಂದ್ರನನ್ನೇ ತರುವಾಯದವರು ಕರ್ತೃವೆಂದು ತಪ್ಪುಗ್ರಹಿಕೆ ಮಾಡಿಕೊಂಡಿರಬೇಕೆಂಬುದು ಅವರ ಅಭಿಪ್ರಾಯವಾಗಿದೆ. ನನಗೆ ತಿಳಿದಮಟ್ಟಿಗೆ ಇಲ್ಲಿಂದ ಮುಂದೆ ಯಾರೂ ಈ ಬಗ್ಗೆ ವಿವೇಚಿಸುವ ಗೋಜಿಗೆ ಹೋಗಲಿಲ್ಲ; ಇಂದಿಗೂ ಹೋಗಿಲ್ಲವೆಂದೇ ಹೇಳಬೇಕು.

---

೧ ಜೈನಸಾಹಿತ್ಯ ಔರ ಇತಿಹಾಸ-ನಾಥೂರಾಮ ಪ್ರೇಮಿ (೧೯೪೬) ಪುಟ ೬ ಹಾಗೂ ೧೫ ನೋಡಿರಿ.

ಈ ವಿಷಯುವಾಗಿ ಬ್ರಹ್ಮಶಿವ ವಿರಚಿತ ಕನ್ನಡಕೃತಿ 'ಸಮಯ ಪರೀಕ್ಷೆ' ಹೊಸ ಬೆಳಕನ್ನು ಚೆಲ್ಲುವಂತೆ ತೋರುತ್ತದೆ. ಪೀಠಿಕಾ ಪ್ರಕರಣದಲ್ಲಿ ಬ್ರಹ್ಮಶಿವನು ತನ್ನ ಪೂರ್ವದ ಕವಿಗಳನ್ನು, ಆಚಾರ್ಯರನ್ನು ಸ್ತುತಿಸುತ್ತಾನೆ. ತೀರ್ಥಂಕರರನ್ನು ವರ್ಣಿಸಿದ ಬಳಿಕ ಗೃದ್ಧಪಿಂಚ್ಛ, ಸಮಂತಭದ್ರ, ಜಟಾಚಾರ್ಯ, ಪೂಜ್ಯಪಾದ, ಅಕಳಂಕ, ಕೊಂಡಕುನ್ದ (?), ಸೋಮದೇವಪಂಡಿತ, ಚತುರ್ಮುಖದೇವ, ಬೆಟ್ಟದ ದೇವ, ವಾದಿರಾಜ, ಮೇಘಚಂದ್ರ (ಮೊರಬ), ವೀರಣಂದಿ, ಕವಿಬಂಧುವರ್ಮ ಮೊದಲಾದ ಕವಿಗಳನ್ನು ಹೊಗಳಿದ್ದಾನೆ. ಇಲ್ಲಿ ಕವಿಪರಮೇಷ್ಠಿಯ ನಂತರ ಬಾಳಚಂದ್ರನನ್ನು ಹೀಗೆ ವರ್ಣಿಸುತ್ತಾನೆ :

> ಆಪ್ತೋದಿತ ಲೋಕಪ್ರ
> ಜ್ಞಪ್ತಿಗೆ ಮುಂ ಕರ್ತ್ತುವಾಗಿ ಕಡೆಯೊಳ್ನಿಂದಿ ।
> ರ್ದಾಪ್ತ ಸ್ಮರಣೆಯಿನಸುವಂ
> ವ್ಯಾಪ್ತಯಶಂ ಬಿಟ್ಟು ಬಾಳಚಂದ್ರಂ ನೆಗಳ್ದಂ ॥ (೧-೨೬)

ಈ ಪದ್ಯ ಲೋಕಪ್ರಜ್ಞಪ್ತಿಯ ಕರ್ತೃ ಬಾಳಚಂದ್ರನೆಂದು ಸ್ಪಷ್ಟಪಡಿಸುತ್ತದೆ. ಒಂದುವೇಳೆ ಈ ಬಾಳಚಂದ್ರನು ತಿಲೋಯಪಣ್ಣತ್ತಿಯ ಮಧ್ಯದಲ್ಲಿ ಬರುವ ಬಾಲಚಂದ್ರನಾಗಿದ್ದಲ್ಲಿ, ಈತನ ಕೃತಿಯಾದ ಲೋಕಪ್ರಜ್ಞಪ್ತಿಯು ತ್ರಿಲೋಕಪ್ರಜ್ಞಪ್ತಿ (=ತಿಲೋಯಪಣ್ಣತ್ತಿ) ಆಗಿದ್ದ ಪಕ್ಷದಲ್ಲಿ, ಮೇಲಿನ ಕಂದಪದ್ಯದ ಬೆಳಕಿನಲ್ಲಿ ತಿಲೋಯಪಣ್ಣತ್ತಿಯ ಕರ್ತೃತ್ವ ಪ್ರಶ್ನೆಯನ್ನು ವಿದ್ವಾಂಸರು ಮತ್ತೊಮ್ಮೆ ಪರಿಶೀಲಿಸಬೇಕಾಗುತ್ತದೆ.

೩. ಸದಾಶಿವಯ್ಯನ ಶ್ರೀಕೃಷ್ಣಪಾರಿಜಾತ : ಒಂದು ಸ್ಪಷ್ಟನೆ

ಕರ್ನಾಟಕ ಭಾರತಿಯ ಸಂಪುಟ ೯-೩ನೆಯ ಸಂಚಿಕೆಯಲ್ಲಿ "ಸಿರಗುಪ್ಪಿ ಸದಾಶಿವಯ್ಯನ ಪಾರಿಜಾತ' ಹೆಸರಿನಲ್ಲಿ ನನ್ನ ಒಂದು ಲೇಖನ ಪ್ರಕಟವಾಗಿದೆ. ಶ್ರೀಕೃಷ್ಣಪಾರಿಜಾತದ ಪೂರ್ವಾರ್ಧದ ಕರ್ತೃ ಅಪರಾಳ ತಮ್ಮಣ್ಣನೆಂದೂ ಉತ್ತರಾರ್ಧದ ಕರ್ತೃ ಸಿರಗುಪ್ಪಿ ಸದಾಶಿವಯ್ಯನೆಂದೂ ಈ ಉಭಯಕರ್ತೃಕ ಅಂಶವನ್ನು ಈ ವರೆಗೆ ವಿದ್ವಾಂಸರಾಗಲಿ, ಸಂಪಾದಕರಾಗಲಿ ಗುರುತಿಸಿರಲಿಲ್ಲವೆಂಬ ನಿರ್ಣಯಕ್ಕೆ ಅಲ್ಲಿ ಬರಲಾಗಿದ್ದಿತು. ಆದರೆ ಹಿಂದುಮುಂದಿನ ಪುಟಗಳನ್ನು ಕಳೆದುಕೊಂಡ "ಶ್ರೀಕೃಷ್ಣ ಪಾರಿಜಾತವು" ಹೆಸರಿನ ಒಂದು ಮುದ್ರಿತ ಪೇಟೆಯ ಪ್ರತಿ ನನಗೆ ಶ್ರೀ ಆರ್. ಎನ್. ಸೂಜಿ (ನಿಡಸೋಸಿ) ಅವರಿಂದ ಲಭಿಸಿದೆ. ೧೦-೬-೧೯೨೯ ಎಂದು ಕೈಯಿಂದ ಬರೆದ ಮಿತಿ ಈ ಪ್ರತಿಯ ಮೇಲಿದೆ. ಇದರಿಂದ ಕೆಳಗಿನ ಸಂಗತಿಗಳು ತಿಳಿದುಬರುತ್ತವೆ.

೧. ಈ ಆವೃತ್ತಿಯ ಸಂಪಾದಕರಾಗಲಿ, ಪ್ರಕಟಿತ ವರ್ಷವಾಗಲಿ ಗೊತ್ತಾಗುವುದಿಲ್ಲ.

೨. "ಅಪರಾಲ ತಮ್ಮಣ್ಣನು ರಚಿಸಿದ ಕೃಷ್ಣಪಾರಿಜಾತ ಭಾಗ ೧ನೇದು" "ಸದಾಶಿವಪ್ಪನು ರಚಿಸಿದ ಕೃಷ್ಣಪಾರಿಜಾತ ಭಾಗ ೨ನೇದು" ಎಂದು ಎರಡು ಭಾಗಗಳು ಇದರಲ್ಲಿ ತೋರಿಬರುತ್ತಿದ್ದು ಇವು ಕ್ರಮವಾಗಿ ೧-೪೨, ೪೨-೯೧ ಪುಟಗಳನ್ನು ವ್ಯಾಪಿಸಿವೆ. ಎರಡನೆಯ ಭಾಗದ ಕೊನೆಗೆ "ಇತಿ ಪಾರಿಜಾತ ಸಮಾಪ್ತ ಮಂಗಳಮಹಾ" ಎಂದಿದ್ದು, ಆಮೇಲಿನ ೧-೫ ಪುಟಗಳ ವರೆಗೆ "ಶ್ರೀ ಲಕ್ಷ್ಮೀನರಸಿಂಹ ಪ್ರಸೀದ ಕೊರವಂಜಿ ಹೇಳುವ ವಂಶಾವಳಿ" ಎಂಬ ಗದ್ಯಭಾಗ ಗೋಚರಿಸುತ್ತದೆ. ಈ ಗದ್ಯಭಾಗದ ಕೊನೆಗೆ "ಶ್ರೀಕೃಷ್ಣಾರ್ಪಣಮಸ್ತು" ಎಂಬ ವಾಕ್ಯವಿದೆ. ಡೆಮಿ ಆಕಾರದ (ಪುಟ ೯೫+೫) ಈ ಪುಸ್ತಕದ ಬಲದಿಂದ ಹಿಂದಿನ ನನ್ನ ಲೇಖನದಲ್ಲಿ ಹೇಳಿದ ಕೆಲವು ಮಾತುಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.

i. ಶ್ರೀಕೃಷ್ಣಪಾರಿಜಾತದ ರಚನಾಕಾರ್ಯದಲ್ಲಿ ಸಿರಗುಪ್ಪಿ ಸದಾಶಿವಯ್ಯನ ಪಾತ್ರವೂ ಇದೆಯೆಂದು ಈ ಆವೃತ್ತಿ, ನನಗಿಂತ ಮೊದಲೇ ತಿಳಿಸಿದೆ. ಹೀಗಾಗಿ ನನಗಾಗಲಿ, ಇತ್ತೀಚೆ ಮೈಸೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಶ್ರೀಕೃಷ್ಣಪಾರಿಜಾತವನ್ನು ಪ್ರಕಟಿಸಿದ ಆರ್. ಜಿ. ಕುಲಕರ್ಣಿ ಅವರಿಗಾಗಲಿ ಈ ಸಂಗತಿ ಗಮನಕ್ಕೆ ಬಂದಿರಲಿಲ್ಲವೆಂಬುದು ಒಪ್ಪತಕ್ಕ ಮಾತು.

ii. ಇಲ್ಲಿ ಎತ್ತಿ ಹೇಳಬೇಕಾದ ಇನ್ನೂ ಒಂದು ಅಂಶವಿದೆ. ಅದು: ನನಗೆ ಸಿಕ್ಕಿದ್ದ ಕೈಬರಹದ ಪ್ರತಿಯಲ್ಲಿ ಸತ್ಯಭಾಮೆ ಕೊರವಂಜಿಗೆ ಊಟಕ್ಕೆ ನೀಡುವ ಸಂದರ್ಭ ಮೊದಲುಮಾಡಿ ಸಿರಗುಪ್ಪಿ ಸದಾಶಿವಯ್ಯನ ರಚನೆಯ ಪ್ರಾರಂಭದ ಉಲ್ಲೇಖವಿದ್ದರೆ, ಈಗ ಸಿಕ್ಕ ಮುದ್ರಿತ ಪ್ರತಿಯಲ್ಲಿ ಇದಕ್ಕಿಂತ ಮೊದಲು ಅಂದರೆ ಕೃಷ್ಣ ಕೊರವಂಜಿ ರೂಪಧರಿಸುವಾಗ (" ಪದ । ಜಯ ಜಯ ಜಗನ್ನಾಥ । ಜಯ ಸುವನವರೂಥ । " ಎಂಬ ಪದ್ಯದೊಂದಿಗೆ) ಸಿರಗುಪ್ಪಿ ಸದಾಶಿವಯ್ಯನ ರಚನೆಯ ಪ್ರಾರಂಭದ ಉಲ್ಲೇಖವಿದೆ. ಈ ಉಭಯ ಉಲ್ಲೇಖಗಳಲ್ಲಿ ಯಾವುದು ಸತ್ಯವೆಂಬುದನ್ನು ವಿದ್ವಾಂಸರು ನಿರ್ಧರಿಸಬೇಕಾಗಿದೆ.

● ಎಂ. ಎಂ. ಕಲಬುರ್ಗಿ

೧. ಏಕಾಂತ ರಾಮಯ್ಯಗಳ ಮೊಂಮ ರಾಮದೇವಭಟ್ಟ

ಹೊಸಧರ್ಮ ಹೊಸಸಿದ್ಧಾಂತಗಳಿಗೆ ನಾಂದಿಯನ್ನು ಹಾಡಿದ ಶಿವಶರಣರ ಉಲ್ಲೇಖ ಶಾಸನಗಳಲ್ಲಿ ದೊರೆಯುವುದು ವಿರಳ. ೧೨ ನೆಯ ಶತಮಾನದ ಅಬ್ಬಲೂರಿನ ಶಾಸನದಲ್ಲಿ ಶಿವಪಾರಮ್ಯವನ್ನು ಎತ್ತಿಹಿಡಿದ ಶಿವಶರಣ ಏಕಾನ್ತದ ರಾಮಯ್ಯನ ಪವಾಡದ ಬಗೆಗೆ ಸವಿಸ್ತಾರವಾದ ವರ್ಣನೆ ಬರುತ್ತದೆ. ಇದನ್ನು ಬಿಟ್ಟರೆ ೧೫ ನೆಯ ಶತಮಾನದ ಶಾಸನವೊಂದರಲ್ಲಿ[೧] "ಶ್ರೀಮದೇಕಾಂತ ರಾಮೇಶ್ವರಾನ್ವಯೋದ್ಭೂತ. . .. ಶ್ರೀ ಮದೇಕಾನ್ತ ಬಸವೇಶ್ವರದೇವರು" ಎಂಬ ಉಲ್ಲೇಖ ಬರುವುದನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಈ ೧೨ ರಿಂದ ೧೫ ನೆಯ ಶತಮಾನದ ಮಧ್ಯಾವಧಿಯಲ್ಲಿ ಬಾಳಿದ ಆತನ ವಂಶಜರ ಬಗೆಗೆ ಏನೂ ತಿಳಿದುಬಂದಿಲ್ಲ. ಇಂತಹ ವೇಳೆಯಲ್ಲಿ ಬಂದಳಿಕೆಯ ಶಾಸನ ಏಕಾನ್ತದ ರಾಮಯ್ಯನ ಮೊಮ್ಮಗನ (ಮಗಳ ಮಗ ಅಥವಾ ಮಗನ ಮಗನಾಗಿರಬಹುದು) ಬಗೆಗೆ ನೂತನ ಅಂಶಗಳನ್ನು ನೀಡುತ್ತಿರುವಂತೆ ತೋರುತ್ತದೆ.

ಕ್ರಿ. ಶ. ೧೨೦೭ ರ ಈ ಬಂದಳಿಕೆಯ ಶಾಸನ[೨] ಅಗ್ರಹಾರದ ಮಹಾಜನರಿಗೆ ಬಿಟ್ಟ ದತ್ತಿಯನ್ನು ಹೇಳುತ್ತ, "ಏಕಾನ್ತದ ರಾಮಯ್ಯಂಗಳ ಮೊಂಮ ರಾಮದೇವ ಭಟ್ಟರ ವೃತ್ತಿ ೧" ಎಂದು ೯೪-೯೫ನೆಯ ಸಾಲುಗಳಲ್ಲಿ ಉಲ್ಲೇಖಿಸುತ್ತದೆ.

ಏಕಾನ್ತದ ರಾಮಯ್ಯನ ತಂದೆ ಶೈವಬ್ರಾಹ್ಮಣನಾಗಿದ್ದನೆನ್ನುವುದಕ್ಕೆ ಅಬ್ಬಲೂರು ಶಾಸನದಲ್ಲಿ ಆಧಾರಗಳಿವೆ.[೩] ಪುರುಷೋತ್ತಮಭಟ್ಟ ಹಾಗೂ ಆತನ ಪತ್ನಿ ಪದ್ಮಾಂಬಿಕೆಯರು ಶಿವನನ್ನು ಆರಾಧಿಸಿದಾಗ ಹುಟ್ಟಿದವನೇ ರಾಮ. ಈ ರಾಮ ಶಿವನನ್ನು ಏಕಾಂತದಲ್ಲಿ ಆರಾಧಿಸಿದ್ದರಿಂದ "ಏಕಾನ್ತದ ರಾಮಯ್ಯ"ನೆಂಬ ಹೆಸರನ್ನು

---

೧. E. C. IV (ಹೊಸ ಆವೃತ್ತಿ) ಚಾಮರಾಜನಗರ, ೧೪೪. ಕೆಂಪನಪುರ.

೨. E. C. VII ಶಿಕಾರಿಪುರ, ೨೩೫. ಬಂದಳಿಕೆ.

೩. ಶಾಸನ ಸಂಪದ. ೧೭–೧೮ ನೆಯ ಸಾಲುಗಳು, ಪುಟ. ೬೮.

ಕ॥ ಆ ಸೋಮನಾಥಪುರ ಸಂ
ವಾಸಿತರೊಳು ಬ್ರಹ್ಮಪುರಿಗಳ್ಬ (ಳ್ವಿ)ಪ್ರರೊಳಾ
ಬ್ಯಾ(ವ್ಯಾ)ಸ ಶುಕವಾಮದೇವ ಪ
ರಾಶರ ಕಪಿಳಾದಿ ಸದ್ರಿ (ದೃ) ಶನೊಬ್ಬರ್ನ್ನೆಗಳ್ದಂ ॥

ಕ॥ ಶ್ರೀವತ್ಸಗೋತ್ರನುಬ್ಬಿರ್(ರ್ವಿರ್)
ದೇವನುತಂ ನಿಖಿಳವೇದಾಂಗವಿದಂ
ಪಾವನ ಚರಿತ್ರಗುಣ ಸ
ದ್ಭಾವಂ ಪುರುಷೋತ್ತಮಂ ದ್ವಿ(ದ್ವಿ)ಜೋತ್ತಮನೆನಿಪಂ ॥

ಪಡೆಮು,[೪] ಶಿರಸ್ಸನ್ನು ಕತ್ತರಿಸಿಕೊಂಡು ಮರಳಿಪಡೆದ ಪವಾಡವನ್ನು ಮೆರೆದನು. ಹೀಗೆ ರಾಮಯ್ಯ (ವೀರ)ಶೈವ ಆಂದೋಲನಕ್ಕೆ ಹೊರಳಿದರೂ ಆತನ ವಂಶಜರಲ್ಲಿ ಕೆಲವರಾದರೂ ಮೂಲ ಬ್ರಾಹ್ಮಣಕರ್ಮಗಳನ್ನೇ ಮುಂದುವರಿಸಿಕೊಂಡು ಹೋಗಿರಬಹುದು ಎಂಬುದಕ್ಕೆ ಬಂದಳಿಕೆ ಶಾಸನ ಆಧಾರವಾಗುತ್ತದೆ. ಇದಲ್ಲದೆ ಅಬ್ಬಲೂರು ಶಾಸನದ ಸಮಯವಾದ ಕ್ರಿ. ಶ. ೧೧೬೫ರ ವರೆಗೆ ಏಕಾಂತ ರಾಮಯ್ಯ ಬದುಕಿದ್ದನು ಎಂಬುದು ತಿಳಿದುಬರುವುದರಿಂದ ೧೨೦೭ ರಲ್ಲಿ ಈತನ ಮೊಮ್ಮಗ ನಿರುವ ಸಾಧ್ಯತೆಯನ್ನು ಈ ಶಾಸನ ಹೆಚ್ಚಿಸುತ್ತದೆ.

ಒಟ್ಟಿನಲ್ಲಿ, ಈ ಒಂದೆರಡು ಕಾರಣಗಳ ಹಿನ್ನೆಲೆಯಲ್ಲಿ ಮುತ್ತಜ್ಜ ಪುರುಷೋತ್ತಮ ಭಟ್ಟನ ಅಲಂದೆ ಅಥವಾ ಅಜ್ಜ ಏಕಾಂತದ ರಾಮಯ್ಯನ ಅಬ್ಬಲೂರುಗಳಲ್ಲಿ ಬದುಕುಮಾಡದೆ ಮೊಮ್ಮಗ ರಾಮದೇವಭಟ್ಟ ಬಂದಳಿಕೆ ಅಗ್ರಹಾರದಲ್ಲೇಕೆ ವಾಸಮಾಡಿದ? ಅಜ್ಜ ನಂಬಿದ ಧರ್ಮದ ಅನುಯಾಯಿಯಾಗದೆ ಪೂರ್ವಜರ ಧರ್ಮವನ್ನೇಕೆ ಮತ್ತೆ ಮುಂದುವರಿಸಿದ? ಎಂಬ ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಾಗಿಲ್ಲ. ಈ ಎಲ್ಲ ತೊಡಕುಗಳಿಗೆ ಪರಿಹಾರ ದೊರಕಿಸಿಕೊಳ್ಳಲು ಇನ್ನೂ ಖಚಿತ ಸಾಮಗ್ರಿಗಳು ಬೇಕಾಗುತ್ತವೆ ಎಂಬುದನ್ನು ವಿದ್ವಾಂಸರು ಗಮನಿಸಬೇಕು.

● ಹನುಮಾಕ್ಷಿ ಗೋಗಿ

೧. ಅಂಬುಲಿಗೆ ಚೆನ್ನಮಲ್ಲೇಶನ 'ಶಿ[=ಸಿ]ರಿಯಾಳಸೆಟ್ಟಿಯ ವಾರ್ಧಿಕ'ದ ಒಂದು ಹಸ್ತಪ್ರತಿ.

ಧಾರವಾಡದ 'ಕನ್ನಡ ಸಂಶೋಧನಸಂಸ್ಥೆ'ಯಿಂದ ಪ್ರಕಟವಾದ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ'[೫] ಸಂಪುಟ II ಕ್ರಮಾಂಕ ೭೭ (ಪುಟ ೧೦೧–೧೦೨) ರಲ್ಲಿ 'ಶಿರಿಯಾಳಶೆಟ್ಟಿಯ ವಾರ್ಧಿಕ'ವೆಂಬ ಕೃತಿಯ ಉಲ್ಲೇಖವಿದೆ. ಅಲ್ಲಿ ಕೃತಿಕಾರನ ಬಗೆಗೆ ಸಂಪಾದಕರು 'Can not be ascertained' ಎಂದಿದ್ದಾರೆ.

---

೪. ಶಾಸನ ಸಂಪದ. ಪು. ೮೯. ೨೮–೩೯ ಸಾಲುಗಳು.

ಕ॥ ಏಕಾಗ್ರ ಭಕ್ತಿಯೋಗದಿ
ನೇಕಾಕಿಯೆನಲ್ಕೆ ಸಂದು ಶಿವನಂ ಪಿರಿದ
ಪ್ಪೇಕಾಂತದೊಳೆ ಆರಾಧಿಸಿ
ಯೇಕಾಂತದ ರಾಮನೆಂಬ ಪೆಸರ (೦*) ಪಡೆದಂ ॥

೫. A Descriptive catalogue of Manuscripts in the Kannada Research Institute, Dharwad, Volume II, Ed. S. S. Malwad and B. S. Kulkarni (1955).

ಆದರೆ ಕೃತಿಯು ೭೨ ನೆಯ ಪದ್ಯದಲ್ಲಿ ಕೃತಿಕಾರ ಅಂಬುಲಿಗೆ ಚೆನ್ನಮಲ್ಲೇಶನೆಂಬ ಸಂಗತಿ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ[೭]. ಹೀಗಾಗಿ 'ಶಿರಿಯಾಳಸೆಟ್ಟಿಯ ವಾರ್ಧಕ'ದ ಕರ್ತೃ ಅಂಬುಲಿಗೆ ಚೆನ್ನಮಲ್ಲೇಶನೆಂಬುದರಲ್ಲಿ ಸಂದೇಹವಿಲ್ಲ. ಈ ಕೃತಿಯನ್ನು ಶ್ರೀ ಜಿ. ಎಂ.ಉಮಾಪತಿ ಶಾಸ್ತ್ರಿಯವರು ಸಂಪಾದಿಸಿ, ಸುಕುಮಾರ' ಪತ್ರಿಕೆಯ ಸಂಪುಟ ೧೭ ಸಂಚಿಕೆ ೫ ರಲ್ಲಿ ಪ್ರಕಟಿಸಿದ್ದಾರೆ.

೨. ಕದಂಬನೀತಿ: ಕರ್ತೃತ್ವ ವಿಚಾರ

ಉಸ್ಮಾನಿಯ ವಿಶ್ವವಿದ್ಯಾಲಯದ ಪ್ರಕಟಿತ ಹಸ್ತಪ್ರತಿಸೂಚಿ*ಯ ಕ್ರಮಾಂಕ ೧೯೦(ಪುಟ ೨೩೬–೨೭) ರಲ್ಲಿ 'ಕದಂಬ ನೀತಿ' ಎಂಬ ಹೆಸರಿನ ಕೃತಿಯೊಂದರ ಪರಿಚಯವಿದೆ. ಕೃತಿಯ ಮೊದಲಿನ ೧೧ ಪದ್ಯಗಳು ಲೋಪವಾಗಿದ್ದು ಕೃತಿ ೧೨ ನೆಯ ಪದ್ಯದಿಂದ ಉಪಲಬ್ಧವಿದೆ. ಸೂಚಿಕಾರರು 'ಕದಂಬನೀತಿ' ಯ ಕರ್ತೃ ಕೊಟ್ಟೂರ ಬಸವೇಶ್ವರನೆಂದು ಸೂಚಿಯಲ್ಲಿ ನಮೂದಿಸಿದ್ದಾರೆ.

'ಕದಂಬನೀತಿ'ಯ ಕಾಗದದ ಪ್ರತಿಯೊಂದು ಬೆಂಗಳೂರು ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಕೇಂದ್ರ'ದ ಸಂಗ್ರಹದಲ್ಲಿದೆ. ಇದರಲ್ಲಿ ಉಸ್ಮಾನಿಯ ಸಂಗ್ರಹದ ಪ್ರತಿಯಲ್ಲಿ ಲೋಪವಾಗಿರುವ ಮೊದಲ ೧೧ ಪದ್ಯಗಳು ಉಪಲಬ್ಧವಿವೆ. ಹೀಗಾಗಿ ಬೆಂಗಳೂರಿನ ಪ್ರತಿಯನ್ನು ಬಳಸಿಕೊಂಡು 'ಕದಂಬನೀತಿ'ಯ ಕರ್ತೃವಿನ ಬಗೆಗೆ ವಿವೇಚಿಸಲಾಗಿದೆ.

'ಕದಂಬನೀತಿ' ಕಾರ ತನ್ನ ಗುರು, ವಾಸಸ್ಥಳ, ಕೃತಿಯ ಆಕರಗಳ ಬಗೆಗೆ ಈ ರೀತಿ ಹೇಳಿದ್ದಾನೆ.

> 'ಇದು ಸಕಲ ಶಿವಶರಣ ಚರಣ ಸರಸಿಜದ ಷ
> ಟ್ಪದನೆನಿಪ ಉಜ್ಜನಿಯ ಸಿಂಹಾಸನಾಧೀಶ
> ಸದಮಲಾತ್ಮಕ ಚನ್ನವೀರೇಶ್ವರನ ಹಸ್ತಕಮಲಸಂಜಾತನೆನಿಪಾ
> ಮುಪನವ್ಯೈರಿಯ ಕರುಣದಿಂದ ಕೊಟ್ಟೂರ ನಗ
> ರದ ಸೀಮೆಯೊಳಗಿರ್ಪ ನವಶೈವಪೌರಾಣ
> ಹೃದಯಪೂರಿತ ಸಿದ್ಧಲಿಂಗಾರ್ಯ ಕನ್ನಡಿಸಿದಂ ಕದಂಬದ ನೀತಿಯಾ (೧೦).

---

೭. ಸಾಧನೆ (ಬೆಂಗಳೂರು ವಿಶ್ವವಿದ್ಯಾಲಯ) ೬–೨, ಪುಟ ೮೯ (ಎಪ್ರಿಲ್-ಜೂನ್ ೧೯೭೭).

* A Descriptive catalogue of the Kannada Manuscripts in the Osmania University Library, Ed. B. Ramachandrarao & T. V. Venkatachalasastry, Osmania University, Hyderabad (1966).

ಇವರಿಂದ ಸಿದ್ಧಲಿಂಗಾರ್ಯ ಉಜ್ಜನಿ ಸಿಂಹಾಸನದ ಚನ್ನವೀರೇಶ್ವರನ ಶಿಷ್ಯನೆಂದೂ ಕೊಟ್ಟೂರ ಸೀಮೆಯವನೆಂದೂ ಕೃತಿಯನ್ನು [ಸಂಸ್ಕೃತದಿಂದ ?] ಕನ್ನಡಿಸಿರುವುದಾಗಿಯೂ ತಿಳಿಯುತ್ತದೆ.

ಈ ಮೇಲಿನ ಗ್ರಂಥೋಕ್ತ ಉಲ್ಲೇಖದಿಂದ 'ಕದಂಬನೀತಿ'ಯ ಕೃತಿಕಾರ ಸೂಚಿಕಾರರು ಕೊಟ್ಟಿರುವಂತೆ ಕೊಟ್ಟೂರ ಬಸವೇಶ್ವರನಾಗಿರದೆ, ಸಿದ್ಧಲಿಂಗಾರ್ಯನಾಗಿದ್ದಾನೆ.

ಈ ಮುಂದೆ 'ಕದಂಬನೀತಿ'ಯ ಪರಿಚಯವನ್ನು ಸಂಗ್ರಹವಾಗಿ ಕೊಟ್ಟಿದೆ.

'ಕದಂಬನೀತಿ ಮಾಲಿಕೆ'ಯ ಆದಿಯಲ್ಲಿ ಕವಿ ಕೊಟ್ಟೂರ ಬಸವಲಿಂಗೇಶ, ಎಡೆಯೂರ ತೋಂಟದಸಿದ್ಧ, ಅಗಜಾತೆ, ಕರಿವದನ, ಬಸವೇಶ, ಚನ್ನಬಸವೇಶ ಪ್ರಭುದೇವ, ದಸರಯ್ಯ, ಸಿದ್ಧರಾಮಯ್ಯ, ಅಜಗಣ್ಣ, ಅನುಮಿಷ, ಸುಂಕದ ಬಂಕಯ್ಯ, ಮಡಿವಾಳ ಮಾಚಯ್ಯ, ಮೋಳಿಗಿ ಮಾರಯ್ಯ ಮೊದಲಾದ ಶಿವಪುರಾತನರನ್ನು ಸ್ಮರಿಸಿದ್ದಾನೆ. ಅನಂತರ ಸಂಸ್ಕೃತ-ಕನ್ನಡಗಳಲ್ಲಿ ಕೃತಿಗಳನ್ನು ರಚಿಸಿದ ಪಾಲ್ಕುರಿಕೆ ಸೋಮ, ಭೀಮ, ಕಾಳಿದಾಸ, ಹರೀಶ, ಬಾಣ, ಮಳೆಯರಾಜ ಮತ್ತು ನಿರೋಷ್ಠ್ಯದ ಕಾವ್ಯವನ್ನು ಹೇಳಿದ ಮುದ್ದುಲಿಂಗಾರ್ಯರನ್ನು ಹೆಸರಿಸಿರುವನು. ಅಲ್ಲದೆ, ಮುದ್ದುಲಿಂಗಾರ್ಯನ ಅಪ್ಪಣೆಯಂತೆ ತಾನು 'ಕದಂಬನೀತಿ ಮಾಲಿಕೆ' ಯನ್ನು ರಚಿಸಲು ತೊಡಗಿದುದಾಗಿ ತಿಳಿಸಿರುವನು.

'ಕದಂಬನೀತಿ ಮಾಲಿಕೆ' ಯಲ್ಲಿ ೧೦೫ ವಾರ್ಧಕ ಷಟ್ಪದಿಗಳಿವೆ. ಪ್ರತಿ ಪದ್ಯವು 'ಶ್ರೀ ಚಂದ್ರಚೂಡಾಮಣೀ' ಎಂಬ ಅಂಕಿತದಿಂದ ಮುಗಿಯುತ್ತದೆ.

ಕೃತಿಯಿಂದ ೨-೩ ಪದ್ಯಗಳನ್ನು ಈ ಕೆಳಗೆ ಉದಾಹರಿಸಿದೆ.

ಪರಮಪಾವನಕಾಯ ಪಾಪಗತ ನಿರ್ಮಾಯ
ಶರಣಜನಮಂದಾರ ಸಾರಕರುಣಾಪೂರ
ವರಮಂತ್ರದಾಗರನೆ ವರದಲೀಲಾಕರನೆ ವಂದಿಸುವ ಸದ್ಭಕ್ತರಾ
ಪೊ[ರೆವುತಿ]ಹ ಪರಮಗುರು ಚನ್ನವೀರೇಶ್ವರನ
ಚರಣಸರಸಿಜವ ನೆರೆ ಹೃತ್ಕಮಲದೊಳಗಿಟ್ಟು
ವರವೆ ನಾನೀ ಕದ[ಂಬದ] ನೀತಿಮಾಲಿಕೆಯ ಬರೆದೋದಿ ಲಾಲಿಸುವುದೂ (೧)

ತಾರಾದ್ರಿಯಿಂದಲವತರಿಸಿ ಮರ್ತ್ಯಕೆ ಬಂದು
ಸಾರತರವಾದ ಗುರುಬಸವಲಿಂಗೇಶನೊ[ಳು]
ಕಾರುಣ್ಯ ಲಿಂಗೋಪದೇಶಮಂ ಪಡೆದು ಕೆಲಕಾಲ ದೇಶಾಂತರ[ವ]ನೂ
ಪೂರೈಸಿಯೈವತ್ತು ಆರುದೇಶಕಧಿಕವ
ಹ ಗ್ರಾಮ ಕೊಟ್ಟೂರ ಪುರದೊಳಗೆ ಸಂತತ[ದಿ]
ಭೂರಿಯಿಂದೆಸೆವ ಮಹಿಮೆ ತೋರ್ದ ಬಸವಲಿಂಗೇಶ
ಕೊಡುಮತಿಯನೊಲಿದೂ (೨)

ಜಯಜಗಕ್ಕಾಧಾರ ಜನನ ದುಃಖವಿದೂರ
ಜಯಲೋಕಕಾ[ರಾ]ಧ್ಯ ಸು[ಖ]ಲಲಿತ ಚಿತ್ಸಾಧ್ಯ
ಜಯತು ಪಾವನಕಾಯ ಜಯತು ಸುಜನಪ್ರಿಯ ಜಯಜಯತು ಮೃತ್ಯುಂಜಯಾ
ಜಯತು ನಿತ್ಯಾನಂದ ಜಿತಕರ್ಮ ಭವಬಂಧ
ಜಯತು ಪರಸುಖರಾಜ್ಯ ಭುವನೈ(ಕ)ನುತ ಪೂಜ್ಯ
ಜಯ ಜಯತು ಎಡವೂರ ತೋಂಟದಸಿದ್ಧ ಕೊಡು ಎನಗೆ ಎಡವಿಡದ
ಮತಿಯನೊಲಿದೂ (೩)

ಮನವೆಂಬ ಹಸ್ತಿಮದವೇರಿ ವಿಷಯಗಳೆಂಬ
ವನಕಡರಿ ಪೋಗಿ ತಿರುತಿರುಗಿ ಸಂಚಲಿಸುತಿಹು
ದನಿತರೊಳ್ ಸುಜ್ಞಾನವೆಂದೆಂಬ ಅಂಕುಶದ ಮೊನೆಯಿಂದ ತಿವಿದು ತಿರುಹೀ
ಮುನಿದು ನಿರ್ಮೋಹವೆಂದೆಂಬ ಗದೆಯಿಂದೊತ್ತಿ
ಘನಪ್ರಾಣಲಿಂಗವೆಂದೆಂಬ ಕಂಬಕೆ ಕಟ್ಟಿ
ಚಿನುಮಯಾತ್ಮಕನಾಗಿ ಬಾಳುವಾತನೆ ಮುಕ್ತ ಶ್ರೀ ಚಂದ್ರಚೂಡಾಮಣೀ (೧೭)

● ಎಸ್. ಶಿವಣ್ಣ

'ಯದುಮಹಾರಾಜ' ನಾಟಕ

ಕರ್ನಾಟಕದ ಇತಿಹಾಸದ ಹಿನ್ನೆಲೆಯಲ್ಲಿ ಬರೆದ ಕನ್ನಡ ಕಾದಂಬರಿಗಳಲ್ಲಿ ಶ್ರೀ ವೆ. ತಿ. ಗಳಗನಾಥರ 'ಕುಮುದಿನಿ ಅಥವಾ ಬಾಲಕ್ಕೆ ಬಡಿದಾಟ'ವು ಮೊದಲನೆಯದಾಗಿದೆ. ಶ್ರೀ ಕೆರೂರ ವಾಸುದೇವಾಚಾರ್ಯರ 'ಯದುಮಹಾರಾಜ' ಕಾದಂಬರಿಯು ಎರಡನೆಯದಾಗಿ ತೋರುವದು. ವಾಸುದೇವಾಚಾರ್ಯರು ಮೈಸೂರಿನ ವಿದ್ಯಾಶಾಖೆಯವರು ಪ್ರಕಟಿಸಿದ ಮೂರು ಪುಟಗಳುಳ್ಳ ಕಥೆಯನ್ನು ೧೯೦೯ ರಲ್ಲಿ ಓದಿ ಈ ಕಾದಂಬರಿಯನ್ನು ಬರೆಯಲು ಸ್ಫೂರ್ತಿ ಪಡೆದರು.

ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಹದಿನಾಡೆಂಬ ಗ್ರಾಮದಲ್ಲಿ ಭೋಜವಂಶೋತ್ಪನ್ನರಾದ ಚಾಮರಾಜರು ಆಳುತ್ತಿದ್ದರು. ೧೩೯೯ ರಲ್ಲಿ ಇವರು ಸ್ವರ್ಗಸ್ಥರಾದರು. ಇವರ ಪುತ್ರಿಯನ್ನೂ ರಾಜ್ಯವನ್ನೂ ಅಪಹರಿಸಲು ಕಾರಗಹಳ್ಳಿ (ಕುರುಗಳ್ಳಿ)ಯ ಪಾಳ್ಯಗಾರನಾದ ಮಾರನಾಯಕನು ಈ ರಾಜಕುಟುಂಬವನ್ನು ಹಿಂಸಿಸತೊಡಗಿದನು. ಇಂತಹ ಸಮಯ ಚಂದ್ರವಂಶೋತ್ಪನ್ನರಾದ ದ್ವಾರಕಾನಗರದ ಯದುರಾಯ, ಕೃಷ್ಣರಾಯರೆಂಬ ಸಹೋದರರು ಮಹಾರಾಣಿಯವರ ಮತ್ತು ಇನ್ನುಳಿದ ರಾಜರ ಅನುಯಾಯಿಗಳ ಸಹಾಯದಿಂದ ಮಾರನಾಯಕನನ್ನು ಸಂಹರಿಸಿ, ರಾಜಕುವರಿಯನ್ನು ಹಿರಿಯ ಯದುರಾಜ ಮದುವೆಯಾಗಿ ರಾಜ್ಯಪರಿಪಾಲನೆಯನ್ನು ಮಾಡಿದನು ಎಂಬುದು ಈ ಕಾದಂಬರಿಯ ಐತಿಹಾಸಿಕ ಹಿನ್ನೆಲೆ.

ಇದೇ ಐತಿಹಾಸಿಕ ಹಿನ್ನೆಲೆಯಲ್ಲಿ ಬರೆದ 'ಯದುಮಹಾರಾಜ' ಸಂಗೀತ ನಾಟಕವು ೧೯೩೭, ೧೯೪೧ ಮತ್ತು ೧೯೫೪ ರಲ್ಲಿ ರಂಗಪ್ರಯೋಗ ಹೊಂದಿತೆಂಬುದಲ್ಲದೇ, ೧೯೬೪ ರಲ್ಲಿ ಸಾಗರ ಪಟ್ಟಣದಲ್ಲಿ ಜರುಗಿದ ನಾಟ್ಯಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನೂ, 'ಮಹಮ್ಮದ ಪೀರ' ಪದಕವನ್ನು **(Rolling Shield)** ದೊರಕಿಸಿತೆಂಬುದು ವಿಶೇಷ ಬೆಳಕಿಗೆ ಬಂದಿರದ ಸಂಗತಿಯಾಗಿದೆ.

'ಯದುಮಹಾರಾಜ' ನಾಟಕದ ಲೇಖಕರು ಶ್ರೀ ತಮ್ಮಣ್ಣಾ ನಾಯಕ ಎಂಬವರು, ರಾಣೆಬೆನ್ನೂರ ಹಾಯಸ್ಕೂಲಿನ ರಿಟಾಯರ್ಡ ಪ್ರಿನ್ಸಿಪಾಲರು. ಇವರು ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷ ಪಂಡಿತರಲ್ಲದೆ ನಾಟಕಕಾರರೂ ಅಭಿನಯಿಗಳೂ ಆಗಿದ್ದಾರೆ. ತಮ್ಮ ಈ ನಾಟಕಕ್ಕೆ ಕಾದಂಬರಿ ಮತ್ತು ಐತಿಹಾಸಿಕ ಅಂಶಗಳನ್ನು ಬಳಸಿಕೊಂಡು ೧೯೩೨ ರಲ್ಲಿ ರಾಣೆಬೆನ್ನೂರ ಕರ್ನಾಟಕ ಸಂಘದ ಪರವಾಗಿ ಆಡಿ ತೋರಿಸಿದರು.

ಆ ಸಮಯದ ಪಾತ್ರಯೋಜನೆ—

ಮಾರನಾಯಕ	ತಮ್ಮಣ್ಣಾ ನಾಯಕ
ದೇವಕಿ	ಶಿವರಾವ ಬಿಳಕಿ
ಯದುರಾಜ	ಗುರಪ್ಪ ನಾಯಕ
ಕೃಷ್ಣರಾಜ	ಬಾಳಪ್ಪ ನಾಯಕ
ನಂಜರಾಜ	ಸುಬ್ಬರಾವ ನಾಡಿಗೇರ
ವಾಸುದೇವಯ್ಯ	ಮಲ್ಹಾರರಾವ ನಾಡಿಗೇರ
ರಾಣಿ	ಹೊಳೆಹೊನ್ನೂರ ಮಾಸ್ತರ
ಕಾವಲುಗಾರ	ಶ್ರೀಪಾದ ಪಂಪಣ್ಣ ನಾಯಕ
ಉಮಾ	ಸುರೇಶ ವಿಶ್ವರೂಪ

ನಾಟಕ ಮತ್ತು ಸಂಗೀತ ದಿಗ್ದರ್ಶನವನ್ನು ಶ್ರೀ ಗುರಪ್ಪ ನಾಯಕರು ಕೈಕೊಂಡಿದ್ದರು.

ಈ ನಾಟಕದ ಒಂದು ಹಸ್ತಪ್ರತಿಯನ್ನು ಶ್ರೀ ಜಯಚಾಮರಾಜ ಒಡೆಯರಿಗೆ ಆಗಿನ ಎಂ. ಎಲ್. ಸಿ. ಶ್ರೀ ಎಲ್. ಎಚ್. ಹಿರೇಗೌಡರ ಅವರು ಮುಖಾಂತರ ೧೯೩೮ ರಲ್ಲಿ ಸಮರ್ಪಿಸಿದ್ದರು. ಅದು ಈಗಾದರೂ ಮೈಸೂರ ಮಹಾರಾಜರ ಖಾಸಗೀ ವಾಚನಾಲಯದಲ್ಲಿ ಉಪಲಬ್ಧವಿರಬಹುದು. ಈ ನಾಟಕವನ್ನು ಮಹಾರಾಜರ ಎದುರು ಆಡಿತೋರಿಸುವ ಬಯಕೆ ಇತ್ತಂತೆ. ಆದರೆ ಶ್ರೀ ಹಿರೇಗೌಡರ ಆಕಸ್ಮಿಕ ನಿಧನದಿಂದ ನೆರವೇರಲಿಲ್ಲವಂತೆ.

ಈ ನಾಟಕದಲ್ಲಿ ೧೯ ಪ್ರವೇಶಗಳಿದ್ದು, ೯ ಪದಗಳಿರುತ್ತವೆ. ಹೀಗಾಗಿ ಇದು ಸಾಗ್ರಸಂಗೀತ ಮಾದರಿಯ ನಾಟಕ.

ಈ ನಾಟಕದಲ್ಲಿ ಪ್ರವೇಶ ೧-೨-೪-೭-೮-೧೪-೧೬ ಮತ್ತು ೧೮ ಕ್ಕೆ ಹಿನ್ನೆಲೆಯಲ್ಲಿ 'ರಸ್ತಾ ಪಡದೆ' ಸೂಚಿಸಲಾಗಿದೆ. ಪ್ರವೇಶ ೩-೬-೯-೧೦-೧೩ ಮತ್ತು ೧೫ ಗಳಿಗೆ 'ಮಹಾಲು', ೫-೧೧-೧೨ಕ್ಕೆ 'ಜಂಗಲ ರಸ್ತಾ ಪಡದಾ' ಎಂದು ಸೂಚಿಸಿದೆ. ಪ್ರವೇಶ ೧೭ಕ್ಕೆ 'ಹೂದೋಟ'ವೆಂದೂ ೧೯ ಕ್ಕೆ 'ಅಂತಃಪುರದ ಪಡದೆ' ಎಂದೂ ತೋರಿಸಲಾಗಿದೆ. ಪ್ರವೇಶ ೨-೧೧ ಮತ್ತು ೧೮ ಚಿಕ್ಕವಾಗಿವೆ. ಈ ನಾಟಕವು ಕಂಪನಿ ನಾಟಕದವರೂ ಮತ್ತೂ ಅಮೇಚೂರ ಕಲಾವಿದರೂ ಆಡಲು ಸುಲಭವಾಗಿದೆ.

ಕನ್ನಡ ನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಈ ನಾಟಕವು ಇನ್ನೂ ಮುದ್ರಣವಾಗದೇ ಹಾಗೆಯೆ ಉಳಿದಿದೆ. ಯಾರಾದರೂ ಕನ್ನಡ ಪ್ರೇಮಿಗಳು ಮುಂದೆಬಂದು ಈ ನಾಟಕವನ್ನು ಮುದ್ರಿಸಿ ಪ್ರಕಟಗೊಳಿಸಿದರೆ ಮಹದುಪಕಾರವಾಗುವದು.

— ಪ್ರಹ್ಲಾದ ಮುದಗಲ್

ಗ್ರಂಥಾವಲೋಕನ

ಪರೀಕ್ಷೆಗೆ :

ಮಾಲತಿ ಪಟ್ಟಣಶೆಟ್ಟಿ. ಪ್ರ. ನಿರ್ವಾಣ ಪ್ರಕಾಶನ, ಶ್ರೀದೇವಿ ನಗರ, ಧಾರವಾಡ, ೧೯ . ೬
ಪುಟ : ೪೮. ಬೆಲೆ: ರೂ. ೩-೦೦. ೬-೦೦.

ಮಾಲತಿ ಪಟ್ಟಣಶೆಟ್ಟಿ ಅವರ ಪ್ರಥಮ ಕವಿತಾಸಂಗ್ರಹ. ನೋವು, ನಿರಾಶೆ, ದುಗುಡಗಳಿಂದುಂಟಾದ ಅನುಭವಸರಣಿಯೊಂದರ ಕಲ್ಲೆಸೆತದಿಂದೆದ್ದ ತೆರೆಗಳು ಇಲ್ಲಿಯ ಕವನಗಳು. ವೈಯಕ್ತಿಕ ದುಃಖ- ದುಮ್ಮಾನ, ತೀವ್ರಸಂವೇದನೆ ಪ್ರತಿಮೆ-ಪ್ರತೀಕಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ಪ್ರಾಮಾಣಿಕ ಸಂವೇದನೆಗಳಿಗೆ ಕಾವ್ಯಾಭಿವ್ಯಕ್ತಿ ಕೊಟ್ಟಿದ್ದರಿಂದ ಇಲ್ಲಿಯ ಪರೀಕ್ಷೆ, ನಿರೀಕ್ಷೆ, ಅನ್ವೇಷಣೆ, ವಿಮೋಚನೆ, ಬಾಳಗೀತೆ, ಭೂತ, ಉಪಕಾರ, ಕಸ, ಕಣಜ ಈ ಮೊದಲಾದ ಕವನಗಳು ಜೀವಂತತೆಯಿಂದ ಕೂಡಿ ಸತ್ವಯುತವಾಗಿ ಯಶಸ್ವಿಯಾಗಿವೆ. 'ಬಾ ಅಗ್ನಿಪರೀಕ್ಷೆಗೆ ನಿಂತೇ ಇರುವೆ ಸೀತೆ ನಿರೀಕ್ಷೆಗೆ' ಎನ್ನುವಲ್ಲಿ ಬದುಕಿನ ತೀವ್ರಸಂವೇದನೆಯನ್ನು ಪರೀಕ್ಷೆಗೊಡ್ಡಿ ಸೂಕ್ಷ್ಮವಾಗಿ ಪರಿಶೀಲಿಸುವ ರೀತಿ ಮನೋಜ್ಞವಾಗಿದೆ.

'ನನ್ನ ಬಾಳಿನ ಬುತ್ತಿ ಉಣ್ಣಬೇಕೆಂದರೆ ಈ ಧೂಳು ನನ್ನ ಕೂಳನ್ನೆ ಬಕ್ಕಳತಿಂದು ಕುಡಿದು ತೇಗಿ ಜೀಗಿ ನನ್ನ ಕಣ್ಣಲ್ಲಿ ಬೆರಳ ಚುಚ್ಚುತ್ತಿದೆ' 'ನೋವುಕೊಳ್ಳಗಳಲ್ಲಿ ಕಳೆದ ಹೊತ್ತು ಕಳೆದ ಮುತ್ತು ಬೆಳತನಕ ಹುಡುಕಾಡುವೆ' 'ಜಾತ್ರೆಯಲಿ ನಾ ಉತ್ಸವಮೂರ್ತಿ' 'ಲೂಟಿಮಾಡಿ ತುಂಬ ಕೊಳ್ಳೆ ಇಟ್ಟಿದ್ದಾರೆ' 'ಮರುಳಗಾಡಿನ ಗುಂಟ ತೆವಳಿ ಹುಡಿಹುಡಿಯಾಗಿದೆ ಹೃದಯ' 'ಈಸಬೇಕು ಹಾಳಾಗಿ ಜೈಸಬೇಕು'— ಹೀಗೆ ಆಂತರಿಕ ಒತ್ತಡದಿಂದ ಚಿಮ್ಮಿಬಂದ ತುಮುಲಕ್ಕೆ ತಕ್ಕ ಪ್ರತೀಕ ರೂಪಕಗಳನ್ನು ಪಡೆದ ಕವನಗಳು ವ್ಯಥೆಯ ಉತ್ಕಟತೆಯನ್ನು ಸಮರ್ಥವಾಗಿ ಚಿತ್ರಿಸಿವೆ. ಸಾಮಾನ್ಯ ಅನುಭವವೊಂದರ ಅಭಿವ್ಯಕ್ತಿಯ ಮಿತವ್ಯ, ಸ್ವವಿಶ್ಲೇಷಣೆಯಲ್ಲಿಯ ಪ್ರಾಮಾಣಿಕತೆ ಹಾಗೂ ನಿರ್ದಿಷ್ಟವಾದ ಧೋರಣೆಯನ್ನು ಇಲ್ಲಿ ಯಾರಾದರೂ ಗುರುತಿಸಬಹುದಾಗಿದೆ.

ಕುತಂತ್ರಗಳಿಗೆದೆ ಗದೆ ಒಡ್ಡಿ
ಹೊಡೆದು ಸಡ್ಡು ನಿಂತ ದಿನ ಬಡ್ಡಿ
ಎಷ್ಟಾಯ್ತು ಗೊತ್ತೆ ಋಣ
ಗೇಡಿ ನಡೆ
ಬಂದರಿನ್ನೊಮ್ಮೆ ಬಿಡೆ
ನಾಚಿಗೇಡಿ !

(ಶಾಂತಿ)

ಹುಚ್ಚಾ
ನೆರಳುಗಂಗಳ ನೀಲಿ ನಭಗಳ
ತೆರೆದಿಟ್ಟು ಯುಗಗಳಾದವು
ಮತ್ತೇಕೆ ಹೊರಟೆ ಆ
ಗಡಂಗಿಗೆ ? (ಗಡಂಗಿಗೆ)

ಮೂವತ್ತೈದರಲಿ
ಮುಪ್ಪಿನುಪ್ಪನುಣಿಸಿದವರ
ಉಪಕಾರ ಎಷ್ಟೆಂದು ಹೇಳಲಿ ? (ಉಪಕಾರ)

ಇಂತಹ ಸೂಕ್ಷ್ಮ ವ್ಯಂಗ್ಯ, ಕಟಕಿ ಅಲ್ಲಲ್ಲಿ ಕಾಣಿಸಿಕೊಂಡು ಕವಿತೆಗೆ ಹೆಚ್ಚಿನ ಮೆರುಗನ್ನು ತಂದಿವೆ. ನಮ್ಮೆಲ್ಲರ ಅನುಭವಗಳ ಬಾಗಿಲವನ್ನು ತಟ್ಟುವದರಿಂದ ಕವನಗಳು ಹೆಚ್ಚು ಆತ್ಮೀಯವಾಗಿ ಸಹೃದಯರನ್ನು ತಟ್ಟನೆ ಆಕರ್ಷಿಸುತ್ತವೆ. ಕೆಲವು ಸಲ ಭಾವದ ಉತ್ಕಟಿ, ಚಿಂತನದ ಕಾಂತಿ ಕಂದಿದಾಗ ಪರಿಣಾಮ ಶಿಥಿಲ ವಾಗುತ್ತದೆ. ಇವರ ಅನುಭವಕ್ಷೇತ್ರದ ಪರಿಶೀಲನೆಯು ಸೀಮಿತವಾಗಿದೆ. ಸಮಗ್ರ ಪರಿಶೀಲನೆಯ ಆಳ-ಅಗಲಗಳು ಇಲ್ಲಿಲ್ಲ. ತಮ್ಮ ಮನಸ್ಸನ್ನು ಶಕ್ತಿಯುತವಾಗಿ ಅಭಿವ್ಯಕ್ತಿಗೊಳಿಸುವ ಉತ್ತಮ ಗುಣವಿದ್ದ ಇವರು ಸಮಗ್ರ ಬದುಕಿನ ಸಂಕೀರಣ ಪರಿಶೀಲನೆಯಲ್ಲಿ ತೊಡಗಿದರೆ ಇವರಿಂದ ಇನ್ನಿಷ್ಟು ಹೆಚ್ಚು ಪರಿಣಾಮಬೀರುವ ಅತ್ಯುತ್ತಮ ಕವಿತೆಗಳನ್ನು ನಿರೀಕ್ಷಿಸಬಹುದು.

— **ಎಲ್. ವ್ಹಿ. ಪಾಟೀಲ**

ಪರದೇಶಿ ಹಾಡುಗಳು :

ಸಿದ್ಧಲಿಂಗ ಪಟ್ಟಣಶೆಟ್ಟಿ. ಪ್ರ. : ನಿರ್ವಾಣ ಪ್ರಕಾಶನ, ಧಾರವಾಡ, ೧೯೭೬. ಪುಟ: ೫೮. ಬೆಲೆ. ರೂ. ೫-೦೦, ೧೦-೦೦.

“ಪರದೇಶಿ ಹಾಡುಗಳು” ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಮೂರನೆಯ ಕವನ ಸಂಕಲನ. ಮೊದಲನೆಯ ಸಂಕಲನದಿಂದ ಎರಡನೆಯದಕ್ಕೆ ಬರುವುದರಲ್ಲೇ ಎಷ್ಟೋ ಕವಿಗಳು ಮುರುಟಿರೋಗ ಹಾಯ್ದು ನಿಂತಿರುವುದನ್ನು ಕಣ್ಣಾರೆ ಕಾಣುವಾಗ ‘ಮೂರನೆಯ’ ಎನ್ನುವಲ್ಲಿ ಔಚಿತ್ಯವಿದೆ. ಪಟ್ಟಣಶೆಟ್ಟಿ ಅವರು ಸಂಕಲನದಿಂದ ಸಂಕಲನಕ್ಕೆ ಹೇಗೆ ಆರೋಗ್ಯದಿಂದ ಬೆಳೆಯುತ್ತಿದ್ದಾರೆ ಎಂಬುದು ಅವರ ಓದುಗರಿಗೆ ಸ್ಪಷ್ಟವಾಗಿ ಗೊತ್ತಾಗದೆ ಇರದು. ತಮ್ಮ ಮೊದಲ ಎರಡು ಸಂಕಲನಗಳಲ್ಲಿ ಪ್ರಮುಖವಾಗಿ ವೈಯಕ್ತಿಕ, ಆಂತರಿಕ ಪ್ರಜ್ಞೆಯ ಪದರುಗಳನ್ನು ಸಮೃದ್ಧ ಪ್ರತಿಮೆ

ಗಳಲ್ಲಿ ಹಿಡಿದಿಟ್ಟು ಮೆಚ್ಚುಗೆ ಗಳಿಸಿದ ಈ ಕವಿ ಪ್ರಸ್ತುತ ಸಂಕಲನದಲ್ಲಿ ತನ್ನ ಗಾಳ ವನ್ನು ಮತ್ತೊಂದು ದಿಕ್ಕಿನಲ್ಲಿ ಬೀಸಲು ಪ್ರಯತ್ನಿಸಿದ್ದು ಕುತೂಹಲಕಾರಿಯಾಗಿದೆ.

ಅದು, ಬಾಹ್ಯ – ಸಾಮಾಜಿಕ, ರಾಜಕೀಯಕ್ಷೇತ್ರಗಳ ಕಡೆಗೆ. ಪ್ರಸ್ತುತ ಸಂಕಲನದಲ್ಲಿ ಮಾಮೂಲಿ ವಿಷಯಗಳಾದ ಕಾಮ–ಪ್ರೇಮಗಳ ಬಗ್ಗೆ ಕವನಗಳು ಇಲ್ಲವೆಂದಲ್ಲ; ಅವುಗಳಲ್ಲಿ ಮೊದಲಿನ ಸಂಕಲನಗಳಲ್ಲಿರುವುದಕ್ಕಿಂತ ಭಿನ್ನವಾದ ವಿಶೇಷ ನಿಲುವು ಏನೂ ತೋರುವದಿಲ್ಲ. 'ಹಿಮ' ಮಾತ್ರ ಉಲ್ಲೇಖಿಸಬಹುದಾದ ಕವನ ಕವಿಯ ಸಾಮಾನ್ಯ ಜಾಡಿನಲ್ಲಿ ರಚಿತವಾಗಿದ್ದರೂ ಬದುಕಿನ ಒಂದು ಹಂತ ವನ್ನು ಅರ್ಥೈಸುತ್ತ, ಲಯದ ಪುನರುಕ್ತಿಯಿಂದ ಮೇಲಿಂದ ಮೇಲೆ ಓದಬೇಕೆನಿಸು ವಷ್ಟು ಮಾರ್ಮಿಕವೆನಿಸುತ್ತದೆ.

ಸಂಕಲನದ ನಿಜವಾದ ವೈಶಿಷ್ಟ್ಯವಿರುವುದು ಸಮಕಾಲೀನ ಸಮಾಜದ ಬಗೆಗಿರುವ ಕವಿಯ ಸ್ಪಂದನದಲ್ಲಿ. ವ್ಯಕ್ತಿಗಳನ್ನು ಅವರ ಕೃತಿಗಳನ್ನು ಕಂಡಾಗ ಕವಿಗೆ ಅಸಂತೋಷ. ಈ ಅಸಂತೋಷವನ್ನು ವ್ಯಂಗ್ಯ ಕಟಕಿಗಳ ಮೂಲಕ, ಭಾವನೆಗಳ ಮೇಲಿನ ಹಿಡಿತ ಬಿಡದೆ, ಚಿತ್ರಗಳನ್ನು ನಿರ್ಲಿಪ್ತವಾಗಿ ಮೂಡಿಸಲು ಪ್ರಯತ್ನಿಸಿದ್ದು ಇಲ್ಲಿ ಗಮ ನಾರ್ಹವಾಗಿದೆ. ಈ ದಿಸೆಯಲ್ಲಿ 'ನಿನ್ನೆ ಭೆಟ್ಟಿಯಾಗಿದ್ದರು', 'ನಿರ್ಮಾಣ', 'ಬೇಲ', ಕಲ್ಪನಾ ಎಂಬ..', 'ಪ್ರಶ್ನಾತೀತರು' 'ಮಣ್ಣಿನಿಂದ ಮಣ್ಣಿಗೆ', 'ಯಾದವಾಡ', ಮೆಚ್ಚಬೇಕಾದ ಕವನಗಳು.

> "ನಾನು ಸತ್ತಿದ್ದೇನೆ
> ಹೌದು, ಈ ವಯಸ್ಸಿನಲ್ಲಿ ಯಾರು ಬದುಕುತ್ತಾರೆ
> ಈ ದೇಶದಲ್ಲಿ ? ಬದುಕಿ ಮಾಡುವುದಾದರೂ ಏನು ?
> ಅದಕ್ಕಾಗಿ ನಾನು ಸತ್ತಿದ್ದೇನೆ ಈ ದೇಶದಲ್ಲಿ"

ಎನ್ನುವ ಸಾಲುಗಳು ನಿರಾಭರಣವಾಗಿಯೂ ಭಾವನೆಯ ತೀವ್ರತೆ ಹೊಂದಿ ವಿಚಾರ ಪ್ರಚೋದಿಸಿದರೆ, ಯಾದವಾಡವನ್ನು ಚಿತ್ರಿಸುತ್ತ

> "ಪಿಂಜಾರ ಮರೆಪ್ಪನ ಮಗಳು, ಆ ಬೆಕ್ಕಿನ ಕಣ್ಣಿನ ಹುಡುಗಿ
> ಹಾದೀಮನಿ ಗೂಳಪ್ಪ ಬಾವಿ ಕಡಿಸಿರಲಿಲ್ಲs, ಆ
> ಬಾಂವ್ಯಾಗ ಬಿದ್ದ ಸತ್ತೆಂತ. ಬಸರಿತ್ತ
> ಅಂದ ಮಾಂವ. ಯಾರಿಗೆಂತ ನಾ ಕೇಳಲಿಲ್ಲ."

ಎಂಬ ಸಾಲುಗಳು ಹಳ್ಳಿಯ ದುರಂತದ ವರದಿಯನ್ನು ನಿರ್ಲಿಪ್ತವಾಗಿ ಒಪ್ಪಿಸಿ ಮನ ವನ್ನು ಕೆದಕುತ್ತದೆ. ನಿರ್ಲಿಪ್ತ ಅಭಿವ್ಯಕ್ತಿಯಲ್ಲಿ 'ಯಾದವಾಡ' ನೆನಪುಳಿಯುವ ಕವನ.

ಈ ಸಂಕಲನದಲ್ಲಿಯೇ ಇನ್ನೊಂದು ರೀತಿಯ ಪ್ರಯತ್ನ 'ದೇಶ ಮುರದ್ಯೆತ್ಯೋ ಮುಗದ್ಯೆತ್ಯೋ'. ವ್ಯಕ್ತಿ ಹಾಗೂ ದೇಶ 'ಇವುಗಳಲ್ಲಿ ಇ. ಎಮ್. ಫಾರ್ಸ್ಟರ್‌ನಂತೆ ಆರಿಸಿ ಕೊಳ್ಳುವ ಸಮಸ್ಯೆಯನ್ನು ನಾಟಕೀಯವಾಗಿ ನಿರೂಪಿಸಲಾಗಿದೆ. ಚಂದ್ರಿಕ ಪಾತ್ರದ ಸಮರ್ಥನೆಯಾಗಿಲ್ಲ. ಆ ಮಾತು ಬೇರೆ. ಆದರೆ ಇಲ್ಲಿ ಕವಿ ತನ್ನದೇ ಆದ ಆದರ್ಶ ವನ್ನು–Positive ಆದರ್ಶವನ್ನು–ಕಂಡುಕೊಂಡಿದ್ದಾನೆ.

"ನನ್ನ ವ್ಯಕ್ತಿತ್ವಾನ್ನ ನನ್ನ ಮನಸ್ಸನ್ನ
ಕಟ್ಟಬೇಕು—ಅದು ಕೆಟ್ಟಿದ್ರ, ಮನಸ ಮುರದಿದ್ರ".

"ಕಲ್ಪನಾ ಎಂಬ . . . . " ಕವನ ಕೂಡ ಇದೇ ಆದರ್ಶದ ಹಿನ್ನೆಲೆ ಹೊಂದಿರುವು ದನ್ನು ಗಮನಿಸಬಹುದು. ಒಂದು ವಸ್ತುವಿನ ಬಗ್ಗೆ ತಿರಸ್ಕಾರ ಭಾವನೆ ತೋರುವ ಕವಿಗೆ ತಾತ್ವಿಕ ನೆಲೆಗಟ್ಟು ಅವಶ್ಯವಾದದ್ದು. ಇದನ್ನು ಕಲಾತ್ಮಕವಾಗಿ ಸಾಧಿಸುವ ಪಟ್ಟಣಶೆಟ್ಟಿ ಅವರ ಪ್ರಾಯೋಗಿಕ ಪ್ರಯತ್ನ "ಪರದೇಶಿ ಹಾಡುಗಳು". ಕೆಲವು ಕವನಗಳು ಕೆಲವೊಮ್ಮೆ ತಿಳುವಾಗಿ, ಗದ್ಯಮಯವಾಗಿ ಅನಿರೀಕ್ಷಿತ ಮುಕ್ತಾಯ ಹೊಂದುತ್ತವೆ ಎನಿಸಿದರೂ, ಗಂಭೀರ ಕಾಳಜಿಗಳ ಕಡೆಗೆ ಕವಿಯ ಗಮನ ಸದಾ ಇದೆ ಎಂಬುದು ಮಾತ್ರ ಸ್ಪಷ್ಟ.

ಭಾಷೆಯನ್ನು ಮಿತವಾಗಿ, ಕುಶಲತೆಯಿಂದ ಬಳಸುವ ಇಂದಿನ ಕೆಲವೇ ಕವಿ ಗಳಲ್ಲಿ ಪಟ್ಟಣಶೆಟ್ಟಿ ಅವರೂ ಒಬ್ಬರು ಎಂಬುದು ಈಗಾಗಲೆ ನಿರ್ವಿವಾದವಾಗಿ ಒಪ್ಪಿಕೊಂಡ ವಿಷಯ ಆ ಗುಣವನ್ನು ಈ ಸಂಕಲನದಲ್ಲಿಯೂ ಉಳಿಸಿಕೊಂಡಿದ್ದಾರೆ. ಒಟ್ಟಿನಲ್ಲಿ, ರೆಂಬೆ–ಕೊಂಬೆಗಳ ವೈಶಾಲ್ಯವನ್ನು ಹೊಂದುತ್ತಿರುವ ಈ ಕವಿಯ ಕಾವ್ಯ ಇನ್ನೂ ಬೇರಿನ ಆಳವನ್ನು ಪಡೆಯಲಿ ಎಂದು ಹಾರೈಸಿ ಈ ಕೆಲವು ಅನಿಸಿಕೆಗಳನ್ನು ಮುಗಿಸುತ್ತೇನೆ.

—ಎಚ್. ಎಸ್. ಭೀಮನಗೌಡರ

ಪರಿಸರ ಹೊಸ ಕವಿತೆ :

ಸಂಪಾದಕ : ಬಿ. ಎಂ. ರಮೇಶ; ಪ್ರ: ಪರಿಸರ ಸಾಹಿತ್ಯ, ಗುಲ್ಬರ್ಗ, ೧೯೭೭. ಪುಟ ೭೬. ಬೆಲೆ : ರೂ.೫–೦೦.

ಈ ಸಂಕಲನದಲ್ಲಿ ೨೬ ಕವಿಗಳ ಪದ್ಯಗಳಿವೆ. ಕೆಲವರು ಒಂದು ಪದ್ಯದಿಂದ, ಇನ್ನು ಕೆಲವರು ಎರಡು ಮೂರು ಐದು ಪದ್ಯಗಳಿಂದಲೂ ಕಾಣಿಸಿಕೊಂಡಿದ್ದಾರೆ. ಈ ಸಂಗ್ರಹವನ್ನು ನೋಡಿದಾಗ ನಮ್ಮ ಸದ್ಯದ ಕಾವ್ಯದ ಬಗ್ಗೆ ಕೆಲವು ಮಾತು

ಗಳನ್ನು ಹೇಳಬೇಕೆನಿಸುತ್ತದೆ. ಇಲ್ಲಿರುವ ಕವಿಗಳು ತಮ್ಮ ಪರಿಸರವನ್ನು ಗಮನಿಸಿದ್ದಾರೆ ನಿಜ, ಕೆಲವರು ತಮ್ಮ ಒಳಗೂ ನೋಡಿಕೊಂಡಿದ್ದಾರೆ. ಆದರೆ ಇಲ್ಲಿನ ಯಾವ ಪದ್ಯಗಳೂ ಕಾವ್ಯವಾಗಿಲ್ಲ. ಸಮಕಾಲೀನತೆ ಇರುವುದರಿಂದಲೇ ಕಾವ್ಯವಾಗುವದಿಲ್ಲ, ಮೌಲ್ಯಗಳ ಪ್ರಜ್ಞೆ ಇರುವದರಿಂದಲೇ ಕಾವ್ಯವಾಗುವುದಿಲ್ಲ. ಕಾವ್ಯ ಒಂದು ರೀತಿಯ ಮಾಂತ್ರಿಕ ಕ್ರಿಯೆ. ಕಾವ್ಯದ ಮಂತ್ರಸಿದ್ಧಿಗೆ ಸಾಧನೆ ಬೇಕು. ಕಾವ್ಯದ ಮಾಂತ್ರಿಕ ಅಥವಾ ಕವಿ, ಪದಗಳ ವಿಶಿಷ್ಟತೆಯನ್ನು ಅವುಗಳ ತೂಕ, ಬಣ್ಣ, ಧ್ವನಿ, ನಾದ ಮತ್ತು ಚರಿತ್ರೆಯನ್ನು ಬಲ್ಲವನಾಗಿರಬೇಕು. ಅವನು ಸ್ವರವಿನ್ಯಾಸವನ್ನು, ದನಿಯ ಮತ್ತು ಲಯದ ಏರಿಳಿತಗಳನ್ನು ತಿಳಿದಿರಬೇಕು. ತನ್ನ ಭಾಷೆಯಲ್ಲಿ ಅತ್ಯುತ್ತಮವಾದದ್ದನ್ನು ಅಭ್ಯಾಸಮಾಡಿ ಅದು ಅತ್ಯುತ್ತಮವಾದದ್ದೇಕೆ ಎನ್ನುವ ತಾರತಮ್ಯಜ್ಞಾನ ಪಡೆದಿರಬೇಕು. ತನ್ನ ವ್ಯಕ್ತಿತ್ವವನ್ನು ಬಲ್ಲವನಾಗಿರಬೇಕು. ತನ್ನ ಅನುಭವಗಳನ್ನು ಅಭಿವ್ಯಕ್ತಿಸುವ ಕಾತರವುಳ್ಳವನಾಗಿರಬೇಕು. ಅಭಿವ್ಯಕ್ತಿಸುವಾಗ ತನ್ನ ಅನುಭವಗಳಿಗೆ ರೂಪುಕೊಡುತ್ತಿರುವಾಗ, ಅವಕ್ಕೆ ಬೆಲೆಹಚ್ಚುವ ಸಾಮರ್ಥ್ಯವುಳ್ಳವನಾಗಬೇಕು. ಅವನಿಗೆ ತನ್ನದೆ ಧಾಟಿ ಮತ್ತು ಧೋರಣೆಗಳಿದ್ದಾಗ ಮಾತ್ರ ಅವನು ಕವಿಯಾಗುವ ಸಾಧ್ಯತೆಯಿರುತ್ತದೆ. ಇಷ್ಟೆಲ್ಲಾ ಇದ್ದೂ ಒಬ್ಬ ಕವಿಯಾಗದೇ ಹೋಗಬಹುದು. ಅಥವಾ ಕವಿಯಾದವನು ಬರೆದದ್ದರಲ್ಲಿ ಕೆಲವು ಮಾತ್ರ ಒಳ್ಳೆಯ ಕವನಗಳಾಗಬಹುದು. ಆದ್ದರಿಂದ ಈ ಕವಿಗಳ ಭವಿಷ್ಯದ ಬಗ್ಗೆ ನನಗೆ ಭರವಸೆಯಿದೆ. ಬೆಳೆಯುವ ಕವಿಗಳಿಗೆ ಪ್ರಕಟನೆಯ ಅವಕಾಶ ಯಾವಾಗಲೂ ಕಡಿಮೆ. ಅವಕಾಶವನ್ನು ಕಲ್ಪಿಸಿಕೊಡುವ ಸಮಾಜ ಕಾವ್ಯದ ಆರೋಗ್ಯವನ್ನು ಕಾಪಾಡಬಲ್ಲದು. ಬಿ. ಎಂ. ರಮೇಶರಂಥವರು ಅಂಥ ಅವಕಾಶವನ್ನು ತರುಣ ಕವಿಗಳಿಗೆ ಕಲ್ಪಿಸಿಕೊಟ್ಟಿದ್ದಕ್ಕೆ ಅವರು ಅಭಿನಂದನಾರ್ಹರು.

— ಸುಮತೀಂದ್ರ ನಾಡಿಗ

ಸಂಪಾದಕೀಯ

ಅಭಿವಂದನೆ

ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಈ ಸಲದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದುದು ಕನ್ನಡಕ್ಕೆ ಸಂದ ಗೌರವವಾಗಿದೆ. ಶ್ರೀ ನರಸಿಂಹಸ್ವಾಮಿ ಅವರ ವೃತ್ತಿ ಸರಕಾರಿ ನೌಕರಿಯಾದರೂ ಪ್ರವೃತ್ತಿಯಲ್ಲಿ ಅವರು ನೂರಕ್ಕೆ ನೂರು ಸಾಹಿತಿ. 'ಮೈಸೂರು ಮಲ್ಲಿಗೆ'ಯ ಮೂಲಕ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸುತ್ತಲೇ ಸಮಸ್ತ ಕನ್ನಡಿಗರನ್ನು ತಮ್ಮತ್ತ ಆಕರ್ಷಿಸಿ 'ಇರುವಂತಿಗೆ' ಮೂಲಕ 'ತೆರೆದ ಬಾಗಿಲು' ವರೆಗೆ ನಡೆದು ಬಂದಿದ್ದಾರೆ. ಈ ಅವಧಿಯಲ್ಲಿ ನವೋದಯ ಮತ್ತು ನವ್ಯಗಳ ಸವ್ಯ ಸಾಚಿಯಂತೆ ಕೃಷಿಗೆಯ್ದ ಸಾಹಿತಿಗಳವರು. ಸುಕುಮಾರಶೈಲಿಯಿಂದ ನವೋದಯ ದಲ್ಲಿ ನಡೆದುಬಂದ ಅವರ "ತೆರೆದ ಬಾಗಿಲು" ನವ್ಯದಲ್ಲಿ ಸ್ವಭಾವೋಕ್ತಿಯನ್ನು ದುಡಿಸಿಕೊಂಡ ವಿಶಿಷ್ಟಶೈಲಿಯನ್ನು ಹೊಮ್ಮಿಸಿದೆ. ಶ್ರೀಯುತರ ೪೦ ವರ್ಷಗಳ ಸಾರಸ್ವತಸೇವೆಗೆ ಕೃತಜ್ಞತೆಗಳನ್ನರ್ಪಿಸುತ್ತ, ಪ್ರಸ್ತುತ ಅಕಾಡೆಮಿಪ್ರಶಸ್ತಿ ಗೌರವ ಗಳಿಸಿದುದಕ್ಕೋಸುಗ "ಕರ್ನಾಟಕ ಭಾರತಿ" ಅಭಿವಂದನೆಗಳನ್ನು ಅರ್ಪಿಸುತ್ತದೆ.

ಐದನೆಯ ಜಾನಪದ ಸಮ್ಮೇಲನ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ "೫ ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ"ವನ್ನು ಕಲ್ಬುರ್ಗಿಯಲ್ಲಿ ವೈಭವಪೂರ್ಣವಾಗಿ ಆಚರಿಸಿದುದು ತುಂಬ ಸಂತೋಷವಾದ ಸಂಗತಿ. ಈ ವರೆಗೆ ೪ ಸಮ್ಮೇಲನಗಳನ್ನು ತನ್ನ ಕೇಂದ್ರವಾದ ಧಾರವಾಡದಲ್ಲಿಯೇ ಆಚರಿಸಿದ ಅದು ಈ ೫ನೆಯ ಸಮ್ಮೇಲನ ವನ್ನು ಕಲ್ಬುರ್ಗಿಯಲ್ಲಿ ನೆರವೇರಿಸಿದುದು ಭವಿಷ್ಯತ್ತಿನಲ್ಲಿ ಇಂತಹ ಸಮ್ಮೇಲನಗಳು ನಾಡಿನಾದ್ಯಂತ ಜರುಗುವುದಕ್ಕೆ ನಾಂದಿಯಾಗಿದೆ. ಕುಲಪತಿಗಳಿಂದ ಉದ್ಘಾಟಿಸಲ್ಪಟ್ಟ ಈ ಸಮ್ಮೇಲನಕ್ಕೆ ಗಮಕ ಕಲಾನಿಧಿ ಶ್ರೀ ಜೋಳದರಾಶಿ ದೊಡ್ಡನಗೌಡ ಅವರು ಅಧ್ಯಕ್ಷತೆವಹಿಸಿ, ಅಧ್ಯಯನ ಯೋಗ್ಯವಾದ ಅವರ ಹೊಸ ಹೊಸ ಮುಖಗಳನ್ನು ಸೂಚಿಸಿದರು. ೨ ದಿನಗಳವರೆಗೆ ವಿದ್ವಾಂಸರಿಂದ ಗೋಷ್ಠಿಗಳು ಜರುಗಿದವು. ಅನೇಕ ಕಲಾವಿದರು ಜಾನಪದ ಬಗೆಗಳನ್ನು ಪ್ರದರ್ಶಿಸಿದರು. ಅಧ್ಯಯನಪೀಠದ ಈ ಉಪ ಕ್ರಮ ಉತ್ತರೋತ್ತರಗೊಳ್ಳಲಿ ಎಂದು 'ಭಾರತಿ' ಹಾರೈಸುತ್ತದೆ.

ಸಾದರ ಸ್ವೀಕಾರ

೧. **ಉತ್ತಾರೇ ಮಳೆ** (ಕವನ ಸಂಕಲನ) :
ಬಾಗೂರು. ಆರ್. ನಾಗರಾಜಪ್ಪ. ಪ್ರ: ಮಾರುತಿಯುವಸಂಘ, ಅರಳಿಹಳ್ಳಿ, ೫೭೭೫೧೫; ೧೯೭೭. ಪುಟ : viii+೪೪. ಬೆಲೆ : ರೂ. ೩-೦೦, ೪-೦೦.

೨. **ಭಾವನಾಧ್ಯಾನ** (ಕವನ ಸಂಕಲನ) :
ವಿ. ಮಲ್ಲಿಕಾರ್ಜುನಯ್ಯ, ಸದಾನಂದ ಶೃಂಗೇರಿ. ಪ್ರ: ಲೇಖಕರು, ೧೯೭೭. ಪುಟ: ೫೨. ಬೆಲೆ: ರೂ. ೨-೦೦.

೩. **ಪ್ರತಿರೂಪ** (ನಾಟಕ) :
ಬಸವರಾಜ ಸಬರದ. ಪ್ರ: ಯುಗಧ್ವನಿ ಪ್ರಕಾಶನ, ಧಾರವಾಡ, ೧೯೭೭. ಪುಟ: vi+೨೮. ಬೆಲೆ: ರೂ. ೪-೦೦.

೪. **ಕಾಂತಾಸಮ್ಮಿತ** (ಪ್ರಬಂಧ ಸಂಕಲನ) :
ಡಿ. ವಿ. ಪುರಾಣಿಕ. ಪ್ರ: ಲೋಕವಿದ್ಯಾಪ್ರಕಾಶನ, ಸಂಕೇಶ್ವರ, ೧೯೭೭. ಪುಟ: ೭೮. ಬೆಲೆ: ರೂ. ೬-೦೦.

೫. **ಈ ಜನ ಈ ಮನ** (ಹಾಸ್ಯ ಬರೆಹಗಳು) :
ಶಾ. ಮಂ. ಕೃಷ್ಣರಾಯ. ಪ್ರ: ವಿಶ್ವಭಾರತಿ ಪ್ರಕಾಶನ- ಗೋವಾ, ೧೯೭೭. ಪುಟ: ೮೦. ಬೆಲೆ: ರೂ. ೫-೦೦, ೭-೦೦.

ಪತ್ರಿಕೆಗಳು

ಕನ್ನಡನುಡಿ
ಸಾಹಿತ್ಯ ಪರಿಷತ್ಪತ್ರಿಕೆ
ಜೀವನ ವಿಕಾಸ
ಪಂಚಾಚಾರ ಪ್ರಕಾಶ
ಪರಂಜ್ಯೋತಿ
ಕೃಷಿವಿಜ್ಞಾನ
ರಾಷ್ಟ್ರೋತ್ಥಾನವಾರ್ತಾ
ಮತ್ಸ್ಯಲೋಕ
ಹೇಮಕೂಟ
ವಿಶ್ವಕಲ್ಯಾಣ

ಈ ಸಂಚಿಕೆಯ ಲೇಖಕರು

೧ **ಶ್ರೀ ಬಸವರಾಜ ಸಬರದ :**
ಉಪನ್ಯಾಸಕರು, ಖಾಸ್ಗತೇಶ ಕಲಾಮಹಾವಿದ್ಯಾಲಯ, ತಾಳಿಕೋಟಿ.

೨ **ಶ್ರೀ ಎಚ್. ಆರ್. ರಘುನಾಥಭಟ್ :**
ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,ಮಾನಸಗಂಗೋತ್ರಿ, ಮೈಸೂರು-೬.

೩ **ಶ್ರೀ ಪಿ. ಶ್ರೀಕೃಷ್ಣಭಟ್ :**
ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು.

೪ **ಶ್ರೀ ಸೀತಾರಾಮ ಜಾಗೀರ್‌ದಾರ್ :**
ಮನೆ. ಸಂ. ೯, ಮೂರನೆಯ ಮುಖ್ಯರಸ್ತೆ. ಸರಸ್ವತಿಪುರಂ, ಮೈಸೂರು-೯.

೫ **ಶ್ರೀ ಬಿ. ಎ. ಸನದಿ :**
ಆಕಾಶವಾಣಿ ಕೇಂದ್ರ, ಮುಂಬಯಿ.

೬ **ಶ್ರೀ ಬಿ. ಎಂ. ರಮೇಶ್ :**
ಸುದ್ದಿಸಂಪಾದಕ. ಪ್ರಪಂಚ ಕಾರ್ಯಾಲಯ, ಟ್ರಾಫಿಕ್ ಐಲಂಡ್. ಹುಬ್ಬಳ್ಳಿ.

೭ **ಶ್ರೀ ಎಸ್. ಎಸ್. ಭೂಸರಡ್ಡಿ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೮ **ಡಾ. ವ್ಹಿ. ಬಿ. ರಾಜೂರ :**
ಉಪನ್ಯಾಸಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೯ **ಶ್ರೀ ಸಣ್ಣನಂಜೇಗೌಡ :**
ವಿಘ್ನಸಂತೆ ಅಂಚೆ, ನೊಣವಿನಕೆರೆ ಮಾರ್ಗ, ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

೧೦ **ಶ್ರೀ ದೊಡ್ಡರಂಗೇಗೌಡ :**
ಕನ್ನಡ ಉಪನ್ಯಾಸಕರು, ಎಸ್.ಎಲ್.ಎನ್. ಕಾಲೇಜು.ಕೋಟೆ,ಬೆಂಗಳೂರು-೫೬೦೦೦೨.

೧೧ **ಶ್ರೀ ಎಸ್. ಎಸ್. ಹಿರೇಮಠ :**
ಕನ್ನಡ ಉಪನ್ಯಾಸಕರು, ವಿಜಯನಗರ ಕಾಲೇಜು. ಹೊಸಪೇಟೆ.

೧೨ **ಶ್ರೀ ಕಣವಿ ಮಹಾದೇವ :**
ಕನ್ನಡ ಉಪನ್ಯಾಸಕರು, ಎಸ್ ಎಂ. ಭಂಡಾರಿ ಕಲಾಮಹಾವಿದ್ಯಾಲಯ,ಗುಳೇದಗುಡ್ಡ.

೧೩ ಎಂ. ಜಿ. ಬಿರಾದಾರ :
ಪ್ರವಾಚಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ. ಕಲಬುರ್ಗಿ-೫.

೧೪ **ಕು. ಜಯಶ್ರೀ ಚಾಟಿ :**
c/o ಬಿ. ಕೆ. ಚಾಟಿ, ಬೀಳಗಿ, ವಿಜಾಪುರ ಜಿಲ್ಲೆ.

೧೫ **ಡಾ. ಎಸ್. ರಾಜಶೇಖರ :**
ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೬ **ಶ್ರೀ ಕಾಶಿಪುಟ್ಟ ಸೋಮಾರಾಧ್ಯ :**
ಉಪನ್ಯಾಸಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೭ **ಡಾ. ಆರ್. ಎಸ್. ಗುರವ :**
ಕೊಪ್ಪದಕೆರೆ, ಧಾರವಾಡ.

೧೮ **ಶ್ರೀ ಜಿ. ಎಂ. ಹೆಗಡೆ :**
ಕನ್ನಡ ಉಪನ್ಯಾಸಕರು, ಕಿಟೆಲ್ ಕಾಲೇಜು, ಧಾರವಾಡ.

೧೯ **ಕುಂ. ಚೆನ್ನಕ್ಕ ಎಲಿಗಾರ :**
ಕನ್ನಡ ಉಪನ್ಯಾಸಕರು, ಮೃತ್ಯುಂಜಯ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

೨೦ **ಡಾ. ಎಂ. ಎಂ. ಕಲಬುರ್ಗಿ :**
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೨೧ **ಕು. ಹನುಮಾಕ್ಷಿ ಗೋಗಿ :**
ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೨೨ **ಶ್ರೀ ಎಸ್. ಶಿವಣ್ಣ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ, 'ಜ್ಞಾನಭಾರತಿ', ಬೆಂಗಳೂರು.

೨೩ **ಶ್ರೀ ಪ್ರಹ್ಲಾದ ಮುದಗಲ್ :**
ಈ ೨. ಶ್ರೀ ಶ್ರದ್ಧಾಮಾತಾ ಕೋ-ಆಪರೇಟಿವ್ಹ ಹೌಸಿಂಗ ಸೊಸಾಯಿಟಿ, ಪವಾಯಿ, ಮುಂಬೈ-೪೦೦೦೭೬.

೨೪ **ಶ್ರೀ ಎಲ್. ವ್ಹಿ. ಪಾಟೀಲ :**
ಕನ್ನಡ ಉಪನ್ಯಾಸಕರು, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸಂಕೇಶ್ವರ.

೨೫ **ಶ್ರೀ ಎಚ್. ಎಸ್. ಭೀಮನಗೌಡರ :**
ಇಂಗ್ಲೀಷ ಉಪನ್ಯಾಸಕರು, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸಂಕೇಶ್ವರ.

೨೬ **ಸುಮತೀಂದ್ರ ನಾಡಿಗ :**
ಕರ್ನಾಟಕ ಬುಕ್‌ಹೌಸ್, ಗಾಂಧಿ ಬಜಾರ್, ಬೆಂಗಳೂರು-೫೬೦೦೦೪.

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ, ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಶೇ. ೪೩½ ದಂತೆ ಕಮೀಶನ್ ಕೊಡಲಾಗುವದು.

ರಿಯಾಯತಿ ದರ

* ೧೦೦ ರೂ. ವರೆಗಿನ ಪುಸ್ತಕ ಕೊಳ್ಳುವವರಿಗೆ ಶೇ. ೨೫
* ೧೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟ ಪುಸ್ತಕಗಳ (ಪಠ್ಯಪುಸ್ತಕ ಹೊರತುಪಡಿಸಿ) ಖರೀದಿಗೆ ಶೇ. ೩೫
* ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟ ಖರೀದಿಗೆ ಶೇ. ೪೩½

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸೇರಿ)

ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ಸಹಿತ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ ಕಳಿಸುವ ವ್ಯವಸ್ಥೆ ಮಾಡಲಾಗುವುದು.

'ಮಾನವಿಕ ಭಾರತಿ'

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬

ಬಿಡಿ ಪ್ರತಿ : ರೂ. ೩-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦

(ಹಣವನ್ನು ಡಿಮಾಂಡ ಡ್ರಾಫ್ಟ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,

ಪ್ರಸಾರಾಂಗ,ವಿಸ್ತರಣ ಹಾಗೂ ಪ್ರಕಟನ ವಿಭಾಗ,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩